OSMANIA UNIVERSITY
LIBRARY

Call No. ...K 84 U 89 A......

Name of B ...............

Name of A ...............

UNIVERSAL LIBRARY

OU_200267

UNIVERSAL LIBRARY

# ನಾಳೆಗಾಗಿ

ಕನ್ನಡದ ಹಿರಿಯರಿರ!
ಕನ್ನಡದ ಕಿರಿಯರಿರ!
ಇದುವೆ ನಿಮಗಾಗಿ,
ಇದು ನಾಳೆಗಾಗಿ.

ಕನ್ನಡದ ಮಕ್ಕಳಿರ,
ಕನ್ನಡದ ಮರಿಗಳಿರ,
ಕನ್ನಡದ ಈ ಚೆನ್ನು—
ಇದುವೆ ನಿಮಗಾಗಿ,
ಇದು ನಾಳೆಗಾಗಿ.

ಕನ್ನಡದ ಚೆಲುವೆಯರೆ,
ಕನ್ನಡದ ಚೆನ್ನಿಗರೆ,
ಕನ್ನಡದ ಈ ಚೆನ್ನು—
ಇದುವೆ ನಿಮಗಾಗಿ,
ಇದು ನಾಳೆಗಾಗಿ.

౧. [illegible]
[illegible]
[illegible]

[illegible]
[illegible]
[illegible]

[illegible]
[illegible]
[illegible]

[illegible]
[illegible]
[illegible]

[illegible]
[illegible]
[illegible]

౨ [illegible]
[illegible]
[illegible]

[illegible]
[illegible]
[illegible]

[illegible]
[illegible]
[illegible]

[illegible]
[illegible]
[illegible]

[illegible]
[illegible]
[illegible]

[illegible]
[illegible]
[illegible]

[illegible]

# ಅನುಕ್ರಮಣಿಕೆ.

## ನೆನವಿನ ಕಾಣಿಕೆಗಳು.


| | ಲೇಖನ | ಲೇಖಕ | ಪುಟ |
|---|---|---|---|
| 1. | ಮುನ್ನುಡಿ | ಶ್ರೀನಿವಾಸ | i |
| 2. | ಕಾಮತರು | ಎನ್. ಬಿ. | x |
| 3. | ಸಂಪಾದಕರ ಮಾತು | ಜೆ. ವಾಮನ ಭಟ್ಟ | xi |
| 4. | ನೆನವಿನ ಕಾಣಿಕೆ | ಶ್ರೀ. ಗೋವಿಂದ ಪೈ | xvii |
| 5. | ಕರ್ಣಾಟಕ ಪತ್ರಿಕಾ ಪ್ರಪಂಚದ "ಅಕ್ಷಯ ಪಾತ್ರ" | ಶ್ರೀ. ಹುರುಳಿ ಭೀಮರಾವ್ | xxii |
| 6. | ಮರಣದ ಮುಂದೆ ನಗು | ಶ್ರೀ. ಶಿವರಾಮ ಕಾರಂತ | xxvii |
| 7. | ಶ್ರೀಯುತ ಎಮ್. ಎನ್. ಕಾಮತ್ ಅವರು | ಶ್ರೀ. ವೈದ್ಯಭೂಷಣ ಡಿ. ಕೆ. ಭಾರದ್ವಾಜರು | xxxii |
| 8. | ನಮ್ಮನ್ನಗಲಿದ ಕಾಮತರು | ಶ್ರೀ. ಪ. ರಮಾನಂದ, ಎಮ್. ಎ. | xxxvi |
| 9. | ಭೂಗೋಳ ಶಿಕ್ಷಕರಾದ ಕಾಮತರು | ಶ್ರೀ. ಕೆ. ವಾಸುದೇವ ಕಿಣಿ, ಬಿ. ಎ., ಎಲ್. ಟಿ., | xxxvii |
| 10. | ಕಾಮತರ ಲೇಖನಿ | ಶ್ರೀ. ಕುಡ್ವ ವಾಸುದೇವ ಶೆಣೈ | xL |
| 11. | ಕಾಮತರ ರಂಗಭೂಮಿ | ಶ್ರೀ. ಜಿ. ಆರ್. ಶೆಣೈ, ಎಮ್. ಎ., ಎಲ್. ಟಿ. | xLii |
| 12. | ಎಮ್ಮ ಯನ್ನ | "ತಾಪಸ" | L |
| 13. | An Appreciation | ಶ್ರೀ. ಎ. ಶ್ರೀನಿವಾಸ ಪೈ, ಬಿ. ಎ., ಬಿ. ಎಲ್. | Li |
| 14. | A flower born not to blush unseen | ಶ್ರೀ. ಎಮ್. ಮಾಧವರಾವ್, ಬಿ. ಎ., ಬಿ. ಎಲ್. | Liii |
| 15. | The Late Mr. M. N. Kamath | ಶ್ರೀ. ಎಮ್. ನರಸಿಂಗರಾವ್, ಬಿ. ಎ., ಎಮ್. ಎಲ್. | Lv |
| 16. | ಕಾಮತರು | ಕೆ. ಗೋಪಾಲ ರಾವ್, ಬಿ. ಎ., ಎಲ್. ಟಿ. | Lviii |
| 17. | ಹಲವು ಮಕ್ಕಳ ತಾಯಿ | ಡಾ। ಎಸ್. ಪಿ. ಭಟ್ಟ, ಎಲ್. ಡಿ. ಎಸ್‌ಸಿ. | Lix |
| 18. | ಒಂದು ಮಾತು | ಶ್ರೀ. ಮುಳಿಯ ತಿಮ್ಮಪ್ಪಯ್ಯ | Lxiii |


## ಅಂದಿನ ಆವೂರು.


| | | |
|---|---|---|
| ೧. | ಕದ್ದವರು ಯಾರು | ೧ |
| ೨. | ಭಾರತ ಪ್ರಯೋಗ | ೨೭ |
| ೩. | ಬೊಗ್ಗು ಮಹಾಶಯ | ೫೦ |
| ೪. | ಆವೂರು ಮಠ | ೭೪ |
| ೫. | ವೈದ್ಯರಾಜ ಧನ್ವಂತರಿ | ೧೦೬ |

# ಮುನ್ನುಡಿ.

ಶ್ರೀಮಾನ್ ಎಮ್. ಎನ್. ಕಾಮತರ ಕೆಲವು ಲೇಖನಗಳನ್ನೊಳಗೊಂಡ ಈ ಪುಸ್ತಕಕ್ಕೆ ನಾನೊಂದು ಮುನ್ನುಡಿ ಬರೆಯಬೇಕೆಂದು ನನ್ನ ಪ್ರಿಯಮಿತ್ರರಾದ ಶ್ರೀಮಾನ್ ಜೋಡುಮಠದ ವಾಮನ ಭಟ್ಟರು ಕೇಳಿದಾರೆ. ನನ್ನ ಮತ್ತು ಶ್ರೀ. ಕಾಮತರ ಪರಿಚಯ ಬಹಳ ದಿನದ್ದಲ್ಲ. ಆದರೆ ಪರಿಚಯವಾದ ಕೊಂಚ ದಿನದಲ್ಲೇ ನಾವಿಬ್ಬರೂ ಮನಸಾ ಬಹಳ ಹತ್ತಿರ ಬಂದಿದ್ದೆವು. ಶ್ರೀ. ಕಾಮತರು ತೀರಿಕೊಂಡಾಗ ನಮಗೆ ಎಂಥ ನಷ್ಟ ಆಯಿತೆಂದು ಮನಗಾಣುವುದು ನನಗೆ ಈ ಕಾರಣದಿಂದ ಸಾಧ್ಯವಾಯಿತು. ಅವರ ನೆನವಾಗಿ ಪ್ರಕಟವಾಗುತ್ತಿರುವ ಈ ಗ್ರಂಥಕ್ಕೆ ಒಂದು ಮುನ್ನುಡಿಯನ್ನು ಬರೆದು ದಿವಂಗತರಾದ ಆ ನನ್ನ ಮಿತ್ರರ ವಿಷಯದಲ್ಲಿ ನನಗಿರುವ ಆತ್ಮೀಯತೆ ಮತ್ತು ಗೌರವದ ಭಾವಕ್ಕೆ ರೂಪುಗೊಡುವುದು ನನಗೆ ಬಹು ಸಮ್ಮತ. ಆದಕಾರಣ ಈ ಕೆಲಸಕ್ಕೆ ಒಪ್ಪಿ ಈ ನಾಲ್ಕು ಮಾತನ್ನು ಬರೆಯುತ್ತಿದೇನೆ.

ಕನ್ನಡದ ಹೊಸ ಸಾಹಿತ್ಯ ಎಂಬಲ್ಲಿ ನಾವೆಲ್ಲ ಈಗ ಮೂವತ್ತು ವರ್ಷದಿಂದ ಇಂದಿನ ವರೆಗಿನ ಮಾತನ್ನು ಆಡುತ್ತೇವೆ. ನಾವು ಆಧುನಿಕ ಎಂದು ಕರೆಯುವ ನಮ್ಮ ಸಾಹಿತ್ಯಕ್ಕೆ ಕ್ರಿಸ್ತಶಕ ೧೯೦೫ರಿಂದ ೧೯೧೫ರ ವರೆಗಿನ ಕಾಲ ಆರಂಭದ ಕಾಲ. ಸ್ಕೂಲು ಕಾಲೇಜನ್ನು ಮುಗಿಸಿ ಕೆಲಸಗಳಲ್ಲಿ ಇದ್ದವರು ಕೆಲವರು, ಸ್ಕೂಲು ಕಾಲೇಜನ್ನು ಮುಗಿಸುವ ಸೌಕರ್ಯವಿರದೆ ಹಾಗೆಯೇ ಅನ್ನ ಬಟ್ಟೆಗಾಗಿ ದುಡಿಯಲು ತೊಡಗಿದ್ದ ಕೆಲವರು, ಸ್ಕೂಲು ಕಾಲೇಜಿನಲ್ಲಿ ಓದುತ್ತ ಲೋಕವನ್ನು ಚೆನ್ನಾಗಿ ಮಾಡುವ ಕನಸನ್ನು ಕಾಣುತ್ತಿದ್ದ ಇನ್ನು ಕೆಲವರು: ಇವರು ಈ ಹೊಸ ಸಾಹಿತ್ಯದ ಕೆಲಸಗಾರರು. ಪೂರ್ವದೇಶಗಳಿಗೆ ಬಂದ ಹೊಸ ಬೆಳಕಿನಲ್ಲಿ ಕಣ್ತೆರೆದ ಭಾರತವರ್ಷದಲ್ಲಿ ಕನ್ನಡ ನಾಡು ಆಗ ಕಣ್ತೆರೆಯುತ್ತ ಇತ್ತು. ತನ್ನ ಬಾಲ್ಯದಲ್ಲಿ ಎಚ್ಚರಗೊಳ್ಳುತ್ತಿದ್ದ ದೇಶದ ಸ್ಥಿತಿಯನ್ನು ನೆನೆದು ಆಂಗ್ಲ

ಕವಿ ವರ್ಡ್ಸ್‌ವರ್ತ್ 'Bliss was it in that dawn to be alive, but to be young was very heaven' ಎಂದು ಹೇಳಿದನು. ಪ್ರಾಯಶಃ ನಮ್ಮ ಆ ಹತ್ತು ವರ್ಷವನ್ನು ನೆನೆಯುವ ನನ್ನ ಜೊತೆಯವರೂ ಹಿರಿಯರೂ ಇದೇ ಮಾತನ್ನು ಹೇಳುತ್ತೇವೆ. ಎಚ್ಚರಗೊಳ್ಳುತ್ತ ಇದ್ದ ದೇಶದ ಸ್ಥಿತಿಯನ್ನು ನೋಡಿ ಜನತೆ ಸುಖಪಟ್ಟಿತು; ಅದರಲ್ಲಿ ತರುಣ ರಾಗಿದ್ದವರು ಸ್ವರ್ಗಸುಖ ಅನುಭವಿಸಿದರು. ಸ್ವರ್ಗ, ಪ್ರಾಪ್ತಿಯಲ್ಲಿ ಅಲ್ಲ, ನಿರೀಕ್ಷೆಯಲ್ಲಿ ಇದೆ; ಹೊರಗಿನ ವಸ್ತುವಿನಲ್ಲಿಲ್ಲ, ಒಳಗಿನ ಸ್ಥಿತಿ ಯಲ್ಲಿದೆ. ಇಂಥ ಉತ್ಸಾಹದ ದಿನದಲ್ಲಿ ನಾನು ನಮ್ಮ ನಾಡಿನ ಭಾಷಾ ಸೇವಕರ ಹೆಸರುಗಳಲ್ಲಿ ಒಂದು ಎಂದು ಶ್ರೀ। ಎಮ್. ಎಸ್. ಕಾಮತರ ಹೆಸರನ್ನು ಕೇಳಿವೆನು. ನನಗೆ ಅವರ ಕೆಲಸದ ಪರಿಚಯ ಇರಲಿಲ್ಲ. ವ್ಯಕ್ತಿಪರಿಚಯವಂತೂ ಆಮೇಲೆ ಇಪ್ಪತ್ತೊಂಭತ್ತು ವರ್ಷಕ್ಕೆ ಆದದ್ದು. ಆದರೂ ನಾವು ಶ್ರೀ। ಬೆನಗಲ್ ರಾಮರಾವ್, ಶ್ರೀ। ಪಂಜೆ ಮಂಗೇಶ ರಾವ್, ಶ್ರೀ। ರಾಜಗೋಪಾಲಕೃಷ್ಣರಾವ್, ಶ್ರೀ। ಗೋವಿಂದ ಪೈ ಇವರ ಹೆಸರೊಂದಿಗೆ ಕನ್ನಡದ ಲೇಖಕರಲ್ಲಿ ಒಬ್ಬರೆಂದು ಕಾಮತರ ಹೆಸರನ್ನು ಹೇಳುತ್ತಿದ್ದೆವು.

ಕಾಮತರದು ಎಂಥ ವ್ಯಕ್ತಿತ್ವ ಎನ್ನುವುದನ್ನು ಅವರನ್ನು ನೋಡಿಯೇ ತಿಳಿಯಬೇಕಾಗಿತ್ತು. ಕಾಮತರು ಸಾಹಿತ್ಯಸೇವೆ ಮಾಡಿದ ಪ್ರತಿಕೂಲ ಸ್ಥಿತಿಗತಿಯಲ್ಲಿ ಅವರ ಲೇಖನಗಳು ಗ್ರಂಥಗಳಾಗಿ ಹೊರಗೆ ಬರುವುದು ಸಾಧ್ಯವಾಗಲಿಲ್ಲ. ಆದರೆ ಸ್ಥಿತಿಗತಿ ಅನುಕೂಲವಾಗಿದ್ದು ಕಾಮತರ ಲೇಖನಗಳು ಒಟ್ಟುಗೂಡಿ ಹತ್ತಾರು ಪುಸ್ತಕವಾಗಿ ಬಂದಿದ್ದರೂ ಅವು ಗಳನ್ನು ಓದುವಷ್ಟರಿಂದ ಯಾರೂ ಕಾಮತರನ್ನು ತಿಳಿದಂತೆ ಆಗುತ್ತಿರಲಿಲ್ಲ ವೆಂದು ಹೇಳಬೇಕು. ನಾನು ಹೀಗೆನ್ನುವುದಕ್ಕೆ ಕಾರಣ ಈಗ ಒಂದು ವರ್ಷದ ಹಿಂದೆ ಅವರು ಬೆಂಗಳೂರಿಗೆ ಬಂದಾಗ ಅವರನ್ನು ನೋಡಿ ನನಗೆ ಆದ ಆನಂದ ಮತ್ತು ಆಶ್ಚರ್ಯ. ಇಂಥ ಲೇಖಕರೊಬ್ಬರಿದ್ದು ಇಂಥ ವ್ಯಕ್ತಿ ಒಬ್ಬರಿದ್ದು ನಾನು ಬರೆಯುವ ಕಾಲದಲ್ಲಿ ಕನ್ನಡದಲ್ಲಿ ತಾನೂ ಬರೆಯುತ್ತಿರಲಾಗಿ ನಾನು ಇವರನ್ನು ಕಾಣದೆ ಇಷ್ಟು ದಿನ ಕಳೆದು ಕೊಂಡೆನೇ ಎಂದು ನಾನು ವ್ಯಥೆಪಟ್ಟೆನು. ನನ್ನ ಬದುಕಿನಲ್ಲಿ ನನ್ನ

ಜೊತೆಯ ಜನರಿಂದ ನನಗಾಗಿರುವ ಲಾಭ ಒಂದು ಸಾವಿರ ರೀತಿಯದು. ನನಗಿಂತ ವಯಸ್ಸಾದವರ ಜೊತೆಯಲ್ಲಿರುತ್ತ, ನನ್ನ ಜೊತೆಯವರ ಜೊತೆಯಲ್ಲಿರುತ್ತ, ನನಗೆ ಕಿರಿಯವರ ಜೊತೆಯಲ್ಲಿರುತ್ತ ನಾನು ಜೀವನದ ದೇವತೆಯನ್ನು ದರ್ಶನ ಮಾಡುತ್ತ ಇದ್ದಿದೇನೆ. ಒಬ್ಬೊಬ್ಬರೂ ಆ ದರ್ಶನಕ್ಕೆ ತಾವು ಮಾತ್ರ ಕೊಡಬಲ್ಲ ಒಂದು ಕಳೆಯನ್ನು ಕೊಟ್ಟಿದ್ದಾರೆ. ಶ್ರೀ॥ ಎಮ್. ಎಸ್. ಕಾಮತರು ನನ್ನ ಜೊತೆಯಲ್ಲಿದ್ದ ಆ ಎರಡು ದಿನದಲ್ಲಿ ಎಷ್ಟೋ ವರ್ಷದಿಂದ ಬರಿದಾಗಿ ನಿಂತಿದ್ದ ಒಂದು ಗೂಡಿನಲ್ಲಿ ಪ್ರತಿಷ್ಠಿತರಾದರು. ಇಷ್ಟು ದಿವಸ ಇವರನ್ನು ಕಾಣದೆ ಇದ್ದದ್ದು ನನಗೆ ನಾಚಿಕೆಯ ಮಾತು ಎಂದು ನಾನು ಮಿತ್ರರಲ್ಲಿ ಹೇಳಿದೆನು. ಕಾಮತರಿಗೂ ತಿಳಿಸಿದೆನು. ಕಾಮತರ ವ್ಯಕ್ತಿತ್ವ ಅಂತಹುದು.

ಬಾಳಿನಲ್ಲಿ ಮುಖ್ಯ ತತ್ವ ಬೆಳಕು. ಯಾವುದು ಕಣ್ಣಿಗೆ ಬೆಳಕೋ ಅದೇ ದೇಹದಲ್ಲಿ ಜೀವ, ಮನಸ್ಸಿನಲ್ಲಿ ಅರಿವು, ಆತ್ಮದಲ್ಲಿ ಆನಂದ. ಪುಣ್ಯವಂತರು ಎಲ್ಲಿದ್ದರೂ ಎಂತಿದ್ದರೂ, ಬೆಳಕಾಗಿ, ಜೀವವಾಗಿ, ಅರಿವಾಗಿ, ಆನಂದವಾಗಿ ಇರುತ್ತಾರೆ. ಅವರು ತಾವೂ ಇದನ್ನು ಅನುಭವಿಸುವರು, ಇತರರಿಗೆ ಇದನ್ನು ಕೊಡುವರು. ಇದು ಹೆಚ್ಚಾದಷ್ಟೂ ಒಬ್ಬ ವ್ಯಕ್ತಿಯ ಪ್ರಭಾವ ಹೆಚ್ಚುತ್ತದೆ. ಅವನಿಗೂ ತಿಳಿಯದೆ ಇತರರಿಗೂ ತಿಳಿಯದೆ ಅವನು ಒಳ್ಳೆಯ ಬಾಳಿನ ಕಾಂತಿಯುತವಾದ ಖಂಡ ಒಂದಾಗುತ್ತಾನೆ. ಕಾಮತರು ಇಂಥ ಒಬ್ಬ ವ್ಯಕ್ತಿ. ಕಾಮತರ ಬಾಳುವೆ ಎಷ್ಟು ಕಷ್ಟದ ದಾರಿಯಲ್ಲಿ ನಡೆಯಿತೆನ್ನುವುದನ್ನು ನಮ್ಮ ಮಿತ್ರರು ಬರೆದಿರುವ ಇಲ್ಲಿಯ ಲೇಖನಗಳಿಂದ ಕಾಣಬಹುದು. ಆದರೆ ಎಲ್ಲ ಕಷ್ಟವೂ ಕಾಮತರ ಧೃತಿಯ ಎದುರಿಗೆ ತಗ್ಗಿತು ಹೊರತಾಗಿ ಕಷ್ಟದ ಎದುರಿಗೆ ಕಾಮತರ ತಲೆ ತಗ್ಗಲಿಲ್ಲ. ಆಂಗ್ಲ ಕವಿ ಒಬ್ಬನು ಹೇಳಿದಂತೆ "In the fell clutch of circumstance he never winced or cried aloud. Under the bludgeonings of chance his head was bloody but unbowed." ಸ್ಥಿತಿಗತಿ ಸರಿಯಾಗಿಲ್ಲವಷ್ಟೆ, ಸ್ಥಿತಿಗತಿಗೆ ಪುಣ್ಯವಿಲ್ಲ. ಕಾಮತರ ಜೀವ ಇದರಿಂದ ಕೃಪಣವಾಗಲಿಲ್ಲ, ಕೂಗಿಕೊಳ್ಳಲಿಲ್ಲ. ದುರ್ದೈವ ತಲೆಯ ಮೇಲೆ ಪೆಟ್ಟುಗಳನ್ನಿಕ್ಕಿತು. ಕಾಮತರ ಮಂಡೆ ಗಾಯ

ವಾಯಿತು ಹೊರತು ಬಗ್ಗಲಿಲ್ಲ. ಕತ್ತಲು ಕವಿಯಿತೆಂದು ಭಯಪಟ್ಟು ಕಣ್ಣು ಮುಚ್ಚಿಕೊಳ್ಳುವ ಜನರಲ್ಲಿ ಕಾಮತರು ಸೇರಿರಲಿಲ್ಲ. ಕವಿಯುವ ಕತ್ತಲನ್ನು ಜಯಿಸುವ ದೀಪವಾದರು ಅವರು. ಸುಖದುಃಖವನ್ನು ಸಮವಾಗಿ ಕಾಣುವ ಪ್ರಜ್ಞೆ ಕಾಮತರದು. **"A man that fortune's buffets and rewards hath ta'en with equal chance"** ಎಂದು ಷೇಕ್ಸ್‌ಪಿಯರ್ ಹೇಳಿದ ಸಮಬುದ್ಧಿಯನ್ನು ಇವರು ಬೆಳೆಸಿಕೊಂಡಿದ್ದರು.

ಸಮ್ಮೇಳನದಲ್ಲಿ ಕಾಮತರು ಮಾಡಿದ ಭಾಷಣ ಅವರ ಈ ಸ್ವಭಾವವನ್ನು ನಮಗೆ ತೋರಿಸಿತು. ಹಾಗೆಯೇ ಅವರ ಅನುಭವದ ಆಳ ಅವರ ದೃಷ್ಟಿಯ ವೈಶಾಲ್ಯ ಇವನ್ನು ಸ್ಪಷ್ಟಗೊಳಿಸಿತು. ತಾವು ಬಾಲ್ಯದಲ್ಲಿ ಕನ್ನದ ಕಲಿತ ರೀತಿ, ಆ ಮೇಲೆ ಕನ್ನಡ ಬೆಳೆದ ರೀತಿ, ಈಚೆಗೆ ತಾವು ಪಾಠ ಹೇಳುವುದರಲ್ಲಿ ಪಡೆದ ಅನುಭವ, ಭರತಖಂಡದ ಇತರ ಪ್ರಾಂತಗಳಲ್ಲಿ ಭಾಷೆಗಳು ಬೆಳೆಯುತ್ತಿರುವ ರೀತಿ, ನಮ್ಮ ಭಾಷೆ ಮುಂದರಿಯಬೇಕಾದರೆ ನಾವು ಕೈಕೊಳ್ಳಬೇಕಾದ ಕಾರ್ಯಕ್ರಮ, ಈ ವಿಷಯಗಳನ್ನು ಕುರಿತು ಕಾಮತರು ಸುಮಾರು ಒಂದೂವರೆ ಗಂಟೆಯ ಕಾಲ ತಮ್ಮದೇ ಆದ ಒಂದು ಮಾರ್ಗವನ್ನನುಸರಿಸಿ ಭಾಷಣ ಮಾಡಿದರು. ವಿಷಯ ಸ್ಥೂಲವಾಗಿ ಯಾರು ಬೇಕಾದರೂ ಹೇಳುವಂಥದು. ಆದರೆ ಕಾಮತರ ಭಾಷಣದಲ್ಲಿ ಅವರ ರೀತಿಯನ್ನು ಬಿಟ್ಟು ವಿಷಯ ಯಾವುದು ಎಂದು ತೋರಿಸುವಂತಿರಲಿಲ್ಲ. ಆ ರೀತಿಯೂ ಆ ವಿಷಯವೂ ಹಾಗೆ ಸಂಪೃಕ್ತವಾಗಿದ್ದವು. ಇದಕ್ಕೆ ಕಾರಣವೆಂದರೆ ಅವರು ಹೇಳಿದ್ದೆಲ್ಲ ಅವರಿಗೆ ಅನುಭವದಿಂದ ಸಿದ್ಧಿಸಿದ್ದ ವಿಷಯ. ಅನುಭವದಿಂದ ಸಿದ್ಧಿಸಿದ ಎಷ್ಟೇ ಸಣ್ಣ ವಿಷಯವನ್ನು ಹೇಳುವವನೂ ದಾರ್ಶನಿಕ ಪಂಗಡಕ್ಕೆ ಸೇರುತ್ತಾನೆ. ಅವನು ಹೇಳುವ ಮಾತು ಇನ್ನೊಬ್ಬರು ಹೇಳುವ ವಿಷಯವನ್ನೇ ಹೇಳಿದರೂ ಅವನ ಅನುಭವದ ಮುದ್ರೆಯಿಂದ ಬೆಲೆಯನ್ನು ಪಡೆಯುತ್ತದೆ. ಕಾಮತರ ಭಾಷಣವನ್ನು ಕೇಳುತ್ತ ಸಭೆ ಹತ್ತಾರು ಸಲ ನಗೆಯಿಂದ ತೂಗಿತು; ಕುಳಿತಷ್ಟು ಹೊತ್ತೂ ಒಂದು ಪಾಠವನ್ನು ಕಲಿಯಿತು; ಪಾಠವನ್ನು ಕಲಿಯುತ್ತಿದೇನೆಂದು ತಿಳಿಯದೆ ಆನಂದದಲ್ಲಿ ತೇಲಿತು. ಕಾಮತರ ಭಾಷಣ

ಒಂದು ಕವಿತೆಯಂತಿತ್ತು: ಕಾಮತರು ಅದನ್ನು ಮಾಡುವುದರಲ್ಲಿ ತಮ್ಮ ಕವಿಮನೋಧರ್ಮವನ್ನು ವ್ಯವಹರಿಸಿ ಸಭೆಯನ್ನು ಒಮ್ಮೆಗೇ ತಮ್ಮ ಅನುಭವದ ಎತ್ತರಕ್ಕೆ ಸೆಳೆದುಕೊಂಡರು.

ಕಾಮತರು ಸ್ವಭಾವದಿಂದ ಕವಿಗಳಾದದ್ದರಿಂದ ಇದು ಸಾಧ್ಯವಾಯಿತು. ಸಾಮಾನ್ಯ ಮನುಷ್ಯರಿಗೆ ಲೋಕವು ವಸ್ತುಗಳ ಒಂದು ಕಟ್ಟಾಗಿ ಕಾಣುತ್ತದೆ. ವಿಚಾರವಂತರಿಗೆ ಅದು ತತ್ವಗಳ ಮೂಟೆಯೊಂದು ತೋರುತ್ತದೆ. ಕವಿಯಾದವನಿಗೆ ಈ ಎರಡು ಭಾವನೆಗಳ ಮಿಲನದ ಒಂದು ದೃಷ್ಟಿ ದೊರೆಕೊಂಡಿರುತ್ತದೆ. ಒಬ್ಬನಿಗೆ ಒಂದು ಕಣ್ಣಿನ ಕಣ್ಣೀರು ಆ ವ್ಯಕ್ತಿಯ ಕಣ್ಣೀರಾಗಿ ಕಾಣುತ್ತದೆ; ಉಳಿದ ಲೋಕ ನೊಂದಂತೆ ಅದರಿಂದ ಅವನಿಗೆ ತೋರುವುದಿಲ್ಲ. ಮತ್ತೊಬ್ಬನಿಗೆ ಒಬ್ಬ ವ್ಯಕ್ತಿಯ ಕಣ್ಣೀರು ಎಲ್ಲ ಲೋಕ ಅನುಭವಿಸುತ್ತಿರುವ ನೋವಿನ ಚಿಹ್ನೆಯಾಗುತ್ತದೆ. ಬದುಕೇ ಹೀಗೆ ಇದಕ್ಕೆ ಪರಿವೇದನೆ ಏನು? ಎಂದು ಅವನು ಶಾಂತಿಯ ಸ್ಮರಿಸುತ್ತಾನೆ. ಕವಿ ಯಾವ ಒಂದು ಜೀವದ ನೋವಿನಲ್ಲೂ ನೋಯುತ್ತಾನೆ; ಈ ಸಹಾನುಭೂತಿಯಿಂದ ಅದನ್ನು ಎಲ್ಲ ಬಾಳ ನೋವನ್ನು ಮಾಡಿಕೊಂಡು ಅನುಕಂಪಿಸುತ್ತಾನೆ. ಹತ್ತು ಜನ ಅಳುತ್ತ ಹತ್ತು ಜನ ನಗುತ್ತ, ಸಾವಿರ ಜನ ಗಾಣದ ಎತ್ತುಗಳಂತೆ ಎರಡೂ ಇಲ್ಲದ ದಿನದ ಬದುಕಿನಲ್ಲಿ ಸುತ್ತುತ್ತಿರುವ ರೀತಿಯನ್ನು ನೋಡಿ ಇವನು ಏಕಕ್ಷಣದಲ್ಲಿ ನಗೆಯಿಂದ ನೋವಿಂದ ಕಣ್ಣಲ್ಲಿ ನೀರನ್ನು ತುಂಬಿಕೊಳ್ಳುತ್ತಾನೆ. ರಕ್ತ ಹೀಗೆ ನೀರಾದರೂ ಅವನು ಎದೆಕುಗ್ಗುವುದಿಲ್ಲ. ಆ ನೀರನ್ನು ರಸಮಾಡಿಕೊಂಡು ಮಾತಲ್ಲಿ ಬೆರೆಸುತ್ತಾನೆ. ಇಂಥವನು ಆಡುವ ಮಾತೆಲ್ಲ ಕವಿತೆಯೇ ಆಗುತ್ತದೆ. ಅನುಭವ ನಿಜವಾದಷ್ಟೂ ಈ ಮಾತು ನೆಲದ ಮೇಲೆ ನಿಂತಿರುತ್ತದೆ; ತೀವ್ರವಾದಷ್ಟೂ ಮುಗಿಲನ್ನು ಮುಟ್ಟುತ್ತದೆ. ಕಾಮತರ ಮಾತಿನಲ್ಲಿ ಈ ಎರಡು ಗುಣವೂ ಕಾಣುತ್ತಿತ್ತು. ಅವರು ನಮ್ಮ ಜನರ ವಿಷಯದಲ್ಲಿ, ಭಾಷೆಯ ವಿಷಯದಲ್ಲಿ, ತುಂಬ ತಿಳಿದ ಒಂದು ಕನಿಕರದಿಂದ ಮಾತನಾಡಿದರು. ನಮ್ಮ ಭವಿಷ್ಯವನ್ನು ಕುರಿತು ಆಸೆಯಿಂದ ತುಂಬಿದ ಧ್ಯೇಯ ಒಂದನ್ನು ಹುರಿದುಂಬಿ ಹೊಗಳಿದರು.

ಜೊತೆಗೆ ಕಾಮತರು ಕತೆಗಾರರು. ಆ ಒಂದು ಭಾಷಣದಲ್ಲಿ ಅವರು ಎಲ್ಲಾದರೂ ಇಪ್ಪತ್ತು ಕಥೆ ಹೇಳಿರಬೇಕು. ಒಂದೊಂದು ಸಲವೂ

ಸಭೆ ಇಲ್ಲಿ ನಗಬೇಕು, ಇಲ್ಲಿ ಅಯ್ಯೋ ಎನ್ನಬೇಕು, ಇಲ್ಲಿ ಹೀಗುಂಟೆ ಎನ್ನಬೇಕು, ಇಲ್ಲಿ ಚಮತ್ಕೃತವಾಗಬೇಕು. ಒಂದೊಂದು ಇಂಥ ಕಥೆಯನ್ನು ಹೇಳುವುದರಲ್ಲಿಯೂ ಕಾಮತರ ಜಾಣ್ಮೆ ಚೆನ್ನಾಗಿ ಕಾಣುತ್ತಿತ್ತು. ಮಾತು ಸಾಮಾನ್ಯವಾಗಿ ಆರಂಭವಾಗಿ ಒಂದರ್ಧ ನಿಮಿಷದಲ್ಲಿ ಒಂದು ಸನ್ನಿವೇಶದ ಚಿತ್ರ ಆಗಿ ಕೊನೆಗೆ ಇದು ನಡೆಯಿತೆಂದು ಅವರು ಹೇಳಿದಾಗ ಕೇಳಿದವರ ಮನಸ್ಸು ತಟ್ಟನೆ ಸೋಲುವುದು. ಇವಾಯಿತೆಂದು ಹೇಳುವುದಕ್ಕೆ ಮೊದಲು ಕಾಮತರು ಜನರ ಮನಸ್ಸನ್ನು ಹಸಗೆಸಿಕೊಳ್ಳುತ್ತಿದ್ದುದೇ ಒಂದು ಕುಶಲ ಕರ್ಮ. ಸಹಜವಾದ ಕತೆಗಾರಿಕೆ ಅಭ್ಯಾಸದಿಂದ ಹದಗೊಳ್ಳದೆ ಈ ರೀತಿಯ ಜಾಣ್ಮೆ ಸಾಧ್ಯವಲ್ಲ.

ಇದಲ್ಲದೆ ಕಾಮತರು ಸಹಜವಾಗಿ ಬೋಧಕರು. ಮಾತನಾಡುವುದಕ್ಕೆ ನಿಲ್ಲುವ ವರೆಗೆ ಅವರಿಗೆ ಸಭೆಯಲ್ಲಿ ದೊಡ್ಡವರು ಚಿಕ್ಕವರು, ಬಲ್ಲವರು ಅಲ್ಲದವರು ಉಂಟು. ಮಾತನಾಡುವುದಕ್ಕೆ ನಿಂತ ಮೇಲೆ ಅವರಿಗೆ ಎಲ್ಲರೂ ಸಣ್ಣವರೇ. ಕೆಲ ಬೋಧಕರಿಗೆ ಇಂಥ ವೇಳೆಯಲ್ಲಿ ತಾವು ಹಿರಿಯರೆಂಬ ಒಂದು ಭಾವನೆ ಮನಸ್ಸಿನಲ್ಲಿ ನಿಂತಿರುತ್ತದೆ. ಕಾಮತರಿಗಾದರೆ ಬೋಧಿಸುವ ತಾನೂ ಸಭೆಯೊಂದಿಗೆ ಸಣ್ಣ ವಯಸ್ಸಿಗೆ ಇಳಿಯುವ ಸತ್ವವಿತ್ತು. ಇದರಿಂದ ಅವರು ಬೋಧಿಸುತ್ತಿದ್ದರೂ ಉಪದೇಶಿಸುತ್ತಿದ್ದಂತೆ ಕಾಣುತ್ತಿರಲಿಲ್ಲ. ಇದರಿಂದ ಅವರು ಭಯಪಡದೆ ನಗುವುದು ಸಾಧ್ಯವಾಯಿತು. ಇದರಿಂದಲೇ ಸಭೆ ಅವರನ್ನು ಪ್ರೇಮದಿಂದ ಕಾಣುವುದು ಅವಶ್ಯವೂ ಅನಿವಾರ್ಯವೂ ಆಗಿತ್ತು. ಈ ಕಾರಣದಿಂದಲೇ ಭಾಷಣಕಾರನ ಮತ್ತು ಶ್ರೋತೃಗಳ ಬೇರೆಬೇರೆ ಮನಸ್ಸು ಒಂದಾಗಿ ಒಂದೇ ಭಾವದ ಅಲೆಯಲ್ಲಿ ಏರಿ ಇಳಿಯುವುದು ಸುಲಭವಾಯಿತು. ಕಾಮತರು ಒಂದು ಮಾತನ್ನು ಹೇಳಿ ಶ್ರೋತೃಗಳು ಇದು ಹೌದೇ ಎಂದು ಯೋಚಿಸಿ ಒಪ್ಪುವುದೆಂಬ ಪ್ರಸಂಗ ಅಲ್ಲಿ ಬರಲೇ ಇಲ್ಲ. ಕಾಮತರು ಒಂದು ಕ್ಷಣದ ಮೇಲೆ ಏನು ಹೇಳುವರೆಂಬ ಮಾತನ್ನು ಸಭೆಯಲ್ಲಿ ಯಾರಾದರೂ ಊಹಿಸಬಹುದೆನ್ನುವ ಮಟ್ಟಿಗೆ ಅಲ್ಲಿ ಸಮರಸವಿತ್ತು. ಇಂಗ್ಲೆಂಡಿಗೆ ರಾಜಧಾನಿ ಎಂದು ಬೋಧಕನು ಹೇಳಿದರೆ ತರಗತಿಯಲ್ಲಿ ಯಾವ ಹುಡುಗನಾದರೂ 'ಲಂಡನ್' ಎಂದು ಮಾತನ್ನು ತುಂಬಬಹುದಾದಂತೆ ಸಭೆಯ ಮನಸ್ಸು ಕಾಮತರ ಮನಸ್ಸಿನೊಂದಿಗೆ ಸಮತಾಲದಲ್ಲಿ ಹರಿಯುತ್ತಿತ್ತು.

ಆ ಮೂರು ದಿನ ನನ್ನ ಮತ್ತು ಕಾಮತರ ಸ್ನೇಹ ಬೆಳೆದು ಬಂದು ಸ್ಪಷ್ಟವಾದ ರೂಪನ್ನು ತಾಳಿತು. ಕಾಮತರು ತಮ್ಮ ಅನುಭವವನ್ನು ಕುರಿತು ಒಂದು ಪುಸ್ತಕವನ್ನು ಬರೆಯಬೇಕೆಂದು ನಾನು ಅವರನ್ನು ಬೇಡಿದೆನು. ಅವರು ಒಪ್ಪಿಕೊಂಡರು. ಜೊತೆಗೆ ಅವರ ಇದುವರೆಗಿನ ಲೇಖನಗಳನ್ನು ಒಟ್ಟುಗೂಡಿಸಿ ಕೆಲವು ಪುಸ್ತಕಗಳನ್ನು ಪ್ರಕಟಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ನಾನು ಸೂಚಿಸಿದೆನು. ಅದಕ್ಕೂ ಅವರು ಒಪ್ಪಿಕೊಂಡರು. ಆದರೆ ಯಾವ ಕೆಲಸ ಮಾಡುವುದಕ್ಕೂ ದಿನದ ಬಾಳುವೆಯ ಸುತ್ತನ್ನು ಬಿಟ್ಟು ಬೇರೆ ಕಡೆ ಕೆಲವು ದಿನ ಇರಬೇಕು ಎಂದು ಅವರು ಹೇಳಿದರು. ಅವರು ಬೆಂಗಳೂರಿಗೆ ಬಂದು ನನ್ನ ಜೊತೆಯಲ್ಲಿ ಕೆಲವು ದಿನ ಇರಬೇಕೆಂದೂ, ಆಗ ಈ ಕೆಲಸವನ್ನು ಮಾಡಬೇಕೆಂದೂ ನಾನು ಆಹ್ವಾನ ಕೊಟ್ಟೆನು. ಅವರು ಅದಕ್ಕೂ ಒಪ್ಪಿಕೊಂಡರು. ಆ ಮುಂದಣ ಬೇಸಿಗೆಯಲ್ಲಿ ಅವರು ನನ್ನ ಜೊತೆಗೆ ಕೆಲವು ವಾರ ಇರತಕ್ಕದ್ದೆಂದು ನಾವು ನಿರ್ಣಯಿಸಿಕೊಂಡೆವು. ಆದರೆ ಇದು ಮಾನವರ ನಿರ್ಣಯವಾಯಿತು. ದೈವ ಬೇರೆ ಎಣಿಸಿತು. ಅಷ್ಟರಲ್ಲೇ ನಾನು ಮಂಗಳೂರಿನ ಕಡೆ ಸ್ವಲ್ಪ ದೇಶಯಾತ್ರೆ ಮಾಡಿದೆನು. ಮಂಗಳೂರಿನ ಸಂಸ್ಕೃತಿ ವಿಹಾರದ ಮಿತ್ರರು ನಾನು ಒಂದು ಭಾಷಣ ಮಾಡುವಂತೆ ಏರ್ಪಡಿಸಿದ ವೇಳೆ ಕಾಮತರು ಅಧ್ಯಕ್ಷರಾಗಿ ನನ್ನ ಪಕ್ಕದಲ್ಲಿ ಕುಳಿತು ಬೆಂಗಳೂರಿನಲ್ಲಿ ಆರಂಭವಾಗಿದ್ದ ಪ್ರೇಮವನ್ನು ಮಂಗಳೂರಿನಲ್ಲಿ ಮಾಗಿಸಿದರು. ಅದೇ ಪ್ರೇಮದ ಮಾತು, ಅದೇ ಸರಸ, ಅದೇ ಹಾಸ್ಯ, ಅದೇ ಮ್ಲಾನ ವದನ, ಅದೇ ಕೆಚ್ಚು. ಅಂದಿನ ರಾತ್ರಿ ನಾನು ಅವರ ಮನೆಗೆ ಐದು ನಿಮಿಷವಾದರೂ ಹೋಗಿಬರಬೇಕೆಂದು ಉದ್ದೇಶಿಸಿದ್ದೆ. ರಾತ್ರಿಯ ಕಾರ್ಯಕ್ರಮ ಇದಕ್ಕೆ ಅವಕಾಶ ಕೊಡಲಿಲ್ಲ. ಮತ್ತೆ ಕಾಣುತ್ತೇವಲ್ಲ ಎಂದು ಮಾರನೆಯ ದಿನ ಹಾಗೆಯೇ ಹೊರಟದ್ದಾಯಿತು. ಮತ್ತೆ ಕಾಮತರನ್ನು ನಾನು ನೋಡಲಿಲ್ಲ. ಮಾನ್ಯ ಮಿತ್ರರಾದ ಶ್ರೀ। ಶ್ರೀನಿವಾಸ ಪೈಗಳವರು ಕಾಮತರು ತೀರಿಕೊಂಡರೆಂಬ ಮಾತನ್ನು ಒಂದು ಕಾಗದದಿಂದ ತಿಳಿಸಿದರು. ಕಾಮತರನ್ನು ಜೊತೆಯಲ್ಲಿ ಇರಿಸಿಕೊಂಡು ಕೆಲವು ದಿನ ಹರುಷವಾಗಿರಬೇಕು ಎಂದು ನಾನು ಕಟ್ಟಿದ್ದ ಕನಸಿನ ಗುಡಿ ಹೀಗೆ ಮುಗಿಯಿತು.

ಕಾಮತರ ಸಹವಾಸ ನನಗೆ ಲಭಿಸದೆ ಹೋದರೂ ನಾವಿಬ್ಬರೂ ಉದ್ದೇಶಿಸಿದಂತೆ ಅವರ ಲೇಖನ ಕೆಲವನ್ನು ಸಂಗ್ರಹಿಸಿ ಅಚ್ಚುಹಾಕಬೇಕೆಂದು ಅವರು ತೀರಿಕೊಂಡ ಸುದ್ದಿ ಬಂದಾಗಲೇ ನಾನು ಅಪೇಕ್ಷಿಸಿದೆನು. ಆ ಕೆಲಸವನ್ನು ಮತ್ತಾರಾದರೂ ಮಾಡುವುದಾದರೆ ಹಾಗೂ ಆಗಬಹುದು. ಹೀಗೆಂದಿರುವಲ್ಲಿ ಮಂಗಳೂರಿನ ನಮ್ಮ ಮಿತ್ರರು ಈ ಕೆಲಸವನ್ನು ಆರಂಭ ಮಾಡುವುದು ತಿಳಿಯಿತು. ಕಾಮತರು ಶ್ರೇಷ್ಠ ಸಾಹಿತಿಗಳೆನ್ನುವುದು ಇಲ್ಲಿ ಸೇರಿರುವಷ್ಟು ಲೇಖನಗಳಿಂದಲೇ ಕಾಣುತ್ತದೆ. ಈ ಒಂದು ಹಿಡಿಯ ಪುಟದ ಬರವಣಿಗೆಯಿಂದಲೇ ಅವರು ತಮ್ಮ ಪ್ರಾಂತದ ಒಂದು ಊರಿನ ಚಿತ್ರವನ್ನು ಎಷ್ಟೋ ಸುಂದರವಾಗಿ, ಎಷ್ಟೋ ಸ್ಪಷ್ಟವಾಗಿ ಕಲ್ಪಿಸಿದ್ದಾರೆ. ಈ ಬರಹ ಅತ್ಯುತ್ತಮ ವರ್ಗದ್ದು. ಇವರ ತಳಹದಿ ಲೋಕವನ್ನು ಕಣ್ತೆರೆದು ನೋಡುವ ನೋಟ, ಮನವೊಪ್ಪಿ ಅಪ್ಪಿಕೊಳ್ಳುವ ಔದಾರ್ಯ; ಇದರ ಸಾಧನ ವಿವರವನ್ನು ಆಯ್ದು ಹೇಳುವ ಜಾಣ್ಮೆ, ಕೋದು ತೋರುವ ಚಳಕ. ಭೂಲೋಕದ ಮಗು ಸ್ವರ್ಗಲೋಕ ಎಂಬುದನ್ನು ಊಹಿಸತೊಡಗಿ ಭೂಮಿಯ ಚೆಲುವನ್ನು ಮರೆಯುವುದರಿಂದ ಒಂದು ರೀತಿಯ ಸಾಹಿತ್ಯ ಬರುತ್ತದೆ. ಆ ಸ್ವರ್ಗವನ್ನು ಕಟ್ಟುವುದಕ್ಕೂ ಭೂಮಿಯ ಮಗು ಭೂಮಿಯ ಚೆಲುವಿನ ಪರಿಕರವನ್ನೇ ಉಪಯೋಗಿಸುತ್ತದೆ. ಅದರ ಊಹೆಗೆ ಕಾರಣವಾಗುವ ಭಾವದ ಅಪೀಮು ಕೂಡ ಭೂಮಿಯದೇ ಎಂದು ತೋರುತ್ತದೆ. ಭೂಮಿಯ ಮಗು ಭೂಮಿಯದನ್ನಲ್ಲದೆ ಮತ್ತೇನನ್ನು ಬಲ್ಲದು? ಕಾಮತರದು ಇಂಥ ಸಾಹಿತ್ಯ ಅಲ್ಲ. ಕಂಡ ಸೃಷ್ಟಿಯನ್ನು ಒಪ್ಪಿಕೊಂಡು, ಹೊಡೆದರೂ ತಾಯನ್ನು ಬಿಡದೆ ಕಾಲಿಗೆ ಸುತ್ತುವ ಮಗುವಿನಂತೆ, ಕಠಿನವಾದರೂ ಜೀವನದಲ್ಲಿ ಬೇಸರಪಡದೆ ಅವರು ಅದನ್ನು ಹಿಡಿದರು. ಹೆದರಿ ಹಿಡಿದರೆ ಚುಚ್ಚುವ ಮುಳ್ಳು ಇವರ ಕೈಯ ಹಿಡಿತದಲ್ಲಿ ಅಡಗಿ ನಿಂತಿತು. ನಗೆ, ಕಣ್ಣೀರು, ಕನಿಕರ, ಅರಿವು ಇವುಗಳಿಂದ ಕೂಡಿರುವ ಈ ಚಿತ್ರಗಳನ್ನು ಅವರು ರಚಿಸಿ ತಮ್ಮ ಅನುಭವಕ್ಕೆ ರೂಪು ಕೊಟ್ಟರು; ಜೊತೆಯ ಜನಕ್ಕೆ ಹರ್ಷವನ್ನೂ ತಿಳಿವನ್ನೂ ನೀಡಿದರು; ಸಾಹಿತ್ಯಕ್ಕೆ ರತ್ನಗಳನ್ನು ಸೇರಿಸಿದರು. ಅಲ್ಲದೆ ಶ್ರೀ ಕಾಮತರನ್ನು ಕುರಿತು ನಮ್ಮ ಮಿತ್ರರು ಬರೆದು ಇಲ್ಲಿ ಸೇರಿಸಿರುವ ಲೇಖನಗಳಿಂದ ಮಂಗಳೂರಿನ ಪ್ರಾಂತದ ಸಾಹಿತ್ಯ ಸ್ಫೂರ್ತಿ ಎಷ್ಟು ಶ್ರೇಷ್ಠ

ವಾಾವದ್ದೆನ್ನುವುದು ಕಾಣುತ್ತದೆ. ಕಾಮತರ ಬರವಣಿಗೆಯಂತೆಯೇ ಈ ಬರಹಗಳೂ ಕಣ್ಣಿಗೆ ಒತ್ತಿಕೊಳ್ಳುವಂತಿವೆ. ಕಾಮತರ ಲೇಖನಗಳೊಂದಿಗೆ ಅವರ ನೆನವಿನ ಕಾಣಿಕೆಗಳಾದ ಈ ಲೇಖನಗಳನ್ನು ಸೇರಿಸುವ ಯೋಜನೆಯ ಬಗ್ಗೆ ನಾನು ಈ ಗ್ರಂಥದ ಸಂಪಾದಕರಾದ ಶ್ರೀ ವಾಮನ ಭಟ್ಟರನ್ನೂ ಲೇಖನಗಳ ಅಂದದ ಬಗ್ಗೆ ಅವುಗಳ ಲೇಖಕರನ್ನೂ ಅಭಿನಂದಿಸುತ್ತೇನೆ. ಕನ್ನಡದ ಬರಹ ಈ ಮಟ್ಟದಲ್ಲಿ ಬೆಳೆಯುವುದೇ ಶ್ರೀ ಕಾಮತರಂಥ ಲೇಖಕರಿಗೆ ಸ್ಮೃತಿ ಸ್ತಂಭ.

ಕಾಮತರನ್ನು ಕಳೆದುಕೊಂಡು ಕನ್ನಡನಾಡು ಬಹಳ ನಷ್ಟಪಟ್ಟಿದೆ. ಇತರ ಕೆಲ ಹಿರಿಯರನ್ನು ಕಿರಿಯರನ್ನು ಕಳೆದುಕೊಂಡು ಬಹುದಿನವಾಗಲಿಲ್ಲ. ಅವರ ಜೊತೆಗೆ ಇವರೂ ಮರೆಯಾದರು. ನಮ್ಮ ಇತಿಹಾಸದ ದುರ್ದೈವದಿಂದ ನಿಜದಲ್ಲಿ ಒಂದಾದರೂ ತೋರಿಕೆಯಲ್ಲಿ ನಾಲ್ಕಾರಾಗಿರುವ ಕನ್ನಡದ ನಾಡು ತಾನು ಒಂದೆನ್ನುವುದನ್ನು ಅರಿಯುವುದಕ್ಕೆ ಕಾಮತರಿಂದ ಆಗಬೇಕಾದ ಕೆಲಸ ಇತ್ತು. ಅವರನ್ನು ಹಿರಿಯರೆಂದು ಗೆಳೆಯರೆಂದು ಪ್ರೀತಿಯಿಂದ ನೆನೆಯುವ ಜನರು ಅವರ ಆ ಧ್ಯೇಯವನ್ನು ಸಾಧಿಸುವುದರಲ್ಲಿ ತೊಡಗಬೇಕು. ಕರ್ಣಾಟಕದ ಎಲ್ಲ ಪ್ರಾಂತದ ಜನ ಈ ಕೆಲಸದಲ್ಲಿ ಬದ್ಧಕಂಕಣರಾಗಲಿ. ಮಧ್ಯೆ ಎಲ್ಲಾದರೂ ದೀಕ್ಷೆ ಕೆಡುವ ಸಂದರ್ಭ ಕಂಡಾಗ ಪಂಜೆ, ಪೇಜಾವರ, ಗೌರಮ್ಮ, ವೆಂಕಣ್ಣಯ್ಯ, ರೊದ್ದ, ಶಾಂತಕವಿ, ಸಾಸನೂರ ಎಂಬ ಹೆಸರುಗಳೊಂದಿಗೆ ಕಾಮತ ಎಂಬ ಹೆಸರನ್ನೂ ನೆನೆಯಲಿ. ಕಂಕಣ ಭದ್ರವಾಗುವುದು, ದೀಕ್ಷೆ ಸಲ್ಲುವುದು. ಚೂರಾದಂತೆ ಕಾಣುತ್ತಿರುವ ಕನ್ನಡದ ಕನ್ನಡಿ ಒಂದು ಎಂದು ತೋರಬಲ್ಲ ಶಕ್ತಿ ಆ ಹೆಸರುಗಳಲ್ಲಿದೆ. ಸತ್ಯವಂತರ ಹೆಸರು ಸತ್ವವಂತ ಹೆಸರು. ಆ ಸತ್ವದಿಂದ ಅವುಗಳಿಗೆ ಮಂತ್ರದ ಶಕ್ತಿ ಅಳವಟ್ಟಿರುತ್ತದೆ. ಅವುಗಳನ್ನು ಉಪಯೋಗಿಸಿ ನಾವು ಆ ದೇಶಪ್ರೇಮಿಗಳ ಆಸೆಯನ್ನು ಈಡೇರಿಸಬೇಕು. ಒಂದು ನಾಡಿನ ಮಕ್ಕಳು ಒಬ್ಬರನ್ನು ಕುರಿತು ಒಬ್ಬರು ಛಲದ ಮಾತನ್ನಾಡುವುದು ಸಲ್ಲದು. ಸ್ಪರ್ಧೆ ಇರಲಿ; ಆದರೆ ಸೇವೆ ಮಾಡುವುದರಲ್ಲಿರಲಿ, ಮರ್ಯಾದೆಗಾಗಿ ಕಾಡುವುದರಲ್ಲಿ ಬೇಡ: ಸೋದರರಲ್ಲಿ ವಿವಾದ ಸಲ್ಲದು; ವಿವಾದ ಬಂದದ್ದೇ ಆದರೆ ಅಲ್ಲಿ ಸೋಲಲ್ಲಿ ಗೆಲ್ಲವಿವೆ: ಇವೇ ಬದುಕುವ ದಾರಿ: ಹೀಗೆಂದು ಕಾಮತರ ನೆನಪು

ಈಗಲೂ ನಮಗೆ ತಿಳಿಸುತ್ತಿದೆ. ನಾನ್ಯಃ ಪಂಥಾ ಅಯನಾಯ ವಿದ್ಯತೇ. ಅವರ ಧ್ವನಿ ನಮ್ಮ ಜನದ ಮನಸ್ಸನ್ನು ಮುಟ್ಟಲಿ. ಕನ್ನಡದ ಬಾಳು ಒಂದಾಗಿ ಬೆಳೆಯಲಿ.

ಬೆಂಗಳೂರು, ವಿಕ್ರಮ ಸಂವತ್ಸರ
ಮಾರ್ಗಶಿರ ಬಹುಳ ನವಮೀ.

ಶ್ರೀನಿವಾಸ.

## ಕಾಮತರು

ಸಾಹಿತ್ಯ ಫಲವ ನವತರುಣನಿಚಯಕೆ ಸಲಿಸಿ
ನವಯುಗಕೆ ಕಳೆಗೊಳಿಸಿ ಮೆರೆಯುತಿಹ ಕಾಮತರು
ನೀವೆ, ಭಾರತಿ ತೇಜ ಪಸರಿಸುವ ಕೈಬೆಳಗು,
ಕಂಠೀರವದ ರವವು, ಅಭಿಮಾನಮಾನಗಳು
ಎರಕವಡೆದಚ್ಚುಗೊಂಡಿರುವ ಮೂರುತಿಯಹುದು.
ಹಳೆಯ ಸಾಹಿತ್ಯಗಳ ಕೆರೆತುಂಬ ಬಿಡಿಸಿ, ಕಿರು-
ನಳಿಗೆಯೊಳು ಬರಿಸಿ ಕುಡಿತೆಯ ಕೊಡಲು ಬಲ್ಲವರು,
ನಗೆಬಗೆಯ ಬಲ್ಲಿದರು ನೀವಹುದು; ಕನ್ನಡದ
ನುಡಿವೆಣ್ಣ ಹೊಸಹಾರದಲಿ ನಿಮ್ಮ ಕೈಬೆಡಗು
ಕಳೆಕಾಂಬ ಹೊಸ ಮುತ್ತು ಹಲಕೆಲವು. ಶಿಕ್ಷಣವಿ-
ಚಕ್ಷಣ! ಸರಸವಕ್ತ! ಕಾವ್ಯ ದೇವಿಯ ಪರಮ
ಭಕ್ತ! ನಡೆದಿದೆ ಸೇವೆ, ಎಡೆಬಿಡದೆ ಫಲಿಸುವುದು.
ವಿತ್ತ ಶಾಶ್ವತವಲ್ಲ; ಕೀರ್ತಿ ಸಂಪದ ನಿಮ್ಮ
ಹಿಡಿಯೊಳಡಗಿದ ಸೊತ್ತು; ಅದುವೆ ಅಮರರ ಗೊತ್ತು.

ಎನ್. ಬಿ.

# ಸಂಪಾದಕರ ಮಾತು

ದಕ್ಷಿಣ ಕನ್ನಡದ ಸಾಹಿತ್ಯಾಚಾರ್ಯರಾಗಿ ಕನ್ನಡಕ್ಕೆ ಹೊಸ ರೂಪವನ್ನು ತರುವುದರಲ್ಲಿ ಅಗ್ರಗಣ್ಯರಾದ ಕೆಲವರಲ್ಲಿ ಶ್ರೀಯುತ ಎಮ್. ಎನ್. ಕಾಮತರು ಒಬ್ಬರಾಗಿರುತ್ತಾರೆ. ಅವರು ಸಾಹಿತ್ಯದ ಬಾಹ್ಯಾಂಗದ ವಿಮರ್ಶೆಯಲ್ಲಿಯೆ ತೊಡಗದೆ, ಅದರ ಅಂತರಂಗಸ್ವರೂಪವು ಹೇಗಿದ್ದರೆ ಪರಿಪೂರ್ಣತೆಯನ್ನು ಹೊಂದುವುದು ಎಂಬ ವಿಚಾರದಲ್ಲಿ ಅನೇಕ ಯುವಕರಿಗೆ ಮಾರ್ಗಗಳನ್ನು ಕಲ್ಪಿಸಿ ಕೊಟ್ಟಿದ್ದಾರೆ. ಕತೆಯಾಗಲಿ ಕವಿತೆಯಾಗಲಿ, ನಾಟಕವಾಗಲಿ ಪ್ರಬಂಧವಾಗಲಿ, ಅವೆಲ್ಲವೂ ಶಾಶ್ವತವಾಗಿ ಉಳಿದುಕೊಂಡು ಬರಬೇಕಾದರೆ, ಅವನ್ನು ಅನುಭವದ ಸಾಣೆಗೆ ಹಿಡಿಯಬೇಕೆಂದು ಕಾಮತರು ಅಭಿಪ್ರಾಯಪಡುತ್ತಿದ್ದರು. ಅವರು ಬರೆದ ಲೇಖನಗಳೆಲ್ಲವೂ ತಾವು ಅನುಭವಿಸಿದ ವ್ಯವಹಾರಗಳ ತಳಹದಿಯಲ್ಲಿ ನಿರ್ಮಾಣಪಟ್ಟುದರಿಂದ, ಜೀವತ್ಸಮಾಜದ ಪ್ರತಿಬಿಂಬವಾಗಿ ಎಲ್ಲರಿಗೂ ರುಚಿಸುತ್ತಿದ್ದವು. ಪತ್ರಿಕೆಗಳಲ್ಲಿನ ಸಂಪಾದಕೀಯ ಲೇಖನಗಳಲ್ಲಾಗಲಿ, ಚುಟುಕುಸಾಹಿತ್ಯ ಪ್ರಬಂಧಗಳಲ್ಲಾಗಲಿ ಅವರದೇ ಒಂದು ಹೊಸ ರೀತಿಯ ನಿರೂಪಣ ಕ್ರಮವಿತ್ತು. ಹಾಸ್ಯಮಯವಾಗಿಯೇ ಎದೆಗೆ ನಾಟುವಂತೆ ಬರೆಯುವುದು ಎಲ್ಲರಿಗೂ ಸಾಧ್ಯವಾದುದಲ್ಲ. ಹಾಗೆ ಬರೆಯುವುದರಲ್ಲಿ ಶ್ರೀಯುತ ಕಾಮತರು ನಿಪುಣರಾಗಿದ್ದರು.

ನಾವೆಲ್ಲ ವಿದ್ಯಾರ್ಥಿಗಳಾಗಿದ್ದಾಗ ಶ್ರೀಯುತ ಕಾಮತರನ್ನು ಕಾಮತರುವಿಗೆ ಹೋಲಿಸಿಯೂ ಅವರನ್ನು 'ಮಾ'ತೃಭಾಷೆಯಲ್ಲಿ 'ನು'ರಿತ ಕಾಮ-ತರು (ಎಮ್. ಎನ್. ಕಾಮತರು) ಎಂದು ಸಂಬೋಧಿಸಿಯೂ ಗೌರವಿಸುವ ವಾಡಿಕೆಯಿತ್ತು. ಯಾವ ಸಭೆಗೆ ಅಧ್ಯಕ್ಷರು ಸಿಗುವುದು ಕಷ್ಟವೋ, ಯಾವ ಸಭೆಯಲ್ಲಿ ಭಾಷಣಕಾರರ ಅಭಾವದಿಂದ ಜೀವಕಳೆಯಿಲ್ಲದಂತೆ ತೋರುತ್ತಿತ್ತೊ, ಅಂತಹ ಪ್ರಸಂಗಗಳಲ್ಲಿ ಶ್ರೀಯುತರು ಕಾಮ-ತರುವಾಗಿ ನಾವು ಬಯಸಿದುದನ್ನು ಈಡೇರಿಸಿಕೊಡುತ್ತಿದ್ದರು. ಅವರೆಷ್ಟು ಮಾತಾಡಲು ತೊಡಗಿದರೆಂದರೆ ಶ್ರೋತೃಗಳು ಕೈಯಲ್ಲಿ ಕರವಸ್ತ್ರವನ್ನು ಹಿಡಿದುಕೊಳ್ಳಬೇಕಾಗಿತ್ತು. ಅವರು ಮಾತಾಡುತ್ತ ಮುಂದರಿಸಿದಂತೆ, ಅವರ ಭಾಷಣದ ಪರಿಣಾಮವು ನಮ್ಮ ಹೃದಯದ ಮೇಲೆ ಕ್ರಮವಾಗಿ ಬಿಂಬಿಸಿದಂತೆ, ಹಾಸ್ಯರಸವನ್ನು ಹೃದಯದಲ್ಲಿಯೆ ಹುದುಗಿಸಿಡಲು ಸಾಧ್ಯವಾಗದೆ, ಕೊನೆಗೆ ತಡೆಯಲಾರದೆ ಕರವಸ್ತ್ರಗಳನ್ನು ಬಾಯಲ್ಲಿ ತುರುಕಿಕೊಳ್ಳಬೇಕಾಗುತ್ತಿತ್ತು. ಕಾಮತರು ಭಾಷಣ ಮಾಡುವುದಾದರೆ ನಾನು ಸಭೆಯ ಬದಿಯಲ್ಲಿ ಅಲ್ಲದೆ ಮಧ್ಯದಲ್ಲಿ ಕೂತುಕೊಳ್ಳುತ್ತಿರಲಿಲ್ಲ. ಅವರೊಮ್ಮೆ ಆಧುನಿಕ ಕವಿತೆಯ ವಿಮರ್ಶೆಯನ್ನು ಮಾಡುತ್ತಿದ್ದಾಗ ಮೈಸೂರಿನ ಪಂಡಿತರೊಬ್ಬರ ಆಶುಕಾವ್ಯವೊಂದರ ಮಾದರಿ

ಯನ್ನು ತಾವೇ ರಚಿಸಿ ಕೊಟ್ಟಿದ್ದರು. ಸಭಿಕರೆಲ್ಲರೂ ಗೊಳ್ಳೆಂದು ನಕ್ಕರೂ ಕಾಮ
ತರು ಅವ್ಯಾಹತವಾಗಿಯೇ ಅಸಕ್ತರಾದವರಂತೆಯೆ ವರ್ತಿಸುತ್ತಿದ್ದರು. ಅಂದಿನ
ದಿವಸ ಕೈಯಲ್ಲಿ ಕರವಸ್ತ್ರವಿಲ್ಲದುದರಿಂದ ನಾನು ಸಭೆಯನ್ನು ಬಿಟ್ಟು ನಡೆಯ
ಬೇಕಾಗಿತ್ತು.

ಶ್ರೀಯುತ ಕಾಮತರು ಅಧುನಿಕರಲ್ಲಿ ಅಧುನಿಕರಾಗಿದ್ದರು. ಜಗತ್ತಿನ ಅತ್ಯಾ
ಧುನಿಕವಾದ ಜ್ಞಾನದ ಪರಿಚಯವೂ ವಿವಿಧ ದೇಶಗಳ ಸಮಾಜಸ್ಥಿತಿಯ ಅರಿವೂ
ಅವರಿಗಿದ್ದುವು. ಅವರೊಡನೆ ಒಂದು ತಾಸು ಮಾತನಾಡಲು ಕೂತುಕೊಳ್ಳು
ವುದೆಂದರೆ, ಮೃಷ್ಟಾನ್ನ ಭೋಜನಕ್ಕಾಗಿ ಕೂತಂತಾಗುತ್ತಿತ್ತು. ಸಾಹಿತ್ಯ ವಿಮರ್ಶೆ,
ರಂಗಭೂಮಿ, ಚಲಚ್ಚಿತ್ರ, ಡಾಲ್ಟನ್ ಪ್ಲೇನ್, ಪ್ರೊಜೆಕ್ಟ್ ಮೆಥಡ್, ಬೇಸಿಕ್ ಇಂಗ್ಲಿಷ್,
ಮೆಜಿನೊ ಲಾಯ್ನ್, ಹಣ ಪ್ರಪಂಚ, ಫೆಡರೇಶನ್—ಯಾವ ವಿಷಯವನ್ನೆ ತೆಗೆಯಿರಿ,
ಆ ವಿಷಯದಲ್ಲಿ ಕಾಮತರ ಜ್ಞಾನಭಂಡಾರವು ಆಳವಾಗಿತ್ತು; ವಿಶಾಲವಾಗಿತ್ತು.
ಸಿನೇಮಾ ಕಂಪೆನಿಗಳ ಕರಪತ್ರಗಳಿಂದ ಹಿಡಿದು ದೊಡ್ಡ ದೊಡ್ಡ ಕಂಪೆನಿಗಳ
ಬಹಿರಂಗ ಪತ್ರಗಳ ವರೆಗೆ—ಅವನ್ನು ಕನ್ನಡಕ್ಕೆ ತರ್ಜುಮೆ ಮಾಡಿ, ನಾಲ್ಕು
ಜನರಿಗೆ ಉಪಯುಕ್ತರಾದಂತೆಯೆ ಸರ್ವತೋಮುಖವಾದ ಜ್ಞಾನಸಾಧನೆಯಿಂದ
ಎಂತವರ ಕೂಟದಲ್ಲಿಯೂ ಅವರು ಸ್ವಾಗತಾರ್ಹರಾಗಿದ್ದರು. ಅವರೊಡನೆ
ಯಾವುದೊಂದು ವಿಚಾರದಲ್ಲಿ ವಿನಿಮಯಕ್ಕಾಗಿ ಹೋದರೆ, ಅವರು ಕೊಟ್ಟ ಉಪ
ದೇಶಗಳನ್ನು, ಆಲೋಚನೆಗಳನ್ನು ಹೊತ್ತುಕೊಳ್ಳಲಿಕ್ಕೆ ಸಾಧ್ಯವಾಗದೆ ಅವುಗಳನ್ನು
ಅವರಲ್ಲಿಯೆ ಬಿಟ್ಟುಬಿಡಬೇಕಾಗಿ ಬರುತ್ತಿತ್ತು. ಅಂದರೆ ಅವರ ಕಲ್ಪನಾಶಕ್ತಿಯು
ಅತ್ಯುಜ್ಜ್ವಲವಾಗಿದ್ದು, ವರ್ತಮಾನಕಾಲದ ಮೇರೆಯನ್ನು ದಾಟಿಹೋಗಿತ್ತು. 'ಬಾನಿ
ನಾಚೆಗೂ ನೋಟ, ಯುಗದ ಕೊನೆಗೂ ಓಟ'—ಇಂತಹ ಆತ್ಮಸಂಸ್ಕೃತಿಯು ಎಲ್ಲ
ರಲ್ಲಿಯೂ ಇರುವುದು ವಿರಳವಾಗಿದೆ.

ಬಾನಿನಾಚೆಗೂ ನೋಟವಿದ್ದು, ಯುಗದ ಕೊನೆಗೂ ಓಟವಿದ್ದು, ಶ್ರೀಯುತ
ಕಾಮತರು ನಿಂತಲ್ಲಿಯೆ ತಿರುಗಬೇಕಾಗಿತ್ತು, ಕಂಡಲ್ಲಿಂದಲೆ ಹಿಂತೆಗೆಯಬೇಕಾ
ಗಿತ್ತು; ಹತ್ತರಲ್ಲಿಯೆ ಹನ್ನೊಂದಾಗಬೇಕಾಗಿತ್ತು. ಅವರ ಮೇಧಾಶಕ್ತಿಯು ಅತುಳ
ವಾಗಿದ್ದರೂ ಅವರ ಸಂಸಾರ ತಾಪತ್ರಯಗಳು ತ್ರಯಕ್ಕಿಂತ ಹೆಚ್ಚಾಗಿದ್ದುವು.
ಶಾಲೆಯಲ್ಲಿ ಅನುನಿತ್ಯದ ಶಿಕ್ಷಣ ಪಾರಾಯಣ, ಮನೆಯಲ್ಲಿ ಬೇರೆ ಬೇರೆ ಪತ್ರಿಕೆ
ಗಳ ಪುಟಸಂಪರಿಪೂರಣ—ಇವುಗಳಿಂದ ಅವರಿಗೆ ಸಮಯವೆಂಬುದು ಅತಿ ತುಟ್ಟಿ
ಯಾಗಿತ್ತು. ಅವರಿಂದ ಒಂದು ಕೆಲಸವನ್ನು ಮಾಡಿಸಬೇಕಾದರೆ ಅವರ ಎದೆಯ
ಮೇಲೆ ಕೂತ ವಿನಾ ಸಾಧ್ಯವಾಗುತ್ತಿರಲಿಲ್ಲ. ಅವರಿಗೇನೇ ಒಂದು ಕೆಲಸವನ್ನು
ಬಿಟ್ಟು ಕೊಟ್ಟರೆ, ಅದು ಗಣಪತಿಯ ಮದುವೆಯಾಗುತ್ತಿತ್ತು. "ಕಾಮತರೆ, ಒಂದು
ಪದ್ಯ ಬೇಕಾಗಿದೆ. ಇಕೊಳ್ಳಿ ಈ ವೀಳ್ಯದೆಲೆಯ ಬೀಡಾ ಜಜ್ಜುತ್ತಿದ್ದೇನೆ. ಕಾಗ್ದ

ಇಲ್ಲಿದೆ, ಪೇನು ಅಲ್ಲಿದೆ; ವಿಷಯ!" ಎಂದು ಅವರ ಮುಖವನ್ನೆ ನೋಡಿದ್ದಾ
ದರೆ "ಬಂಡಿಯೊತ್ತು" ಎನ್ನುತ್ತ ಏನೋ ಗೀಚುವರು. ಸೈ! ಒಂದು ಕವಿತೆಯ
ನಿರ್ಮಾಣವಾದಂತಾಯಿತು. ಪ್ರಸಿದ್ಧ ಪತ್ರಿಕಾ ಸಂಪಾದಕರೊಬ್ಬರು ಮೇಲಿಂದ
ಮೇಲೆ ಕಾಮತರಿಗೆ ಪತ್ರ ಬರೆದು, ಲೇಖನಗಳನ್ನು ಬೇಡಿದರಂತೆ! ಆಗ ತಾನು,
"ನಿಮಗೆ ನಿಮ್ಮ ಸಮಯಕ್ಕೆ ಲೇಖನ ಬೇಕಾದರೆ, ಪೆನ್ನು, ಶಾಯಿ, ಕಾಗದ,
ಬ್ಲೋಟಿಂಗು ಮರುಟಪ್ಪಾಲಿಗೆ ಕಳಿಸುವಂತಾಗಲಿ; ನನಗೆ ಕಾರ್ಯಬಾಹುಲ್ಯವಿದೆ,"
ಎಂದು ಪ್ರತ್ಯುತ್ತರ ಬರೆದಿರುತ್ತೇನೆಂದು ಅವರು ಹೇಳಿದಂತೆ ನೆನಪಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯಾದಾನ, ಅರ್ಥ ಸಂಯೋಜನೆ, ಸಮಾಜ
ಸುಧಾರಣೆ ಇವುಗಳಿಂದ ೫೦ ವರ್ಷಗಳ ಹಿಂದೆ ಶ್ರೀ. ಅಮ್ಮೆಂಬಳ ಸುಬ್ರಾಯ ಪೈ,
ನಯಂಪಳ್ಳಿ ಶಿವರಾವ್ ಮೊದಲಾದವರು ಹೊಸ ಜೀವನದ ಒಸರುಗಳನ್ನು ಹರಿಯಿಸಿದ
ಅನಂತರ, ೨೫ ವರ್ಷಗಳಲ್ಲಿ ಮತ್ತೆ ಆ ಒಸರುಗಳೆಲ್ಲ ಏಕಸ್ವರೂಪ ಪಡೆಯುವಂತ
ಹುದು ಸ್ವಾಭಾವಿಕವಾಗಿ ನಡೆಯಿತು. ಈ ಉದ್ಯಮದಲ್ಲಿ, ಜಿಲ್ಲೆಯ ಜೀವನವು ಒಟ್ಟು
ಗೂಡುವುದರಲ್ಲಿ ಸಾಹಸಗೈದವರೊಳಗೆ ಶ್ರೀ. ಬೋಳಾರ ವಿಠ್ಠಲ ರಾಯರೂ ದಿವಂ
ಗತ ಶ್ರೀ. ವಿ. ಎಸ್. ಕಾಮತರೂ ದಿವಂಗತ ಬೆಳ್ಳಿ ಸುಬ್ಬಯ್ಯ ಸೆಟ್ಟರೂ, ಆದ್ಯರಾಗಿ
ದ್ದರು. ಇವರಲ್ಲಿ ಮೊದಲಿನ ಇಬ್ಬರು ಮಹನೀಯರೂ ಜಿಲ್ಲೆಯ ಜನಗಳಲ್ಲಿ ಒಕ್ಕ
ಟ್ಟನ್ನುಂಟುಮಾಡಲು ಪ್ರಯಾಣ ಸೌಕರ್ಯಗಳನ್ನು ಕಲ್ಪಿಸಿಕೊಡುವುದರೊಡನೆ,
ಜನಗಳಲ್ಲಿ ವಿಚಾರಪ್ರಚೋದನೆಯನ್ನು ಮಾಡಲು ಪತ್ರಿಕೋದ್ಯಮದ ತಳಹದಿ
ಯನ್ನು ಊರಿದರು. ಇವರಿಬ್ಬರ ಪತ್ರಿಕೋದ್ಯಮದಲ್ಲಿ,—ಇವರಿಬ್ಬರ ಡೇರೆಗಳಲ್ಲಿ
ಮೊದಲಿಂದ ಅವಿಶ್ರಾಂತವಾಗಿ ದುಡಿದು ಸಾಹಾಯ್ಯ ಮಾಡಿದವರಲ್ಲಿ ಶ್ರೀಯುತ
ಎಮ್. ಎಸ್. ಕಾಮತರು ಒಬ್ಬರಾಗಿರುತ್ತಾರೆ. ಅವರು ಹುಟ್ಟು ಪತ್ರಿಕೋದ್ಯಮಿ
ಗಳು. ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿಯೊಂದು ಪತ್ರಿಕೆಯಲ್ಲಿ ಅವರ ಮುದ್ರೆ
ಯಿದೆ; ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿಯೊಂದು ಪತ್ರಿಕೆಯ ಆರಂಭಕ್ಕೆ ಅವರೇ
ಸಲಹೆಗಾರರಾಗಿರುತ್ತಿದ್ದರು. ಇಂದಿನ ದಿವಸ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನಾದ
ರೊಂದು ವಿಚಾರಕ್ರಾಂತಿಯು ಆಗಿದ್ದರೆ, ಅದು ಶ್ರೀಯುತ ಕಾಮತರು ಪಟ್ಟ
ಶ್ರಮಗಳ ಫಲವೆಂದೇ ನಾವು ಎಣಿಸುತ್ತೇವೆ. ಇಂದಿನ ದಿವಸದ ಪತ್ರಿಕೋದ್ಯ
ಮವು ನಾವು ಇಚ್ಛಿಸುವ ಮಟ್ಟಕ್ಕೆ ಬಾರದೆ ಇದ್ದರೂ ಅದು ನಿಜವಾಗಿ ನಮ್ಮ
ಹಳ್ಳಿಗರ ಆಚಾರ ವಿಚಾರ, ಆಹಾರ ವಿಹಾರ, ನಡೆನುಡಿಗಳಲ್ಲಿ ತುಂಬ ವ್ಯತ್ಯಾಸ
ವನ್ನು ತಂದು ಒಡ್ಡಿರುತ್ತದೆ. ಜನರು ಈ ದಿನಗಳಲ್ಲಿ ಮುಂಚಿನಂತೆ ಸಂಕುಚಿತ
ರಾಗಿ ಜೀವಿಸುವುದಿಲ್ಲ; ಅಂಧರನ್ನು ಹಿಂಬಾಲಿಸುವುದಿಲ್ಲ. ಜನಗಳಲ್ಲಿ ತಮಗೆ
ತಾವಾಗಿ ವಿಚಾರಿಸುವಂತಹ ಶಕ್ತಿ ಕಳೆಗೂಡಿದೆ; ಜನಗಳಲ್ಲಿ ತಮಗೆ ತಾವಾಗಿ
ಉದ್ಧರಿಸಬೇಕು ಎಂಬುದು ಮಂದಟ್ಟಾಗಿದೆ. ಇಷ್ಟೆಲ್ಲವು ಒಂದೆರಡು ವರ್ಷಗಳ

ಕೆಲಸವಲ್ಲ; ಇಷ್ಟೆಲ್ಲವೂ ಒಬ್ಬಿಬ್ಬರ ಕಾರ್ಯಸಾಧನೆಯಲ್ಲ; ಆದರೆ ಅವೆಲ್ಲವೂ ಶ್ರೀಯುತ ಕಾಮತರಂತವರ ಮೇಲ್ಪಂಕ್ತಿಯಲ್ಲಿ ನಡೆವವರ ಲೋಕಸಂಗ್ರಹದ ಸೇವೆಯಾಗಿರುತ್ತದೆ./

ಶ್ರೀಯುತ ಎಮ್. ಎನ್. ಕಾಮತರು ದಕ್ಷಿಣ ಕನ್ನಡದ ಆಧುನಿಕ ಶಲಾಕಾ ಪುರುಷರಲ್ಲಿ (Men of Letters) ಅಗ್ರಗಣ್ಯರಾಗಿರುತ್ತಾರೆ. ಸಾಹಿತ್ಯ, ರಂಗಭೂಮಿ, ಪತ್ರಿಕೋದ್ಯಮ, ಹಾಗೂ ಶಿಕ್ಷಣ ಇವುಗಳಲ್ಲಿ ಬಂಡಿಯೆತ್ತಾಗಿ ಕಾಣದ ಲೋಕದಿಂದ, ಹೊರಗಿನ ದೇಶಗಳಿಂದ, ಕನ್ನಡದ ಹೊರಗಿಂದ, ಅನೇಕಾನೇಕ ತತ್ವಗಳನ್ನು ಕನ್ನಡದ ಒಳಗೆ ಅವರು ತಂದಿರುತ್ತಾರೆ. ಅವರ ಕವಿತೆಗಳಾಗಲಿ, ಕತೆಗಳಾಗಲಿ, ಪ್ರಬಂಧಗಳಾಗಲಿ, ಏಕಾಂಕ ನಾಟಕಗಳಾಗಲಿ ಎಲ್ಲವೂ ಒಂದೆ ಸಮಷ್ಟಿಯಲ್ಲಿ ಈ ಹೊತ್ತಿಗೆ ಸಿಕ್ಕುತ್ತಿಲ್ಲ. ಆದರೆ ಅವರ ವ್ಯಕ್ತಿಗತವಾದ ವರ್ಚಸ್ಸು ಇಂದಿನ ದಿವಸ ದಕ್ಷಿಣ ಕನ್ನಡದ ಪ್ರತಿಯೊಂದು ಹಳ್ಳಿಯಲ್ಲಿ ಹರಡಿರುತ್ತದೆ. ಅವರನ್ನು ತಿಳಿಯದ ದಕ್ಷಿಣ ಕನ್ನಡಿಗನಿಲ್ಲ; ಅವರ ಬಾಲಸಾಹಿತ್ಯದ ಹಾಗೂ ನಾಟಕ ಸಾಹಿತ್ಯದ ಪದ್ಯಗಳನ್ನು ಹಾಡದ ದಕ್ಷಿಣ ಕನ್ನಡಿಗನಿಲ್ಲ. "ಗಂಟೆಯ ಮಾಮಾ" "ಕೊಡೆ ಕೊಡೆ" ಮೊದಲಾದ ಹಾಡುಗಳು ಅವರ ಮೇಲ್ತರಗತಿಯ ಪದ್ಯಗಳಂತೆ ಎಲ್ಲರ ಆತ್ಮದಲ್ಲಿ ಮನೆ ಮಾಡಿಕೊಂಡಿದ್ದು, ಅಯಾಚಿತವಾಗಿ, ಅನಿರೀಕ್ಷಿತವಾಗಿ ಶಬ್ದಬ್ರಹ್ಮವಾಗಿ ಹರಡುವುದುಂಟು. ಇಂತಹವರ ಅಕಾಲ ನಿಧನವು ಕನ್ನಡದ ಅಭಿವೃದ್ಧಿಗೆ ದೊಡ್ಡ ಆಘಾತವೆಂತಲೆ ತಿಳಿಯಬೇಕು. ಆದರೆ ಅವರ ವಿಚಾರಪಥದಲ್ಲಿ ಅವರಿಗೆ ಸಂಗಾತಿಗಳೂ ಹಿಂಬಾಲಿಗರೂ ಆದವರು ಹಲವರಿರುತ್ತಾರೆ. ಅವರೆಳೆದ ಬಂಡಿಯಲ್ಲಿ ಕೂತ ಇವರೆಲ್ಲರೂ ಕೆಳಗಿಳಿದು ಮತ್ತೆ ಫಲಕೊಯ್ಯುವುದರಲ್ಲಿ ಯಾವ ಸಂದೇಹವೂ ಇಲ್ಲ.

ಕಾಮತರ ಲೇಖಗಳೆಲ್ಲವನ್ನು ಸಂಪಾದಿಸಿ ಕನ್ನಡ ನಾಡಿನ ಜನಾಂಗಕ್ಕೆ ಒಪ್ಪಿಸುವುದು ಹಣಕಾಸಿನ ಮುಗ್ಗಟ್ಟಿನ ಈ ಕಾಲದಲ್ಲಿ ಸ್ವಲ್ಪ ಸಾಹಸದ ಮಾತೇ ಆಗಿರುತ್ತದೆ. ಹಾಗೆಂದು ಅಂತಹ ಪ್ರಯತ್ನಕ್ಕೆ ಕೈಹಾಕದಿರುವುದು ಅಪ್ರಸ್ತುತವಾಗಬಹುದು. ಈ ಚಿಕ್ಕ ಹೊತ್ತಗೆಯಲ್ಲಿ ಅವರ ಸಹಸ್ರಾರು ಲೇಖನಗಳಿಂದ ಐದು ಕಥೆಗಳನ್ನು ಆಯ್ದು ವಾಚಕವೃಂದಕ್ಕೆ ಸಮರ್ಪಿಸಿರುತ್ತೇವೆ. ಈ ಐದು ಕಥೆಗಳೂ ಐವತ್ತು ವರ್ಷಗಳ ಹಿಂದಿನ ಮಂಗಳೂರು ಪ್ರಾಂತ್ಯದ ಹಳ್ಳಿಯ ಜೀವನವನ್ನು ಬಹಳ ಸ್ವಾರಸ್ಯವಾಗಿ, ಚಮತ್ಕಾರವಾಗಿ ಬಣ್ಣಿಸಿವೆ. ಆ ಸ್ಥಿತಿಗತಿಗಳು ಇಂದಿನ ದಿವಸಕ್ಕೆ ಬಹಳ ಮಟ್ಟಿಗೆ ಸುಧಾರಣೆ ಹೊಂದಿವೆ, ಕೆಲಮಟ್ಟಿಗೆ ಅದೃಶ್ಯವಾಗಿವೆ. ಹಾಗಿದ್ದರೂ ಕೂಡ, ಆ ಕಾಲದ ಯಥಾರ್ಥ ವರ್ಣನೆಯಾದ ನಿಮಿತ್ತ, ಅವುಗಳು ಎಲ್ಲ ಕಾಲಕ್ಕೂ ಎಲ್ಲ ದೇಶಕ್ಕೂ ಆನಂದವನ್ನು ಈಯುವುದರಲ್ಲಿ ಸಂಶಯವಿಲ್ಲ.

ಆವೂರಿನ ಆ ಸ್ಥಿತಿಗತಿಗಳು ಇಂದಿಗೆ ಮಾಯವಾಗಿವೆ. ಅದಕ್ಕಾಗಿ ಆವೂರನ್ನು ಅಂದಿನ ಆವೂರೆಂದಾಗಿ ಕರೆದಿರುವೆವು. ಆವೂರಿನ ನಿಜವಾದ ಸ್ಥಳ ಯಾವುದು, ಆವೂರಿನ ಜನ ವಿಶೇಷವಾಗಿ ವರ್ಣಿಸಲ್ಪಟ್ಟವರು ಯಾರು ಎಂಬ ವಿಚಾರವನ್ನು ಕೂಲಂಕಷವಾಗಿ ಇಲ್ಲಿ ಪ್ರಸ್ತಾವಿಸಿದ್ದರೆ, ವಾಚಕರ ವಿಮರ್ಶಾದೃಷ್ಟಿಗೆ ಅತೀವ ಪ್ರಯೋಜನವಾಗುತ್ತಿತ್ತು. ಆದರೆ, ಆ ವಿಚಾರದಲ್ಲಿ ಒಬ್ಬಿಬ್ಬರು ಜನರನ್ನು ಮಾತ್ರ ಬೆರಳಿಟ್ಟು ಗುರುತಿಸಬಹುದಲ್ಲದೆ, ಹಲವರ ಪರಿಚಯ ಮಾಡುವುದೂ ಕಷ್ಟವಾಗುತ್ತದೆ. ಆವೂರೆಂಬುದು, ಬಂಟವಾಳದ ಸಮೀಪವೊ ಪುತ್ತೂರಿನ ಸನಿಹದಲ್ಲೊ ಕಾರ್ಕಳದ ಊರೋ ಬಸರೂರಿನ ಹಳ್ಳಿಯೋ ಎಂದು ಸಂಶಯವಾಗುತ್ತಿದೆ, ಅಥವಾ ಇವೆಲ್ಲವುಗಳ ಏಕಸನ್ನಿಪಾತವಾಗಿ ಕಲ್ಪನಾರಾಜ್ಯದ ಊರೋ ಎಂದು ಕೂಡ ಖಚಿತವಾಗುವುದಿಲ್ಲ. ಎಲ್ಲ ಹಳ್ಳಿಗಳಿಗೆ ಸಮನ್ವಯಿಸುವುದಾದುದರಿಂದ ಮಂಗಳೂರಿನ ಯಾವ ಹಳ್ಳಿಯೆಂದೂ ಇಟ್ಟುಕೊಳ್ಳಬಹುದು.

ಶ್ರೀಯುತ ಕಾಮತರು ನಮ್ಮೊಡನೆ ಹಲವು ವರ್ಷಗಳಿಂದ ಗೆಳೆಯರಾಗಿ, ನಾಯಕರಾಗಿ, ವಿಮರ್ಶಕರಾಗಿ, ಉಪಾಧ್ಯಾಯರಾಗಿ, ಲೇಖಕರಾಗಿ, ಸೂತ್ರಧಾರರಾಗಿ, ಕೂಡಿಕೊಂಡ ನೆನಪಿಗಾಗಿ ಕೆಲವು ಕಾಣಿಕೆಗಳನ್ನು ಇದರೊಡನೆ ಇಟ್ಟಿರುತ್ತೇವೆ. ಅವರೊಡನೆ ನಾವು ಭಿನ್ನಾಭಿಪ್ರಾಯಪಟ್ಟಿರಬಹುದು, ಅವರೊಡನೆ ನಾವು ಏಕಾಭಿಪ್ರಾಯವನ್ನಿಟ್ಟಿರಬಹುದು, ಆದರೆ ನಾವೆಲ್ಲರೂ ಒಂದನ್ನೆ ನಮ್ಮ ಜೀವನದ ಗುರಿಯನ್ನಾಗಿಟ್ಟುಕೊಂಡ ಕಾರಣಕ್ಕೆ, ಒಂದೇ ಹಿಂಡಿಗೆ ಸೇರಿದವರು. ಅವರಿಗಿತ್ತ ಕಾಣಿಕೆಗಳೆಂದರೆ, ಅವರ ಕಾಲದಲ್ಲಿ ಕನ್ನಡದ ಕತೆ, ಕನ್ನಡದ ಚರಿತ್ರೆ, ಕನ್ನಡದ ಚೆನ್ನು ಮಾರ್ಪಟ್ಟುದರ ರೂಪರೇಖೆಗಳಾಗಿರುತ್ತವೆ. ತಮ್ಮ ಕಾಣಿಕೆಗಳೆಲ್ಲವನ್ನೂ ಅಂದಿನ ಆವೂರಿನ ಹರಿವಾಣದೊಡನೆ ಇಟ್ಟುಕೊಳ್ಳಲು ಒಪ್ಪಿದ್ದಕ್ಕಾಗಿ ಎಲ್ಲ ನನ್ನ ಗೆಳೆಯರಿಗೆ ನಾನು ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ದಿವಂಗತ ಕಾಮತರ ಸ್ಮಾರಕವಾಗಿ ನಾವು ಕೈಗೊಳ್ಳುವಂತಹ ಈ ಉದ್ಯಮಕ್ಕೆ ಮುನ್ನುಡಿಯನ್ನು ಬರೆದು ನಮ್ಮನ್ನು ಪ್ರೋತ್ಸಾಹಿಸಿದ ಶ್ರೀಮಾನ್ ಮಾಸ್ತಿ ವೆಂಕಟೇಶ ಐಯ್ಯಂಗಾರರು ತಮಗಿದೊಂದು ಅಭಿಮಾನವೆಂದೇ ಒಪ್ಪಿಕೊಂಡು, ದಿವಂಗತ ಕಾಮತರ ಶಬ್ದಚಿತ್ರವೊಂದನ್ನು ಕುಶಲರೀತಿಯಲ್ಲಿ ಬರೆದು, ನಮ್ಮ ಕಾಲದ ಕನ್ನಡದ ಶಲಾಕಾಪುರುಷರ ರೂಪವೊಂದು, ಎಲ್ಲ ಕಾಲಕ್ಕೆ ಇಳಿದುಕೊಂಡು ಉಳಿದುಕೊಳ್ಳುವಂತೆ ಮಾಡಿರುತ್ತಾರೆ. ಕಾಮತರ ವ್ಯಕ್ತಿತ್ವದ ಹಿಂದಕ್ಕೆ ಧ್ಯೇಯವೊಂದಿತ್ತು, ಜೀವನವೊಂದಿತ್ತು. ಅವುಗಳೆರಡರ ಯಥಾರ್ಥವಾದ ರೂಪವನ್ನು ನಾವು ಮುನ್ನುಡಿಯಿಂದ ತಿಳಿಯುತ್ತೇವೆ. ಶ್ರೀಮಾನ್ ಶ್ರೀನಿವಾಸರಿಗೆ ನಾನು ಮಿತ್ರಮಂಡಳಿಯ ಪರವಾಗಿಯೂ ನೆನಪಿನ ಕಾಣಿಕೆಕಾರರ ಪರವಾಗಿಯೂ ಕೃತಜ್ಞತಾಪೂರ್ವಕವಾದ ಅಭಿವಂದನೆಯನ್ನು ಈಯುತ್ತೇನೆ.

ಅಂದಿನ ಆವೂರಿನ ಐದು ಕಥೆಗಳೂ ಭೂತಪೂರ್ವ "ಪ್ರವಾಸಿ"ಯಲ್ಲಿ ಈ ಮುಂಚೆ ಪ್ರಕಟವಾದುವುಗಳು. ಈ ಕಥೆಗಳನ್ನು ಬರೆಯುತ್ತಿದ್ದಾಗ ಕಥೆಗಳ ವಿಮರ್ಶೆಯನ್ನು ಕಾಮತರು ನಮ್ಮ ಗೆಳೆಯರಾದ ಶ್ರೀ. ಜಿ. ಆರ್. ಶೆಣೈ, ಎಮ್. ಎ., ಎಲ್. ಟಿಯವರೊಡನೆ ಮಾಡುತ್ತಿದ್ದರು. ತಾನು ಜಟ್ಕಾಸಾಬಿ ಎಂಬ ಇನ್ನೊಂದು ಕಥೆಯನ್ನು ಬರೆದು ಅದರಲ್ಲಿ ದಕ್ಷಿಣ ಕನ್ನಡಕ್ಕೆ ಜಟ್ಕಾ ಸರ್ವಿಸು ಬಂದಾಗಿನ ದಿನಗಳನ್ನು ವರ್ಣಿಸುವೆನೆಂದು ಹೇಳಿದ್ದರಂತೆ ಆದರೆ ಆ ಲೇಖವನ್ನು ಮಾತ್ರ ಅವರು ಬರೆದು ಮುಗಿಸಲಿಲ್ಲ. ಕದ್ದವರು ಯಾರು ಎಂಬ ಕಥೆಯ ಸನ್ನಿವೇಶವು "ಗುರುವಾಯನಕೆರೆ"ಯೆಂದೂ ಭಾರತ ಪ್ರಯೋಗದ ಹಳ್ಳಿಯು ಪಾಣೆಮಂಗಳೂರೆಂದೂ ಬೊಗ್ಗುವಿನ ಕಥೆಯು ನಡೆದದ್ದು ಗಂಜೀಮಠವೆಂದೂ ಕಾಮತರು ಹೇಳಿರುತ್ತಾರೆಂದು ಶ್ರೀ. ಶೆಣೈಯವರು ಅಂದಿರುವರು. ಈ ಕಥೆಗಳನ್ನು ನಮ್ಮ ಅಖಿಲ ಸೇವಾ ಗ್ರಂಥಮಾಲೆಯಲ್ಲಿ ಪೋಣಿಸಲು ಅನುಮತಿಯನ್ನಿತ್ತುದಕ್ಕಾಗಿ ಶ್ರೀಯುತ ಕಾಮತರ ಮಕ್ಕಳಿಗೂ ಪ್ರವಾಸಿಯ ಸಂಪಾದಕರಿಗೂ ನಾವು ಕೃತಜ್ಞರಾಗಿದ್ದೇವೆ.

ಈ ಪುಸ್ತಕದ ಮೂಲಪ್ರತಿಗಳನ್ನೂ, ಅಚ್ಚಿನ ಪ್ರತಿಗಳನ್ನೂ ಓದಿ, ತಕ್ಕ ಸೂಚನೆಗಳನ್ನು ಇತ್ತು ಪ್ರೋತ್ಸಾಹವನ್ನು ಕೊಟ್ಟ ಶ್ರೀಮಾನ್ ಎ. ಶ್ರೀನಿವಾಸ ಪೈ, ಬಿ. ಎ., ಬಿ. ಎಲ್., ಡಾ। ಪ್ರಭಾಕರ ರಾವ್, ಎಮ್. ಬಿ., ಬಿ. ಎಸ್., ಡಾ। ಎಸ್. ಪಿ. ಭಟ್ಟ, ಎಲ್. ಡಿ. ಎಸ್. ಸಿ., ಕಾರ್ಯದರ್ಶಿ, ಮಿತ್ರಮಂಡಳಿ, ಎಮ್. ನರಸಿಂಗ ರಾವ್, ಬಿ. ಎ., ಎಮ್. ಎಲ್., ಮೊದಲಾದವರಿಗೆ ನಾನು ಕೃತಜ್ಞನಿದ್ದೇನೆ.

ದಿವಂಗತ ಕಾಮತರ ಲೇಖಗಳನ್ನು ಅಚ್ಚು ಹಾಕಿಸಲು ಮೊದಲ ಸೂಚನೆಯನ್ನು ಕೊಟ್ಟ ಕಡೆಂಗೋಡ್ಲು ಶಂಕರ ಭಟ್ಟ, ವಿದ್ವಾನ್‌ರಿಗೂ ಮಿತ್ರಮಂಡಳಿಯ ಕಾರ್ಯಕಾರೀ ಮಂಡಳಿಕ್ಕೂ ನಾನು ಕೃತಜ್ಞನಿದ್ದೇನೆ.

ಈ ಗ್ರಂಥದಲ್ಲಿ ಸೇರಿದ ಕೆಲವು ಲೇಖಗಳನ್ನು ಈ ಹಿಂದೆ ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿದ್ದ ಪತ್ರಿಕಾ ಸಂಪಾದಕರಿಗೂ ಶ್ರೀಯುತ ಎಮ್. ಎನ್. ಕಾಮತರ ಪಡಿಯಚ್ಚನ್ನು ನೆರವಾಗಿ ಕೊಟ್ಟ "ಕನ್ನಡ ನುಡಿ"ಯ ಸಂಪಾದಕರಿಗೂ ನಾವು ಚಿರಋಣಿಗಳಾಗಿದ್ದೇವೆ.

ಪುಸ್ತಕವನ್ನು ಅಂದವಾಗಿ ಮುದ್ರಿಸಿ ಕೊಟ್ಟ ಸರಸ್ವತೀ ಮುದ್ರಣಾಲಯದ ಶ್ರೀ. ಯು. ಗಣೇಶ ಶೆಣೈಯವರಿಗೂ ಮಿತ್ರಮಂಡಳಿಯು ಚಿರಋಣಿಯಾಗಿದೆ.

ಸಂಪಾದಕ:<br>ಅಖಿಲ ಸೇವಾ ಗ್ರಂಥಮಾಲೆ,<br>೧೯೪೦ - ೪೧.

ಜೆ. ವಾಮನ ಭಟ್ಟ.

# ನೆನವಿನ ಕಾಣಿಕೆ

ಒಮ್ಮೆ ತಾನರಳ್ದ ಹೂವಿನ್ನರಳದೆಂದುಂ—ಒಮ್ಮೆ ಅರಳಿದ ಹೂವೂ ಮತ್ತೆ ಅರಳದು, ಒಮ್ಮೆ ತೋರಿದ ವ್ಯಕ್ತಿಯೂ ಮತ್ತೆ ತೋರನು. ಉದುರುವೊಂದಿಗೆ ಹೂವಿನ ಬದುಕೇ ಮುಗಿಯಿತಾದರೂ ಮಿಕ್ಕ ಹೂಗಳು ಅದಕ್ಕೆ ಮರುಗುವಂತಿಲ್ಲ. ಮನುಷ್ಯನು ತಾನು ಮಾಡಿದ ಕೆಲಸದಲ್ಲಿ ಮಾತ್ರ ಬದುಕಿರುವವನಾದರೂ, ತನ್ನಲ್ಲಿ ಬರಿದಾದ ಆತನ ಎಡೆಯನ್ನು ಕಂಡು ಹಲುಬದ ಬಳಗವಿಲ್ಲ. ತಾನು, ತನ್ನದು ಎಂಬ ಎಚ್ಚರವೂ ಇರುವಲ್ಲಿ, ಅಗಲಿದವರು ಮರಳರೆಂದು ನಿಶ್ಚಯವೂ ಇರುವಲ್ಲಿ ಹಂಬಲವು ಹನಿಗೂಡುತ್ತದೆ, ಕಂಬನಿಗಳು ದನಿಗೂಡುತ್ತವೆ; ಅವರು ಕೇಳಲೆಂದಲ್ಲ, ಅವರ ಅಗಲಿಕೆಯನ್ನು ತಾಳಲೆಂದು. ದಿನಗಳು ಮಗುಚುವಷ್ಟಕ್ಕೆ ಹಂಬಲವೂ ತಣಿಯುತ್ತದೆ, ಕಂಬನಿಗಳೂ ಕೆನೆಯುತ್ತವೆ, ನೆನವಷ್ಟೇ ಉಳಿಯುತ್ತದೆ. ಅವರನ್ನು ಇನ್ನು ಕಾಣಬಲ್ಲೆವೆಂದರೆ ನೆನವಿನ ಕಣ್ಣಿನಿಂದ, ಅವರ ಸಂಗಡ ಆಡಬಲ್ಲೆವೆಂದರೆ ನೆನವಿನ ಮಾತಿನಲ್ಲಿ. ಆ ನೆನವನ್ನು ನನ್ನ ಗೆಳೆಯರಾದ ವೈ. ವಾ. ಶ್ರೀ ಎಮ್. ಎನ್. ಕಾಮತರಿಗೆ ಇಲ್ಲಿ ಕಾಣಿಕೆಯಾಗಿ ಸಲ್ಲಿಸುತ್ತೇನೆ.

ಎಮ್. ಎನ್. ಕಾಮತರ ತುಂಬ ಹೆಸರು ಮುಂಡಕೂರು ನರಸಿಂಗ ಕಾಮತ್ ಎಂದು. ನಾನೂ ಅವರೂ ಮಂಗಳೂರಿನ ಕೆನರಾ ಹಾಯರ್ ಸ್ಕೂಲಿನಲ್ಲಿ ೨ ವರ್ಷ (1897—1898) ಸಹಾಧ್ಯಾಯಿಗಳಾಗಿದ್ದೆವು. ಕೆಯ್ಯಾಲುಗಳಿಗೆ ಬಳೆ ತೊಟ್ಟು ಸಾಲೆಗೆ ಬರುತ್ತಿದ್ದ ಆ ತೆಳುವಾದ ಗಿಡ್ಡ ಹುಡುಗನನ್ನು ಈಗಲೂ ಕಾಣಬಲ್ಲೆ, ಬಳೆಗಳನ್ನು ಕಳಚಿಬಿಟ್ಟು ನಾವು ಅವರಿಗೆ ಮಾಡುತ್ತಿದ್ದ ಗೇಲಿಯನ್ನು ಈಗಲೂ ನೆನೆಯಬಲ್ಲೆ. ಆಗಲೂ ಅವರು ಕನ್ನಡ ಪಾಠಗಳಲ್ಲಿ ಚುರುಕಾಗಿಯೂ ಇದ್ದರು, ಕನ್ನಡದಲ್ಲಿ ಕವನಿಸುತ್ತಲೂ ಇದ್ದರು. ಈವಾಗ ಕನ್ನಡಕ್ಕೆ ಇರುವಷ್ಟು ಬಲವು ಆವಾಗ ಇರಲಿಲ್ಲ. ಇಂಗ್ಲೀಷು ಭಾಷೆಯೇ ಭಾಷೆ, ಇಂಗ್ಲೀಷಿನಲ್ಲಿಯೇ ಲೇಸಾಗಿ ಬರೆಯಬೇಕು, ಚೊಕ್ಕವಾಗಿ ಮಾತನಾಡಬೇಕು, ಬಲ್ಲವರು ಇಂಗ್ಲೀಷಿನಲ್ಲಿಯೇ ಹಸನಾಗಿ ಕವನಿಸಲೂ ಬೇಕು ಎಂಬುದೇ ಆಗಣ ಆಕಾಂಕ್ಷೆ, ಸರ್ವ ಅಭಿಲಾಷೆ. ಕನ್ನಡದಲ್ಲಿ ತೀರ ತಿರಸ್ಕಾರವೇ ಇದ್ದಿಲ್ಲವಾದರೂ ಅಭಿಮಾನವೂ ಇದ್ದಿಲ್ಲ. ಇಂಗ್ಲೀಷು ಹೊರಬಿಗರ ಭಾಷೆ, ಅದು ಬಂದಂತೆಯೇ ಹೋಗಬೇಕು, ಕನ್ನಡವಾದರೋ ನಮ್ಮ ನಾಡಿನ ಭಾಷೆ, ಇದು ನಮ್ಮ ನಾಡುಳ್ಳವರೆಗೂ ಬಾಳಬೇಕು ಎಂಬ ತಿಳುವಳಿಕೆಯಾದರೋ ಆಗ್ಗೆ ಇನ್ನೂ ಮೂಡಿರಲಿಲ್ಲ. ಅಥವಾ ವಿದ್ಯಾರ್ಥಿಗಳಲ್ಲಿಯೂ ಕಾಮತರಂತೆ ಕನ್ನಡದಲ್ಲಿ ಪದ್ಯ ಕಟ್ಟುವ ಕೆಲಮಂದಿ ಇದ್ದರಾದರೂ ಅವರಿಗೂ ಗದ್ಯರಚನೆ ಮನಸ್ಸಿಗೆ ಒಗ್ಗದು. ಗದುಗಿನ ಭಾರತ,

ತೊರವೆಯ ರಾಮಾಯಣ, ಜೈಮಿನಿ ಭಾರತ, ಇವಷ್ಟನ್ನೇ ಕಂಡವರಿಗೆ ಅವುಗಳ ಕನ್ನಡವನ್ನು ಬಿಟ್ಟು ಬೇರೆ ಕನ್ನಡವೆಲ್ಲಿ? ಅತಏವ ಕನ್ನಡವೆಂದರೆ ಪದ್ಯರಚನೆಗಷ್ಟೇ ವಿನಾ ಮೆಕಾಲೆಯ [Macaulay) ಉದಾತ್ತವಾದ ಗದ್ಯಶೈಲಿಗೆ ಸಾಲದ ಕನ್ನಡವು ಗದ್ಯರಚನೆಗಲ್ಲ ಎಂದೇ ನಮ್ಮ ನಂಬುಗೆ.

1899ರಲ್ಲಿ ನಾವು ಕೆಲವರು ವಿದ್ಯಾರ್ಥಿಗಳೇ ಕೂಡಿ ಕೈಯ್ಬರೆಹದೊಂದು ಇಂಗ್ಲೀಷು ಪತ್ರಿಕೆಯನ್ನು ಹೊರಡಿಸಿದೆವು. ನಾನು ಬಲ್ಲಷ್ಟರ ಮಟ್ಟಿಗೆ ನಮ್ಮ ತುಳುನಾಡಲ್ಲಾದರೂ ಕೈಯ್ಬರೆಹದ ಪತ್ರಿಕೆಗೆ ಇದೇ ಮೊತ್ತಮೊದಲೇನೋ. ಅದರ ಹೆಸರು Angel, ಅಂದರೆ ದೂತ. ಇಷ್ಟೇ ಹೊತ್ತಿಗೊಮ್ಮೆ ಹೊರಡಬೇಕೆಂದು ಅದಕ್ಕೆ ಕಟ್ಟಳೆ ಇದ್ದಿಲ್ಲ. ಎಷ್ಟ್ ಸಿಕ್ಕಿದ್ದೇ ಶನಿವಾರದಂತೆ ತಕ್ಕಷ್ಟು ಲೇಖಗಳು ದೊರೆತಂತೆ ಹೊರಡಿಸುವ್ವದೇ ನಮಗೆ ಗೊತ್ತು. ಲೇಖಕರು ಹೆಸರು ಮರೆಸಿ ಬರೆಯಬೇಕೆಂಬುದು ಅದರ ಮೂಲ ನಿಯಮ. ಅದರ ಮೊದಲಿನ ೨ ಸಂಚಿಕೆಗಳು ಈಗಲೂ ನನ್ನೊಂದಿಗಿವೆ. ಅಲ್ಲಿಂದ ಹೆಚ್ಚು ಮುಂದಕ್ಕೆ ಅದು ಸಾಗಲಿಲ್ಲ, ಬರೆಹಗಾರರ ಅಸಡ್ಡೆಯಿಂದ ಅದು ಬೇಗನೆ ಬಿದ್ದುಹೋಯಿತು, ಕಾಮತರು ಬಹಳ ಪೇಚಾಡಿದರೂ ಅದನ್ನು ಎದ್ದುನಿಲ್ಲಿಸಲಾಗಲಿಲ್ಲ ಕಾಮತರು ಅದಕ್ಕೆ Robin Redbreast ಎಂಬ ಮರೆಹೆಸರಿನಿಂದ ಬರೆಯುತ್ತಿದ್ದರು. ನನ್ನೊಂದಿಗಿರುವ ಸಂಚಿಕೆಗಳಲ್ಲಿ ಅವರ ೬ ಇಂಗ್ಲೀಷು ಕವಿತೆಗಳಿವೆ, ಗದ್ಯಲೇಖವಿಲ್ಲ. ಅವಲ್ಲಿ ೪ ಸ್ವತಂತ್ರ ಕವಿತೆಗಳು— God's Lighthouse, Creation's Baptism, The Kingdom of Heaven is like unto a net, ಮತ್ತು Snail; ಮಿಕ್ಕವು ಸೋಮೇಶ್ವರಶತಕದಲ್ಲಿಯ 'ಸ್ತುತಿಯಂ ಶೋಧಿಸಲಕ್ಕು' ಮತ್ತು 'ಧರೆಯೋ ಬೀಜವ ನುಂಗೆ' ಎಂಬ ಅವೆರಡು ವೃತ್ತಗಳ ಇಂಗ್ಲೀಷು ಪದ್ಯಾನುವಾದಗಳು. ಕಾಮತರ ವಯಸ್ಸಾದರೊ ಆಗ್ಗ ಹದಿನಾರೇ ವರ್ಷ, ಈ ಯಾವತ್ತೂ ಕವಿತೆಗಳು ಆ ಚಿಕ್ಕಂದಿಗೆ ಮಿಂಚಿವೆ.

ಬಡತನದಲ್ಲಿಯೇ ಹುಟ್ಟಿ ಬಡತನದಲ್ಲಿಯೇ ಬೆಳೆದ ಕಾಮತರು 1902—3 ರಲ್ಲೇನೋ ಗಾಣಕ್ಕೆ ಸಾಕಾಗಿ ಎಳ್ಳೂ, ಇಲ್ಲದೆ ಎಳ್ಳಿಗೆ ಬೇಕಾಗಿ ಗಾಣವೂ ಇಲ್ಲದೆ, ಸಾಲೆಯನ್ನೇ ಏಕೆ, ಬೇರೆ ಹೋಕೆ ತೋರದೆ ಮನೆಯನ್ನೂ ಬಿಟ್ಟು ತಕ್ಕ ಹೋರೆಯನ್ನು ಹುಡುಕಾಡಿ ಮುಂಬಯಿಗೆ ಹೋಗಬೇಕಾಯಿತು. ಅಲ್ಲಿ ಅವರು Rose and Company ಎಂಬವರ ವಾದ್ಯದ ಮಳಿಗೆಯಲ್ಲಿ ಕರಣಿಕರಾಗಿದ್ದು ೧—೨ ವರ್ಷಗಳ ಮೇಲೆ ಅದೇ ಹರದರ ಕಲ್ಕತ್ತದಲ್ಲಿರುವ ಅಂಗಡಿಗೆ ಕಳುಹಲ್ಪಟ್ಟರು. ಕಲ್ಕತ್ತದಲ್ಲಿ ಇದ್ದಾಗ ಕಾಮತರು ಬಂಗಾಳಿ ಭಾಷೆಯನ್ನು ಕಲಿತು ಬಂಗಾಳಿ ಸಾಹಿತ್ಯವನ್ನೂ ಯಥೇಷ್ಟವಾಗಿ ಓದಿದರು. ಹಿಂದೊಮ್ಮೆ ಬಂಗಾಳದ ನವಯುವಕರಾದ ಲೇಖಕರು ಬಂಗಾಳಿಯನ್ನು ಒಲ್ಲದೆ ಇಂಗ್ಲಿಷಿನಲ್ಲಿಯೇ ಬರೆಯುತ್ತಿದ್ದರಾದರೂ, ಆ ಸಾಹಿತ್ಯದಲ್ಲಿ ತೊಡಗಿದ್ದ ಪುನರುಜ್ಜೀವನದಿಂದ ಈಚೆಯ

ಹೆಸರುವಾಸಿಯಾದ ಲೇಖಕರಾದರೂ ತಮ್ಮ ದೇಶಭಾಷೆಯಲ್ಲಿಯೇ ರಚಿಸುತ್ತಿರುವ ಹಾಗೂ ಸಮಸಾಮಯಿಕ ಇಂಗ್ಲೀಷು ಸಾಹಿತ್ಯದೊಂದಿಗೆ ಹೆಗಲಿಗೆ ಹೆಗಲು ಮಸೆಯುತ್ತಿರುವ ಆ ಉತ್ಕೃಷ್ಟವಾದ ಸಾಹಿತ್ಯದಲ್ಲಿ ಅವಗಾಹಿಸುತ್ತಿರುವಂತೆ ಕಾಮತರಿಗೆ ಹೊಸತೊಂದು ಭಾವವಿಕಾಸವಾಯಿತು. ಇಂಗ್ಲೀಷಿನಲ್ಲಿ ಬರೆವುದರಿಂದ ತನ್ನ ಮನೆಯ ದೀಪವನ್ನು ಹರವರ ದೀಪಾವಳಿಯಲ್ಲಿ ಹಚ್ಚಿಸಲಿಕ್ಕೆ ಹೋಗಿ ತಾನೂ ತನ್ನವರೂ ಕತ್ತಲೆಯ ಪಾಲಾಗುವುದಷ್ಟೇ ವಿನಾ ಬೇರೆ ಪುರುಷಾರ್ಥವಿಲ್ಲವೆಂದು ಮನಗಂಡುದಲ್ಲದೆ, ಬಂಗಾಳಿಯ ನೆರವಿನಿಂದ ತನಗೊಂದು ಹೊಸ ಶೈಲಿಯನ್ನೂ ರಚಿಸಿಕೊಂಡು ತನ್ನ ಲೇಖನಶಕ್ತಿಯನ್ನು ಇನ್ನು ಕನ್ನಡಕ್ಕೆಂದು ಮೀಸಲಾಗಿಸಿದರು.

ಹೀಗೆ ಕನ್ನಡದ ಮರುಳಿನಿಂದ ಆವಿಷ್ಟನಾದಾತನು ಕನ್ನಡವನ್ನು ಬಿಟ್ಟು ಎಷ್ಟು ಕಾಲ ತಾನೆ ದೂರವಿದ್ದಾನು? 1909—10ರಲ್ಲೇನೋ ಕಾಮತರು ತಮ್ಮ ತಾಯಿನಾಡಿಗೆ ಮರಳಿದರು. ಮರಳಿದವರೇ ಮೂಲ್ಕಿಯ ಶಾಲೆಯಲ್ಲಿ ಅಧ್ಯಾಪಕರಾದರು. ಅಲ್ಲಿದ್ದಾಗ ಅಲ್ಲಿಯ ಪ್ರಸಿದ್ಧ ಕವಿಗಳಾದ ವೈ. ಪಾ. ಶ್ರೀ ಬಂಗ್ಲೇಕರ ನಾರಾಯಣ ಕಾಮತರ ಹೃದಯಂಗಮವಾದ ಗೀತಗಳನ್ನೂ ಸಂಗೀತ ನಾಟಕಗಳನ್ನೂ ಕಂಡ ಇವರಿಗೆ ತಾನೂ ಅಂಥವನ್ನು ಬರೆಯಬೇಕೆಂಬ ಸ್ಫೂರ್ತಿಯುಂಟಾಯಿತು. ಆ ಕಾಮತರಿಗಿದ್ದ ಸಂಗೀತದ ಹುಚ್ಚು ಈ ಕಾಮತರಿಗೂ ಹಿಡಿಯಿತು, ಇವರಲ್ಲಿಯೂ ಕೊನೆವರೆಗೆ ತಾಳಿತು. ಆ ಬಳಿಕ ಇವರು ಬಂಟವಾಳದ ಶ್ರೀ ತಿರುಮಲ ದೇವಳದ ಸಾಲೆಯಲ್ಲಿ ಅಧ್ಯಾಪಕರಾದರು. 1918ರ ಮಾರ್ಚಿ ತಿಂಗಳಲ್ಲಾದ ಆ ದೇವಸ್ಥಾನದ ಜೀರ್ಣೋದ್ಧಾರ ಪ್ರತಿಷ್ಠೆಯ ಸ್ಮಾರಕವಾಗಿ ಇವರು ರಚಿಸಿದ ವಟಪುರಾಧೀಶ್ವರ ಶತಕವೆಂಬ ಭಾಮಿನಿ ಷಟ್ಪದಿಯ ಕಾವ್ಯವು ಬಹಳ ಸೊಗಸಾಗಿದೆ. ಅದೇ ವರ್ಷವೇನೋ ಅಲ್ಲಿಂದ ಮಂಗಳೂರಿಗೆ ಹೋಗಿ ನಮ್ಮ ತಾಯಿಸಾಲೆಯಾದ ಕೆನರಾ ಹಾಯ್ ಸ್ಕೂಲಿನಲ್ಲಿ ಉಪಾಧ್ಯಾಯರಾಗಿ ನೆಲಸಿದವರು ತನ್ನ ಜೀವನದ ನಿಲವನ್ನು ಅಲ್ಲಿಯೇ ಸಲ್ಲಿಸಿದರು.

ತುಳುನಾಡಿಗೆ ಮರಳುತ್ತಲೇ ಚಲಚ್ಚಿತ್ರದ ಸುರುಳಿಯನ್ನು ಬಿಡಿಸಿದಂತೆ ಕಾಮತರ ರಚನೆಗಳು ಒಂದರ ಹಿಂದೆ ಒಂದು ಬರಲಾರಂಭಿಸಿದುವು. ಆಗ್ಗೆ ನಮ್ಮಲ್ಲಿ ಮಾಸಪತ್ರಿಕೆಗಳು ಇದ್ದಿಲ್ಲದೆ, ಇದ್ದುವೂ ನಿತ್ತುಹೋಗಿ, ಇವರ ಕಥೆಗಳೂ ಇತರ ಗದ್ಯ ಲೇಖಗಳೂ ಮೊತ್ತಮೊದಲಲ್ಲಿ ಹೆಚ್ಚಾಗಿ ಹೊರಗಣ ಪತ್ರಿಕೆಗಳಲ್ಲಿ ಬಂದುವು. ಕೆನರಾ ಹಾಯ್ ಸ್ಕೂಲಿನವರು ಅದರ ವಾರ್ಷಿಕೋತ್ಸವದ ಸಂದರ್ಭದಲ್ಲಿ ಆಡುತ್ತಿದ್ದ ಇಂಗ್ಲೀಷು ನಾಟಕಗಳನ್ನು ತೊಲಗಿಸಿ ಇವರು ರಚಿಸಿದ ಕನ್ನಡ ನಾಟಕಗಳನ್ನು ಆಡಿಸತೊಡಗಿದರು. ಅವಲ್ಲಿಯ ಮಧುರವೂ ಭಾವಪೂರ್ಣವೂ ಆದ ಹಾಡುಗಳು ಊರೂರವರ ಬಾಯಲ್ಲಿ ನೆಲಸಿದುವು. ಇವರು ಮಕ್ಕಳಿಗಾಗಿ ರಚಿಸಿದ ಸುರಸವಾದ ಗದ್ಯಪುಸ್ತಕಗಳು ಸಾಲೆಸಾಲೆಗಳಲ್ಲಿ ಪಠ್ಯಪುಸ್ತಕಗಳಾದುವು.

ಕಾಮತರು ನಮ್ಮಿಂದ ಅಗಲಿದ ಈ ಕೆಲವೇ ತಿಂಗಳೊಳಗೆ ಅವರ ರಚನೆಗಳಿಗೆ ಬೆಲೆಕಟ್ಟಲೂ ಕನ್ನಡ ಸಾಹಿತ್ಯದಲ್ಲಿ ಅವರ ಸ್ಥಾನವನ್ನು ಗೊತ್ತುಹಚ್ಚಲೂ ಯತ್ನಿಸುವುದಾದರೊ ಈಗ ತೀರ ಬೇಗ. ಅವರು ತೆರಳಿದಂದಿನಿಂದ ಆ ಕೆಲಸಕ್ಕೆ ಯಥಾಕಾಲವು ತೊಡಗುತ್ತದಾದರೂ ಅವರನ್ನು ಕಂಡ ತಲೆಮಾರೂ ಅಲ್ಲವಾದರೆ ಅವರದೇ ತಲೆಮಾರಾದರೂ ದಾಟದ ಮುಂಚೆ ಆ ತುಲನದಲ್ಲಿ ತಟ್ಟೆಗಳು ನೇರಾಗಿ ನಿಲ್ಲವು. ಮಿದುಕಿನ ಗೌರವದಲ್ಲಿ ಪಡಿಗಳ ತಟ್ಟೆ ನೆಲಕ್ಕೆ ತಟ್ಟಲೂ ಬಹುದು, ಸಲುಗೆಯ ಲಾಘವದಿಂದ ಅದು ತೊಲೆಗೆ ಮುಟ್ಟಲೂ ಬಹುದು. ಆದಕಾರಣ ಈ ನೆನವಿನ ಕಾಣಿಕೆಯಲ್ಲಿ ಆ ಕೆಲಸಕ್ಕೆ ಕೈಯಿಕ್ಕದೆ, ಅವರ ರಚನೆಗಳ ತರತಮಾತ್ಮಕವಾದ ವಿಚಾರವನ್ನಾದರೂ ಇಲ್ಲಿ ಮಾಡದೆ, ಅದನ್ನು ಸರಿಗಣ್ಣಿನಿಂದಲೂ ತಿಳಿಮನಸ್ಸಿನಿಂದಲೂ ಮಾಡಬಲ್ಲ ಭವಿಷ್ಯಕ್ಕೆ ಮುಡುಪಾಗಿ ಇಟ್ಟು ಅವರ ರಚನೆಗಳನ್ನಿಲ್ಲಿ ಹಕ್ಕಿಯ ಹಾರುನೋಟದಿಂದ ನೋಡುವೆನಷ್ಟೇ.

ಸ್ವಾರ್ಥದ ಒಂದು ದೃಷ್ಟಿಯಿಂದ ಹೊರತು ಬೇರೆ ಯಾವ ದೃಷ್ಟಿಯಿಂದ ನೋಡಿದರೂ ಕನ್ನಡ ಕಥೆಗಳಿಗೆ ಮೊತ್ತಮೊದಲಿಗರೆಂದರೆ ಕೈ. ವಾ. ಶ್ರೀ ಪಂಜೆ ಮಂಗೇಶರಾಯರಲ್ಲದೆ ಅನ್ಯರಾರೂ ಅಲ್ಲ. ಅವರ ಬೆನ್ನ ಹಿಂದೆಯೇ ಬಂದವರು, ನಾನು ಬಲ್ಲಷ್ಟರ ಮಟ್ಟಿಗೆ, ಪ್ರಾಯಶಃ ಕಾಮತರೇ. ಇವರ ಕಥೆಗಳನ್ನು 1912 ರಲ್ಲೋ ಅಥವಾ ಅದರ ಆಚೀಚೆಯೋ ಮೈಸೂರಿನ 'ಮಧುರವಾಣಿ'ಯಲ್ಲೇನೋ ಓದಿದಂತೆ ನನಗೆ ನೆನಪಿದೆ. ಕಾಮತರೆಂದರೆ ಹಾಸ್ಯ, ಹಾಸ್ಯವೆಂದರೆ ಕಾಮತರೆಂಬ ಹೆಚ್ಚು ಮಂದಿಯ ನಂಬುಗೆ ಅಲ್ಲದುದಲ್ಲವಾದರೂ ಇವರ ಕಥೆಗಳಲ್ಲಿ ಹಾಸ್ಯವೇ ಅಲ್ಲ, ಮಿಕ್ಕ ರಸಗಳೂ ಬೇಕಾದಂತೆ ಇವೆ; ಸುಖದ ಸಿಹಿಯೂ ಇದೆ, ದುಃಖದ ಕಹಿಯೂ ಇದೆ; ಸಾಮಾನ್ಯವನ್ನು ಅಸಾಮಾನ್ಯವೆನಿಸುವ, ಅಸಾಮಾನ್ಯವನ್ನು ನೈಜವೆನಿಸುವ ಅದೊಂದು ಕೌಶಲವೂ ಇದೆ. ಅವಲ್ಲದೆ ಗದಾಯುದ್ಧ, ಚಂಡಕೌಶಿಕ, ಭೀಷ್ಮನ ಕಥೆ, ಕರ್ಣನ ಕಥೆ, ಯಾದವ ಕೃಷ್ಣ, ಸೀತಾರಾಮ ಮೊದಲಾದ ಅನ್ಯ ಮಹಾಗ್ರಂಥಗಳ ಆಧಾರದಿಂದ ಇವರು ಬರೆದ ಪೌರಾಣಿಕ ಆಖ್ಯಾಯಿಕೆಗಳಲ್ಲಿಯೂ ಆಯಾ ಗ್ರಂಥಗಳಿಂದ ಆಯ್ದುಕೊಂಡ ಎಳೆಗಳನ್ನು ತನ್ನ ಮಗ್ಗದಲ್ಲಿ, ತನ್ನ ನುಡಿತದ ತನ್ನ ಬಗೆತದ ಹಾಸುಹೊಕ್ಕುಗಳಲ್ಲಿ, ನೂತನವಾಗಿ ವಿಚಿತ್ರವಾಗಿ ನೇದಿರುವ ಚಳಕವಿದೆ. ಇವರ ಮೌರ್ಯ ಸಿಂಹಾಸನ, ಪ್ರತಾಪಸಿಂಹ, ಚಂದ್ರರಾವ್ ಮೋರೇ ಮುಂತಾದ ಐತಿಹಾಸಿಕ ನಾಟಕಗಳಲ್ಲಿಯೂ ಪುನರ್ಜನ್ಮ, ಮರ್ಜಿ, ಪಂಚಕನ್ಯೆಯರು ಇತ್ಯಾದಿ ಸಾಮಾಜಿಕ ನಾಟಕಗಳಲ್ಲಿಯೂ ಪಾತ್ರರಚನೆಯೂ ಸಂಭಾಷಣೆಯೂ ಜೀವಂತವಾಗಿವೆ. ಇವರ ಕವಿತೆಗಳು ಒಟ್ಟಾರೆ ಎಷ್ಟಿವೆ, ಎಲ್ಲೆಲ್ಲಿ ಚದರಿವೆ ಎಂದು ನಾನರಿಯೆನಾದರೂ ನಾನು ಕಂಡಿರುವಷ್ಟರಲ್ಲಿ ನನ್ನ ನೆರಳು, ತೋಳನೂ ಕುರಿಯೂ, ಜೀವನ ಸಮಸ್ಯೆ, ಗೂಡಿನಲ್ಲಿಯ ಇಲಿ, ಬಾಲ ಕಳೆದ ನರಿಯ

ಉಪವೇತ, ಅನ್ನ ಸಂಪದವೇಕೆ?, ಆನೆ ಆನೆಯೊ?, ಇರುವೆಯೂ ಮಿಡಿತೆಯೂ, ಸಮಾರಿನ ಸಮಾಧಾನ, ನಮ್ಮ ಬೇಡಿಕೆ, ಗ್ರಾಮಸೇವಕರ ಹಾಡು, ಹೊಲೆಯನ ಹಂಬಲ, ಕರುಣಾಳುವಿಗೆ ಸ್ತೋತ್ರ, ದೀಪಗಳು ಹಾಗೂ ದಾಸರ ಪದಗಳ ಓಪಾದಿಯಲ್ಲಿ ದೇವರಿಗೆ ಮೊರೆಯಿಡುವ ಅವನ ಧರ್ಮ, ಬೆಂಬಲ, ತಾಯಿ, ಹೂವು ಹಂಬಲಿಸುವುದೇಕೆ?—ಮೊದಲಾದ ರಮಣೀಯವಾದ ವೈಣಿಕಗೀತಗಳು ಇನಿದಾಗಿವೆ, ತನಿದಾಗಿವೆ, ದ್ರಾಕ್ಷೆಯ ಗೊಂಚಲಂತೆ ರಸಭರಿತವಾಗಿ ಬಳುಕುತ್ತವೆ, ಭಾವಗರ್ಭಿತ ವಾಗಿ ತುಳುಕುತ್ತವೆ.

ಪ್ರಾಸವನ್ನು ಬಿಡುವುದೆಂದರೆ ಕಾಮತರಿಗೆ ಸೇರದು. ಅವರ ಪ್ರತ್ಯೇಕ ಪದ್ಯ ದಲ್ಲಿ ಪ್ರಾಸವಿದೆ, ಈಚೀಚೆಯ ಕೆಲವಲ್ಲಿ ಒಂದಲ್ಲವಾದರೆ ಎರಡಾದರೂ ಪ್ರಾಸಾ ಕ್ಷರಗಳಿವೆ. ಆದರೆ ಮಂಗಳೂರಿನ ತ್ರಿವೇಣಿಯ ದೀಪಾವಳಿಯ ಸಂಚಿಕೆಯಲ್ಲಿ (1937) ಪ್ರಕಟವಾದ ಅವರ 'ಏನು ಘಂಟಾನಾದವಿದು?' ಎಂಬ ಕವಿತೆ ಕವಿತೆಯೇ ಆದರೂ ಅದಕ್ಕೆ ನಿಯತವಾದ ಪ್ರಾಸವೂ ಇಲ್ಲ, ಛಂದಸ್ಸಿನ ಸತಕ್ಕ ಛಂದಸ್ಸೂ ಇಲ್ಲ. ವೊಲ್ಟ್ ವ್ಹಿಟ್ಮನ್ನನ (Walt Whitman) ಕವಿತೆಗಳಂತೆ ಅವೆರಡು ಪದ್ಯದ ಸೋಗಿನ ಸ್ಫೂರ್ತಿಮಂತವಾದ ಗದ್ಯಕವಿತೆಯಷ್ಟೇ.

ಉದ್ದವಲ್ಲದ ನಿಲುವು, ತಲೆಯಲ್ಲಿ ನಸುಬಿಳಿಯ ಉಂಗುರಕೂದಲು, ಅಗಲ ವಾದ ಹಣೆ, ಕೊಂಚ ಉಬ್ಬಾದ ಕೆಳರೆಪ್ಪೆ, ಅವಲ್ಲಿ ತೇಲುವ ಮಿನುಗುದೃಷ್ಟಿ, ಮುಗುಳುನಗೆಯಿಂದ ಮಿಸುಕಾಡುವ ಮೋರೆ—ಇವರೇ ನಮ್ಮ ಕಾಮತರು. ಎಲ್ಲಿ ನೋಡಿದರೂ ಕರೆಯಬೇಕು, ಯಾರೊಂದಿಗೂ ಮಾತಾಡಬೇಕು; ಹೇಗೆ! ವಯಸ್ಸಿನ ಮೇಟಿಯಿಂದಲ್ಲ, ಸಾಹಿತಿ ಎಂಬ ಠೀವಿಯಿಂದಲೂ ಅಲ್ಲ, ಸಾಲೆಯ ಹುಡುಗರು ಒಬ್ಬರನ್ನೊಬ್ಬರು ಕಂಡು ಕರೆವಂತೆ, ಹೆಗಲಲ್ಲಿ ಕೆಯ್ಯಾಚಿ ಮಾತನಾಡುವಂತೆ. ತನ್ನ ಓರಗೆಯವರೊಂದಿಗೇ ಅಲ್ಲ, ತನ್ನಂತೆಯ ಸಾಹಿತಿಗಳೊಂದಿಗೇ ಅಲ್ಲ, ತಾನು ಕಲಿಸುತ್ತಿದ್ದ ವಿದ್ಯಾರ್ಥಿಗಳೊಂದಿಗೂ ನಾನು-ನೀನು ಎಂಬಷ್ಟರ ಬಳಕೆಯಿಂದಿದ್ದ ಕಾಮತರಿಗೆ ತಾನೊಬ್ಬ ಹಿರಿಯ ಸಾಹಿತಿ ಎಂಬ ಗೊಡವೆಯೂ ಇದ್ದಿಲ್ಲ, ತನ್ನನ್ನು ಹಿರಿಯ ಸಾಹಿತಿ ಎಂದು ಸಿಂಹಾಸಿಸಬೇಕೆಂಬ ಆ ಮೆರತದ ಮರುಳೂ ಇದ್ದಿಲ್ಲ.

ಕಾಮತರು ಬಡತನದಲ್ಲಿಯೇ ಹುಟ್ಟಿ ಬಡತನದಲ್ಲಿಯೇ ಬೆಳೆದವರು, ಬಡತನ ದಲ್ಲಿಯೇ ಬಾಳಿ ಬಡತನದಲ್ಲಿಯೇ ಕಂತಿದರು. ಕಾಲಿಗೆ ಎಳೆದರೆ ತಲೆಗೆ ಬಾರದ ತಲೆಗೆ ಎಳೆದರೆ ಕಾಲಿಗೆ ಸಾಲದ ಕಪ್ಪುದಿಯನ್ನು ಹೊದ್ದುಕೊಂಡಾತನು ಅದನ್ನು ಅತ್ತಕಡೆಗೂ ಇತ್ತಕಡೆಗೂ ಎಳದಾಡುವುದರಲ್ಲಿಯೇ ಇರುಳೆಲ್ಲಾ ಕಳೆಯಬೇಕಾಗು ವಂತೆ ಇವರ ಹಗಲಿರುಳು ಬಡತನದ ಸಂಗಡ ಹೋರಾಡುವುದರಲ್ಲಿಯೇ ಕಳೆಯಿತು. ಬಡವರಲ್ಲದಿದ್ದರೆ ಇವರ ಪ್ರತಿಭೆಗೆ ಇನ್ನೆಷ್ಟರ ವಿಕಾಸ ಒದಗುತ್ತಿದ್ದಿತೋ ಎಷ್ಟರ ಮನ್ನಣೆ ದೊರಕುತ್ತಿದ್ದಿತೋ ಅಷ್ಟು ಪ್ರಾಪ್ತಿಸದ ಬಗ್ಗೆ ಇವರ ಬಡತನವೂ

ಹೀಗೊಂದು ಹಿರಿಯ ವಿಡಸ್ತಾರವಾಯಿತಾದರೂ, ಬಿಸಿಲಿನ ಕಾವನ್ನೂ ನೀರಿನ ಅಭಾವವನ್ನೂ ತನಗಲ್ಲವೆಂದು ಈಡಾಡಿ ಈ ಬೆಟ್ಟಬೇಸಗೆಯ ಹೂವು ತೋರಿದ ಸೊಂಪೂ ಬೀರಿದ ಕಂಪೂ ವಿಸ್ಮಯನೀಯವೇ ಸ್ಸೆ. ತಾನು ಉದುರಿದರೂ ತನ್ನ ಹೆಸರು ಮುದುರದ ಈ ಪಲವು ಬಣ್ಣದ ಹೂವಿಗೆ ಇದೊಂದು ನನ್ನ ನೆನವಿನ ಕಾಣಿಕೆ.

ಮಂಜೇಶ್ವರ.
22—9—1940.

ಗೋವಿಂದ ಪೈ.

---

# ಕರ್ಣಾಟಕ ಪತ್ರಿಕಾ ಪ್ರಪಂಚದ "ಅಕ್ಷಯ ಪಾತ್ರ"

ಕರ್ಣಾಟಕಾಂಬೆಯ ಪುಣ್ಯಮಂದಿರದಲ್ಲಿ ಅಮೋಘವಾದ ಸೇವೆ ಸಲ್ಲಿಸಿದ ಹಿರಿಯ ವಾಙ್ಮಯಭಕ್ತವರೇಣ್ಯರಲ್ಲೊಬ್ಬರು,—ದಿವಂಗತ ಎಂ. ಎನ್. ಕಾಮತರು. ಅವರ ತಾಯ್ನುಡಿ ಕನ್ನಡವಲ್ಲ; ಮನೆ ಮಾತು ಕನ್ನಡವಲ್ಲ. ಆದರೂ ಕನ್ನಡದ ಮೇಲಿನ ನಿಸ್ಸೀಮ ಭಕ್ತಿಯಿಂದ, ಅಭಿಮಾನಾದರಗಳಿಂದ ಅವರು ಸುಮಾರು ೩೦ ವರ್ಷಗಳಷ್ಟು ದೀರ್ಘಕಾಲ, ಕನ್ನಡ ಸರಸತಿಯ ಮನೆಯೂಳಿಗದ ಆಳಿಗೂ ಕೀಳಾಗಿ ದುಡಿದರು. ಕನ್ನಡದ ನುಡಿವೆಣ್ಣನ್ನು ನಾನಾ ಅಲಂಕಾರಗಳಿಂದ ಸಿಂಗರಿಸಿ, ಸಂತೋಷಿಸಿ ಕೃತಾರ್ಥರಾದರು. ಹುಟ್ಟು ಕನ್ನಡಿಗರನ್ನೂ ಮೀರಿಸಿ, ನಾಚಿಸಿ ಅವರಿಗೆ ಅವರ ಕರ್ತವ್ಯದ ಹಾದಿಯಲ್ಲಿ ಬೆಳಕನ್ನು ತೋರಿದರು.

ಎಂ. ಎನ್. ಕಾಮತರೆಂದರೆ ಕನ್ನಡಿಗರಿಗೆ,—ಅದರಲ್ಲಿಯೂ ದಕ್ಷಿಣ ಕನ್ನಡಿಗರಿಗೆ—ಒಂದು ನುಡಿಗಟ್ಟಿನ ಆಪದ್ಧನದ ಖಜಾನೆ ಇದ್ದ ಹಾಗೆ. ವಾಙ್ಮಯ ಕಾರ್ಯವೇನಾಗಬೇಕು? ಅಂಥವರು ಮೊದಲೋಡುವುದು ಕಾಮತರ ಬಳಿಗೇ. "ಸ್ಕೂಲ್ ಡೇಗೊಂದು ನಾಟಕ" "ಹೊಸ ಪತ್ರಿಕೆಗೊಂದು ಸಣ್ಣ ಕತೆ," "ವಿಶೇಷ ಸಂಚಿಕೆಗೊಂದು ಪ್ರಹಸನ"—ಇನ್ನೇನು, ಎಲ್ಲವೂ ಆಗಬೇಕು ಕಾಮತರ ಕೈಯಿಂದಲೇ. "ರೀಡರು"ಗಳಿಗಾದರೂ ಕಾಮತರು; ಗ್ರಂಥಗಳೂ ಕಾಮತರದೇ ಆಗಬೇಕು. ಮುಖ್ಯ, ಇವೆಲ್ಲ, ಇಷ್ಟೆಲ್ಲ 'ಗಿರಾಕಿ'ಗಳಿಗೆ ಕಾರಣ,—ಕಾಮತರ ಸೌಜನ್ಯ, ಲೇಖನದ ಪ್ರೌಢಿಮೆ ಮತ್ತು "ದೇಹಿ" ಎಂಬವರಿಗೆ "ನಾಸ್ತಿ" ಎನ್ನದ ಅವರ ಪರಮೌದಾರ್ಯ.

"ಸಿವಿಲ್—ಕ್ರಿಮಿನಲ್" ವ್ಯವಹರಣೆಗಳೆರಡರ ಶಕ್ತಿಯೂ, ಅಪರೂಪವಾಗಿ, ಒಬ್ಬ ವಕೀಲನಲ್ಲೇ ನೆಲಸಿರುವಂತೆ, ಗದ್ಯಪದ್ಯಗಳೆರಡರಲ್ಲಿಯೂ ಏಕಪ್ರಕಾರದ ರಭಸದ ಓಟ ಇವರ ಲೇಖನಿಗೆ. ನವರಸಗಳ ಸಂಭಾರವನ್ನು ತಕ್ಕಂತೆ ತುಂಬಿಸಿ,—ನಗಿಸಿ, ಅಳಿಸಿ, ವಿಸ್ಮಯಗೊಳಿಸಿ, ಬೆದರಿಸಿ, ರೋಷ ಹುಟ್ಟಿಸಿ ಮೈಮರೆಸಿ ತಮ್ಮೊಡ

ನೊಯ್ಯುಬಿಡತಕ್ಕವರು ಕಾಮತರು. ಕೈಯಲ್ಲಿ ಒಮ್ಮೆ ಹಿಡಿದುದನ್ನು ಕೆಳಗಿಡದೆ ಓದಿಸುವ, ತಿರುಗಿ ಒಮ್ಮೆಯೂ ಬಿಡದೆ ಅದನ್ನೇ ಓದಬೇಕೆಂಬ ಕುತೂಹಲ ಹುಟ್ಟಿಸುವ ಆ ಅಸಾಮಾನ್ಯ ಲೇಖನಸಾಮರ್ಥ್ಯ ಅವರದೇ. ಬೇರೆಯವರಿಗೆಲ್ಲಿ ಬಂತು!

ಪತ್ರಿಕೋದ್ಯಮಕ್ಕೂ ಮಹೋಪಕಾರವನ್ನು ಮಾಡಿರುವವರು ಕಾಮತರು. ಅವರು ಹಲವು ವರ್ಷ ತಾವೇ "ಬೋಧಿನೀ" ಎಂಬ ಮಾಸಪತ್ರಿಕೆಯನ್ನು ನಡೆಸಿದರು. ಹಲವಾರು ಪತ್ರಿಕೆಗಳಿಗೂ ಲೇಖನಗಳನ್ನೂ ಬರೆದುಕೊಟ್ಟರು. ಅವರು ಪತ್ರಿಕೆಗಳಿಗಾಗಿ ಬರೆದುಕೊಟ್ಟ ಪ್ರಹಸನಗಳು, ಸಣ್ಣ ಕತೆಗಳು, ಏಕಾಂಕನಾಟಕಗಳು, ಇತರ ಲೇಖಗಳು ಅವೇನೂ ಒಂದೆರಡಲ್ಲ—ನೂರಾರು. ಅವೆಲ್ಲವೂ ಸೇರಿದರೊಂದು ರಾಮಾಯಣದಷ್ಟು ದೊಡ್ಡ ಗ್ರಂಥ. ವಾರವಾರವೂ ಅವರ ಕೈವಾಡವನ್ನು ಒಂದೋ, ಎರಡೋ, ನಾಲ್ಕೋ ಪತ್ರಿಕೆಗಳಲ್ಲಿ ಕಾಣಬಹುದಾಗಿತ್ತು. ಪತ್ರಿಕೆಗಳಿಗೆ ಸತತವೂ ಬರೆಯುವುದು ಅವರ ಜೀವನದ ಒಂದು ಸ್ವತಃಸಿದ್ಧಸಂಕಲ್ಪ; ವ್ರತ; ಧ್ಯೇಯ. ಇದನ್ನು ಅವರು ಕೊನೆತನಕವೂ ಬಿಡದೆ ಸಾಧಿಸಿಬಿಟ್ಟರು.

ವನವಾಸಕ್ಕೆ ಹೊರಟ ಪಾಂಡವರ ಗತಿಯೂ, ಲೋಕಸೇವೆಗಾಗಿ ಹೊರಟ ಕನ್ನಡ ಪತ್ರಿಕೆಗಳ ಹಾಡೂ ಸಾಮಾನ್ಯ ಒಂದೇ. ಪಾಂಡವರು, ಅಂದು, ಆ ಅಕ್ಷಯ ಪಾತ್ರದಿಂದ ಬದುಕಿದ್ದರೆ, ಕನ್ನಡ ಪತ್ರಿಕೆಗಳು ಇಂದು "ಕಾಮತರು" ಎಂಬ ಈ "ಅಕ್ಷಯ ಪಾತ್ರ"ದಿಂದ ತಲೆ ಎತ್ತಿದುವೆನ್ನಬೇಕು. ವಿದ್ಯಾಪ್ರಚಾರವು ಸಾಕಷ್ಟಿರದ ಆದೊಂದು ಕಾಲದಲ್ಲಿ, ಕಾಮತರ ಆರಂಭದ ಲೇಖಗಳ ಪ್ರತಿಭೆಯು ಅಷ್ಟಾಗಿ ಒಡೆದು ತೋರಲಿಕ್ಕಿಲ್ಲ; ನಿಜ. ಆದರೆ ಕಾಮತರು ಅಷ್ಟರಿಂದಲೇ ಹತಾಶರಾಗಲಿಲ್ಲ; ತಾಳ್ಮೆಯಿಂದ, ಸಾಹಸದಿಂದ ಪತ್ರಿಕೋದ್ಯಮವನ್ನು ವೀರಸೇನಾನಿಯಂತೆ ಮುಂದೊತ್ತಿದರು. ಕನ್ನಡಿಗರಿಗೆ ರುಚಿಸುವ ವಿಷಯಗಳಾವುವು, ಆ ಲೇಖಗಳು ಹೇಗಿರಬೇಕು ಎಂದು ಮುಂತಾಗಿ ತಾವೇ ವಿಮರ್ಶಿಸಿಯೂ, ಇತರರಿಂದ ಅಭಿಪ್ರಾಯ ಸಂಗ್ರಹಿಸಿಯೂ ಆ ಉದ್ಯಮದ ಮಾರ್ಗ ಕಂಡುಹಿಡಿದರು. ಪಂಡಿತರಿಗೂ ಪಾಮರರಿಗೂ ರಂಜನೆಯಾಗುವಂತೆ, ಸ್ವಾರಸ್ಯವಾದ ಲೇಖಗಳನ್ನು ಬರೆಯತೊಡಗಿದರು. ಇದರಿಂದ ಅವರ ಪ್ರಯತ್ನವು ಫಲಿಸಿತು. ಪತ್ರಿಕಾ ಪ್ರಪಂಚದ ಈ ಅಕ್ಷಯ ಪಾತ್ರದ ಬೆಲೆ ಇಡೀ ಕನ್ನಡ ನಾಡಿಗೇ ತಿಳಿಯಿತು. ಅವರಿವರಿಗೆಂದಲ್ಲ; ಮುದುಕರಿಂದ ಹಿಡಿದು ಮಕ್ಕಳ ವರೆಗೂ ಅವರ ಹೆಸರು ಮನೆಮಾತಾಗಿ ಓಡಾಡುವಂತಾಯಿತು.

'ಶ್ರೀಕೃಷ್ಣಸೂಕ್ತಿ' 'ಪ್ರವಾಸಿ' 'ಸ್ವದೇಶಾಭಿಮಾನಿ' 'ಕಂಠೀರವ' 'ನವಯುಗ' 'ಪ್ರಭಾತ' ಮೊದಲಾದ ಈ ಜಿಲ್ಲೆಯ ಪತ್ರಿಕೆಗಳಿಗೂ ಬರೆಯುತ್ತಿದ್ದುದೇ ಅಲ್ಲದೆ ಕಾಮತರು 'ಮಧುರವಾಣಿ' ಎಂಬ ಮೈಸೂರಿನ ಉತ್ಕೃಷ್ಟ ಮಾಸಪತ್ರಿಕೆಯ ವ್ಯಕ್ತ ಲೇಖಕರೂ ಆಗಿದ್ದರು. ಜಿಲ್ಲೆಯ ಹೊರಗಡೆಯ ಇತರ ಹಲವು ಕನ್ನಡ

ಪತ್ರಿಕೆಗಳಿಗೂ ಲೇಖನಗಳನ್ನು ಕಳುಹಿಸುತ್ತಿದ್ದರು. ಆ ಲೇಖನಗಳಿಗೆ, ಅವರಿಗೆ ವಿಶೇಷವಾದ ಗೌರವವು ಅಲ್ಲಿಯೂ ದೊರಕಿತ್ತು. ಅಂತೂ ಪತ್ರಿಕೋದ್ಯಮದಲ್ಲಿ ಇವರು ತಮಗೊಂದು ಹಿರಿಯ ಸ್ಥಾನವನ್ನೇ, ಸ್ವಸಾಮರ್ಥ್ಯದಿಂದಲೇ ನಿಖಿಲ ಕರ್ನಾಟಕದಲ್ಲಿ ಸಂಪಾದಿಸಿದ್ದರೆಂಬುದು ಸರ್ವವಿದಿತ.

ಪತ್ರಿಕಾಮೂಲವಾದ ಲೋಕಶಿಕ್ಷಣ, ಜ್ಞಾನದಾನ ಇವನ್ನು ಕಾಮತರಂತೆ ಕೊಟ್ಟವರೂ, ಮಾಡಿದವರೂ ಕನ್ನಡ ನಾಡಿನಲ್ಲಿ ಎಷ್ಟು ಮಂದಿಯೋ ತಿಳಿಯದು. ಇವರು ಸಾವಿರಾರು ಮಂದಿ ಬಡ ಕನ್ನಡಿಗರಿಗೆ ತಮ್ಮ ಜ್ಞಾನಸಂಪತ್ತನ್ನೆಲ್ಲ ನಿರ್ವಂಚನೆಯಿಂದ ಸೂರೆಗೊಟ್ಟವರು. ಇವರಿಗೆ ಈ ಕೆಲಸದಲ್ಲಿ ಎಂದೂ ಒಂದಿಷ್ಟೂ ಬಿಡುವಿಲ್ಲ; ಬೇಸರವಿಲ್ಲ: ಅಶ್ರದ್ಧೆಯಿಲ್ಲ! ಇವರಂತೆ ಲೋಕಶಿಕ್ಷಣದಲ್ಲಿ ಇಷ್ಟೇ ಉತ್ಸಾಹವಿರುವ ಇನ್ನೂ ಕೆಲ ಕನ್ನಡಿಗರು ಮೇಲಕ್ಕೆ ಎದ್ದಿದ್ದರೆ, ಇಂದು ನಮ್ಮ ನಾಡಿನ ಸ್ವರೂಪವೇ ಬದಲಾಗುತ್ತಿರಲಿಲ್ಲವೇ?

ಕನ್ನಡ ಪತ್ರಿಕೆಗಳ ಅಭ್ಯುದಯದಲ್ಲಿ ಇವರಿಗಿದ್ದ ಚಿಂತೆಯೇನೂ ಸಾಮಾನ್ಯವಲ್ಲ. ಪತ್ರಿಕಾ ಸಂಪಾದಕರುಗಳಿಗೂ, ಲೇಖಕರಿಗೂ ಇವರು ಆಗಾಗ ಕಾಲೋಚಿತವಾದ ಎಷ್ಟೋ ಸೂಚನೆಗಳನ್ನು ಕೊಡುತ್ತಲೇ ಇದ್ದರು. ಪತ್ರಿಕೆಗಳ ನೋವಿನಲ್ಲಿ, ಸಾವಿನಲ್ಲಿ ತಾವೂ ನೊಂದುಕೊಳ್ಳುತ್ತಿದ್ದರು; ಬದುಕಿನಲ್ಲಿ, ಬಾಳಿನಲ್ಲಿ ಮೇಲ್ಮೆಯಲ್ಲಿ ಸಂತೋಷಿಸುತ್ತಿದ್ದರು. ಸಂಭಾವನೆಯು, ಸಂಪಾದನೆಯು ದೃಷ್ಟಿಯಾದರೂ ಪತ್ರಿಕೋದ್ಯಮದಲ್ಲಿ ಇವರಿಗಿತ್ತೇ? ಮುದ್ರಣನ "ಭವತಿ ಭಿಕ್ಷಾಂ ದೇಹಿ" ಮಂತ್ರದ ಪತ್ರಿಕೆಗಳೇ ತುಂಬಿದ ನಾಡಿನಲ್ಲಿ ಅವೇನು ಕೊಟ್ಟಾವು? ಇವರೇನು ತೆಗೆದುಕೊಂಡಾರು? ಕಾಮತರದು, ಬಹಳಮಟ್ಟಿಗೆ, ಪತ್ರಿಕೆಗಳ ಕ್ಷೇತ್ರದಲ್ಲಿ ಆತ್ಮಸಂತೋಷದ ದುಡಿತ; ತ್ಯಾಗಬುದ್ಧಿಯ ಕೆಲಸ ಕಾರ್ಯ. ದುಡ್ಡಿನ ಸದ್ದು ಆ ಪತ್ರಿಕಾಹೃದಯದಲ್ಲಿರಲಿಲ್ಲ.

ಕನ್ನಡ ನಾಡಿನಲ್ಲಿ ಪತ್ರಿಕಾ ಲೇಖಕರು ಹಲವು ಮಂದಿ ಇರುವರಾದರೂ, ಕಾಮತರ ವೈಶಿಷ್ಟ್ಯವೊಂದು ಎಲ್ಲರಿಂದಲೂ ಬೇರೆ. ಶೈಲಿಯ ಅಚ್ಚುಕಟ್ಟು, ಸೊಗಸು, ನಯ-ನವೀನತೆ, ಪ್ರತಿಭೆ, ಸರಳತೆ, ಪದಲಾಲಿತ್ಯ ಇವೆಲ್ಲ ಅವರೊಬ್ಬರಿಗೇ ಮಾರಿಹೋದಂತಿದೆ. ಜನತೆಗೆ ಅಗತ್ಯವಾಗಿಯೂ ಬೇಕಾಗಿರುವ ವಿಷಯಗಳನ್ನು ಆರಿಸುವ ಕುಶಲ ಕಲೆಯದು ಅವರಿಗಾಗಿಯೇ ಮೀಸಲಿರಿಸಿದಂತಿದೆ. ಅವರ ವಿಷಯಜ್ಞಾನ ಅಗಾಧ; ಅವರ ಲೋಕಾನುಭವ ಅದ್ವಿತೀಯ. ಅವರು ಓದಿದ ಗ್ರಂಥಗಳೆಷ್ಟು! ಅವರು ಪಾಂಡಿತ್ಯ ಪಡೆಯದ ವಿಚಾರಗಳಾವುವು? ರಾಜನೀತಿಯೇ? ರಾಜಕಾರ್ಯವೇ? ವಿಜ್ಞಾನವೇ? ಭೂಗೋಳವೇ? ಇತಿಹಾಸವೇ? ಸಮಾಜಶಾಸ್ತ್ರವೇ? ಪ್ರಪಂಚದ ಪ್ರಚಲಿತ ವಿದ್ಯಮಾನಗಳು ಅವರಿಗೆ ಕಂಠಪಾಠ; ಸಮಾಚಾರಗಳೆಲ್ಲ ತುದಿಬೆರಳಲ್ಲಿ; ಮರಾಠಿ, ಕನ್ನಡ, ಬಂಗಾಳಿ ವಾಙ್ಮಯಗಳ ವಿದ್ವತ್ತು ಇವರು ಕೊಟ್ಟರುಂಟು; ವಿಷಯನಿರೂಪಣೆಯಲ್ಲಿ ಇವರಿಗೆ ಕಪ್ಪ ಕೊಡಬೇಕು.

ಮಾತಿನ ಚಮತ್ಕಾರದಲ್ಲಿಯಂತೂ ಇವರನ್ನು ಬಿಟ್ಟರಿಲ್ಲ. ಇಂತಹ ದಕ್ಷಲೇಖಕರು ನಮ್ಮ ನಾಡಿನಲ್ಲಿ ಇನ್ನು ಉದಯಿಸುವರೇ?

ಭಾಷೆಯ ಅಂದವಾದ ರೂಪಿಗೆ ಮತ್ತೂ ಮಿರುಗು ಕೊಟ್ಟು, ಸಾಮಾನ್ಯರಿಗೂ ಅರ್ಥವಾಗುವಂತೆ, ಕಠಿನ ವಿಷಯಗಳನ್ನೂ ಪ್ರತಿಪಾದಿಸುವಲ್ಲಿಯೂ, ಹತ್ತಿಪ್ಪತ್ತು ಮಾತುಗಳಲ್ಲಿ ಒಬ್ಬನೆನ್ನುವುದನ್ನು ಭಟ್ಟಿ ಇಳಿಸಿ ರುಚಿಯಾದ ಒಂದೆರಡು ಮಾತುಗಳಲ್ಲಿಯೇ ತಿಳಿಸುವಲ್ಲಿಯೂ ಇವರು ತಮ್ಮದಾಗಿ ಮಾಡಿಕೊಂಡ ಆ ಒಂದು ವೈಶಿಷ್ಟ್ಯ ಅನುಕರಣೀಯವಾದರೂ, ಅನುಕರಣಕ್ಕೆ ಸುಲಭಸಾಧ್ಯವಲ್ಲ.

ಇನ್ನೊಂದು ಮಾತು! ಈ ಮಹನೀಯರ ಪತ್ರಿಕೋದ್ಯಮದ ಸಂಪೂರ್ಣ ಯಶಸ್ಸಿನ ವಿಷಯದಲ್ಲಿ, ಪ್ರತಿಯೊಬ್ಬನೂ ಅಗತ್ಯವಾಗಿಯೂ ನೆನಪಿಡಲೇಬೇಕಾದ ಅದೊಂದು ಮಾತು. ಅದೇ ಅವರ ಪತ್ರಿಕಾಜೀವನದ ರಹಸ್ಯ. ಅದೇ ಅವರ ಶ್ರೇಷ್ಠತಮವಾದ ವೈಶಿಷ್ಟ್ಯ. ಇಡೀ ಕರ್ಣಾಟಕದ ವಾಚಕಮಂಡಲವನ್ನು ಕಾಮತರು ಬೆರಗು ಮಾಡಿ ಬಿಟ್ಟುದು, ಇದೊಂದು ಸನ್ಮೋಹನಾಸ್ತ್ರದಿಂದಲೇ,--ತಿಳಿದಿರಲಿ!

ಕಾಮತರು ಬಹು ರಸಿಕರು; ವಿನೋದಪ್ರಿಯರು. ಅವರ ಜಾಯಮಾನವೇ ಹಾಗೆ. ಹಾಸ್ಯರಸದಲ್ಲಿ ಇವರದು ಎತ್ತಿದ ಕೈ. ಆ ವರವನ್ನಿವರು ಹುಟ್ಟುವಾಗಲೇ ಪಡೆದುಕೊಂಡು ಬಂದಂತೆ ತೋರುತ್ತಿದೆ. ಕೆಲವರು ಮಾತನಾಡುವಾಗ ಮಾತ್ರ ಹಾಸ್ಯದ ನುಡಿಗಳನ್ನಾಡಲು ಶಕ್ತರು. ಇವರದು ಹಾಗಲ್ಲ; ಮಾತಿನಂತೆಯೇ ಪತ್ರಿಕೆಗಳ ಬರವಣಿಗೆಯಲ್ಲಿಯೂ ಆ ಹಾಸ್ಯರಸದ ಅಧಿಕಾರ. ಎಲ್ಲಿ ಬೇಕೆಂದರೆ ಅಲ್ಲಿ ಆ ಹಾಸ್ಯರಸವು ಒಸರುವುದು; ಹರಿಯುವುದು; ಉಕ್ಕೇರುವುದು. ಅದೂ ಸ್ವಾಭಾವಿಕವಾಗಿ, ಗಂಭೀರವಾಗಿ! ಇದೊಂದು ಗುಣವಿದ್ದರೆ, ಈ ಮೋಹನಾಸ್ತ್ರವೊಂದು ಲೇಖಕನ ವಶವಿದ್ದರೆ, ಅವನು ಗೆದ್ದ; ಆಗ ಅವನೊಬ್ಬ ವಾಙ್ಮಯ ಚಕ್ರವರ್ತಿ. ಕಾಮತರಾದರೂ ಪತ್ರಿಕಾಪ್ರಪಂಚದಲ್ಲಿ ಈ ಸಿಂಹಪೀಠವನ್ನೇರಿ ಕುಳಿತವರು; ಜನರಂಜನೆ ಮಾಡಿದವರು; ಕನ್ನಡ ಪತ್ರಿಕೆಗಳಲ್ಲಿ ಏನೋ ಒಂದಿಷ್ಟು ಬರಡು ಕರಡು ಲೇಖಗಳೇ ಅಲ್ಲ; ಕೊಂಚ ತಮಾಷೆ ಇದೆ, ಕೊಂಚ ನಗುವುದಕ್ಕಾದರೂ ಉಂಟೆಂದು ಅಜ್ಞರ ಬಾಯಿಯಿಂದಲೂ ಹೇಳಿಸಿಕೊಂಡವರು. "ಭಲೆ!" ಎಂದು ಪ್ರಾಜ್ಞರ ಮೆಚ್ಚಿಗೆಯನ್ನೂ ಸಂಪಾದಿಸಿದವರು. ಇವರು ಪತ್ರಿಕಾ ಲೇಖಗಳಿಗೊಂದು ಅಕ್ಷಯಪಾತ್ರೆ ಹೇಗೋ, ಹಾಗೆಯೇ ಹಾಸ್ಯಕ್ಕೂ! ಆ ಪಾತ್ರೆಯಲ್ಲಿ ತಿಳಿಯಾದ ಹಾಸ್ಯದ ನುಡಿಗಳು, ಹನಿಗಳು, ತೆಗೆದಷ್ಟೂ ಉಂಟು. ಇಂತಹ ಸಿದ್ಧಹಸ್ತರಾದ ಲೇಖಕೋತ್ತಮರು ನಮ್ಮ ಕರ್ಣಾಟಕದಲ್ಲಿಯೇ ಎಂದೇನು, ಭಾರತದಲ್ಲಿಯೇ ಬೆರಳೆಣಿಕೆಗೆ ಎಷ್ಟು? ಆದುದರಿಂದಲೇ, ಕನ್ನಡದ ಇವರ ಪತ್ರಿಕಾಜೀವನದ ಪ್ರಾಶಸ್ತ್ಯ ಬೆಳೆಯಿತು. ಕನ್ನಡಿಗರಲ್ಲಿ ವಾಚನಾಭಿರುಚಿ ಹೆಚ್ಚಿ, ಪತ್ರಿಕೋದ್ಯಮದ ಕೀರ್ತಿಧ್ವಜ ಎಲ್ಲೆಲ್ಲೂ ಹಾರಾಡ ತೊಡಗಿತು.

ಕಾಮತರ ಹಾಸ್ಯದ ಪ್ರವೃತ್ತಿಯ ಅನೇಕಾನೇಕ ಲೇಖಗಳಲ್ಲಿ ಒಂದನ್ನು ಕೈಗೆ ಸಿಕ್ಕಿದಂತೆ "ಕಂಠೀರವ"ನ ಸಂಚಿಕೆಯಿಂದೆತ್ತಿ ಬರೆದು, ಈ ಲೇಖನವನ್ನು,—ಬರೆಯಬೇಕಾದಷ್ಟು ಬರೆಯುವ ಶಕ್ತಿ ನನ್ನಂಥ ಅಜ್ಞನಲ್ಲಿ ಇಲ್ಲವಲ್ಲ, ಪ್ರಾಜ್ಞರಾದ ಕಾಮತರ ವಿಷಯದಲ್ಲಿ ಬರೆದಷ್ಟೂ ಸಾಲದಲ್ಲ ಎಂಬ ಕ್ಷಮಾಯಾಚನೆಯೊಡನೆ—ಮುಗಿಸುವೆನು.

## ಕಾಲಮಹಿಮೆಯ ದೃಷ್ಟಾಂತ

"ರಾಜಕೀಯ ಪಂಗಡಗಳು ಹೆಚ್ಚುವಂತಾಗಿ, ಹೊಸ ಪಾರ್ಟಿಗಳು ತಲೆದೋರುತ್ತಿವೆ. ನಮ್ಮ ಸಂಸ್ಥಾನದ ರಾಜಕೀಯ ಕಾರ್ಯಕ್ಷೇತ್ರದಲ್ಲಿ, ಹೊಸ ಹೊಸ ಆಳಿಂಬೆಗಳು ತಲೆ ಎತ್ತುತ್ತಲಿವೆ. ಇದ್ದ ಪಾರ್ಟಿಗಳಿಗೇ ಗತಿಯಿಲ್ಲ, ಇನ್ನೂ ಕೊಡೋ ಸದಾಶಿವ,—ಎಂದೀಗ ಡಾ॥ ವರದರಾಜುಲು ನಾಯುಡುರವರ ಆಲಾಪ. ಹೊಸ ಪಾರ್ಟಿಗಳನ್ನು ಹೊರಡಿಸುವುದೆಂದರೆ, ಹೊಸ ಕಾಫಿ ಹೋಟೇಲನ್ನು ತೆರೆದಂತಾಗಿದೆ. ಹೊಸ ಗಿರಾಕಿಗಳು ನಾಲ್ಕು ದಿನ ತುಂಬಾ ಬರುವರು; ಲೆಕ್ಕ ಕಡ; ವಸೂಲಿಗಾಗಿ ಕೇಳುತ್ತಲೆ ಗಿರಾಕಿಗಳು ಮಾಯವಾಗುವರು; ನಂತರ ಹೋಟೇಲು 'ಬಂದ್.' ಪಾರ್ಟಿಯೂ ಆಯಿತು; ನಮ್ಮ ಮುಖಂಡರೂ ಚೆನ್ನಾಗಿ ಲಂಗ್‌ಪವರ್ (ಶ್ವಾಸಕೋಶಗಳ ಬಲ) ಪ್ರದರ್ಶಿಸಿದರು; ಜನ ಕೂಡಿತು; ಗಲಭೆ; ಮೆರವಣಿಗೆ; ಸಭೆ; ಪತ್ರಿಕೆಗಳಲ್ಲಿ ನಾಲ್ಕು ಲೇಖನಗಳು. ಅಷ್ಟರಲ್ಲಿ ಗಾಳಿ ಬೇರೆ ಕಡೆಯಿಂದ ಬೀಸಿತು. ಸರಿ, ಪಾರ್ಟಿ ಅಲ್ಲೇ 'ಪಾರ್ಟಾ'ಯಿತು, ಹೊಸ ಪಾರ್ಟಿಗೆ ಪ್ರಾರಂಭವಾಗಲು ವೇಷ ಹಾಕಿಕೊಳ್ಳಲು ಮೊದಲಾಯಿತು. ದೇಶಹಿತಕ್ಕಾಗಿ ರಾಜಕೀಯ ಸ್ವಾತಂತ್ರ್ಯವನ್ನೂ ಸರ್ವ ಸಮಾಜಗಳಿಗೆ ನ್ಯಾಯವನ್ನೂ ಸಲ್ಲಿಸಲು ಹೋರಾಡುವ ಪಾರ್ಟಿಯೊಂದನ್ನು ನಾಯುಡುರವರು ಹೊರಡಿಸಿರುವರು. ದೇಶಹಿತಕ್ಕಾಗಿಯೇ ಎಲ್ಲರೂ ಹೊರಡಿಸುವರು; ರಾಷ್ಟ್ರಸಭೆಯಿದೆ, ಸ್ವತಂತ್ರ ಪಕ್ಷವೂ ಇದೆ. ಅದಲ್ಲದಿದ್ದರೆ ಇದೊಂದಾದರೂ ಇರಬಹುದಾಗಿತ್ತು. ಪರಂತು, ಮುಖಂಡರಾಗಬೇಕೆನ್ನುವವರು ಹೊಸ ಪಾರ್ಟಿ ಸ್ಥಾಪಿಸದೆ ಏನು ಮಾಡಬಹುದು? ಅದು ಕಾರಣ, ಇದೂ ಒಂದು ದೇಶಹಿತಕ್ಕಾಗಿ! ನಾವು ಹೇಳಬಹುದಾದರೆ,—ದೇಶಹಿತಕ್ಕಾಗಿ ಇದ್ದ ಪಾರ್ಟಿಗಳೇ ಸಾಕು, ಇನ್ನೂ ಹೊಸ ಪಾರ್ಟಿಗಳನ್ನು ಸಾಕುಮಾಡಿರಿ!" (ತಾ. ೧೮-೬-೧೯೩೯ನೇ ಸಂಚಿಕೆಯಿಂದ.)

**ಹುರುಳಿ ಭೀಮರಾವ್.**

# ಮರಣದ ಮುಂದೆ ನಗು

ಕಾಮತರು ಕೆಲಸ ತೊಡಗಿದ ಸಮಯ ನಾವೆಲ್ಲ ಆಡುವ ಮಕ್ಕಳು. ನಾನು IV ಫಾರ್ಮಿನಲ್ಲಿ ಓದುತ್ತಿದ್ದಾಗ ಕಾಮತರ ಕೃತಿ "ಶುಕಶಿಕ್ಷಣ" ಪ್ರಥಮ ನನ್ನ ಕಣ್ಣಿಗೆ ಬಿದ್ದುದು. ಅದು ಪುಟ್ಟ ನಾಟಕವೊಂದು. 1918ನೇ ಇಸವಿಯ ನೇಶನಲ್ ಎಡ್ಯುಕೇಶನ್ ಚಳವಳದ ಹುಮ್ಮಸದ ದಿನಗಳಲ್ಲಿ ಅವರು ಅದನ್ನು ಬರೆದರು. ಸ್ವಲ್ಪ ಹಿಂದು ಮುಂದೆ—ಅವರು "ಅಂಚೆಮನೆ" (ಟಾಗೂರರ ಕೃತಿ) ಯನ್ನು ಕನ್ನಡಿಗರಿಗೆ ಒಪ್ಪಿಸಿದ್ದರು. ಅವರ ಬರಹಗಳನ್ನು ಆಗ ನಾವೆಲ್ಲ ಓದಿದವರು. ಆಗಿನ್ನು ಹೊಸಗನ್ನಡದ ಮುಂಜಾನೆ ಸಮಯ. ನಮ್ಮ ಜಿಲ್ಲೆಯಲ್ಲಿ ಕನ್ನಡದ ಮರುಳು ತೊಡಗಿದ ಆ ದಿನಗಳಲ್ಲಿ ಅದಕ್ಕಾಗಿ ದುಡಿದವರ ಸಂಖ್ಯೆ ಬಲು ಕಡಿಮೆಯೆನ್ನಬೇಕು. ನನ್ನ ಹುಡುಗತನದ ನೆನಪಿಂದ ಹೇಳುವುದಾದರೆ ಆಗ ನಮಗೆ ತುಂಬ ಪರಿಚಿತರಾದ ಬರಹಗಾರರು ವೆಂಕಟಾಚಾರ್ಯರು. ಅವರ ಬಂಗಾಲೀ ನಾವೆಲುಗಳ ಅನುವಾದಕ್ಕೆ ನಾವು ಮರುಳಾಗಿದ್ದೆವು. ಅವರು ನಮ್ಮ ನುಡಿಗೆ ಬಂಗಾಲಿಯ ಹುರುಪನ್ನು ಕೊಟ್ಟರು. ಅದೇ ವೇಳೆ ದುಡಿದರು ಕಾಮತರು—ಅವರು ಬಂಗಾಲಿಯಿಂದ ತಾವು ಹುರುಪು ಗಳಿಸಿಕೊಂಡು, ತಮ್ಮ ಹುರುಪನ್ನೂ ನಮಗೆ ಕೊಡಲು ಯತ್ನಿಸಿದರು. ಅವರಿಗೆ ಬಂಗಾಲಿಯ ಅಭಿಮಾನವೊನ್ನೆಯ ತನಕ ತುಂಬಾ ಇತ್ತು. ಆದರೆ ಬರಿಯ ಅಂಧಾನುಕರಣೆ, ಅನುವಾದಗಳಲ್ಲೇ ಅವರು ಮುಳುಗದೆ, ತಮ್ಮದೇ ಕೃತಿಗಳನ್ನು ಕೊಡಲು ತೊಡಗಿದರು. ನಮ್ಮ ಜಿಲ್ಲೆಯಲ್ಲಿ ಈ ಕನ್ನಡದ ನವೀನ ಮಾರುತವನ್ನು ಬೀಸಿದವರ ಸಂಖ್ಯೆ ಬೆರಳುಗಳಷ್ಟು ಇಲ್ಲ—ಶ್ರೀ। ಕಾಮತರು, ಶ್ರೀ। ಪಂಜೆಯವರು, ಶ್ರೀ। ವಿಟ್ಠಲರಾಯರು, ಶ್ರೀ। ಕರೋಡಿಯವರು, ಶ್ರೀ। ರಾಜಗೋಪಾಲಕೃಷ್ಣರಾಯರು—ಇವರೆಲ್ಲ ಶ್ರೀಕೃಷ್ಣಸೂಕ್ತಿ, ಬೋಧಿನೀ, ಆನಂದ—ದಂಥ ಪತ್ರಿಕೆಗಳಲ್ಲಿ ದುಡಿಯದಿದ್ದರೆ—ನಮ್ಮ ಜಿಲ್ಲೆ ಈ ದಿನ ಹೊಸಗನ್ನಡದ ಬಯಲಲ್ಲಿ ಇಷ್ಟಾದರೂ ನಲಿದಾಡುತ್ತಿತ್ತು ಎಂದು ಹೇಳಲಾರೆ.

ನಾನು ಹೈಸ್ಕೂಲು ಪಾರಾಗುವುದರೊಳಗಾಗಿ ದಕ್ಷಿಣ ಕನ್ನಡದಲ್ಲಿ ಕಾಮತರ ಹೆಸರು ತುಂಬ ಪ್ರಚಾರವಾಗಿತ್ತು. ಬಹಳವಾಗಿ ಅವರು ಬರೆಯುತ್ತಿದ್ದರು. ಅನೇಕ ಕನ್ನಡ ಜಿಲ್ಲೆಯ ಪತ್ರಿಕೆಗಳು ಅವರ ತೋಳುಬಲವಲ್ಲದಿದ್ದರೆ ಈಗಿನ ಈ ರೂಪಕ್ಕೆ ಬರುತ್ತಿರಲಿಲ್ಲ. ದಕ್ಷಿಣಕನ್ನಡದ ಪತ್ರಿಕೆಗಳು, ಪುಸ್ತಕಗಳು, "ಮಂಗಳೂರಿನ" ಭಾಷಾ ಶೈಲಿಯನ್ನೂ ಕಲ್ಪಿಸಿದ ಸಮಯ ಅದು. ಅದರಲ್ಲಿ ಸಾವಿರಾರು ಮಂಗಳೂರಿನವೇ ಆದ ಕೊರತೆಗಳನ್ನು ಕಾಣಲು ಶಕ್ಯವಿದೆ. ಆದರೆ ನಮ್ಮ ಯಾವ

ಬರಹಗಳೂ ಈ ದೋಷವಿಮೀರಿದುವಲ್ಲ. ಇಂಥ ಮಂಗಳೂರಿನ ಶೈಲಿಯೂ, ಗದ್ಯ ಶೈಲಿಯೂ, ಶ್ರೀ। ಕಾಮತರು, ಶ್ರೀ। ಪಂಜೆಯವರಂಥವರ ದುಡಿಮೆಯ ಪ್ರತಿಫಲ. ಅವರು ಮಕ್ಕಳ ಸಲುವಾಗಿ ಹಲವು ಬರಹಗಳನ್ನು ಬರೆಯದಿರುತ್ತಿದ್ದರೆ ಈ ಶೈಲಿಯೂ ತೋರುತ್ತಿರಲಿಲ್ಲ.

ಇದನ್ನೆಲ್ಲ ಕಾಣುವಾಗ ನಮ್ಮ ಜಿಲ್ಲೆಯವರಾದರೂ—ಕಾಮತರಿಗೆ ಎಷ್ಟು ಋಣಿಗಳಾಗಿರಬೇಕು – ಎಂಬುದನ್ನು ಮನಗಾಣಬಹುದು. ಅವರ ಕವನಗಳು, ಅವರ ನಾಟಕಗಳು, ಅವರ ಕತೆಗಳು—ಅವಿಚ್ಛಿನ್ನವಾಗಿ ನಮ್ಮ ಜಿಲ್ಲೆಯಲ್ಲಿ ಪ್ರಸಾರವಾದುವು. ಹಿಂದೆ ಹೇಳಿದ ಅಷ್ಟೊಂದು ಮಹನೀಯರ ಕೃತಿಗಳನ್ನೂ ಇಂದೇ ನಾವೇರಿದ ಏಣಿಯ ತುದಿಯಿಂದ ನಿಂತು ನೋಡಿ, ಕೆಳವೊಗ ಮಾಡುವುದು ಕಷ್ಟವಲ್ಲ. ಆದರೆ—ಆ ಏಣಿ ಏರಲು ಯಾರು ಬೇಕಾದರು—ಯಾರಿಗೆ ಆ ಋಣ ಸಲ್ಲಬೇಕು—ಎಂದರೆ ಅದರ ಕೆಲವು ಸೋಪಾನಗಳಾದರೂ ಕಾಮತರಿಂದ ಆಯಿತು ಎಂಬುದು ನಿರ್ವಿವಾದ. ಅದರಲ್ಲೂ ಕಾಮತರ ಹೆಚ್ಚಳವೊಂದಿದೆ. ನಮ್ಮ ಹಲವು ಹಿರಿಯರು ತಮ್ಮ ದಿನಗಳಲ್ಲಿ (ಯೌವನದಲ್ಲಿ) ಕನ್ನಡಕ್ಕಾಗಿ ದುಡಿದು—ಶರ ಇಳಿಸಿದರು. ಮುಂದಿನವರಿಗೆ ಉಳಿದ ಕೆಲಸವನ್ನು ಒಪ್ಪಿಸಿ ತಾವು ವಿಶ್ರಾಂತಿ ತಾಳಿದರು. ಮರೆವಿನ ಈ ಜಗತ್ತು ಅವರನ್ನು ಅಷ್ಟು ಕ್ಷಿಪ್ರದಲ್ಲಿ, (ಅವರಲ್ಲಿ ಹಲವರು ಜೀವಂತರಾಗಿದ್ದರೂ) ಮರೆತಿರುವುದು ಸೋಜಿಗವಲ್ಲ. ಆದರೆ ಈ ರೀತಿ ಶಸ್ತ್ರಸನ್ಯಾಸಮಾಡದ ಮೂರು ಮುಖ್ಯ ಹೆಸರುಗಳಿವೆ. ಇಬ್ಬರು ಅವರಲ್ಲಿ ಗತಿಸಿದವರು, ಒಬ್ಬರು ಉಳಿದವರು. ಶ್ರೀ। ಪಂಜೆಯವರು, ಶ್ರೀ। ಕಾಮತರು—ಕೊನೆಯ ಗಳಿಗೆಯ ತನಕ ಕಾಳಗವಾಡಿ ನಲಿದರು. ಶ್ರೀ। ಗೋವಿಂದ ಪೈಗಳು ಇಂದಿಗೂ ನಮ್ಮ ಎದುರಿಗೆ—ವಯಸ್ಸಿನ ಸೊಕ್ಕನ್ನು ಅಡಗಿಸಿ ದಣಿಯುತ್ತಿದ್ದಾರೆ.

ಕಾಮತರ ನೆನಹನ್ನು ಸ್ಮರಿಸುವ ಈ ವೇಳೆ, ನನ್ನ ಅವರ ಪರಿಚಯ, ಪರಿಚಯದ ಪರಿಣಾಮವನ್ನು ಮರೆಯಾಗಿರಿಸಲಾರೆ. ನಮ್ಮಿಬ್ಬರಲ್ಲಿ ಗುರುತು ತೊಡಗಿದುದು 1925ರ ಬಳಿಕ. ಅದು ಸ್ನೇಹಕ್ಕೆ ಬಂದುದು 1928ರ ಬಳಿಕ. ನನ್ನೀ ಹದಿನೆರಡು ಇಲ್ಲವೆ ಹದಿನೈದು ವರ್ಷಗಳಲ್ಲಿ ಕಾಮತರು ನನಗೆ ಒಂದೇ ರೂಪವಾಗಿ ಕಾಣಿಸುತ್ತಿದ್ದಾರೆ. ಅವರ ಗುಂಗುರು ಕೂದಲು, ಭೇಟಿಯಾದಾಗಲೆಲ್ಲ—ಅವರ ಕರಿಬಿಳಿಯ ಹಲ್ಲುಗಳಲ್ಲಡಕವಾದ ಅವಿರತ ನಗು, ಮತ್ತು ಹಾಸ್ಯ ಇವು ಮರೆಯದಾದುವು. ಎಲ್ಲರೊಡನೆ ಮಾತನಾಡುವಾಗಲೂ ಅವರು ಸಮತಾವಾದಿಗಳು. ಠೀವಿ ಜಂಬಗಳಿಲ್ಲದೆ—ಗೆಳೆತನದಿಂದ ಮಾತನಾಡುತ್ತಿರುವುದು ಅವರ ಶೀಲ. ಮಾತನಾಡಿದಾಗ ನಗದ ಗಳಿಗೆಯಿಲ್ಲ; ನಕಲಿ ಮಾಡದ ಗಳಿಗೆಯೂ ಇಲ್ಲ. ಹೀಗಾಗಿ ಕಾಮತರ—ಬುದ್ಧಿವಾದಕ್ಕೆ ಯಾರು ಮರುಳಾಗದಿದ್ದರೂ, ಅವರ ಮಾತು ಉಪ

ನ್ಯಾಸ ಯಾರಿಗೂ ಬೇಸರ ಹುಟ್ಟಿಸಲಿಲ್ಲ. ನಾಲ್ಕು ತಾಸು ಮಾತನಾಡಿದರೂ ಕೇಳುವ—ಎಂಬ ಬಯಕೆ ಆಗುತಿತ್ತು. ಕಾರಣ—ಅವರು ಸ್ವತಂತ್ರವಾದ ಒಂದು ಲಘು ಹಾಸ್ಯದ ತವರುಮನೆಯಾಗಿದ್ದರು. ಈ ಲಘು ಹಾಸ್ಯದ ಮಹತ್ತ್ವವನ್ನು ನಾನು ಕಾಮತರಲ್ಲಿ ವಿಶೇಷವಾಗಿ ಕಂಡೆನು.

ಮೊದಮೊದಲು ಅವರ ನಗು, ಹರಟೆಗಳು ನನಗೆ ಆನಂದವನ್ನುಂಟು ಮಾಡಿದರೂ, ನನ್ನ ಪ್ರಕೃತಿಗೆ, ಕೊನೆಯ ತನಕ ಅದು ಸರಿಯಾದ ಬಗೆ ಎಂದು ಅನಿಸಲಿಲ್ಲ. ನಡುವೆ ಎಷ್ಟೋ ಸಮಯ ಕಾಮತರದು "ಹರಟೆಯೇ" ಆಯಿತಲ್ಲ—ಅದನ್ನು ಮೀರಲಾರರೇ—ಅವರು?" ಎಂದು ನಾನು ಟೀಕಿಸಿದ್ದುಂಟು, ನೊಂದುದುಂಟು. ಕಾರಣ—ನನಗೆ ಅವರ ಮನೋಧರ್ಮ ಬಳೆದು ಬಂದ ಆವರಣದ ಪರಿಚಯವಿಲ್ಲ. ನನ್ನೀ ನೋವಿನ ಕಾರಣವೆಂದರೆ—ನಮ್ಮ ಜಿಲ್ಲೆ, ಹೊರಗಿನ ಕರ್ನಾಟಕದಲ್ಲಿ ತಲೆಯೆತ್ತಿ ಚಲಿಸಬೇಕೆಂಬ ಲವಲವಿಕೆ. ಅಷ್ಟು ಮೊದಲಿಗರಾಗಿ ಕನ್ನಡದಲ್ಲಿ ದುಡಿದ ಕಾಮತರನ್ನು, ಈಗಿನವರು ತಮ್ಮಲ್ಲಿಗೆ ಬರಮಾಡಿಕೊಂಡು ಕರೆಯಬೇಕೆಂಬ ಆತುರ. ಅದರಿಂದಲೇ ಒಂದೆರಡು ಬಾರಿ "ಏನಾದರೊಂದು ಉಳಿಯುವ ಕೆಲಸ ಮಾಡಬಾರದೇ"—ಎಂದು ಅವರೊಡನೆ ನಾನು ಹೇಳಿದ್ದುಂಟು. ಆ ಮಾತಿನ ಬಯಕೆ ಹೀಗಿತ್ತು! ಶಾಲೆ ಪುಸ್ತಕಗಳು, ಪತ್ರಿಕೆಯ ಬರಹಗಳು—ಬಹುಬೇಗ ಮಾಯವಾಗುವುವು. ಅದನ್ನು ಮೀರಿದ ನೆನಹು ನಮಗೆ ಕಾಮತರ ವಿಷಯವಾಗಿ ಉಳಿಯಬೇಕೆಂದು. ಇದಕ್ಕೆ ಎಷ್ಟೋ ಬಾರಿ ಕಾಮತರು "ಮಾಡುವಾ, ಮಾಡುವಾ" ಅನ್ನುತ್ತಿದ್ದರು. ಈ ನನ್ನ ಕಾಂಕ್ಷೆಯಿಂದಲೇ ಒಮ್ಮೆ ನಾನವರನ್ನೇ ಬೆಂಗಳೂರಿನ ವಸಂತೋತ್ಸವಕ್ಕೆ ಬನ್ನಿರೆಂದು ಪ್ರೇರಿಸಿದ್ದೆ. ಅವರು ಕನ್ನಡ ಜಿಲ್ಲೆಯ ಗೂಡಿಂದ ಹೊರಗೆ ಬರಬೇಕು—ಎಂಬ ಆಸೆ ನನಗೆ.

ಇತ್ತ "ಏನಾದರೊಂದು ಉಳಿಯುವ ಸಾಹಿತ್ಯ" ಎಂಬುದರ ಬಗ್ಗೆ ಒಂದು ದಿನ ಮಾತಿನಲ್ಲಿ ನನಗೆ ಉತ್ತರ ಬಂದಿತು. "ಕಾರಂತರೇ ನೀವನ್ನುವುದೆಲ್ಲ ಸಮ ನೋಡಿ—ಆದರೆ ಎಲ್ಲಕ್ಕಿಂತ ಅಡುಗೆ ಸಾಹಿತ್ಯ ಬಹಳ ದೊಡ್ಡದಲ್ಲವೆ!" ಎಂದರು. ಅಂದಿನ ತನಕ ನಾನು ಕಾಮತರ ಹಿನ್ನೆಲೆಯ ವಿಚಾರ ಗಮನವಿರಿಸಿದವನಲ್ಲ. ಈ ಮಾತು ನನ್ನನ್ನು ಅಲ್ಲಿಗೆ ಒಯ್ದಿತು. ಅವರ ಯಾವತ್ತು ದುಡಿಮೆ ಜನರ ಜಡತೆ, ತನ್ನ ಬಡತನ, ವಿಶೇಷ ಸಂಸಾರತಾಪತ್ರಯ, ಸಾಲದುದಕ್ಕೆ ಆಗಾಗ ಪೀಡಿಸುವ ಶರೀರದ ಬೇನೆ—ಇವುಗಳ ಎಡೆಯಲ್ಲಿ ನಡೆಯುತ್ತಿತ್ತು ಎಂಬುದನ್ನು ನಾನು ಮನಗಂಡೆ. ಅವರನ್ನು ಪ್ರತಿಭಟಿಸಿ ನಿಂತ ದಾರಿದ್ರ್ಯ, ಸಂಕಟಗಳ ಮುಂದೆ ಮನುಷ್ಯನಿಗೆ ಎರಡು ಮುಖ್ಯ ಹಾದಿಗಳಿವೆ. ಒಂದೊ ಕುಗ್ಗಿ, ನಿರುತ್ಸಾಹಿಯಾಗಿ ಮೆಲ್ಲಗೆ ಸಾಯಬೇಕು—ಇಲ್ಲವೆ ಹಣಗಳಿಸಿ, ಬಡತನ ತುಳಿದು ಹೇಗಾದರೂ ಬದುಕಬೇಕು.

ಮೊದಲನೆಯದನ್ನು ಅವರು ಸಾಯುವ ತನಕವೂ ಮಾಡಲಿಲ್ಲ. ಲೆಕ್ಕಣಿಕೆ ಗುಲಾಮನಿಗೆ ಎರಡನೆಯ ಅಂತಸ್ತು ಕನ್ನಡ ನಾಡಿನಲ್ಲಿ ಸಿಗುವುದು ದುರ್ಲಭ. ಅವರ ಮಾಸ್ತರಿ ಪದವಿಯು ಅವರನ್ನು ದಾರಿದ್ರ್ಯದಿಂದ ಪಾರಾಗಿಸುವಂಥದೇ? ಆದರೆ ಜೀವನದಲ್ಲಿ ಸೋಲಲಾರದ ಅವರು ತಮ್ಮ ಜಯಕ್ಕೆ ಹಿಡಿದ ಹಾದಿಯೇ ಬೇರೆ. ಅದೇ "ನಗು." ಅವರು ತಮ್ಮೆಲ್ಲ ದುಃಖಗಳನ್ನು, ಕಷ್ಟಗಳನ್ನು ಕಂಡು ನಗಲು ಕಲಿತರು, ಕೊರಗು ಎಷ್ಟಿದ್ದರೂ ಆ ನಗು ಅದನ್ನು ಮಾಯಿಸುವಷ್ಟು ಪ್ರಬಲ ಶಕ್ತಿ ಆಗಿ ಬೆಳೆದಿರಬೇಕು. ಕೊನೆತನಕ ಅವರ ಜೀವನಕ್ಕೆ ನಗು—ಒಂದು ಮನೋಧರ್ಮವಾಗಿ ಪರಿಣಮಿಸಿರದಿದ್ದರೆ, ಕಾಮತರ ಬರವಣಿಗೆಯಂತು ಎಷ್ಟೋ ಹಿಂದೆಯೇ ಮುಗಿದಿರಬೇಕಿತ್ತು.

ಅವರ ನಗುವಿನ ಸತ್ಯ ನಾನು ಚೆನ್ನಾಗಿ ಮನಗಂಡುದು—ಅವರ ಮೃತ್ಯುಶಯ್ಯೆಯಲ್ಲೇ. ಅವರು ಕೊನೆಗಾಣುವ ಒಂದು ವಾರದ ಮೊದಲು ನಾನವರ ಮನೆಗೆ ನೋಡಲು ಆತುರನಾಗಿ ಹೋಗಿದ್ದೆ. ಅವರನ್ನು ಕಾಡುತ್ತಿದ್ದ ಜಲೋದರ, ಅವರ ಶಕ್ತಿ ಕುಗ್ಗಿಸಿ ಕಷ್ಟ ಕೊಡುತ್ತಿದ್ದರೂ, ಶರೀರವನ್ನು ಎಳೆದು ಕುಳ್ಳಿರಿಸಿಕೊಂಡು,—ನನ್ನೊಡನೆ ಕ್ಷೇಮಸಮಾಚಾರ ತೊಡಗಿದರು. "ನೀವು, ನಿಮ್ಮ ಮನೆಯವರು, ನಿಮ್ಮ ಮನೆ ನಾಯಿಗಳು"—ಎಲ್ಲವನ್ನು ವಿಚಾರಿಸಿದರು. ಕೊನೆಯವುಗಳನ್ನು ಅವರು ನಾಲ್ಕು ತಿಂಗಳ ಮೊದಲು ಕಂಡಿದ್ದರು. ಅವರೇನು ಶುನಕಪ್ರಿಯರಲ್ಲ. ಆದರೂ ಆ ಲಘುಬಗೆಯಲ್ಲಿ ನಾಯಿಗಳ ಕ್ಷೇಮ ಕೇಳುವ ಆತುರ ಉಳಿಯಿತು. ಎರಡು ದನದ ಬಳಿಕ ನನ್ನ ಹೆಂಡತಿ ಅವರನ್ನು ಕಾಣಲು ಹೋದಾಗ—ಒಂದು ತಾಸಿನ ನಗುವಿನ ಔತಣವನ್ನೇ ಉಣಿಸಿದರಂತೆ. ತಮ್ಮ ಮನೆಯ ನೆರೆಕೆರೆಯ ಒಬ್ಬರು ಎಷ್ಟು ಗದ್ದಲಪ್ರಿಯರೆಂಬುವದನ್ನು ಕುರಿತು ಬಣ್ಣಿಸಿ ಬಣ್ಣಿಸಿ—ನಗಿಸಿದರು. ಆ ಅಶಾಂತಿ ಅವರ ಶರೀರದ ಬೇನೆಗೆ ಶೂಲವಾಗಿದ್ದರೂ, ಅದನ್ನು ನಗುವಿನಲ್ಲಿ ಮರೆಯಿಸಿದರು. ಇದಾದ ಒಂದೆರಡು ದಿನಗಳಲ್ಲಿ ಕಾಮತರು ಇಲ್ಲವಾದರು ಎಂಬುದನ್ನು ತಿಳಿದರೆ ಆಗ ಅವರ 'ನಗು'ವಿನ ಅಳತೆ ನಮಗೆ ತಿಳಿದೀತು. ಅವರ ಕೊನೆಗಾಲ ಬೇನೆಯಿಂದ ಎಷ್ಟೋ, ವ್ಯಥೆಯಿಂದಲೂ ಅಷ್ಟೇ ತುಂಬಿತ್ತು. ಆ ಗಳಿಗೆಯಲ್ಲೆಲ್ಲ "ನಗುವು" ಉಕ್ಕೇರಲು—ಎಸ್ಟು ಎದೆಗಾರಿಕೆ ಬೇಡ? ನಗು, ಲಘು ಹಾಸ್ಯ ಅವರಲ್ಲಿ ರಕ್ತಗತವಾಗಿ ಬಂದ ಸಂಪತ್ತುಗಳು. ತಮ್ಮ ದುಃಖವನ್ನು ಮರೆಯಲು ಉಕ್ಕಿ ಬರುತ್ತಿರುವ ಅವರ ಹಾಸ್ಯವು, ಪರರಿಗೆ ಸಂತೋಷ ಕೊಟ್ಟುದರಲ್ಲಿ ಆಶ್ಚರ್ಯವೇನು?

ಈಗ ನನ್ನ ಆರೋಪ—'ಕಾಮತರ ಕೃತಿಗಳು ವಿಶೇಷ ವಿಚಾರತೀವ್ರತೆಯಿಂದ ತುಂಬಿಲ್ಲ'ವೆಂದು. ಅದು ಅವರ ಜೀವನದ ಹಿನ್ನೆಲೆಯನ್ನು ಎಣಿಸಿದರೆ ಅಸಾಧ್ಯ

ವಾಗಿತ್ತು; ಬದಲು ಅವರು ಸೋಲಿಗೆ ಶರಣಾಗಬೇಕಿತ್ತು. ಅಂಥ ಜೀವನವನ್ನು ಅವರು ಲಘುಹಾಸ್ಯದಿಂದ ಪಾರುಗಾಣಿಸಿದರೆಂದು ನನಗನಿಸುವುದು. ಜೀವನದಲ್ಲಿ ನಗು ಬೇಕೇ, ಲಘುಹಾಸ್ಯ ಬೇಕೇ, ಅಣಕಬೇಕೇ—ಎನ್ನುವವರಿಗೆ ಕಾಮತರ ಜೀವನವೇ ಒಂದು ಉತ್ತರವೆನ್ನುತ್ತೇನೆ.

ಕಾಮತರ ವ್ಯಕ್ತಿತ್ವ, ಅವರ ಕೃತಿಗಳು, ಅವುಗಳ ವಿಮರ್ಶೆ ನನಗಿಂತ ಅರಿತವರು, ಹಿರಿಯರು ಆದ ಶ್ರೀ ಗೋವಿಂದ ಪೈಗಳವರು ಮಾಡಿದ್ದಾರೆ. ನಾನು ಅವರನ್ನು ಆ ರೀತಿ ವಿಮರ್ಶೆಮಾಡಲಾರೆ, ಅವರ ಜೀವನದ ಹಾಳೆಗಳು ಕೆಲವನ್ನು ಕಂಡು, ನನಗೆ ಹೊಳೆದುದನ್ನು ಹೇಳಿದ್ದೇನೆ.

ಕನ್ನಡ ನಾಡು—ಅವರನ್ನು ಪ್ರಥಮ ಕಥೆಗಾರರ ಸಮ್ಮೇಳನದ ನಾಯಕರನ್ನಾಗಿ ಮಾಡಿ, ತುಸುವಾದರೂ ಋಣಪರಿಹರಿಸಿಕೊಂಡಿತು. ಬಲು ನಿಧಾನವಾಗಿ ದೊರೆತ ಈ ಸನ್ಮಾನವು ಅಪಾತ್ರದಲ್ಲಿ ಅರ್ಪಿತವಾಗಿಲ್ಲ ಎಂದೆನ್ನಬಲ್ಲೆ. ಅವರಾದರೂ ಅದರಿಂದ ತುಷ್ಟರಾಗಿದ್ದರು. ನಾನು ಅವರನ್ನು ಕೊನೆಯಲ್ಲಿ ಕಂಡಾಗ—ಬೆಂಗಳೂರಲ್ಲಿ ತೆಗೆದ ಭಾವಚಿತ್ರವೊಂದು ಗೋಡೆಯ ಮೇಲೆ ತೂಗುತ್ತಿತ್ತು. ಅದನ್ನು ಬೆರಳಿಟ್ಟು ತೋರಿಸಿ—'ಅದೊಂದು, ಇದೊಂದು' ಪಡೆದು ಬಂದೆ ಎಂದರು. ಒಂದು ಗೌರವದ ಭಾವಚಿತ್ರ, ಇನ್ನೊಂದು ನೆಲಹಿಡಿಸಿದ ಬೇನೆ!" ಎಷ್ಟು ಮಾರ್ಮಿಕ ಮಾತುಗಳು! ಆ ಮಾತನ್ನಾಡುವಾಗ ಒಂದು ರೀತಿಯ ಮರುಕ ಕಾಣಿಸದರಲಿಲ್ಲ. ಈ ನೆನಪಿನ ಅರ್ಪಣೆ ಮಾಡುವಾಗ ನನ್ನ ಒಂದೇ ಕೊರಗೆಂದರೆ—ಅವರ ಬಾಳು ಬಡತನದ ಬಾಳಿಗೆ ಬಲಿಯಾಗಿರದಿರುತ್ತಿದ್ದರೆ, ಅವರು ಮಾಡಿದ ಇಷ್ಟೇ ಕೆಲಸಕ್ಕೆನೆ, ಇನ್ನೂ ಹೆಚ್ಚಿನ ಆದರಕ್ಕೆ ನಮ್ಮ ನಾಡಿನಲ್ಲಿ ಪಾತ್ರರಾಗುತ್ತಿದ್ದರು. ಆದರೆ ನಮ್ಮ ನಾಡು ಇನ್ನೂ "ಬಡವನ ಬಾಳಿನ" ಚೆಲುವನ್ನು ಮನ್ನಿಸಲು ಕಲಿತಿಲ್ಲ.

ಹೇಗೂ ಇರಲಿ—ಕಾಮತರ ಋಣ, ದಕ್ಷಿಣ ಕನ್ನಡದ ಈಗಿನವರು ಎಂದೂ ಮರೆಯಬಾರದಾದ್ದು—ಎಂದು ಮಾತ್ರ ದೃಢವಾಗಿ ನುಡಿಯಬಲ್ಲೆ.

**ಶಿವರಾಮ ಕಾರಂತ**

# ಶ್ರೀಯುತ ಎಂ. ಎನ್. ಕಾಮತ್ ಅವರು

ಬಾನಿನಾಚೆಗೆ ನೋಟ, ಯುಗದ ಕೊನೆಗೂ ಓಟ,
ತಾನೆಂಬುದೆಲ್ಲದೆಂಬಾ ನಂಬುಗೆಯ ಶಾಂತಿ
ಉಸಿರಾಗೆ, ಚಿತ್ತವೇ ಸೊತ್ತಾಗೆ, ಗೈಮೆಯೇ
ಹೆಸರಾಗೆ, ನರನಾಗಿ ಪುಟ್ಟಿದುದೆ ಸಿರಿಯಾಗೆ,
ಬೆವರಮಳೆ ಸುರಿಯುವಧಿಕಾರವೇ ಅರಸಾಗೆ,
ತವರೂರಿಗೈದುವಂತೊಂದು ದಿನ ಪೋಪಂತೆ,
ಅಳಿದರೂ ಉಳಿದವರ ನಾಡಿಯಲಿ ನಲಿವಂತೆ,
ಕಡಿದಂತೆ ಚಿಗುರುವಶ್ವತ್ಥಗಳ ಜೀವನವ
ಬೇಡುವೆವು. ಇದೆ ನಮ್ಮ ಬೇಡಿಕೆಯೊ ಬಯಕೆಯೋ?

ಹೀಗೆಂದು ಹಿಂದೆ ಹಾಡಿದ ಕವಿ ಇಂದಿನ ಸ್ವಾತಂತ್ರ್ಯಯುಗದಲ್ಲಿ ಮದ್ರಾಸಿನ ಮಂತ್ರಿಮಂಡಲದಲ್ಲೊಬ್ಬನಾಗಿರಬೇಕಾಗಿತ್ತೆಂದು ಯಾರಾದರೂ ಹೇಳಬಹುದು. ಆದರೆ ಆ ಕವಿ ಇಂದೊಬ್ಬ ಬಡ ಉಪಾಧ್ಯಾಯರಾಗಿರುವರೆಂದರೆ, ಅವರು ಕ್ರಾಂತಿಕಾರಕ ಯುವಕರನ್ನು ಸಿದ್ಧಗೊಳಿಸುವುದಕ್ಕಾಗಿಯೆ ತಮ್ಮ ಜೀವಭಾವದ ಹುಮ್ಮಸನ್ನು ಒತ್ತಿಟ್ಟು, ನಾಡಿನೇಳಿಗೆಯ ದೃಷ್ಟಿಯಿಂದಲೆ ಅವರು ಉಪಾಧ್ಯಾಯರಾಗಿದ್ದಾರೆಂದು ಊಹಿಸಬಹುದು. ಈ ಕವಿವಾಕ್ಯಗಳನ್ನೋದುವಾಗ ಕವಿ ಬಹು ಉಗ್ರ ಸ್ವಭಾವದ ಕ್ರಾಂತಿಕಾರಕನೆಂದಾರೂ ತಿಳಿಯಬಾರದು. ಇದನ್ನು ಹಾಡಿದವರು ನನ್ನ ಮಿತ್ರರಾದ ಶ್ರೀಮಾನ್ ಎಮ್. ಎನ್. ಕಾಮತ್ ಅವರು. ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಅವರು ಉಪಾಧ್ಯಾಯರಾಗಿರುವರು. ಇದಕ್ಕೆ ಮೊದಲು ಇವರು ಬಂಟ್ವಾಳದಲ್ಲಿ ಉಪಾಧ್ಯಾಯರಾಗಿದ್ದರು. ಈಗ್ಗೆ ೩೪ ವರುಷಗಳ ಹಿಂದೆ 'ಕರ್ಣಾಟಕ ಸಾಹಿತ್ಯ ಪರಿಷತ್ತು' ಸ್ಥಾಪಿತವಾದಾಗ ಪರಊರಿನಿಂದ ಬಂದಿದ್ದ ಅತಿಥಿಗಳಿಗಾಗಿ ಏರ್ಪಡಿಸಿದ್ದ ಸೆಂಟ್ರಲ್ ಕಾಲೇಜಿನ ಹಾಸ್ಟೆಲಿನಲ್ಲಿ ಎಮ್. ಎನ್. ಕಾಮತರು 'ಸ್ವದೇಶಾಭಿಮಾನಿ'ಯ ಸಂಪಾದಕರಾಗಿದ್ದ ದಿವಂಗತ ಶ್ರೀ|| ವಿ. ಶ್ರೀನಿವಾಸ ಕಾಮತ್, ಈಗ ಕಂಠೀರವದ ಉಪಸಂಪಾದಕರಾಗಿರುವ ಶ್ರೀ|| ಹುರುಳಿ ಭೀಮರಾವ್, 'ಶ್ರೀ ಕೃಷ್ಣಸೂಕ್ತಿ'ಯ ಸಂಪಾದಕರು ಶ್ರೀ|| ಎನ್. ರಾಜಗೋಪಾಲ ಕೃಷ್ಣರಾವ್ ಇವರೊಂದಿಗೆ ಇಳಿದುಕೊಂಡಿದ್ದರು. ಎಲೆ ಅಡಿಕೆಯ ಚಂಚಿ (ಸಂಚಿ)ಯನ್ನು ಬಿಚ್ಚಿ ತಾಂಬೂಲವನ್ನು ಸವಿಯುತ್ತ ಮೆಲ್ನಗೆಯನ್ನು ಸೂಸುತ್ತ ಎಮ್. ಎನ್. ಕಾಮತರು ಮಿತ್ರರನ್ನು ವಿನೋದಗೊಳಿಸುತ್ತ ಕೂತಿದ್ದರು. ಅಂದು ಅವರು ಕನ್ನಡನಾಡಿನ ಶುಭೋದಯದ ಕಿರಣಗಳನ್ನು ಕಂಡಂತೆ ನಲಿಯುತ್ತಿದ್ದರು.

ಆ ಸಮಯಕ್ಕೆ ಮುಂಚೆಯೇ ಕಾಮತ್ ಅವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಗ್ರಂಥಗಳನ್ನು ರಚಿಸಿ, ಸಾಹಿತಿಗಳೆಂದು ಹೆಸರಾಗಿದ್ದರು. ಶ್ರೀಯುತರು ಇಂಟರ್‌ಮೀಡಿಯೇಟ್ (ಆಗ ಎಫ್. ಎ.) ಶಿಕ್ಷಣವನ್ನು ಮುಗಿಸಿ, ಬಡತನದಿಂದಲೂ ಸಂಸಾರ ತಾಪತ್ರಯದಿಂದಲೂ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲಾಗದೆ, ಬಡ ಉಪಾಧ್ಯಾಯ ವೃತ್ತಿಯನ್ನು ಕೈಕೊಂಡರು. ಅಂದಿನಿಂದ ಇಂದಿನ ವರೆಗೆ ಅವರು ಆ ವೃತ್ತಿಯಲ್ಲಿಯೆ ಇದ್ದು ಕನ್ನಡನುಡಿಯ ಸೇವೆಯನ್ನು ಎಡೆಬಿಡದೆ ಸತತವಾಗಿ ಮಾಡುತ್ತಿರುವರು. ಇವರದು ತುಂಬುಸಂಸಾರ, ಮನೆ ತುಂಬ ಮಕ್ಕಳು, ಬಡತನ. ಇದರ ಮಧ್ಯದಲ್ಲಿ ಸಾಹಿತ್ಯಸೇವೆಯ ಹಿರಿಯಾಸೆ; ಅದರೊಂದಿಗೆ ಜನರಲ್ಲಿ ವಿದ್ಯಾಪ್ರಚಾರ ಮಾಡಬೇಕೆಂತಲೂ ಪ್ರಯತ್ನ; ಇವೆಲ್ಲ ಸಂಸಾರ ಕಷ್ಟಗಳ ಮಧ್ಯೆ, ಬಡತನದಲ್ಲಿದ್ದು, ಅವರಷ್ಟು ನುಡಿಸೇವೆ ಗೈದಿರುವವರು ಕನ್ನಡ ನಾಡಿನಲ್ಲಿ ಸಿಕ್ಕುವುದು ವಿರಳ. ಕಾಮತರು ಕೇವಲ ಸಾಹಿತಿಗಳು, ಉಪಾಧ್ಯಾಯರು, ಮಾತ್ರವಲ್ಲ, ಕವಿಗಳೂ ಮನಶ್ಶಾಸ್ತ್ರಜ್ಞರೂ ಆಗಿದ್ದಾರೆ. ಅಂತೆಯೆ ಅವರು ಇಂದಿನ ಶ್ರಮಜೀವಿಗಳ ಜೀವಭಾವವರಿತು ನಮ್ಮ ಬೇಡಿಕೆ ಎಂಬ ಕವನದಲ್ಲಿ ಮೇಲೆ ಕೊಟ್ಟಿರುವ ವಾಕ್ಯಗಳನ್ನು ಹಾಡಿರುವರು. ಇಂದಿಗೂ ಅವರು ಬಡ ವೃತ್ತಿಯಿಂದಲೇ ತೃಪ್ತರಾಗಿ, ಸಂಸಾರರಥವನ್ನೂ ದೂಡುತ್ತ ಶ್ರಮಜೀವಿಗಳ ತೃಪ್ತಿಭಾವವನ್ನು ಬಂಡಿ ಎತ್ತು ಎಂಬ ಕವನದಲ್ಲಿ ಹೀಗೆ ಸೂಚಿಸಿರುವರು:—

೨. "ಮೂಗುದಾಣದ ಗೊತ್ತು, ಬಾರುಕೋಲಿನ ಒತ್ತು,
ರಾಗದಿಂದೋಯೆಂಬ ಧನಿಯು ಕೊರಲದನಿ;
ತೂಗಿಡುವ ಕಾಲ್ಪಟ್ಟಿ ಕೊರಲಗೆಜ್ಜೆಗಳ ಜತೆ—
ಸಾಗೆ, ಸಾಗುವ ದಾರಿ ಎಷ್ಟಿದ್ದರೇನು?

೩. ಮಳೆ—ಬಿಸಿಲು—ಚಳಿ—ಗಾಳಿ—ಮುಗಿಲು ಸಿಡಿಲೆಂದಿಲ್ಲ
ಹೊಳೆ—ಸಂಕ—ದಿನ್ನೆ—ಬಯಲೆಂಬುದಿಲ್ಲ;
ಬೆಳಗು—ನಡುವಗಲು—ಬೈಗುಗಳಿಲ್ಲ, ಇರುಳಿಲ್ಲ,
ಬೆಳದಿಂಗಳೆಂದಿಲ್ಲ;—ಬೇರೆ ಮಾತಿಲ್ಲ.

೪. ಬತ್ತವೊ, ಬಿತ್ತವೊ, ಹತ್ತಿಯೊ, ಕತ್ತಿಯೊ,
ಸತ್ತ ಮತ್ತೊಂದೆತ್ತೊ, ಕಲ್ಲೊ—ಹುಲ್ಲೋ?
ಹತ್ತಿದಾ ಧನಿ ಮೂಗುದಾಣ ಹಿಡಿದಾಯೆನಲು,—
ಹೊತ್ತು ಸಾಗಲು,—ನಮ್ಮ ಹೊತ್ತು ಸಾಗುವುದು.

೫ ಏಕೆ, ಈಗೇಕೆ, ಮುಂದೆಲ್ಲಿಗೆಂಬುದನರಿಯೆ;
ಚೋಕಿ ನೋಡುವ ಧನಿಯು ಬಯಕೆಯದೆ ಸಾಕು;

ಆ ಕೈಯ ಚಾಟಿಯನು ಕಣ್ಗೊನೆಯು ನೋಡುತಿರೆ,
ಆ ಕೊರಲದನಿಗೆ ಕಿವಿಯೊಡ್ಡಿದರೆ ಸಾಕು.

೬. ಯಾರ ಸರಕನು ಯಾರು ಕೊಡುವರೊ, ಕೊಳ್ಳುವರ—
ದಾರೊ? ಮೋಟಾರಿಗಿದರುಪಯೋಗವೋ?
ಊರ ಜನರ ಸುಖವಿಹಿತ ವಿತರಣೆಯ ಊಳಿಗದ,
ದಾರಿ ಸವೆದಂತೆ ಜೀವನವ ಸವೆಯುವೆವು.

೭. ನೊಗವ ತಪ್ಪಿಸಿ ಧನಿಯ ಕೈಬಿಟ್ಟು ಸ್ವೇಚ್ಛೆಯಲಿ
ಬಗೆದಂತೆ ತಿರುಗಿ ತಿರುಗಾಳಿಯಾಗಿ,
ಹಗುರವಾದೊಂದು ಹುಲ್ಲಿಗೆ ಹಗುರ ತಾನಾಗಿ
ನಗೆಗೀಡು ದೊಡ್ಡಿಯಲಿ ಸಾಯಬಹುದು.

೮. ಧನ್ಯವೀ ಧನಿಗಾಗಿ ದುಡಿವ ಬಡತನ ಭಾಗ್ಯ!
ತನ್ನಾಳ ವಿಶ್ವಾಸ ದುಡಿದ ಧನಿ ಧನ್ಯಂ;
ಧನ್ಯ ಕಲ್ಯಾಣ ಪ್ರಚಾರದೀ ಹೋರಾಟ;

..........................................................

ಇದರಲ್ಲಿ ಶ್ರೀ. ಕಾಮತರು ಸ್ವಾಮಿಭಕ್ತನಾದ ಶ್ರಮಜೀವಿಯ ತೃಪ್ತಿಭಾವವನ್ನು ತೋರಿರುವರು. ಇಂದು ಅವರೂ ಅದೇ ತೃಪ್ತಿಭಾವದಿಂದ ತಮಗೊದಗಿದ, ಒದಗುತ್ತಿರುವ ಕಷ್ಟಪರಂಪರೆಗಳನ್ನು ತೃಣಕ್ಕಿಂತಲೂ ಅಲ್ಪವಾಗಿ ಭಾವಿಸಿ, ಮಕ್ಕಳ ಶಿಕ್ಷಣದ, ಸಾಹಿತ್ಯ ಸೇವೆಯ ಕಾರ್ಯವನ್ನು ಮುಂದರಿಸುತ್ತಿರುವರೆಂದು ಹೇಳಬಹುದು. ಕಾಮತರು ಎಷ್ಟು ಪುಸ್ತಕಗಳನ್ನು ಬರೆದಿದ್ದಾರೆಂದು ಕೇಳಿದರೆ ಹೇಳುವುದು ಕಷ್ಟ. ಏಕೆಂದರೆ ಅವರ ಪ್ರಕಟವಾಗಿರುವ ಪುಸ್ತಕಗಳಿಗಿಂತಲೂ ಹೆಚ್ಚಾದ ಸಂಖ್ಯೆಯ ನಾಟಕಗಳು, ಕಥೆಗಳು, ಕವನಗಳು, ಪ್ರಬಂಧಾದಿ ಹಸ್ತಪತ್ರಿಗಳು ಅವರ ಬಳಿ ಬೇಕಾದಷ್ಟು ಇರುವುವು. "ಇವತ್ತು ೬೦ ಏಕಾಂಕ ನಾಟಕಗಳನ್ನು (ಮಕ್ಕಳಿಗಾಗಿ) ಬರೆದಿರುವೆನೆಂದು" ನನಗೆ ಒಂದು ಪತ್ರದಲ್ಲಿ ಬರೆದಿದ್ದರು. ಉಪಾಧ್ಯಾಯ ವೃತ್ತಿಗೆ ಬೇಕಾಗುವ ಸಾಹಿತ್ಯ ಕೃತಿಗಳು ಅವರಲ್ಲಿ ಹೇರಳವಾಗಿವೆ. ಮತ್ತೆ, ಶಾಲಾ ವಾರ್ಷಿಕೋತ್ಸವಗಳಲ್ಲಿ ಶಾಲಾ ಮಕ್ಕಳಿಂದ ಆಡಿಸುವ ನಾಟಕಗಳನ್ನು ಅವರೆಷ್ಟೋ ಬರೆದಿದ್ದಾರೆ. ಅವರ ಪ್ರಕಟಿತ ಪುಸ್ತಕಗಳಲ್ಲಿ—ಬಾಲಕರ ಮಹಾಭಾರತ, ಆರ್ಯಮತೋಪಾಖ್ಯಾನ, ಕರ್ಣನ ಕಥೆ, ನಾಗಾನಂದ ನಾಟಕ ಕಥೆ, ಗದಾಯುದ್ಧ ಕಥೆಗಳು ಶಾಲೆಯ ಮಕ್ಕಳ ಪ್ರಪಂಚದಲ್ಲಿ ವಿಶೇಷ ಪ್ರಚಾರದಲ್ಲಿರುವುವು. ಕಾಮತರು ಬಂಗಾಳಿ ಭಾಷೆಯನ್ನೂ ಬಲ್ಲರು. ಬಂಗಾಳಿ ಸಾಹಿತ್ಯದಿಂದ ಅನೇಕ ಕಥೆಗಳನ್ನೂ ರವೀಂದ್ರನಾಥರ ಪದ್ಯಗಳನ್ನೂ ಭಾಷಾಂತರಿಸಿರುವರು. ಇಂಗ್ಲಿಷಿನಿಂದಲೂ ಕೆಲವು

ಕಥೆಗಳನ್ನೂ ಭಾಷಾಂತರಿಸಿರುವರು. ಇವುಗಳಲ್ಲಿ "ಮಾರ್ಜಿ", "ದಿವಂಗತ", "ಯೋಗಕ್ಷೇಮ" ಎಂಬಿವೆ ಮೊದಲಾದವು ಕಂಠೀರವ ಮತ್ತು ಸ್ವದೇಶಾಭಿಮಾನಿ ಪತ್ರಿಕೆಗಳ ದಸರಾ ಸಂಚಿಕೆಗಳಲ್ಲಿ ಪ್ರಕಟವಾಗಿವೆ.

ಶ್ರೀಯುತ ಕಾಮತರು ಪತ್ರ ಸಂಪಾದನ ಕಲೆಯಲ್ಲಿಯೂ ತಮ್ಮ ವೈಶಿಷ್ಟ್ಯವನ್ನು ತೋರಿರುವರು. ಮಂಗಳೂರಲ್ಲಿ ಕಂಠೀರವ ಪತ್ರಿಕೆಯು ಹೊರಟಾಗ ಅವರು, ಅದರಲ್ಲಿ ಯಾವ ಭಾಗವಹಿಸಿದ್ದರೆಂಬುದನ್ನು (ಹಿಂದೆ ಶ್ರೀ ರಾಜಗೋಪಾಲ ಕೃಷ್ಣರಾಯರ ಪರಿಚಯದಲ್ಲಿ) ತಿಳಿಸಿರುವೆನು. ಅದಕ್ಕೆ ಮುಂಚೆ ಅವರು ಮುಖ್ಯ ಸಂಪಾದಕರಾಗಿ ಶೈಕ್ಷಣಿಕ ವಿಷಯದ "ಬೋಧಿನೀ" ಎಂಬ ಮಾಸಪತ್ರಿಕೆಯನ್ನು ಹೊರಡಿಸುತ್ತಿದ್ದರು. ಆ ಪತ್ರಿಕೆಯಂತಹ ಆದರ್ಶ ಶೈಕ್ಷಣಿಕ ಪತ್ರಿಕೆಯು ಕನ್ನಡ ನಾಡಿನಲ್ಲಿ ಮತ್ತಿನ್ನೂ ಹುಟ್ಟಿಲ್ಲವೆಂದು ಹೇಳಬಹುದು. ಆ ಬಗೆಯಿಂದ ಅವರು ಪತ್ರಕಲಾ ಸಂಪಾದನೆಯಲ್ಲಿಯೂ ತಮ್ಮ ಅಭಿರುಚಿಯನ್ನು ಕನ್ನಡ ನಾಡಿಗೆ ತೋರಿರುವರು. ಕಾಮತರ ಜೀವನವು ವಿನೋದಪ್ರಿಯನಾದುದರಿಂದಲೆ, ಜೀವನದಲ್ಲೊದಗಿದ ಎಡರುತೊಡರುಗಳನ್ನು ಅವರು ಲಕ್ಷಿಸದೆ, ಮಕ್ಕಳ ಶಿಕ್ಷಣದಲ್ಲಿ ಮಗ್ನರಾಗಿ, ತಮ್ಮ ವಿನೋದಪ್ರಿಯ ಜೀವನವನ್ನು ತಮ್ಮ ನಾಟಕ, ಕಥೆಗಳಲ್ಲಿ ವ್ಯಕ್ತಪಡಿಸಿರುವರು. ಕಾಮತರಿಗೆ ಸಂಗೀತದಲ್ಲಿಯೂ ಅಭಿರುಚಿಯಿರುವುದು. ಅದರಂತೆ ಅವರಿಗೆ 'ಫೋಟೋಗ್ರಾಫಿ'ಯಲ್ಲಿಯೂ ಆಸಕ್ತಿಯುಂಟು. ಮತ್ತೆ ಅವರು ವಾಗ್ಮಿಗಳೂ ಆಗಿರುವರು. ಲೇಖನ ಕಲೆಯೆಂಬುದು ಕಾಮತರಿಗೆ ನೀರು ಕುಡಿದಂತೆ. ತಾಂಬೂಲದ ತಟ್ಟೆಯನ್ನು ಮುಂದಿಟ್ಟು, ನಾಳೆಗೆ ಮಕ್ಕಳಿಗಾಗಿ ಒಂದು ನಾಟಕ ಬೇಕಾಗಿದೆ ಎಂದು ಹೇಳಿ ಬಿಟ್ಟರೆ, ಕೂತಲ್ಲಿಂದ ಏಳುವುದರೊಳಗಾಗಿ ನಾಟಕವನ್ನು ಬರೆದುಕೊಟ್ಟು ಹೋಗುವಷ್ಟು ಫಲವತ್ತಾದ ಮಿದುಳು ಕಾಮತರದು. ಅವರ ಉಪನ್ಯಾಸವೆಂದರೆ ವಿನೋದರಸಭರಿತ ಸಾಹಿತ್ಯದ ಸವಿಯೂಟದಂತೆ. ಅವರು ನಮ್ಮ ನುಡಿಗಾಗಿ ಮಾಡಿರುವ ಸೇವೆಯ ದೃಷ್ಟಿಯಿಂದ, ಈಗಾಗಲೆ ಅವರಿಗೆ ಸಾಹಿತ್ಯ ಸಮ್ಮೇಲನಾಧ್ಯಕ್ಷ ಪದವು ದೊರಕಿರಬೇಕಾಗಿತ್ತು. ಹಾಗೆ ದೊರೆಯದಿರುವುದಕ್ಕೆ ಈ ಪ್ರಜಾಪ್ರಭುತ್ವದ ಕೂಗಿನ ಯುಗದಲ್ಲಿ, ಅವರ ನಿರ್ಧನಿಕತೆಯು ಕಾರಣವೆಂದು ಹೇಳಲಾಗುವುದಿಲ್ಲ. ಈ ಲೇಖನವು ಕನ್ನಡ ನುಡಿಯಲ್ಲಿ ಪ್ರಕಟವಾದ ಕೆಲವು ತಿಂಗಳಲ್ಲಿ ಬೆಂಗಳೂರಲ್ಲಿ ನೆರೆದ ಕನ್ನಡ ಕಥೆಗಾರರ ಸಮ್ಮೇಲನಕ್ಕೆ (ಜನವರಿ ೧೯೪೦) ಶ್ರೀ. ಕಾಮತರು ಅಧ್ಯಕ್ಷರಾಗಿದ್ದರು. ಮುಂದೆ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಚಿನ್ನದ ಹಬ್ಬದ ಸಮಯದಲ್ಲಿ ಅಲ್ಲಿಯೆ ನೆರೆಯಲಿರುವ ಕರ್ಣಾಟಕ ಸಾಹಿತ್ಯ ಸಮ್ಮೇಲನಕ್ಕೆ ಶ್ರೀ. ಕಾಮತರನ್ನೇ ಅಧ್ಯಕ್ಷರಾಗಿ ಆರಿಸಬೇಕೆಂದು ಹಲವರು ಹಂಬಲಿಸಿದ್ದರು. ಆದರೆ ದೈವಸಂಕಲ್ಪವೇ ಬೇರೆಯಾಗಿ, ಶ್ರೀ. ಕಾಮತರು ಹಲವರ ಹಂಬಲವನ್ನು ನೆರವೇರಿಸದೆ, ನಮ್ಮಿಂದ ಅಗಲಿ ಹೋದುದಕ್ಕಾಗಿ ವ್ಯಸನಪಡಬೇಕಾಗಿದೆ.

**ಡಿ. ಕೆ. ಭಾರದ್ವಾಜರು,** ಬೆಂಗಳೂರು.

# ನಮ್ಮನ್ನಗಲಿದ ಕಾಮತರು

ನಾನು ಹೈಸ್ಕೂಲಿನ ತರಗತಿಗಳಲ್ಲಿ ಓದುತ್ತಿರುವಾಗಲೇ—ಅದು ಬಲು ಹಿಂದಿನ ಮಾತು—ಶ್ರೀಯುತ ಎಂ. ಎಸ್. ಕಾಮತರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡ ಸಾಹಿತ್ಯ ಜೀವನದ ಕಾರಣಪುರುಷರೆಂದು ಹೆಸರುವಾಸಿಯಾಗಿದ್ದರು. ಅವರ ವಿಷಯವಾಗಿ ನನ್ನಲ್ಲಿ ಇತರರ ಹೇಳಿಕೆಯಿಂದ ಉಂಟಾದ ಅಭಿಮಾನ ಅವರ ಪರಿಚಯದಿಂದ ಇನ್ನಷ್ಟು ಹೆಚ್ಚಾಯಿತು. ಅಂತಹ ವ್ಯಕ್ತಿತ್ವ ಅವರದು. ಉತ್ಸಾಹದ ಉಸಿರಿನಂತೆಯೂ ಹಾಸ್ಯದ ಜೀವಾಳದಂತೆಯೂ ಇದ್ದ ಅವರು ಎಲ್ಲಿ ಇದ್ದರೂ ಎಲ್ಲಿ ಹೋದರೂ ಸ್ಫೂರ್ತಿದಾಯಕವೂ ಸಂತೋಷಕರವೂ ಆದ ವಾತಾವರಣವನ್ನೇ ಸೃಷ್ಟಿಸುತ್ತಿದ್ದರು. ಇದರಿಂದ ಮಂಗಳೂರಿನ ಕನ್ನಡ ಉತ್ಸಾಹೀ ತರುಣರು ಅವರನ್ನು ಎಲ್ಲೆಲ್ಲಿಯೂ ಹಿಂಬಾಲಿಸಿ ಅವರ ಮುಂದಾಳುತನವನ್ನು ಸ್ವೀಕರಿಸಿದುದರಲ್ಲಿ ಆಶ್ಚರ್ಯವೇನೂ ಇಲ್ಲ. ಶ್ರೀ|| ಕಾಮತರು ಮಾತ್ರ ತಾವು ಒಬ್ಬ ಮುಂದಾಳುಗಳೆಂದೆನಿಸದೆ ತರುಣರೊಡನೆ ತರುಣರಾಗಿ ಮಕ್ಕಳೊಡನೆ ಮಗುವಾಗಿ ಅವರಲ್ಲಿ ಉತ್ಸಾಹವನ್ನೂ ಸ್ಫೂರ್ತಿಯನ್ನೂ ತುಂಬುತ್ತಿದ್ದರು.

ಶ್ರೀ|| ಕಾಮತರ ಸಹವಾಸವೆಂದರೆ ಅದೊಂದು ಅಪೂರ್ವ ಅನುಭವವೇ ಆಗಿತ್ತು. ಅವರೊಡನೆ ಇದ್ದಾಗ ಯಾರಿಗೂ ಕೃತ್ರಿಮತೆಯ ಗೌರವವನ್ನು ಇಟ್ಟುಕೊಳ್ಳಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ಅವರ ಸಹವಾಸದಲ್ಲಿ ಎಂತಹ ಗಂಭೀರನೂ ಎರಡೇ ನಿಮಿಷಗಳೊಳಗೆ ತನ್ನ ವ್ಯಕ್ತಿತ್ವವನ್ನು ಮರೆತು ಹಾಸ್ಯರಸದಿಂದ ಕೂಡಿದ ಅವರ ವಾಕ್ಚಾತುರ್ಯಕ್ಕೆ ಮನಸೋತು ಎಳೆಯ ಮಗುವಿನಂತೆ ಗಹಗಹಿಸಿ ನಗುತ್ತಿದ್ದ. ಇಂತಹ ಅಪಾರವಾದ ಶಕ್ತಿ ಶ್ರೀ|| ಕಾಮತರಲ್ಲಿ ಇತ್ತು. ದೊಡ್ಡವರಾಗಲಿ, ಚಿಕ್ಕವರಾಗಲಿ, ಧನಾಢ್ಯರಾಗಲಿ, ಬಡವರಾಗಲಿ ಎಲ್ಲರ ಕೂಡೆಯೂ ಶ್ರೀ|| ಕಾಮತರ ವರ್ತನೆ ಒಂದೇ ರೀತಿಯಾಗಿತ್ತು. ಇದರಿಂದ ಶ್ರೀ|| ಕಾಮತರು ಎಲ್ಲರ ಪ್ರೇಮ ಗೌರವ ಆತ್ಮೀಯತೆಗಳನ್ನು ಸಂಪಾದಿಸಿದ್ದರು. ಅವರಲ್ಲಿದ್ದ ಯಾವ ಗುಣ ನಮ್ಮ ಮನಸ್ಸಿನಲ್ಲಿ ಹೆಚ್ಚಿನ ಪರಿಣಾಮವನ್ನುಂಟುಮಾಡುತ್ತಿತ್ತೆಂದು ಹೇಳುವುದು ಸುಲಭವಲ್ಲ. ಅವರಲ್ಲಿದ್ದ ಹಾಸ್ಯದ ಭಂಡಾರವೊ, ಕನ್ನಡವೆನ್ನಿಸಿಕೊಳ್ಳುವ ಪ್ರತಿಯೊಂದು ವಿಷಯದಲ್ಲಿ ಅವರು ತೋರಿಸುತ್ತಿದ್ದ ಸ್ಫೂರ್ತಿಯೊ ಅಥವಾ ಅವರಲ್ಲಿ ಸಹಜವಾಗಿ ನೆಲೆಗೊಂಡ ಆತ್ಮೀಯತೆಯೊ ಇವುಗಳಲ್ಲಿ ಯಾವುದೆಂದು ಹೇಳುವುದು ಕಷ್ಟ. ಅದು ಹೇಗೂ ಇರಲಿ. ಅವರನ್ನು ಒಮ್ಮೆ ಭೇಟಿಯಾಗಿ ಮಾತನಾಡಿಸಿದವರು ಅವರ ವ್ಯಕ್ತಿತ್ವವನ್ನೂ ಪ್ರತಿಭೆಯನ್ನೂ ಎಂದೂ ಮರೆಯಲಾರರು.

ಶ್ರೀ|| ಕಾಮತರ ಜೀವನ ಚರಿತ್ರೆಯೆಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ್ಗೆ ಮೂವತ್ತು ವರ್ಷಗಳಿಂದ ವೃದ್ಧಿಗೊಳ್ಳುತ್ತಿರುವ ಕನ್ನಡ ಸಾಹಿತ್ಯದ ಚರಿ

ತ್ರಿಯೇ ಆಗಿದೆ. ಅವರ ನಿಕಟ ಸಂಬಂಧ ಇಟ್ಟುಕೊಳ್ಳದಿದ್ದ ಯಾವ ವಾರ ಪತ್ರಿಕೆಯಾಗಲಿ ಮಾಸ ಪತ್ರಿಕೆಯಾಗಲಿ ನಮ್ಮ ಜಿಲ್ಲೆಯಲ್ಲಿ ಇಲ್ಲ. ಅವರಿಂದ ಹುರುಪುಗೊಂಡಿರದ ಯಾವ ತರುಣರ ಸಂಘವೂ ಇಲ್ಲ. ಅವರು ಬರೆದಿರುವ ಪಾಠಪುಸ್ತಕಗಳ ಲೆಕ್ಕವನ್ನು ಇಡುವ ಕೆಲಸ ತೀರಾ ಅಸಾಧ್ಯ! ಅವರು ಮಕ್ಕಳಿಗಾಗಿ ಬರೆದಿರುವ ಪದ್ಯಗಳು ದಿವಂಗತ ಪಂಜೆ ಮಂಗೇಶ ರಾಯರ ವಿಶೇಷ ಆದರಕ್ಕೆ ಪಾತ್ರವಾಗಿದ್ದವು. ಅವುಗಳಲ್ಲಿ ಕೆಲವನ್ನು ಹಾಡಿ ಹೇಳುವುದರಲ್ಲಿ ಪಂಜೆ ಮಂಗೇಶರಾಯರಿಗೆ ಬೇಸರವೆಂಬುದೇ ಇರುತ್ತಿರಲಿಲ್ಲ. ಇಷ್ಟು ಮಾತ್ರವಲ್ಲ,—ಶ್ರೀ॥ ಕಾಮತರ ಪ್ರತಿಭೆ ಅನೇಕ ಸಣ್ಣ ಕಥೆಗಳಲ್ಲಿಯೂ ಏಕಾಂಕ ನಾಟಕಗಳಲ್ಲಿಯೂ ಹಾಸ್ಯಭರಿತವಾದ ಅನೇಕಾನೇಕ ಹರಟೆಗಳಲ್ಲಿಯೂ ಒಡೆದು ಕಾಣುತಿತ್ತು. ತನ್ನ ಅಧ್ಯಾಪಕ ವೃತ್ತಿಯಲ್ಲಿಯೂ ಅವರು ಒಂದು ವಿಶೇಷವಾದ ಕೀರ್ತಿಯನ್ನು ಗಳಿಸಿದ್ದರು. ಯಾವ ವಿಷಯವನ್ನಾದರೂ ಅತ್ಯಂತ ಮನೋರಂಜಕವಾಗಿ ಹೇಳುವ ಚಾತುರ್ಯ ಅವರಿಗಿದ್ದುದರಿಂದ ಅವರ ಕ್ಲಾಸುಗಳನ್ನು ತಪ್ಪಿಸಿಕೊಂಡು ಹೋಗುವ ವಿದ್ಯಾರ್ಥಿಗಳೇ ಇರುತ್ತಿದ್ದಿಲ್ಲ. ಇತ್ತಲಾಗಿ ಅವರು ತನ್ನ ಪ್ರೀತಿಯ ವಿಷಯವೆಂದಿಟ್ಟುಕೊಂಡ ಭೂಗೋಳ ಶಾಸ್ತ್ರದ ವಿಷಯ ಮಾತನಾಡಲು ಪ್ರಾರಂಭಿಸಿದರೆ ವಿದ್ಯಾರ್ಥಿಗಳು ಮಾತ್ರವಲ್ಲ ನಮ್ಮಂಥ ಹಳಬರೂ ಆತುರತೆಯಿಂದ ಕೇಳುವಂತಿತ್ತು.

ಇಂದು ಅಂತಹ ಪ್ರತಿಭಾಶಾಲಿಯಾದ ಜೀವರತ್ನವನ್ನು ಕಳೆದುಕೊಂಡು ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಬಹಳ ಬಡವಾಗಿದೆ. ಅವರ ಯೋಗ್ಯತೆ ಸ್ಥಾನಮಾನಾದಿಗಳಿಂದ ಕೂಡಿರುವ ಇನ್ನೊಂದು ವ್ಯಕ್ತಿ ನಮಗೆ ಸಿಗುವುದು ದುರ್ಲಭ. ಇಡಿಯ ಕನ್ನಡ ನಾಡು ಅವರ ಅಪಾರವಾದ ಯೋಗ್ಯತೆಯನ್ನು ಗಮನಿಸುವ ಮೊದಲೇ ಅವರು ಅದೃಶ್ಯವಾದುದು ಒಂದು ಅತಿ ದಾರುಣವಾದ ಸಂಗತಿಯಾಗಿದೆ.

**ಪ. ರಮಾನಂದ.**

---

## ಭೂಗೋಳ ಶಿಕ್ಷಕರಾದ ಕಾಮತರು

ಈ ನವೀನ ಕಾಲಕ್ಕೆ ಜನಸಾಮಾನ್ಯಕ್ಕೆ ಜ್ಞಾನವನ್ನು ಹರಡಬಲ್ಲ ಸಾಹಿತ್ಯ, ವಿಜ್ಞಾನ, ಚರಿತ್ರೆ, ಧರ್ಮ ಮುಂತಾದ ವಿಷಯಗಳನ್ನು ಲಲಿತವಾದ ಹೊಸಕನ್ನಡ ಶೈಲಿಯಲ್ಲಿ ಬರೆದು ಹೆಸರು ಪಡೆದ ಕಾಮತರನ್ನು ಅರಿಯದ ಕನ್ನಡಿಗನು ವಿರಳ. ನಮ್ಮ ಜಿಲ್ಲೆಯ ವಿದ್ಯಾರ್ಥಿ ವರ್ಗದವರೆಲ್ಲಾ ಅವರ ಪಠ್ಯಪುಸ್ತಕಗಳನ್ನು ಓದುತ್ತಿರುವರು; ಅವರ ವಿನೋದಕಥೆಗಳನ್ನು ಗ್ರಹಿಸುತ್ತಿರುವರು; ಅವರ ಕವಿತೆಗಳನ್ನು ಹಾಡುತ್ತಿರುವರು. ಸಾಹಿತ್ಯ ಕ್ಷೇತ್ರದಲ್ಲಿ ಅವರು ಅಸಾಮಾನ್ಯ ಪುರುಷರೆಂದು

ಎಲ್ಲರೂ ಬಲ್ಲರು. ಆದರೆ ಅವರೊಬ್ಬ ಸಾಮಾನ್ಯ ಉಪಾಧ್ಯಾಯರಾಗಿಯೇ ಈ ಕೀರ್ತಿಯನ್ನು ಸಂಪಾದಿಸಿದರು. ಇತ್ತೀಚೆಗೆ ಅವರು ಭೂಗೋಳ ಶಾಸ್ತ್ರದ ಅಧ್ಯಾಪಕರಾಗಿ ಆ ವಿಷಯವನ್ನು ವಿದ್ಯಾರ್ಥಿಗಳಿಗೆ ಮನಮೆಚ್ಚುವ ರೀತಿಯಲ್ಲಿ ಬೋಧಿಸುತ್ತಿದ್ದರು.

ಭೂಗೋಳ ಪಾಠವೆಂದರೆ ಎಲ್ಲರಿಗೂ ತಾತ್ಸಾರ. ವಿದ್ಯಾರ್ಥಿಗಳಿಗೆ ಅದರಲ್ಲಿ ಅಭಿರುಚಿಯಿಲ್ಲ; ಉಪಾಧ್ಯಾಯರಿಗೆ ಆ ಪಾಠವನ್ನು ಕಲಿಸುವುದೆಂದರೆ ಉದಾಸೀನ. ಎಲ್ಲರೂ ಅದೊಂದು ಪೀಡೆಯೆಂದು ಭಾವಿಸುತ್ತಾರೆ. ಇಂತಹ ವಾತಾವರಣದಲ್ಲಿ ಭೂಗೋಳದ ಶಿಕ್ಷಕರಾಗಿ ಕೆಲಸ ಮಾಡುವುದು ಅಸಾಧಾರಣವಾದ ಸಾಮರ್ಥ್ಯದ ಕೆಲಸವೇ. ಕಾಮತರು ತನ್ನ ಚಾತುರ್ಯದಿಂದಲೂ ಉತ್ಸಾಹದಿಂದಲೂ ಆ ಪಾಠದಲ್ಲಿ ಹುಡುಗರಿಗೆ ಅಭಿರುಚಿಯನ್ನು ಹುಟ್ಟುವಂತೆ ಮಾಡಿದ್ದರು. ಬೇರೆ ಪಾಠಗಳಿಗೆ ತಪ್ಪಿಸಿಕೊಂಡು ಹೋಗುವ ವಿದ್ಯಾರ್ಥಿಗಳು ಅವರ ಪಾಠಕ್ಕೆ ಕ್ಲಾಸಿನಲ್ಲಿ ಯಾವಾಗಲೂ ಹಾಜರು.

ಅವರ ಪಾಠಕ್ರಮವು ಮನೋರಂಜಕವಾಗಿತ್ತು. ಆಧುನಿಕ ಭೂಗೋಳ ಶಾಸ್ತ್ರದ ಕ್ರಮ, ದೃಷ್ಟಿ, ರೀತಿ, ಇವುಗಳ ಆಧಾರವಿಟ್ಟು ಪಾಠವನ್ನು ಭಾರತೀಯ ದೃಷ್ಟಿಯಿಂದ ಬೋಧಿಸುವ ವಿಧಾನವೂ ಅವರಿಗೆ ತಿಳಿದಿತ್ತು. ಅವರ ಸುಲಭ ಶೈಲಿ, ಮನೋರಂಜಕವಾದ ನುಡಿ, ತುಸು ವಿನೋದ, ವಿಚಾರಪ್ರಬೋಧ ಶಿಕ್ಷಣ—ಇವೆಲ್ಲಾ ವಿದ್ಯಾರ್ಥಿಗಳನ್ನು ಏಕಾಗ್ರತೆಯಿಂದ ಆಲಿಸುವಂತೆ ಮಾಡುತಿದ್ದುವು. ಪಾಠವನ್ನು ವಿವರಿಸುವಾಗ ಅವರು ಮಿತಭಾಷಿಗಳಾಗಿರಲಿಲ್ಲ. ವಿದ್ಯಾರ್ಥಿಗಳು ಪಾಠದ ಟಿಪ್ಪಣಿಯನ್ನು ಬಹುಸಂಕ್ಷೇಪವಾಗಿ ಶಬ್ದಗಳನ್ನುಪಯೋಗಿಸಿ ಮಾತ್ರ ಬರೆದುಕೊಳ್ಳಬೇಕೆಂದು ಯಾವಾಗಲೂ ಒತ್ತಿ ಹೇಳುತಿದ್ದರು. ಟಿಪ್ಪಣಿಯನ್ನು ಹೇಳಿ ಬರೆಯಿಸುವ ಪದ್ಧತಿಗೆ ಅವರು ಕಡುವೈರಿಯಾಗಿದ್ದರು.

ಸಾಧಾರಣ ಭೂಪಟವೊಂದನ್ನು ಹಿಡಿದುಕೊಂಡು ಭೂವಿವರವನ್ನೆಲ್ಲಾ ಕಲಿಸಲು ಅವರಿಗೆ ಗೊತ್ತು. ಭೂಪಟದಿಂದಲೆ ಪಾಠವನ್ನು ಹೃದಯಂಗಮವಾಗುವಂತೆ ಮಾಡುತ್ತಿದ್ದರು. ಪಾಠದ ಮುಖ್ಯಾಂಶಗಳನ್ನು ವಿಶದಪಡಿಸಲು ಭೂಪಟವನ್ನು ಮಾತ್ರವಲ್ಲ, ಪಠ್ಯಪುಸ್ತಕ ಮಾತ್ರವಲ್ಲ, ಹಲವು ವರ್ತಮಾನ ಪತ್ರಿಕೆಗಳ ಕಟ್ಟಿಟ್ಟ ತುಂಡುಗಳನ್ನೂ ಅವರು ಉಪಯೋಗಿಸುತಿದ್ದರು. ಹವಾಮಾನ, ಆರ್ಥಿಕಸ್ಥಿತಿ, ಆಮದು ರಫ್ತುಗಳು—ಇವುಗಳಿಗೆ ಸಂಬಂಧಿಸಿದ ಅಂಕೆಸಂಖ್ಯೆಗಳ ವರದಿಗಳನ್ನು ಸಂಗ್ರಹಿಸಿ ಸಂದರ್ಭವೊದಗಿದಾಗ ಅವನ್ನು ಪಾಠಕ್ಕೆ ಉಪಯೋಗಿಸುತ್ತಿದ್ದರು. ವಿದ್ಯಾರ್ಥಿಗಳ ಕಲ್ಪನಾಶಕ್ತಿಯನ್ನೂ ಬುದ್ಧಿಶಕ್ತಿಯನ್ನೂ ವಿಶಾಲಮಾಡುವಂತಹ ಜ್ಞಾನವನ್ನು ಅಲ್ಪ ಸಮಯದಲ್ಲಿ ಮನಸ್ಸಿಗೆ ನಾಟುವ ರೀತಿಯಲ್ಲಿ ಬೋಧಿಸು

ತಿದ್ದರು. ಸಹಜವಾದ ಸಂಗತಿಗಳನ್ನು ಹೇಳುವಾಗಲೂ ವಿದ್ಯಾರ್ಥಿಗಳು ಅವರ ನುಡಿಗಳನ್ನು ಕೇಳಿ ಧ್ವಯಾರ್ಥವಿದೆಯೆಂದು ಭಾವಿಸುತ್ತಿದ್ದರು. ತನ್ನ ಮಾತುಗಳಿಂದ ಹಲವು ಪ್ರದೇಶಗಳ ಚಿತ್ರಗಳನ್ನು ವಿದ್ಯಾರ್ಥಿಗಳ ಮುಂದಿಡುತಿದ್ದರು.

ಆಧುನಿಕ ಭೂಗೋಳ ಶಾಸ್ತ್ರದ ವಿಷಯವನ್ನು ಅವರು ಪೂರ್ಣ ತಿಳಿದಿದ್ದರು. ಇಂತಹ ವಿಷಯಗಳನ್ನು ಒಟ್ಟುಗೂಡಿಸಿ ಗಿಳಿಯಂತೆ ಅಭ್ಯಾಸ ಮಾಡಿ ಬೇಕಾದಾಗ ಒಪ್ಪಿಸುವ ಉಪಾಧ್ಯಾಯರು ಅವರಲ್ಲ. ಪಠ್ಯಪುಸ್ತಕವನ್ನು ಮುಂದಿಟ್ಟುಕೊಂಡು ತಿಳಿಯದ ವಿಷಯವನ್ನು ಓದಿ ಹೇಳಿ ವಿದ್ಯಾರ್ಥಿಗಳು ತಿಳಿಯದಂತೆ ವಿವರಿಸುವ ಕ್ರಮ ಅವರದಲ್ಲ. ಅವರು ಹುಡುಗರನ್ನು ಪುಸ್ತಕಗಳ ಮತ್ತು ಪಟಗಳ ಗುಲಾಮರನ್ನಾಗಿ ಮಾಡುತ್ತಿರಲಿಲ್ಲ. ಪಟಗಳನ್ನು ಓದುವ ಕ್ರಮವನ್ನು ಬೋಧಿಸುವಾಗ ಪಟ ಮಾಡುವ ಕ್ರಮವನ್ನೂ ಹೇಳಿಕೊಡುತ್ತಿದ್ದರು. ಜನಜೀವನವು ಪ್ರಾಕೃತಿಕ ಲಕ್ಷಣಗಳನ್ನು ಹೊಂದಿದೆಯೆಂದು ಒತ್ತಿ ಹೇಳುತಿದ್ದರು. ಪ್ರಾದೇಶಿಕಭೂಗೋಳವನ್ನು ವಿದ್ಯಾರ್ಥಿಯ ಸುತ್ತಮುತ್ತಲಿನ ಪ್ರದೇಶವನ್ನು ಮೂಲಾಧಾರವಾಗಿಟ್ಟು ವಿವರಿಸುತಿದ್ದರು. ಭೂಗೋಳ ಪಾಠದಲ್ಲಿ ರಾಜನೀತಿಗೂ ಚರಿತ್ರೆಗೂ ಇರುವ ಸ್ಥಾನವನ್ನು ವಿವರಿಸಲು ಅವರು ಮರೆಯುತ್ತಿದ್ದಿಲ್ಲ.

ಬೇರೆ ವಿಜ್ಞಾನಶಾಸ್ತ್ರ ಪಾಠಗಳಂತೆಯೇ ಭೂಗೋಳಶಾಸ್ತ್ರ ಕಲಿಸುವ ಕ್ರಮವು ಅವರಿಗೆ ತಿಳಿದಿತ್ತು. ಭೂಗೋಳ ಶಾಸ್ತ್ರವು ಭೂಮಿಯ ಮೇಲೆ ವಾಸಿಸಿರುವ ಮನುಷ್ಯವಿಜ್ಞಾನಶಾಸ್ತ್ರವೆಂದೇ ಅರಿತುಕೊಂಡು ಅದನ್ನು ಆ ರೀತಿಯಲ್ಲಿ ಬೋಧಿಸುತಿದ್ದರು. ಅವರು ಪರೀಕ್ಷೆಗೆ ಕೊಡುವ ಪ್ರಶ್ನೆಗಳೆಲ್ಲಾ ಬಾಯಿಪಾಠಮಾಡುವ ಅಭ್ಯಾಸವುಳ್ಳ ಹುಡುಗರಿಗೆ ಕಷ್ಟವಾಗಿದ್ದುವು; ಭೂಗೋಳ ಶಾಸ್ತ್ರದ ತತ್ವಗಳನ್ನು ತಿಳಿದವರಿಗೆಲ್ಲಾ ಸುಲಭವಾಗಿದ್ದುವು; ವಿದ್ಯಾರ್ಥಿಗಳು ವಿವೇಕಿಗಳಾಗಿ ಎಲ್ಲಿ—ಏಕೆ ಎಂಬುದನ್ನು ತಿಳಿದುಕೊಳ್ಳಲು ಸಮರ್ಥರಾಗಬೇಕೆಂದೇ ಅವರ ಪಾಠಕ್ರಮದ ಉದ್ದೇಶವಾಗಿತ್ತು.

ವಿದ್ಯಾಭ್ಯಾಸ ಪದ್ಧತಿಯನ್ನೆಲ್ಲಾ ಭೂಗೋಳಶಾಸ್ತ್ರೀಕರಿಸಬೇಕೆಂದು ಚಳವಳ ನೆಬ್ಬಿಸಿದ ಕೆಲವರಲ್ಲಿ ಕಾಮತರು ಒಬ್ಬರು. ಭೂಗೋಳಶಾಸ್ತ್ರಕ್ಕೆ ಪಾಠಪಟ್ಟಿಯಲ್ಲಿ ಬೇರೆ ವಿಷಯಗಳಿಗೆ ಸಿಕ್ಕಿದಂತೆ ಇದಕ್ಕೂ ಒಂದು ಸ್ಥಾನವು ಅಗತ್ಯವೆಂದು ಸಾಧಿಸಿದವರು ನಮ್ಮ ಜಿಲ್ಲೆಯಲ್ಲಿ ಕಾಮತರೇ. ಪ್ರಚಾರೋಪನ್ಯಾಸಗಳನ್ನು ಕೈಕೊಂಡು ಆಧುನಿಕ ಭೂಗೋಳವೇನೆಂದು ಉಪಾಧ್ಯಾಯ ವೃಂದಕ್ಕೆ ಸಾರಿದವರು ಇವರೇ. ಮಂಗಳೂರಿನಲ್ಲಿ ಜರಗಿದ ಪ್ರಾಂತಿಕ ಭೌಗೋಳಿಕ ಪರಿಷತ್ತಿನ ಕಾರ್ಯದರ್ಶಿಯರಾಗಿ ಅದನ್ನು ಯಶಸ್ವಿಯಾಗಿ ನಡಿಸಿದ ಶ್ರಮಜೀವಿಗಳು ಕಾಮತರಲ್ಲದೆ ಬೇರೆಯವರಲ್ಲ. ಇವೆಲ್ಲಾ ಅವರ ಕಾರ್ಯಗಳು ಅವರಿಗೆ ಭೂಗೋಳ ಶಾಸ್ತ್ರದಲ್ಲಿದ್ದ ಪ್ರೇಮವನ್ನು ವಿಶದಪಡಿಸುತ್ತವೆ.

ಭೂಗೋಳಶಾಸ್ತ್ರವು ಅಭಿವೃದ್ಧಿಗೊಳ್ಳುವ ವಿಜ್ಞಾನಶಾಸ್ತ್ರವು. ಅದರ ವಿಷಯ ಜ್ಞಾನವು ದಿನದಿಂದ ದಿನಕ್ಕೆ ಬದಲಾಗುತ್ತದೆ. ಭೂಗೋಳಶಾಸ್ತ್ರದ ಉಪಾಧ್ಯಾಯನು ಈ ವಿಜ್ಞಾನಕ್ಕೆ ಸಂಬಂಧಿಸಿದ ಆಧುನಿಕ ಪುಸ್ತಕಗಳನ್ನು ಎಷ್ಟು ಓದಿದರೂ ಸಾಕಾಗುವ ಹಾಗಿಲ್ಲ. ಕಾಮತರು ನಾಳೆ ಪ್ರಕಟವಾಗಲಿರುವ ಪುಸ್ತಕಗಳನ್ನು ಇಂದಿಗೇ ತರಿಸಿಕೊಂಡು ತಾವು ವೇಗ ಯುಗದ ಓಟದಲ್ಲಿ ಹಿಂದುಳಿಯುತ್ತಿರ ಲಿಲ್ಲ. ಕಾಮತರಲ್ಲಿದ್ದ ಈ ಗುಣವು ನಮ್ಮಲ್ಲಿ ಮೂಡಲಿ. ಅವರ ಉತ್ಸಾಹವು ನಮಗೆ ಬರಲಿ ಭೂಗೋಳದಲ್ಲಿ ಅವರಿಗಿದ್ದ ಪ್ರೇಮವು ಎಲ್ಲರಲ್ಲಿಯೂ ಬೆಳಗಲಿ.

ಕೆನರಾ ಹೈ ಸ್ಕೂಲ್,
ಮಂಗಳೂರು.

**ಕೆ. ವಾಸುದೇವ ಕಿಣಿ,**
ಬಿ. ಎ., ಎಲ್. ಟಿ.

---

# ಕಾಮತರ ಲೇಖನಿ

ಆನಂದದಿಂದ ಬರೆವ ಪಂಕ್ತಿಗಳಲ್ಲ; ಆದರೂ ಕಾಮತರ ಕುರಿತು ಬರೆವ ಪಂಕ್ತಿಗಳು, ಈಗ, ಕತ್ತಲೆಯಲ್ಲಿನ ಭೀಕರಸೌಂದರ್ಯದಂತೆ ಸಾಮ್ಯ ಹೊಂದಬಲ್ಲವು. ಅವರು ನಮಗಿನ್ನು ಎಂದೆಂದೂ ಕಾಣಸಿಗಲಾರರೆಂಬ ದುಃಖದ ಭಾವನೆಯು ಅವರ ಕುರಿತು ಏನನ್ನು ಬರೆಯಲಾಪುದು!

ಸಾರ್ವಜನಿಕ ವ್ಯಕ್ತಿಗಳಾರಾದರೂ ದಿವಂಗತರಾದರೆನ್ನುತ್ತಲೇ ''ನಾವು ವಿಷಾದಿಸುವೆವು'' ಎಂದು, ನಮಗುಂಟಾದ ದುಃಖವನ್ನು ಪ್ರಕಟಿಸುವ ಒಂದು ರೂಢಿಯಿದೆ. ಆದರ ನಿಜವಾದ ಭಾವನೆಯುಂಟಾದುದು ನನಗೆ ಕಾಮತರ ನಿಧನದಂದು ಎನ್ನುವೆನು. ಅವರ ಸಂಪರ್ಕವೂ ಸ್ನೇಹಬಂಧನವೂ ನನಗೆಷ್ಟಿತ್ತು ಎಂಬುದರ ಆಳವು ಅಂದು ನನಗರಿವಾಯಿತು.

''ವಿನೋದಭಾಷಿಗಳು— ವಿನೋದಲೇಖಕರು'' ಎಂಬುದಕ್ಕಿಂತ ಹೆಚ್ಚಿನ ಗೌರವವು ಕಾಮತರಿಗೆ ಅವಶ್ಯವಿಲ್ಲ. ಅವರ ಹಾಸ್ಯವು ಸುಖಮಯ ಜೀವನದಲ್ಲಿ, ಪರರ ಕಷ್ಟಗಳ ಅರಿವಿಲ್ಲದೆ ಇದ್ದಾಗ ಹೊರಟ ವಿನೋದವಲ್ಲ. ದುಃಖಭಾವದಿಂದ ಹೃದಯವು ಕುಗ್ಗಿರುವಾಗ, ಜೀವನದಲ್ಲಿ ಯಶಸ್ಸು-ಸಂತೋಷಗಳು ಇವೆಯೇ ಎಂದು ಅರಸುತಿದ್ದಾಗ ಅವರಿಂದದು (ವಿನೋದವು) ಹೊರಟಿದೆ. ದುಃಖ ಚರಿತ್ರವನ್ನು ವಿವರಿಸುವಾಗಲೂ ಬರೆವಾಗಲೂ ವಿನೋದದಿಂದಾಡಿದ್ದಾರೆ. ಸ್ವಭಾವತಃ ವಿನೋದಿಗಳು ಮಾತ್ರ ನಮಗೆ ಉಚ್ಚಹಾಸ್ಯವನ್ನು ಕೊಡಬಲ್ಲರು. ಹಿಂದೂದೇಶದಲ್ಲಿ

ವಿನೋದಿಗಳು ಕಡಿಮೆಯಾದರೆ ಕನ್ನಡನಾಡಿನಲ್ಲಿ ಅತಿ ವಿರಳರು. ಸಂಪತ್ತಿನ ಅಭಾವವಿದ್ದಲ್ಲಿ ಹಾಸ್ಯವೂ ಇರದೆನ್ನುವರು. ಆದರೆ, ಕಾಮತರು ಅದಕ್ಕೆ ಅಪವಾದವಾಗಿದ್ದಾರೆ.

ಅವರ ಭಾಷಣಗಳು ಎಂತಹ ಸಭೆಯನ್ನೂ ಪ್ರಕಾಶಮಾನ ಮಾಡಿವೆ. ನಗಲಾರರೆಂದು ಹಟವಿಡಿದು ಕುಳಿತವರು ತಮ್ಮ ವ್ರತಭಂಗ ಮಾಡಿರುವರು. ಹೃದಯವು ಬರಿದಾದಂತೆ ಕಂಡಾಗ ಕಾಮತರೊಡನೆ ಸಂಭಾಷಿಸಿ, ಹರುಷದ ಸರಸ್ಸನ್ನು ತುಂಬಿಸಿಕೊಂಡವರುಂಟು.

ವಿನೋದದ ಮಾತು ಬಂದಾಗ, ನಮ್ಮಲ್ಲಿ ಕಾಮತರು ಇರುವರೆಂದು ಹೆಮ್ಮೆಪಡುತ್ತಿದ್ದೆ. ಅವರಲ್ಲಿನ ನೈಜವಿನೋದದ ಪ್ರಕಾಶನಕ್ಕೆ ಮುದ್ರಣರೂಪದಲ್ಲಿ ಸಾಕಷ್ಟು ಇಂಬು ದೊರೆಯಲಿಲ್ಲವಾದರೂ, ಅವರನ್ನು ಬಲ್ಲರಾದ ನಾವು, ಇವರೊಂದು ಅಕ್ಷಯಭಂಡಾರವೆಂದು ತಿಳಿದಿದ್ದೆವು.

ಅವರ ಜೀವನವೊಂದು ದುರಂತ. ಅವರ ವಿನೋದ ಭಾಷ್ಯವು ಸಂತೋಷದ ಸಾಗರ.

ಕಾಮತರ ಹೆಚ್ಚಿನ ಯೋಗ್ಯತೆಯು ಮಾತುಕತೆಗಳಲ್ಲೂ ಭಾಷಣಗಳಲ್ಲೂ ವ್ಯಕ್ತವಾಯಿತು. ಆದರೆ, ಕೇವಲ ಅಲ್ಪಾಂಶ ಮಾತ್ರ ಲೇಖನಗಳಿಂದ ಉಳಿಯಿತು. ಇದೂ ಒಂದು ಅಸಾಧಾರಣ ದುರಂತ.

ಅವರ ಕೈಕೆಳಗೆ ಒಂದು ತಿಂಗಳಾದರೂ ಕಲಿತ ವಿದ್ಯಾರ್ಥಿಗಳು ಅವರನ್ನು ಮರೆಯಲಾರರು.

ಕಾಮತರ ಕವಿತೆಗಳು, ಪತ್ರಿಕಾ ಲೇಖನಗಳು ಎಷ್ಟೋ ಇರಬಹುದು. ಆದರೆ, ಬಹುಶಃ ನನ್ನಂತೆ ಇತರರೂ ಅವರಲ್ಲಿ ಕಾಣುವುದೆಂದರೆ ವಿನೋದವನ್ನು. ಕಾಮತರೆನ್ನುತ್ತಲೇ ವಿನೋದದ ನೆನಪಾಗುವುದು. ವಿನೋದದಿಂದ 'ಕಾಮತರನ್ನೂ ಕಾಮತರಿಂದ ವಿನೋದವನ್ನೂ ಯಾವ ಕಾಲಕ್ಕೂ ಬೇರ್ಪಡಿಸಲಾರಿರಿ.

ವಿನೋದದಲ್ಲಿ ನಮ್ಮಲ್ಲಿರುವ ಸುಪ್ರಕಾಶದ ಕೆಲವೇ ದೀಪಗಳಲ್ಲಿ ಒಂದು ಆರಿದೆ. ವಿನೋದ ಲೇಖಕರು ಸಾಹಿತ್ಯಪ್ರಪಂಚದ ನಿಧಿಯಲ್ಲೊಂದಂಶವಾದರೆ, ನಾವಿಂದು ಬಲು ಬಡವರು.

ಕಾಮತರು ನಾಲ್ಕು ವರ್ಷಗಳ ಹಿಂದೆ ಪ್ರೀತಿಪುರಸ್ಸರವಾಗಿ ಕೊಟ್ಟ ಲೇಖನಿಯು ಇಂದು ಈ ಪಂಕ್ತಿಗಳನ್ನು ಲಿಖಿಸಿದೆ! ಈ ಲೇಖನಿಗೆ ಇಷ್ಟು ಅಲ್ಪ ಅವಧಿಯಲ್ಲಿ ಈ ಅಹಿತ ಕರ್ತವ್ಯ ಬರುವುದೆಂದು ನಾನು ಭಾವಿಸಿರಲಿಲ್ಲ. "ಇದರಿಂದ ಸುಂದರವಾದುದನ್ನು ರಚಿಸು!" ಎಂದು ಕಾಮತರು ನಗುತ್ತ ನನ್ನೊಡನೆ ಹೇಳಿದ

ಮಾತುಗಳು, ಇನ್ನೂ ಕಿವಿಯಲ್ಲಿ ಧ್ವನಿಸುತ್ತಿವೆ. ಈ ಲೇಖನಿಯ ಮೊದಲ ಕರ್ತವ್ಯವೇ ಈ ಲೇಖವಲ್ಲವೆಂಬ ಒಂದು ತೃಪ್ತಿಯಿದೆ. ಅವರ ನೆನಹು ಈ ಲೇಖನಿಯಿಂದ ಮುಂದೆ ಹೆಚ್ಚಿನ ಕಾರ್ಯವನ್ನು ಮಾಡಿಸುವುದಾದರೆ, ಅವರ ಸ್ಮಾರಕಕ್ಕೆ ವಿಶೇಷ ಸೇವೆ ಸಂದಂತಾಯಿತೆಂದು ತಿಳಿವೆನು.

(''ಕಾಮತರ ಲೇಖನಿ''ಯೆಂದಾಗ, ಈ ಲೇಖನಿಯೇ ಕಾಮತರ ಲೇಖನಿಯೆಂದು ಉದ್ದೇಶಿಸಿ ಬರೆದಿರುವೆನು).

**ಕುಡ್ವಿ ವಾಸುದೇವ ಶೆಣೈ.**

---

# ಕಾಮತರ ರಂಗಭೂಮಿ

ದಿವಂಗತ ಶ್ರೀ. ಎಮ್. ಎನ್. ಕಾಮತರು ಕಥೆಗಳನ್ನೂ ಕವಿತೆಗಳನ್ನೂ ಧಾರಾಳವಾಗಿ ಬರೆದು ಕನ್ನಡ ಸಾಹಿತಿಗಳೆಂದು ಪ್ರಸಿದ್ಧರಾದುದು ಕನ್ನಡಿಗರೆಲ್ಲರಿಗೆ ತಿಳಿದಿದೆಯಾದರೂ, ನಾಟಕ ಸಾಹಿತ್ಯವನ್ನು ಬೆಳೆಸಲು ಅವರು ಕೈಕೊಂಡ ಉದ್ಯಮವೂ, ಆ ವಿಭಾಗದಲ್ಲಿ ಅವರು ಮಾಡಿದ ಸಾಹಿತ್ಯಸೇವೆಯೂ, ಹೆಚ್ಚಿನವರಿಗೆ ತಿಳಿದಿಲ್ಲ. ಶ್ರೀ. ಕಾಮತರು ಕತೆ, ಕವಿತೆ, ಉಪನ್ಯಾಸಗಳನ್ನು ಬರೆವುದರಲ್ಲಿ ನುರಿತ ಸಾಹಿತಿಗಳಾಗಿದ್ದಂತೆ, ನಾಟಕರಚನೆಯಲ್ಲಿಯೂ ತುಂಬಾ ನಿಷ್ಣಾತರಿದ್ದರು. ನಾಟಕ ರಚನೆಯಲ್ಲಿ ಅವರ ಶಕ್ತಿಯು ಉಳಿದವುಗಳಲ್ಲಿದ್ದುದಕ್ಕಿಂತ ಅಧಿಕವಾಗಿದ್ದಿತೆಂದೇ ಹೇಳಬಹುದು. ನಾಟಕಗಳ ಮೂಲಕ ಜೀವನವನ್ನು ಇದ್ದಕ್ಕಿದ್ದಂತೆ ಪ್ರತಿಬಿಂಬಿಸಿ, ಅನುಕಂಪ, ಅನುರಾಗಗಳನ್ನು ಹುಟ್ಟಿಸಿ, ಆದರ್ಶವನ್ನು ಉದ್ರೇಕಿಸಲು ಹೆಚ್ಚಿನ ಅನುಕೂಲತೆಗಳಿವೆಯಾದರೂ, ಕನ್ನಡ ನಾಟಕ ಸಾಹಿತ್ಯವು ಸಾಹಿತ್ಯದ ಇತರ ಶಾಖೆಗಳಷ್ಟೇ ಅಭಿವೃದ್ಧಿಗೆ ಬಾರದಿರುವುದು ಖೇದದ ವಿಷಯವಾಗಿದೆ. ನಾಟಕಗಳ ಆವಶ್ಯಕತೆಯು ಬಹಳವಿದೆ. ಅದರಲ್ಲೂ ವಾರ್ಷಿಕೋತ್ಸವಗಳನ್ನು ನಡೆಸುವ ಸಂದರ್ಭಗಳಲ್ಲಿ ಶಾಲೆಗಳಿಗೆ ಹಲವು ನಾಟಕಗಳು ಬೇಕಾಗುತ್ತವೆ. ಹಾಗಿದ್ದರೂ ನಮ್ಮಲ್ಲಿ ನಾಟಕಗಳಿಗೆ ಕೊರತೆಯಿದೆ ಎನ್ನಬೇಕು. ಈಗ ಪ್ರಚಾರದಲ್ಲಿರುವ ನಾಟಕಗಳಲ್ಲಿ ಹಲವು, ಬರೇ ಓದುವಿಕೆಗಾಗಲಿ, ಅಥವಾ ದೊಡ್ಡ ದೊಡ್ಡ ನಾಟಕ ಸಂಘಗಳವರಿಂದ ಅಭಿನಯಿಸಲ್ಪಡುವುದಕ್ಕೆ ತಕ್ಕವುಗಳಾಗಲಿ ಆಗಿರುವುವು. ಅವುಗಳಲ್ಲಿ ಕೆಲವು ಪೌರಾಣಿಕ ಕಥೆಗಳಿಗೆ ಸಂಬಂಧಿಸಿದವುಗಳು; ಕೆಲವು ಸಾಮಾಜಿಕ ನಾಟಕಗಳೆಂದು ಅನ್ನಿಸಿಕೊಳ್ಳುತ್ತವೆ. ಪೌರಾಣಿಕ ನಾಟಕಗಳಲ್ಲಿ ಹಲವು ಹಳೇ ತರದವುಗಳಾಗಿವೆ. ಸಾಮಾಜಿಕ ನಾಟಕಗಳಲ್ಲಿ ಹಲವು ಬಲು ಕೀಳುತರದವುಗಳಾಗಿದ್ದು ಪ್ರೇಕ್ಷಕರ ಕಣ್ಣು, ಕಿವಿಗಿಂಪನ್ನು ಮಾಡುವದನ್ನೇ ಉದ್ದೇಶವಾಗಿಟ್ಟು

ಕೊಂಡಿರುವುವಲ್ಲದೆ, ಅವರ ಜ್ಞಾನಾಭಿವೃದ್ಧಿಗೆ ಸಹಾಯಕವಾಗುವುದಿಲ್ಲ. ಇಂತಹ ನಾಟಕಗಳು ಶಾಲೆಗಳಲ್ಲಿ ಅಭಿನಯಿಸಲ್ಪಡಲು ಎಂದಿಗೂ ತಕ್ಕವುಗಳಾಗಿಲ್ಲ.

ಹಿರಿಯರು ಬಹಿರಂಗವಾದ ರಂಗಭೂಮಿಗಳಲ್ಲಿ ಹಿರಿಯರಿಗಾಗಿ ಅಭಿನಯಿಸುವ ನಾಟಕಗಳಿಗಿಂತಲೂ, ಮಕ್ಕಳ ನಾಟಕಗಳು ಬೇರೇ ತರದವುಗಳಾಗಿರಬೇಕೆಂದು ನಾನು ತಿಳಿಯುತ್ತೇನೆ. ಶಾಲೆಯಲ್ಲಿ ಅಭಿನಯಿಸಲ್ಪಡುವ ನಾಟಕಗಳಲ್ಲಿ ಒಳ್ಳೆಯ ಭಾಷಾ ಗೌರವವೂ, ಉತ್ಕೃಷ್ಟ ನೀತಿಪಾಠವೂ, ಶಿಕ್ಷಣದ ಉದ್ದೇಶಕ್ಕನುಗುಣವಾಗಿದ್ದು, ಪ್ರೇಕ್ಷಕರಲ್ಲಿಯೂ, ಅಭಿನಯಕಾರರಲ್ಲಿಯೂ ಒಳ್ಳೆಯ ವರ್ತನೆಯನ್ನು ಬೀರುವಂತಹುವಾಗಿರಬೇಕು. ಶಾಲೆಯ ಗೌರವವನ್ನೂ ಅವು ಬೆಳೆಯಿಸಬೇಕು. ಅಂತಹವುಗಳಲ್ಲಿ ಕೀಳುತರದ ಪ್ರಣಯದೃಶ್ಯಗಳಿಗೆ ಅವಕಾಶವಿರಬಾರದು. ಸಮಾಜದ ದೋಷಗಳನ್ನು ಎತ್ತಿ ತೆಗೆದು ಅವುಗಳಿಗೆ ಪ್ರಾಮುಖ್ಯತೆಯನ್ನೀವ ಬದಲು ಉತ್ತಮ ಸಮಾಜದ ವರ್ತನೆಗಳು ಹೇಗಿರಬೇಕೆಂಬುದನ್ನು ತೋರಬೇಕು. ಸಮಾಜದ ಊನನ್ಯೂನಗಳನ್ನು ಅಭಿನಯಿಸಿ ಅವುಗಳಿಂದಾಗುವ ಹಾನಿಯನ್ನು ತೋರಿಸಿಕೊಡುವ ಬದಲು, ಸಮಾಜದ ಉತ್ತಮ ವರ್ತನೆಗಳನ್ನೇ ಒಳಗೊಂಡ ನಾಟಕವನ್ನು ಅಭಿನಯಿಸಿ ಅದರಿಂದಾಗುವ ಸತ್ಪರಿಣಾಮವನ್ನು ಸ್ಪಷ್ಟೀಕರಿಸಬೇಕು. ಶಾಲಾ ನಾಟಕಗಳು ಸಮಾಜದ ಏಳಿಗೆಯನ್ನು ಸಾಧಿಸತಕ್ಕವುಗಳಾಗಿರಬೇಕು. ಒಟ್ಟಾರೆ ಹೇಳುವುದಾದರೆ ಶಾಲೆಯಲ್ಲಿ ಅಭಿನಯಿಸಲ್ಪಡುವ ನಾಟಕಗಳಲ್ಲಿ ಸಭ್ಯಾಚಾರವೂ, ಸುಶಿಕ್ಷಣವೂ ಒಡೆದು ತೋರುವಂತಿರಬೇಕು.

ಇನ್ನು ಶಾಲಾನಾಟಕಗಳ ರೀತಿಯು ಹೇಗಿರಬೇಕೆಂಬುದರ ವಿಷಯವಾಗಿ ಒಂದೆರಡು ಮಾತುಗಳನ್ನು ಇಲ್ಲಿ ಹೇಳಿದರೆ ಅಪ್ರಸ್ತುತವಾಗಲಾರದು. ಶಾಲಾ ನಾಟಕಗಳು ಒಂದಂಕದ ನಾಟಕಗಳಾಗಿದ್ದು, ರಂಗವನ್ನು ರಚಿಸುವುದರಲ್ಲಿ ಅಸಾಧ್ಯತೆಯನ್ನು ತಂದೊಡ್ಡಬಾರದು. ದೃಶ್ಯಗಳು ದೀರ್ಘಕಾಲದವುಗಳಾಗಿರಬಾರದು. ಅಸಂಖ್ಯಾತ ನಟರಿಂದ ಕೂಡಿದವುಗಳಾಗಿರಬಾರದು. ಅಮಾನುಷ ಮತ್ತು ಅಸ್ವಾಭಾವಿಕ ವಿಷಯಗಳನ್ನು ಶಾಲಾ ನಾಟಕಗಳಲ್ಲಿ ಕಾಣಿಸಬಾರದು. ಈಗ ಕನ್ನಡದಲ್ಲಿ ಇರುವ ಕೆಲವೊಂದು ನಾಟಕಗಳು ಓದುವುದಕ್ಕೆ ಚೆನ್ನಾಗಿವೆಯಾದರೂ ಅಭಿನಯಕ್ಕೆ ಚೆನ್ನಾಗಿಲ್ಲ. ಓದುವಾಗ ಅವು ಮನೋರಂಜನೆಯನ್ನುಂಟುಮಾಡುತ್ತವಾದರೂ ಅಭಿನಯಿಸುವಾಗ ನಿಸ್ಸಾರವಾಗಿ ಕಂಡುಬರುತ್ತವೆ.

ಶ್ರೀ. ಕಾಮತರು, ಸುಮಾರು ಮೂವತ್ತಕ್ಕೆ ಮಿಕ್ಕಿದ ನಾಟಕಗಳನ್ನು ಬರೆದಿರುವರೆಂಬುದನ್ನು ಕೇಳಿ ಹಲವರಿಗೆ ಆಶ್ಚರ್ಯವಾಗದಿರದು. ಅವುಗಳೆಲ್ಲವೂ ಶಾಲಾ ಅಭಿನಯಕ್ಕೆ ತಕ್ಕವುಗಳಾಗಿದ್ದು ನಾನು ಮೇಲೆ ಹೇಳಿದ ಕ್ರಮಕ್ಕನುಸಾರವಾಗಿಯೇ ಇವೆ. ಶ್ರೀ. ಕಾಮತರಲ್ಲಿ ಅಭಿನಯ ಮಾಡುವ ಶಕ್ತಿಯೂ, ಶಿಕ್ಷಣ

ಕೊಡುವ ಶಕ್ತಿಯೂ ಅಜನ್ಮಸಿದ್ಧವಾದ ಗುಣಗಳಾಗಿದ್ದು, ಲೋಕಾನುಭವದಿಂದ ಅವರು ನುರಿತವರಾಗಿದ್ದು, ಚಿಕ್ಕವರ ಮನೋಧರ್ಮವನ್ನರಿಯುವುದರಲ್ಲಿ ನಿಷ್ಣಾತರಾಗಿದುದ್ದರಿಂದ ಶಾಲಾ ನಾಟಕಗಳನ್ನು ಬರೆಯುವುದರಲ್ಲಿ ಅವರು ನಿಪುಣರು; ಆ ಶಕ್ತಿಯು ಅವರಲ್ಲಿ ಸಹಜವಾಗಿ ಮೊಳಗಿರುವುದು.

ಶ್ರೀ. ಕಾಮತರಲ್ಲಿ ಕನ್ನಡ ಭಾಷೆಯ ಪ್ರವಾಹವು ಸ್ವಾಭಾವಿಕವಾಗಿ ಹರಿಯುತಿದ್ದು, ತನ್ನ ಉತ್ಕೃಷ್ಟ ವಿಚಾರಗಳಿಗೆ ಸರಿಯಾಗಿ ಎಂತಹ ವಿಷಯವನ್ನಾದರೂ ಹೊಂದಿಸಿಕೊಳ್ಳುವ ಅಸಾಮಾನ್ಯ ಶಕ್ತಿಯು ಅವರಲ್ಲಿದ್ದುದರಿಂದ ಅವರು ಸಾಧಾರಣ 1913ರಲ್ಲಿ ನಾಟಕ ಬರೆಯಲು ತೊಡಗಿದರು. ವಂಗ ವಿಭಜನೆಯ ಚಳವಳದ ಸಮಯದಲ್ಲಿ ಅವರು ಬಂಗಾಳದಲ್ಲಿದ್ದುದರಿಂದ ಬಂಗಾಳಿ ಭಾಷೆಯನ್ನು ಕಲಿತುದಲ್ಲದೆ, ಆ ಕಾಲದಲ್ಲಿ ಬಂಗಾಳದಲ್ಲಿ ಹಬ್ಬಿಕೊಂಡ ಸಾಹಿತ್ಯತೃಷ್ಣೆಯ ಅಂಕುರವು ಅವರಲ್ಲಿಯೂ ಮೊಳೆಯಿತು. ಅವರಿಗೆ ಮರಾಟಿಯೂ ಬರುತಿದ್ದಿತು. ಅವರು ಅವೆರಡು ಭಾಷೆಗಳೊಳಗಿನ ಸಾಹಿತ್ಯವನ್ನು ಅಭ್ಯಸಿಸಿ ಕನ್ನಡ ಸಾಹಿತ್ಯಕ್ಕೂ ಅವುಗಳಿಂದ ಪ್ರಯೋಜನ ದೊರೆವಂತೆ ಮಾಡಿಬಿಟ್ಟರು. ಹೀಗಾಗಿ ಅವರು ಈ ಜಿಲ್ಲೆಯಲ್ಲಿ ಸಾಹಿತ್ಯಕ್ಷೇತ್ರದಲ್ಲಿ ಒಬ್ಬ ಪುರೋಗಾಮಿಗಳಾದರೆಂದರೆ ಹೆಚ್ಚಾಗದು. 1918ರಿಂದ ಅವರು ಪ್ರತಿ ವರ್ಷವೂ ಕನಿಷ್ಟಪಕ್ಷ ಒಂದು ನಾಟಕವನ್ನಾದರೂ ಬರೆಯದಿರಲಿಲ್ಲ. ಅವರ ಹಲವೊಂದು ನಾಟಕಗಳನ್ನು ಕೆನರಾ ಹೈಸ್ಕೂಲಿನ ವಿದ್ಯಾರ್ಥಿಗಳು ವಾರ್ಷಿಕ ಸಮಾರಂಭಗಳ ಸಮಯದಲ್ಲಿ ಅಭಿನಯಿಸಿರುವರು. ಎಲ್ಲ ನಾಟಕಗಳೂ ಒಂದೇ ರೀತಿಯ ಗೌರವದಿಂದಲೂ ಭಾಷಾಗಾಂಭೀರ್ಯದಿಂದಲೂ ಕೂಡಿದವುಗಳಾಗಿರುತ್ತವೆ. ಅವರ ನಾಟಕಗಳಲ್ಲಿ ಬರುವ ವಿನೋದವು ದ್ವೇಷಸಾಧನೆಯನ್ನಾಗಲಿ ಹೀನ ಅಭಿಪ್ರಾಯಗಳನ್ನಾಗಲಿ ಉಂಟುಮಾಡುವಂತಹುದಲ್ಲ. ಅವು ಮನೋರಂಜನೆಯನ್ನುಂಟುಮಾಡುವ ಲಘುಹಾಸ್ಯದಿಂದ ಕೂಡಿರುವುವು. ಅವರು ನಾಟಕದ ಮಾತುಗಳಲ್ಲಿ ಅಲ್ಲಲ್ಲಿ ಸೇರಿಸುವ ಶ್ಲೇಷಾರ್ಥಗಳನ್ನು ಇತರ ನಾಟಕ ಲೇಖನಗಳಲ್ಲಿ ಕಾಣುವುದು ಅಪರೂಪ. ಅವರು ಯಾವ ವಿಷಯವನ್ನೇ ಕುರಿತು ಬರೆಯಲಿ, ಅದಕ್ಕೆ ಆಧುನಿಕ ರೂಪವನ್ನು ಕೊಡುತಿದ್ದರು. ಹಳೆಯ ಘಟನೆಗಳನ್ನು ಅಭಿನಯಿಸುವ ನಾಟಕಗಳಾಗಿದ್ದರೂ ಕೂಡ ಅವುಗಳಿಗೆ ತಮ್ಮದೇ ಒಂದು ವೈಶಿಷ್ಟ್ಯವಿದ್ದೇ ಇದೆ.

ಅವರ ನಾಟಕಗಳನ್ನು ಅನುಕ್ರಮವಾಗಿ ಓದಿದರೆ, ಲೇಖಕರ ಅನುಕ್ರಮವಾದ ಮನಃಸ್ಥಿತಿಯು ವಿಷದವಾಗಿ ತಿಳಿಯುವುದು. ಏಕೆಂದರೆ ಇತರ ಬರೆಹಗಳಿಗಿಂತಲೂ ಈ ನಾಟಕಗಳೇ ಅವರ ಮನಸ್ಸನ್ನು ಪ್ರತಿಬಿಂಬಿಸಿ ತೋರಿಸುತ್ತವೆ. ಇದರಿಂದ ನಾಟಕ ಬರೆಯುವುದು ಅವರಿಗೆ ಹೆಚ್ಚಾಗಿ ಪ್ರಿಯಕರವಾಗಿದ್ದಿತೆಂದೂ

ಅದು ಅವರಿಗೆ ಒಂದು ಕುಶಲಕಲೆಯಾಗಿದ್ದಿತೆಂದೂ ತಿಳಿಯಬಹುದು. ಅವರ ನಾಟಕಗಳಲ್ಲಿನ ಭಾಷಾಸರಳತೆ, ಅವುಗಳಲ್ಲಿನ ಅನುಪಮವಾದ ಶಬ್ದಲಹರಿ, ಅಲ್ಲಲ್ಲಿ ಕಾಣಿಸುವ ಸೂಕ್ಷ್ಮವಾದ ನಗೆಯ ಮಾತುಗಳು, ಭಾಷಾಗಾಂಭೀರ್ಯ, ಉತ್ಕೃಷ್ಟವಾದ ಆಧುನಿಕ ವಿಚಾರ—ಇವು ಅವರ ವೈಶಿಷ್ಟ್ಯಗಳಾಗಿವೆ. ಅವರ ಪಾತ್ರರಚನೆಯು ತಡೆಯಿಲ್ಲದುದಾಗಿದ್ದು, ಹಳೆಯ ಉಡುಪುಗಳಲ್ಲಿದ್ದರೂ ಅತಿ ಆಧುನಿಕವೆನ್ನಬಹುದು. ಪ್ರತಿಯೊಂದು ನಾಟಕವನ್ನು ಓದಿ ಮುಗಿಸುವಾಗ ಓದುಗನ ಮನಸ್ಸಿನಲ್ಲಿ ಒಂದು ಸಮಸ್ಯೆಯನ್ನು ಹುಟ್ಟಿಸಿ ಬಿಡುವುದು. ಒಂದೇ ಮಾತಿನಲ್ಲಿ ಹೇಳುವುದಾದರೆ, ಇವೆಲ್ಲ ನಾಟಕಗಳು ಶ್ರೀ. ಕಾಮತರ ಅಸಾಮಾನ್ಯ ಪ್ರತಿಭೆಯನ್ನು ಸ್ಪಷ್ಟವಾಗಿ ಬೆಳಕಿಗೆ ತರುತ್ತಿವೆ. ಕೆಲವು ನಾಟಕಗಳ ವಸ್ತು ವಿಷಯಗಳನ್ನು ಅವರು ಬೇರೆ ಭಾಷೆಗಳಿಂದ ಎತ್ತಿರುವರಾದರೂ, ಕಾಮತರ ಕೈಯಲ್ಲಿ ಅವು ಬೇರೆ ರೂಪ ವನ್ನು ತಾಳಿ ಕೇವಲ ಹೊಸದಾಗಿ ಮಾರ್ಪಟ್ಟಿರುವುವು. ಬೇರೆ ಭಾಷೆಯ ನಾಟಕ ಗಳಿಂದ ಉದ್ಧೃತವಾದ ವಿಷಯಗಳನ್ನು ನಮ್ಮ ನಾಡು, ನಮ್ಮ ಜನರು, ನಮ್ಮ ಸ್ಥಿತಿಗತಿ, ಇವುಗಳಿಗೆ ಅನುಕೂಲಿಸುವಂತೆ ಮಾಡಿ ಅದಕ್ಕೆ ಬೇಕಾದ ತನ್ನದೇ ಒಂದು ರೀತಿಯ ಸೊಬಗನ್ನು ಕೊಟ್ಟು, ತನ್ನ ಲೋಕಾನುಭವವು ಅದರಲ್ಲಿ ತುಂಬಿಸಿ, ಭಾಷಾಂತರಗಳೆಂದು ಕರೆಯಲ್ಪಡಲು ಅಸಾಧ್ಯವಾಗುವಂತೆ ನವೀನ ನಾಟಕ ಗಳನ್ನೇ ರಚಿಸಿಬಿಡುತಿದ್ದರು.

ಅವರ ನಾಟಕಗಳನ್ನು ಸ್ವಾಭಾವಿಕವಾಗಿ ಆರು ತರಗತಿಯವುಗಳನ್ನಾಗಿ ವಿಂಗ ಡಿಸಬಹುದು. ಪೌರಾಣಿಕ ಕಥೆಗಳು ಅವರ ಸುಂದರವಾದ ಹಲವು ಏಕಾಂಕ ನಾಟಕಗಳ ವಸ್ತುಗಳಾಗಿವೆ. ಅವುಗಳಲ್ಲಿ ಚಂದ್ರಹಾಸಾಭ್ಯುದಯ, ತುಕಾರಾಮ, ಮಧುಸೂದನ, ಅರ್ಜುನನ ಚಾತುರ್ಮಾಸ, ದಾಮಾಜಿಪಂತ, ನಾಗಾನಂದ, ಮಧ್ಯಮ ವ್ಯಾಯೋಗ, ಸಾಧನೆ, ಕೃಷ್ಣಸಂಧಾನ, ಚಿತ್ರಾಂಗದ ಇವು ಕೆಲವಾಗಿವೆ. ಇವುಗಳ ಕಥೆಗಳು ಪುರಾಣಕಾಲದ್ದಾಗಿದ್ದರೂ, ಶ್ರೀ. ಕಾಮತರು ಅವುಗಳೆಲ್ಲವುಗಳಿಗೆ ಆಧುನಿಕ ರೂಪವನ್ನು ಕೊಟ್ಟು, ಅವನ್ನು ಬರೆವ ಕಾಲದಲ್ಲಿ ನಮ್ಮ ದೇಶದಲ್ಲಿ ತಲೆದೋರಿದ ಸಮಸ್ಯೆಗಳನ್ನು ಅವು ಪ್ರತಿಪಾದಿಸುವಂತೆ ಬರೆದಿರುವರು. 'ಕೃಷ್ಣಸಂಧಾನ'ದಲ್ಲಿ ಅಹಿಂಸೆಯೇ, ಹಿಂಸೆ ಯುದ್ಧಗಳಿಗಿಂತ ಉತ್ಕೃಷ್ಟವಾದುದೆಂದು ಪ್ರಬಲ ಆಧಾರಗಳಿಂದ ಉಲ್ಲೇಖಿಸಿದ್ದಾರೆ. ಕಾಮತರು ದೈವಾಧೀನರಾಗುವ ಎರಡೇ ತಿಂಗಳ ಮೊದಲು ಬರೆದ 'ಸಾಧನೆ' (ಏಕಲವ್ಯನ ಕತೆ) ನಾಟಕದಲ್ಲಿ, ಅವರು 'ಏಕಲವ್ಯನ' ಮುಖದಿಂದ ಅಹಿಂಸಾತತ್ತ್ವದ ಮಹತ್ತ್ವವನ್ನೂ ಯುದ್ಧದ ದುಷ್ಪರಿಣಾಮಗಳನ್ನೂ ಬೋಧಿಸಿದ್ದಾರೆ. ಈ ನಾಟಕದಲ್ಲಿ ಏಕಲವ್ಯನು ತನ್ನ ಧರ್ಮಾಚರಣೆಯ ವೇದಿಕೆಯಲ್ಲಿ ತನ್ನ ಸಾಮರ್ಥ್ಯ, ಶಿಕ್ಷಣೆಗಳನ್ನು ಬಲಿ ಕೊಡಲು ಸಿದ್ಧನಾದ ಅತ್ಯುತ್ತಮ ಆಧುನಿಕ ತಾತ್ತ್ವಿಕನಂತಿದ್ದಾನೆ. ಅರ್ಜುನನ ಚಾತುರ್ಮಾಸದಲ್ಲಿ ಅಡಗಿದ ಸೂಕ್ಷ್ಮ ವಿನೋದವು ಕೇಳುವವರಲ್ಲಿ

ಮಂದಹಾಸವು ಮೊಳೆದೋರುವಂತೆ ಮಾಡುತ್ತದೆ. ಬಹುಶಃ ಅವರ ಪೌರಾಣಿಕ ನಾಟಕಗಳಲ್ಲಿ 'ಕೃಷ್ಣಸಂಧಾನವೇ' ಸರ್ವೋತ್ಕೃಷ್ಟವಾದುದೆನ್ನಬಹುದು. ಏಕೆಂದರೆ ಅದರೊಳಗೆ ಅಡಕವಾದ ಕೃಷ್ಣ ದುರ್ಯೋಧನರ ಸಂಭಾಷಣೆಯು ಉಜ್ವಲ ವಿಚಾರಪೂರ್ಣವೂ, ಉತ್ತೇಜಕವೂ ಆಗಿದೆಯೆಂದು ಧಾರಾಳವಾಗಿ ಹೇಳಬಹುದು.

ಅವರು ಬರೆದ ಸಾಮಾಜಿಕ ನಾಟಕಗಳಲ್ಲಿ ಮುಖ್ಯವಾದುವುಗಳೆಂದರೆ 'ಶುಕ ಶಿಕ್ಷಣ', 'ಯೋಗಕ್ಷೇಮ', ವಜ್ರಮುಷ್ಟಿ, 'ಮರ್ಜಿ', ದಿವಂಗತ, 'ಉದ್ಧಾರಾನಂದ', 'ಪುನರ್ಜನ್ಮ', ವಂತಿಗೆ, 'ಸದ್ರಿ ಸುಬ್ಬ' ಮತ್ತು 'ಮೆಂಬರು'. ಇವುಗಳಲ್ಲಿ ಹೆಚ್ಚಿನವು ವಿನೋದಮಯವಾಗಿವೆ. ವಿನೋದವಾದರೋ ಉತ್ತಮವೂ, ಉದಾತ್ತವೂ ಸ್ವಾಭಾವಿಕವೂ ಎನ್ನಬಹುದು. ಚಂದಾ ಎತ್ತಲು ಮತ್ತು ಧರ್ಮಕಾರ್ಯಗಳಿಗೆ ಹಣ ವಸೂಲು ಮಾಡಲು ತಿರುಗುವವರ ಪೀಡೆಯನ್ನು ವಿನೋದಕರವಾದ ರೀತಿ ಯಲ್ಲಿ 'ವಂತಿಗೆ' ನಾಟಕದಲ್ಲಿ ಚಿತ್ರಿಸಿರುತ್ತಾರೆ. ಕೋರ್ಟಿನಲ್ಲಿ ಕಕ್ಷಿಗಾರರು ಪಡುವ ಕಷ್ಟನಷ್ಟಗಳ ಚಿತ್ರವನ್ನು 'ಸದ್ರಿ ಸುಬ್ಬ' ನಾಟಕದಲ್ಲಿ ಕಾಣಬಹುದು. ಇನ್ನು, 'ದಿವಂಗತ'ದಲ್ಲಿ ಅಕ್ಕತಂಗಿಯರು, ಸತ್ತಿರುವಳೆಂದು ಭಾವಿಸಲ್ಪಟ್ಟ ತಮ್ಮ ತಾಯಿಯ ಸಂಪತ್ತನ್ನು ಹಂಚಿಕೊಳ್ಳಲು ಹೂಡಿದ ಕಾಳಗವನ್ನು ವರ್ಣಿಸಿರುವರು, 'ಉದ್ಧಾರಾನಂದ'ವು ಲೇ ಮಿಸರೇಬಲ್ ಪುಸ್ತಕದ ಪ್ರಸಿದ್ಧವಾದ 'ಬಿಷಪ್ಸ್ ಕೆಂಡಲ್ ಸ್ಟಿಕ್ಸ್' ಎಂಬ ವಸ್ತುವಿನಿಂದ ಎತ್ತಿದ್ದಾರೆ. ಮಿತ್ರಮಂಡಳಿಯ ಪುಸ್ತಕ ವೊಂದರಲ್ಲಿ ಪ್ರಕಟವಾದ 'ಪುನರ್ಜನ್ಮ'ವು ಅತ್ಯಂತ ಸರಸವಾದ ವಿನೋದಾಭಿನಯ ವಾಗಿದ್ದು ಕನ್ನಡ ಸಾಹಿತ್ಯದಲ್ಲಿ ಬಹು ಅಪರೂಪವಾದುದಾಗಿದೆ. ಅದು ಒಬ್ಬ ಲೋಭಿಯ ಅವಸ್ಥೆಯನ್ನು ತೋರಿಸುವ ನಾಟಕವು. ಅವನ ಲೋಭವನ್ನು ಹೋಗಲಾಡಿಸಲು ಅವನ ಬಂಧುಬಾಂಧವರು ಒಳಸಂಚು ನಡೆಸಿ ಅವನು ಸತ್ತಿ ರುವನೆಂದು ಪ್ರಕಟಿಸಿ ಅವನ ಕಣ್ಮುಂದೆಯೇ ಅವನ ಉತ್ತರಕ್ರಿಯೆಗಳ ಅಣಿ ಮಾಡುತ್ತಾರೆ. ಮೊದಲಿಂದ ಕೊನೆಯತನಕವೂ ನಕ್ಕು ನಕ್ಕು ಸಾಕಾಗುತ್ತದೆ. ಅದನ್ನು ಎಷ್ಟೋ ಶಾಲೆಗಳಲ್ಲಿ ಅಭಿನಯಿಸಿರುವುದಾದರೂ, ಈಗಲೂ ಕೇವಲ ನವೀನ ನಾಟಕದಂತೆಯೇ ಇದೆ. 'ಮೆಂಬರು' ನಾಟಕವು ಚುನಾವಣೆಯ ಸಮಸ್ಯೆ ಯನ್ನು ಬಿಡಿಸುವ ವಿನೋದಾತ್ಮಕ ನಾಟಕವಾಗಿರುವುದು. 'ವಜ್ರಮುಷ್ಟಿ'ಯು ಗುರುಗೋವಿಂದನ ಜೀವನದೊಳಗಿನ ಒಂದು ಘಟನೆಯನ್ನು ಬೆಳೆಯಿಸಿ ಮಾಡಿದ ಕೃತಿಯು. ಇದರಲ್ಲಿ ಹರಿಜನೋದ್ಧಾರ ಮತ್ತು ಅಸ್ಪೃಶ್ಯತಾನಿವಾರಣೆಯ ಕುರಿತು ಉತ್ಕೃಷ್ಟವಾದ ಪ್ರತಿಪಾದನೆಯಿದೆ.

ಶ್ರೀ. ಕಾಮತರು ಕೆಲವು ಐತಿಹಾಸಿಕ ನಾಟಕಗಳನ್ನು ಬರೆದಿರುವರು. 'ಮೌರ್ಯ ಸಿಂಹಾಸನ,' 'ಪ್ರತಾಪಸಿಂಹ', 'ಚಂದ್ರರಾವ್ ಮೋರೆ', ಇವುಗಳಲ್ಲಿ ಐತಿ

ಹಾಸಿಕ ನೇಪಥ್ಯದಲ್ಲಿ ಬರೆಯುತ್ತಿದ್ದ ಕಾಲದ ಪ್ರಸ್ತುತ ಸಮಸ್ಯೆಗಳನ್ನು ಸಾಧ್ಯವಿದ್ದಷ್ಟು ಚರ್ಚಿಸಲು ಪ್ರಯತ್ನಿಸಿದ್ದಾರೆ.

ಇತ್ತೀಚೆಗೆ ಕೆಲವು ವರ್ಷಗಳಿಂದ ಶ್ರೀ. ಕಾಮತರು ಚಿಕ್ಕ ಮಕ್ಕಳ ಮನಸ್ಸಿನ ಅಭಿರುಚಿಯನ್ನರಿತುಕೊಂಡು, ಅದಕ್ಕನುಸಾರವಾಗಿ ಹೊಸ ವಿಷಯಗಳನ್ನೇ ತಮ್ಮ ನಾಟಕದ ವಸ್ತುಗಳನ್ನಾಗಿ ಆರಿಸಿದ್ದರು. ಯಾವ ವಿಷಯಗಳು ಚಿಕ್ಕ ಮಕ್ಕಳಿಗೆ ಅತೀವ ಮನೋರಂಜನೆಯನ್ನುಂಟು ಮಾಡಬಹುದೋ, ಯಾವುದನ್ನು ಅಭಿನಯಿಸುವಾಗ ಚಿಕ್ಕ ಮಕ್ಕಳು ಅತ್ಯಂತ ಸಂತೋಷದಿಂದ ನಲಿಯುತ್ತಿರಬಹುದೋ ಅಂತಹ ವಿಷಯಗಳನ್ನು ಕುರಿತು ಹಲವು ನಾಟಕಗಳನ್ನು ಬರೆದಿರುವರು. ಅವುಗಳಲ್ಲಿ ಒಂದಾದ 'ಮಾಲಿ' ಎಂಬ ನಾಟಕವು ನಮ್ಮ ಹಳೆಯ ಕಾಲದ ನಾಟಕದ ಪದ್ಧತಿಗಳನ್ನು ಹಳೆಯ ಪದಗಳ ರಾಗಗಳನ್ನು ಇನ್ನೊಮ್ಮೆ ನೆನಪಿಗೆ ತರುವಂತಹ ಪರಿಸ್ಥಿತಿಯದಾಗಿದೆ. 'ಕಥೆ ಹೇಳುವಿಕೆ' ಎಂಬ ಇನ್ನೊಂದು ನಾಟಕವು ಇಂತಹ ನಾಟಕಗಳಲ್ಲಿ ಅತ್ಯುತ್ಕೃಷ್ಟವಾದುದು. ಇದನ್ನು 1937ರಲ್ಲಿ ಕೆನರಾ ಹೈಸ್ಕೂಲಿನಲ್ಲಿ ಅಭಿನಯಿಸಿದ್ದರು. ಇದರಲ್ಲಿ ಚಿಕ್ಕ ಮಕ್ಕಳಿಗೆ ಧಾರಾಳವಾಗಿ ಅಭಿನಯಿಸಲೂ, ಹಾಡಲೂ, ಕುಣಿಯಲೂ ಸಂದರ್ಭಗಳನ್ನು ಶ್ರೀ. ಕಾಮತರು ಕಲ್ಪಿಸಿರುವರು.

ಅವರು ಇತ್ತೀಚೆಗೆ ಪ್ರಾಣಿಗಳ ಅಭಿನಯವನ್ನು ಪ್ರದರ್ಶಿಸಲು ಹೊಸ ರೀತಿಯ ನಾಟಕಗಳನ್ನು ಬರೆಯಲು ಪ್ರಾರಂಭಿಸಿದ್ದರು. ಕನ್ನಡದಲ್ಲಿ ಇಂತಹ ಸಾಹಸವನ್ನು ಮಾಡಿದವರಲ್ಲಿ ಶ್ರೀ. ಕಾಮತರೇ ಅಗ್ರಗಣ್ಯರು. ಆಂಗ್ಲ ದೇಶದ ಶಾಲೆಗಳಲ್ಲಿ ಬಳಕೆಯಲ್ಲಿರುವ ಅಂತಹ ಮೃಗಾಭಿನಯಗಳೇ ಶ್ರೀ. ಕಾಮತರಿಗೆ, ಇಲ್ಲಿಯೂ ಅಂತಹ ನಾಟಕಗಳನ್ನು ಬರೆಯಲು ಉತ್ತೇಜನವನ್ನಿತ್ತಿತೆಂದು ನಾವು ನೆನಸಬೇಕು. 'ಸೊಕ್ಕಿನ ಬೆಕ್ಕು', ಹಾರೆ ಧೊರೆ, ಮರಗಳ ಕೂಗು, ಯುದ್ಧಾಂತ್ಯ,' ಮುಂತಾದುವು ಈ ವರ್ಗದ ನಾಟಕಗಳು. ಇವುಗಳನ್ನು ಒಂದಲ್ಲ ಇನ್ನೊಂದು ಶಾಲೆಯಲ್ಲಿ ಅಭಿನಯಿಸಿರುವರು. ಮರಗಳೂ, ಮೃಗಗಳೂ ರಂಗದ ಮೇಲೆ ಬಂದು ತಮ್ಮ ಸಮಸ್ಯೆಗಳನ್ನು ಕುರಿತು ತಾವೇ ಮಾತಾಡುವಂತೆ ಮಾಡಿದ ಮೊದಲನೇ ಲೇಖಕರು ಶ್ರೀ. ಕಾಮತರೆಂದು ಹೇಳಬೇಕು. ಇವುಗಳಲ್ಲಿ 'ಯುದ್ಧಾಂತ್ಯ'ವು ಒಂದು ಉತ್ಕೃಷ್ಟವಾದ ನಾಟಕವಾಗಿದೆ. ಪ್ರಬಲವಾದ ಯುದ್ಧವಾಗಿ ಮಾನವಕುಲವೇ ಅಳಿದ ಮೇಲೆ ಕಾಡೊಂದರಲ್ಲಿ ಹುಲಿ, ಸಿಂಹ, ಹಾವು, ಎತ್ತು, ಕುದುರೆ, ನಾಯಿ, ಮಂಗ, ರೋಗಾಣು, ಇವು ಕಲೆತು ಮಾನವನ ಬುದ್ಧಿಗೇಡಿತನಕ್ಕಾಗಿ, ಒಬ್ಬರನ್ನೊಬ್ಬರು ಕೊಂದುಕೊಂಡುದಕ್ಕಾಗಿ, ನಕ್ಕು ಆನಂದಿಸುತ್ತಿವೆ. ತಮ್ಮನ್ನು ಹಿಂಸಿಸುತ್ತಿದ್ದ, ತಮ್ಮ ಮೇಲೆ ಆಧಿಪತ್ಯವನ್ನು ನಡೆಸುತ್ತಿದ್ದ ಮಾನವಕುಲವೇ ನಿರ್ನಾಮವಾದುದಕ್ಕಾಗಿ ಒಂದು ಪೀಡೆ ನಿವಾರಣೆಯಾಯಿತೆನ್ನುವುವು. ನಾಯಿ ಮಾತ್ರ ಮನುಷ್ಯನಿಗಾಗಿ

ಮರುಗುತ್ತಿದೆ. ಇದು ಶ್ರೀ. ಕಾಮತರು ಬರೆದ ಉದಾತ್ತ ನಾಟಕಗಳಲ್ಲೊಂದು. ಇದನ್ನು ಅವರು ಕಳೆದ ದಶಂಬರದಲ್ಲಿ ಬರೆದುದರಿಂದ ಇದು ಅವರ ಸುರಿತ ಅನುಭವದ ತಿರುಳಿಂದರೂ ಸಲ್ಲುವುದು.

ಅವರ ನಾಟಕಗಳಲ್ಲಿ ಮೂರು, ಶಾಲಾ ಜೀವನಕ್ಕೆ ಸಂಬಂಧಿಸಿದವುಗಳು. 'ನಮ್ಮ ನಾಟಕಾಭಿನಯ'ವೆಂಬ ನಾಟಕದಲ್ಲಿ ನಾಟಕಕ್ಕೆ ಮೊದಲು ಪಾತ್ರಧಾರಿಗಳನ್ನು ಹೇಗೆ ತರಬೇತುಗೊಳಿಸಲಾಗುತ್ತದೆಂದು ವಿನೋದಕರವಾಗಿ ಚಿತ್ರಿಸಲಾಗಿದೆ. ಮತ್ತೊಂದು 'ಟ್ಯೂಶನ್ ಫೀ' ಎಂಬುದು. ಇನ್ನೊಂದು 1938ರಲ್ಲಿ ಬರೆಯಲ್ಪಟ್ಟ 'ಶಿಕ್ಷಣ ಪರೀಕ್ಷೆ' ಎಂಬ ನಾಟಕವು. ಇದು ಪರೀಕ್ಷೆಯೆಂಬ ಸಮಸ್ಯೆಯನ್ನು ಪ್ರತಿಪಾದಿಸುವುದು. ಇದರಲ್ಲಿ ಮೂರು ದೃಶ್ಯಗಳು. ಮೊದಲನೇ ದೃಶ್ಯದಲ್ಲಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ಸೇರಿ, ತಮ್ಮ ಪರೀಕ್ಷೆಯನ್ನು ಕುರಿತು ಚರ್ಚಿಸುವುದು, ಅವರ ಹುಡುಗಾಟಿಕೆಯ ಹೆದರಿಕೆ, ಅವರ ಸಮಸ್ಯೆಗಳು, ಅವರು ಕಲಿತ ವಿಷಯಗಳು, ಎಲ್ಲ ವರ್ಣಿತವಾಗಿವೆ. ಮಕ್ಕಳಿಗೆ ಸ್ವಾಭಾವಿಕವಾದ ಮುಗ್ಧಭಾವವು ಪ್ರತಿಯೊಬ್ಬ ಹುಡುಗನ ಮಾತಿನಲ್ಲಿ ತುಂಬಿ ತುಳುಕಿ, ಓದುಗರಲ್ಲಿ ಹಿಡಿಸಲಾರದ ಆನಂದವನ್ನು ಇದು ಉಂಟು ಮಾಡುವುದು. ಎರಡನೇ ದೃಶ್ಯದಲ್ಲಿ, ಹಳ್ಳಿಯ ಶಾಲಾ ಪರೀಕ್ಷೆಯನ್ನು ಮುಗಿಸಿದ ಹುಡುಗರು ಒಟ್ಟು ಸೇರುವರು. ಮುಂದೆ ಪಟ್ಟಣದ ಶಾಲೆಗೆ ಹೋಗುವುದೇ, ಹಳ್ಳಿಯಲ್ಲಿ ಜೀವನ ತೊಡಗುವುದೇ ಎಂಬುದು ಅವರೊಳಗೆ ಬಿಡಿಸಲಾಗದ ಸಮಸ್ಯೆಯು. ಆಗ ತಾನೆ ಪಟ್ಟಣದ ಕೊಲೇಜಿನಲ್ಲಿ ಕಲಿಯುವ ಆ ಹಳ್ಳಿಯ ಹುಡುಗನೊಬ್ಬನು ಅಲ್ಲಿಗೆ ಬಂದು ತನ್ನ ಕೊಲೇಜಿನ ವಿದ್ಯಾಭ್ಯಾಸದ ಅನುಭವಗಳನ್ನು ಹುಡುಗರ ಮುಂದಿಡುವನು. ಆ ಮಾತುಗಳಲ್ಲಿನ ಸರಸ ವಿನೋದವನ್ನು ಎಷ್ಟೆನ್ನಲಾಗುವುದಿಲ್ಲ. ಮೂರನೇ ದೃಶ್ಯದಲ್ಲಿ ಅನೇಕ ಶಾಲಾ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರು ತಮ್ಮ ಶಾಲಾ ರಜತೋತ್ಸವ ಸಮಾರಂಭದ ದಿನ ಶಾಲೆಯಲ್ಲಿ ಒಟ್ಟುಗೂಡುವರು. ಅಲ್ಲಿ ತಮ್ಮ ಜೀವನದ ಸಮಸ್ಯೆಯನ್ನು ಕುರಿತು ಚರ್ಚಿಸಿ, ಪರೀಕ್ಷೆ ಎಂದರೇನು? ದೇಶೋದ್ಧಾರಕ್ಕಾಗಿ ತಾವು ಮಾಡತಕ್ಕ ಕೆಲಸಗಳೇನು ಎಂಬುದನ್ನೆಲ್ಲ ತಿಳಿದುಕೊಳ್ಳುವರು. ಈ ನಾಟಕದ ಮೂರು ಮೆಟ್ಟಲುಗಳು ಪ್ರತಿಯೊಬ್ಬನೂ ಸಾಮಾನ್ಯವಾಗಿ ಜೀವನದಲ್ಲಿ ಅನುಭವಿಸಬೇಕಾದ ಮೂರು ಅವಸ್ಥೆಗಳನ್ನು ಸೂಚಿಸುತ್ತವೆ. ಇದರೊಳಗಿನ ಪರೀಕ್ಷೆ ಎಂಬ ವಿಚಾರವು ಶ್ರೀ. ಕಾಮತರ ತೀಕ್ಷ್ಣ ಬುದ್ಧಿಶಕ್ತಿಯನ್ನೂ, ಮಹಾಶಕ್ತಿಯನ್ನೂ ತೋರ್ಪಡಿಸುತ್ತದೆ. ಈ ನಾಟಕದ ಕುರಿತಾಗಿ ಶ್ರೀ. ಕಾಮತರು ಹೆಚ್ಚು ಕಾಲ ಯೋಚಿಸುತ್ತಿದ್ದುದು ನನಗೆ ತಿಳಿದಿದೆ. ಆದರೆ ಒಮ್ಮೆ ನಾಟಕದ ವಿಷಯಗಳೆಲ್ಲ ಅವರ ಮನಸ್ಸಿನಲ್ಲಿ ಸಂಗ್ರಹವಾದೊಡನೆ, ಅದು ಅವರ ಲೇಖನಿಯಿಂದ ಧಾರಾಕಾರವಾಗಿ ಹರಿಯತೊಡಗಿತು. ಕೆಲವೇ ತಾಸುಗಳಲ್ಲಿ ನಾಟಕದ ಪ್ರತಿಯು ತಯಾರಾಯಿತು.

ಕಾಮತರ ಬರೆಹಗಳಲ್ಲೆಲ್ಲ, ಅವು ಕತೆಗಳಾಗಿರಲಿ, ಕವಿತೆಗಳಾಗಿರಲಿ, ನಾಟಕಗಳಾಗಿರಲಿ, ಮೇಲೆ ಹೇಳಿದ ವೈಶಿಷ್ಟ್ಯವು ಇದ್ದಿತು. ಅವರ ಮನಸ್ಸಿನಲ್ಲಿ ನಾಟಕ ರಚನೆಗೆ ಬೇಕಾದ ಭಾವನೆಗಳೂ ಕಲ್ಪನೆಗಳೂ ಹೇಗೆ, ಎಂದು, ಬರುತ್ತಿದ್ದುವೆಂದು ನಮಗೆ ಗೊತ್ತಾಗುತ್ತಿರಲಿಲ್ಲ. ಒಮ್ಮೆ ಏನನ್ನಾದರೂ ಬರೆಯಲು ಅವರು ಲೇಖನಿಯನ್ನು ಕೈಯಲ್ಲಿ ಹಿಡಿದರೆಂದರೆ ಅದು ಪೂರ್ಣ ಮುಗಿಯುವ ತನಕ ಲೇಖನಿಗೆ ವಿರಾಮವಿರಲಿಲ್ಲವೆಂಬುದು ಮಾತ್ರ ನಮಗೆ ತಿಳಿದಿದೆ. ಬರೆದುದನ್ನು ಓದಿ ನೋಡುವ ಆವಶ್ಯಕತೆಯು ಅವರಿಗೆ ಇರುತ್ತಿರಲಿಲ್ಲ. ಅವರ ಬರೆಹಗಳಲ್ಲಿ ಪ್ರಯತ್ನವಾಗಲಿ, ಪೇಚಾಟವಾಗಲಿ, ಪರಿಶ್ರಮವಾಗಲಿ ಕಂಡುಬರುವುದಿಲ್ಲ. ಅವರ ಎಲ್ಲ ನಾಟಕಗಳೂ ಸ್ವಾಭಾವಿಕವಾಗಿ ಹರಿದು ಬಂದಂತೆ ತೋರುತ್ತವೆ. ಅವು ಬಹು ಪ್ರಯತ್ನದಿಂದ ಹೊರಡಿಸಿದವುಗಳೆಂದು ಎಂದೂ ಹೇಳಬರುವಂತಿಲ್ಲ. ಇವುಗಳಲ್ಲಿ ಹೆಚ್ಚಿನ ನಾಟಕಗಳನ್ನು ಅಭಿನಯಿಸಲು ಕೆಲವೇ ಉಪಕರಣಗಳು ಸಾಕಾಗುವುವು. ವಿದ್ಯಾರ್ಥಿಗಳು ತಾವಾಗಿಯೇ ಅವುಗಳನ್ನು ಅಭಿನಯಿಸಲು ಅನುಕೂಲವಾಗಿವೆ. ನಾಟಕದ ತಿರುಳನ್ನು ಅವರು ಬಹುಬೇಗನೆ ಅರಿತುಕೊಳ್ಳಬಲ್ಲರು. ಅವರ ನಾಟಕಗಳು ಮನೋರಂಜಕಗಳಾಗಿರುವುದರೊಡನೆ ವಿಚಾರವನ್ನು ಹುಟ್ಟಿಸುವವುಗಳಾಗಿದ್ದು ಸಾಹಿತ್ಯ ದೃಷ್ಟಿಯಿಂದಲೂ ಸ್ವೀಕರಿಸಲ್ಪಡಲು ಅತ್ಯುತ್ತಮವಾದುವುಗಳಾಗಿವೆ.

ಶ್ರೀ. ಕಾಮತರು ತಮ್ಮ ನಾಟಕಗಳಿಗೆ ಅಭಿನಯಕಾರರನ್ನು ತರಬೇತುಗೊಳಿಸುವುದನ್ನು ನಾನು ನೋಡಿರುವೆನು. ಅವರು ಪಾತ್ರಧಾರಿಗಳಿಗೆ ಸಲಹೆ ಕೊಟ್ಟು ಅಭಿನಯ ಕಲಿಸುತ್ತಿದ್ದುದನ್ನು ನೋಡಲು ಆನಂದವೇ ಸರಿ. ಅಂತಹ ಸಂದರ್ಭದಲ್ಲಿ ಅವರು ಆಗಾಗ ವಿನೋದಾತ್ಮಕ ಸೂಚನೆಗಳಿಂದ ಬೇಸರವನ್ನು ಮರೆಯುವಂತೆ ಮಾಡುತಿದ್ದರು. ಪಾತ್ರಧಾರಿಗಳಿಗೆ ಸಂಕೋಚವಿಲ್ಲದೆ ತಾನೇ ಅಭಿನಯಿಸಿ ತೋರಿಸಿ ಸಂದರ್ಭಗಳಿಗೆ ಸಮರ್ಪಕವಾದ ಅಭಿನಯಗಳನ್ನು ಕಲಿಸುತಿದ್ದರು. ಕೊಡತಕ್ಕ ಸೂಚನೆಯನ್ನೆಲ್ಲ ಕೊಟ್ಟ ಮೇಲೆ ಅವರ ಸೂಚನೆಗಳಂತೆ ಪಾತ್ರಧಾರಿಗಳು ಅಭಿನಯಿಸಿದುದನ್ನು ಕಂಡು 'ಈ ಅಭಿನಯವೇ ಆ ಸಂದರ್ಭಕ್ಕೆ ಅತ್ಯಂತ ಸಮರ್ಪಕವಾದುದು. ಶ್ರೀ. ಕಾಮತರಿಗೆ ಇದೆಲ್ಲ ಹೇಗೆ ಹೊಳೆಯುತ್ತದಪ್ಪಾ!' ಎಂದು ನಾವು ಆಶ್ಚರ್ಯಪಟ್ಟುದಿದೆ.

ಶ್ರೀ. ಕಾಮತರು ಗಾಯನದಲ್ಲಿಯೂ ಪ್ರತಿಭೆಯುಳ್ಳವರಾಗಿದ್ದರು. ತಮ್ಮ ನಾಟಕಗಳಲ್ಲಿ ಅವರು ಯಥಾಯೋಗ್ಯವಾದ ರಾಗಗಳನ್ನನುಸರಿಸಿ ಅಲ್ಲಲ್ಲಿ ಪದ್ಯಗಳನ್ನು ರಚಿಸಿ ಕೊಡುತಿದ್ದರು. ಅವರ ನಾಟಕದ ಪದಗಳೆಂದರೆ ಹಲಕಾಲದ ತನಕ ಪಟ್ಟಣಿಗರ ಬಾಯಿಹಾಡುಗಳಾಗಿದ್ದು ಅವು ಅಷ್ಟೊಂದು ಜನಪ್ರಿಯವಾಗಿ ಹೋಗುತಿದ್ದುವು.

ಅವರ ಕೆಲವು ನಾಟಕಗಳ ಮೇಲೆ ಹೊರಿಸಬಹುದಾದ ಒಂದು ಟೀಕೆಯೆಂದರೆ, ಅವುಗಳಲ್ಲಿ ವಿಶೇಷ ಅಭಿನಯಕ್ಕೆ ಆಸ್ಪದವಿಲ್ಲದಿದ್ದುದು. ಆದರೆ ಈ ದೋಷವನ್ನು ಅಡಗಿಸಲು ಅಂತಹ ನಾಟಕಗಳಲ್ಲಿನ ಸಂಭಾಷಣೆಯ ಪ್ರವಾಹವೂ, ಶಬ್ದಗಳ ಶ್ಲೇಷಾರ್ಥವೂ ಅವುಗಳಲ್ಲಿ ಒಡೆದು ತೋರುವ ಅವರ ಉದಾತ್ತ ವಿಚಾರಸರಣಿಯೂ ಧಾರಾಳವಾಗಿ ಸಾಕಾಗುವುವು.

ಶ್ರೀ. ಕಾಮತರ ಈ ನಾಟಕಗಳಲ್ಲಿ ಹಲವು ಪುಸ್ತಕರೂಪದಲ್ಲಿ ಇಲ್ಲದುದು ದುಃಖಾಸ್ಪದವಾಗಿದೆ. ಕೆಲವೇನೋ ಪತ್ರಿಕೆಗಳಲ್ಲಿ ಆಗಾಗ ಅಚ್ಚುಗೊಂಡಿದ್ದರೂ ಹಲವು ಇನ್ನೂ ಕೈಬರೆಹದ ಪ್ರತಿಗಳಾಗಿಯೇ ಉಳಿದಿವೆ. ಅವುಗಳನ್ನೆಲ್ಲ ಒಂದುಗೂಡಿಸಿ ಒಂದು ಪುಸ್ತಕವಾಗಿ ಅಚ್ಚು ಹಾಕಿಸದಿದ್ದರೆ ಅವು ಶೀಘ್ರದಲ್ಲಿಯೇ ನಮ್ಮ ಕೈತಪ್ಪುವುವಲ್ಲದೆ ಕನ್ನಡ ಸಾಹಿತ್ಯಕ್ಕೂ ಆ ಭಾಗದಲ್ಲಿ ನಷ್ಟವಿದೆಯೆಂದು ಹೇಳಬಹುದು. ಇದರಿಂದ ಶ್ರೀ. ಕಾಮತರ ಶ್ರೇಯಃಕಾಂಕ್ಷಿಗಳು ಒಂದುಗೂಡಿ ಈ ನಾಟಕಗಳನ್ನೆಲ್ಲ ಮುದ್ರಿಸುವ ಅನುಕೂಲತೆಯನ್ನು ಕಲ್ಪಿಸಿ ಈ ಅಮೂಲ್ಯ ಭಂಡಾರವನ್ನು ಜೋಪನದಿಂದರಗೊಡಿಸುವುದು ಯೋಗ್ಯವಾಗಿದೆ. ಕನ್ನಡದಲ್ಲಿ ನಾಟಕ ಸಾಹಿತ್ಯವು ಇನ್ನೂ ಶೈಶವಾವಸ್ಥೆಯಲ್ಲಿದೆಯೆಂಬುದನ್ನು ಮನಗಂಡಾಗ ಈ ಕರ್ತವ್ಯವಾದರೋ ಅತ್ಯಂತ ಶೀಘ್ರದಲ್ಲಿ ಕೈಕೊಳ್ಳಲ್ಪಡಲು ಯೋಗ್ಯವೆಂದು ತೋರದಿರುವುದೆ? ಇದರಿಂದ ಕನ್ನಡಿಗರಾದ ನಮಗೆ ಅತಿಶಯ ಪ್ರಯೋಜನ, ಆನಂದಗಳು ಸಿಗುವುವು, ಮಾತ್ರವಲ್ಲದೆ ಸಾಹಿತ್ಯದ ಈ ಅಂಗದಲ್ಲಿ ಮುಂದಾಳಿನಂತೆ ಸೇವೆ ಸಲ್ಲಿಸಿದ ಶ್ರೀ. ಕಾಮತರ ಹೆಸರನ್ನು ಚಿರಸ್ಥಾಯಿಯಾಗಿ ಮಾಡಿದಂತಾಗುವುದಿಲ್ಲವೆ?

9—10—'40. **ಜಿ. ಆರ್. ಶೆಣೈ**, ಎಂ. ಎ., ಎಲ್. ಟಿ.

---

# ಎಮ್ಮ ಯನ್ನ

**ಕಾಲವ ಸವಿಸಲು ಕಥೆಗಳು ಬೇಕು,**
**ಮಹನೀಯರ ನೆನವಿರಲೇ ಬೇಕು,**
**ತಮ್ಮವರುನ್ನತಿ ತೆರೆದಿಡಬೇಕು,**
**ರುಚಿಯೇ?— ಓದುಗರರಿತಿರಬೇಕು.**

**"ತಾಪನ"**

---

# AN APPRECIATION

I knew the late M. N. Kamath for thirty years, the last thirty years of his life. During practically the entire period of his service in the Canara High School I was manager and correspondent of the school. I shall ever remember with gratitude that our relations throughout were very friendly tinged on his side with old fashioned respect for a senior in age.

My admiration for his intellectual and social qualities went on increasing year by year. His versatility of intellect was astonishing. There was scarcely a subject on which he couldn't talk in a manner which provoked thought and held your interest. Though only an "undergraduate" his knowledge of English literature and of the science of teaching was greater and more accurate than that of many graduate-teachers of my acquaintance. His gift for teaching was remarkable. He could hold the attention of the taught as very few other teachers could. The only teacher with whom I could compare him in this respect was that very gifted man, the late. Mr. Bantval Padmanabha Baliga who was one of the very earliest teachers in the Canara High School.

Of the ease with which he could write in Kannada his friends and admirers who have paid their tribute to his memory in the public press have spoken. Though I count among my friends—living as well as dead—several whose scholarship was decidedly greater than his, yet I knew of none who possessed his facility of

expression. I have often been in two minds on the question whether a knowledge of Sanskrit—which he lacked—would have added to his merits as a writer in Kannada. When I see the gnarled and difficult style of some whose knowledge of Sanskrit is profound I am inclined to think that it was perhaps as well that he didn't possess a good knowledge of Sanskrit. My ignorance of Kannada literature renders me incompetent to judge of the merits of M. N. Kamath's writings as my friends can judge who have contributed their appreciations to this little volume with their knowledge of that literature. But surely I can count myself among the multitude for whom M. N. Kamath wrote. And after all, except in the case of writings by scholars for scholars, it is the multitude that is the final arbiter of the writings of all authors. Probably M. N. Kamath recognized this. For, rummaging recently my old papers I found among them a good many letters from M. N. Kamath to me speaking of his hopes and fears regarding some of his writings. And I well remember suggesting to him to write a series of short plays based on Indian History. The first of such plays was ಮೌರ್ಯ ಸಿಂಹಾಸನ. I made a few suggestions which he immediately took up and developed with great beauty. What is the test that the multitude apply to the writings that they read? The reply is found in the opinion of a great European writer and critic who says that the ultimate object of all-art is to give pleasure. Judged by that test the verdict in favour of M. N. Kamath is assured.

Kasaragod,
22nd October 1940.

A. Srinivasa Pai.

## *A flower born not to blush unseen*

Mr. M. N. Kamath was my class-mate. His father was a poor Municipal employee. He passed the old F. A. examination of the Madras University along with me in the year 1901. His student life was a strenuous struggle with poverty. He was not able to continue beyond the F. A. and took employment in Calcutta. There in the rich intellectual epoch of the anti-partition agitation, he imbibed to the full the literary spirit of Bengal. Here he developed the histrionic talent which enabled him to produce historical and social dramas of Indian life which were staged on the occasion of school day celebrations in the Canara High School. Some years after he returned to Canara, and after undergoing a course of Secondary training, joined the Buntwal Temple School, and in 1908 he was taken on to the staff of the Canara High School, where he served till his death in April 1940. What struck any person who came into contact with Mr. Kamath was the wide range of his culture. He was at home both in western and eastern Literature and he could equally enjoy ancient classics with their sedate dignity, and modern literature with its movie thrill. The dramas which he wrote were meant not only to portray the past, but to solve problems of the present day. The drama 'Vajra-Mushti' was written at a time when the Hindu world was deeply agitated over the problem of

Temple-Entry and showed how strong Hindu Society will become if untouchability is removed. As a teacher he was unrivalled in imparting instruction in a manner which would evoke the greatest interest in pupils. Though he was not a graduate, he was with the permission of the Educational Department, allowed to teach in the three highest classes of the school, where he handled Geography—a subject on the teaching of which his advice was sought by other educational institutions in Mangalore. Being a poor man with a large family, Kamath had to devote a large part of his time and energy to the preparation of class text books, which would be more paying than literary works. But for the fact that the management of the Canara High School drew him from a Mofussil school, and utilized his dramatic talents in its annual celebrations, Mr. Kamath's talents would have lain hidden under a bushel. If, on the other hand, Mr. Kamath had the facilities which poor boys now have, he would have graduated, and forged his way to the forefront as an educationist. The fact, that with his comparatively poor initial equipment, he made a name for himself in the whole of Karnataka speaks volumes for his great talents which made amends in an ample manner for the shortage in his educational attainments.

**M. Madhava Rao.**

# The late Mr. M. N. Kamath.

I am grateful to the Secretary of the *Mitra-mandali*, Mangalore, and to the Editor of its publications, for requesting me to write one of the prefatory notes to a book of five short stories (entitled ಅಂದಿನ ಅವರೂರು) from the pen of the late Mr. M. N. Kamath, and for permitting me to use my candid literary judgment in estimating the value of his writings. At the same time, they reminded me that his birthplace was the same as mine—the *hobali* of Moolky, well-known for its poetical talent from the beginning of the last century.

Mr. Kamath's talents were more obvious than his scholarship, which was, however, of no mean order. Anyhow, he had the knack generally of making a toothsome mixture of both. The spice was his humour—sly, catching, and genial and hardly ever malicious. His "ನಮ್ಮೂರು", "ಅವರೂರು" and "ಮತ್ತೊಂದೂರು" can be easily identified in this district and I do not think that the people of these places have ever resented the prolonged skit about them: it is so impartial and patently good-humoured. That perpetual sunny smile of his, that refused to relax in the presence of bodily suffering and financial difficulties, carried everything before it.

Mr. Kamath had sound ideas and a fertile imagination and had a facile pen to express both. The fertility of imagination—rather than carelessness or incompetency—made him a bad translator, for imagination loves beauty more than truth, and makes

faithfulness to the original difficult. In fact, imagination generally tinged his words and actions in most aspects.

Adaptability is another characteristic of his in literary and other matters. He was writing beautiful rhymed poetry, but gave it up in favour of unrhymed poetry (with effect in several instances) when he found that the latter had come to stay. More than that, he tried to imitate the obscurity of thought that characterised extreme rhymeless poetry, which seems to be now busy trying to abolish poetical measures or metres, thus making the distinction between prose and poetry nominal and illusory, but for the much vaunted *bhava*, which, more often than not, crumbles into dust. But we may hope for the best in the long run.

Some writers of the prefatory notes opine that poverty stood in the way of Mr. Kamath's literary effort and popularity. This may mean either that a rich writer is better appreciated than a poor one or that a poor writer is, other things being equal, bound to produce poorer or less work than a rich one. If so, the first of these statements is almost a libel on the reading public, and the second on Mr. Kamath himself, though it is known that at first some publishers exploited his poverty. The quantity was all published and he was not the person to allow quality to suffer by his own default.

And, whatever others might say, Mr. Kamath had to write, and did write, for a living, and I do not see why he should not have done so, circumstanced

as he was. But a genuine love of Kanarese literature was with him a main controlling motive.

It is difficult to appraise style in Kanarese as in English. In Kanarese, style is still in an experimental stage or in the early stage of development. Mr. Kamath had no distinctive style, except that humour generally permeated it. The extent of his knowledge of Bengali (properly, Bangali) has never been tested, but it is believed that acquaintance with Bengali stories and novels affected his method in Kanarese.

The chief defect of Mr. Kamath's style occasionally is a curious arrangement of words (so as to present more than one meaning at first sight, or, sometimes, no meaning at all), and a fondness for parenthesis (which made the construction loose and confused). He was not the worst sinner in these respects. He had few figures of speech, but when he did use them, they were more or less effective and frequently witty. He generally avoided punning—that lowest form of wit.

On the whole, we can safely say that Mr. Kamath contributed as much in quality and quantity to Kanarese literature as any modern writer. Armed with a rare sense of humour, he endeavoured to sustain his reputation till his untimely death. Every day he wrote better than on the previous day, and he did so without much conscious effort (though, by the way, he was not a Kannadiga by birth). Karnataka may well be proud of such a writer.

M. Narasinga Rao.

# ಕಾಮತರು

ಶ್ರೀಯುತ ಎಸ್. ಎನ್. ಕಾಮತರು ತಮ್ಮ ಇಹಲೋಕದ ಯಾತ್ರೆಯನ್ನು ಮುಗಿಸಿದರೆಂಬ ವಾರ್ತೆಯು ಇಡೀ ಕನ್ನಡ ನಾಡನ್ನು ದುಃಖಸಾಗರದಲ್ಲಿ ಮುಳುಗಿಸ್ಪದರವು. ಕಳೆದ 40 ವರ್ಷಗಳಿಂದ ಕನ್ನಡ ನಾಡಿಯ ಸೇವೆಯನ್ನು ಎಡೆಬಿಡದೆ ಮಾಡಿಕೊಂಡು ಕನ್ನಡ ಸಾಹಿತಿಗಳಲ್ಲಿ ತನ್ನದೇ ಆದ ಒಂದು ಸ್ಥಾನಮಾನವನ್ನು ಇವರು ಸಂಪಾದಿಸಿರುವರು. ಚಿಕ್ಕ ಮಕ್ಕಳಿಗಾಗಿ ಅವರು ಬರೆದಿರುವ ಮುದ್ದು ಹಾಡುಗಳನ್ನು ಪ್ರತಿಯೊಂದು ಮನೆಯವರು ತಮ್ಮ ಮಕ್ಕಳು ಕುಣಿದಾಡಿ ಹಾಡುವುದನ್ನು ಕೇಳಿ ಸಂತೋಷಪಟ್ಟಿರುವರು. ಅವರ ಸಣ್ಣ ಕತೆಗಳನ್ನು ಓದಿ ಅದರಲ್ಲಿರುವ ವಿನೋದದ ಸವಿಯಿಂದ ಸಂತೋಷ ಪಡದ ಒಬ್ಬ ವಿದ್ಯಾರ್ಥಿಯೂ ಇರಲಾರನು. ಅವರ ಲೇಖನಿಯ ಸಹಾಯವನ್ನು ಸಾಧಾರಣ ಪ್ರತಿಯೊಂದು ಕನ್ನಡ ಪತ್ರಿಕೆಯೂ ಪಡೆದಿರುತ್ತದೆ. ಇದೂ ಅಲ್ಲದೆ ಅನೇಕ ಪಠ್ಯಪುಸ್ತಕಗಳನ್ನೂ, ಸಣ್ಣ ಕಾದಂಬರಿಗಳನ್ನೂ ಬರೆದಿರುವರು.

ಕಾಮತರು ಬಹು ರಸಿಕರು. ಎಂತಹ ದಣಿವಾದಾಗ್ಯೂ ಅವರೊಡನೆ ಒಂದು ಅರ್ಧ ತಾಸು ಮಾತಾಡುತ್ತಾ ಕುಳಿತರೆ, ಬೇಸರವು ತನ್ನಷ್ಟಕ್ಕೇ ಮಾಯವಾಗಿ, ಮನಸ್ಸಿನಲ್ಲಿ ಒಂದು ತರದ ಉತ್ಸಾಹವು ಹುಟ್ಟುವುದು. ಅವರ ಸವಿನುಡಿಗಳನ್ನು ಕೇಳಲು, ಅವರ ಹಾಸ್ಯಮಯವಾದ ಮಾತುಗಳನ್ನು ಆಲಿಸಲು, ಸಿಗುವ ಸಂದರ್ಭಗಳನ್ನು ಯಾರೊಬ್ಬನೂ ಕಳೆದುಕೊಳ್ಳಲಾರನು.

ಕಾಮತರು ಆದರ್ಶ ಉಪಾಧ್ಯಾಯರು. ಮಕ್ಕಳ ಮನಸ್ಸಿನ ಬಯಕೆಗಳನ್ನು ಕಂಡು ಹಿಡಿದು ಅವುಗಳನ್ನು ಸಲ್ಲಿಸುವುದರಲ್ಲಿ ಅದ್ವಿತೀಯರು. ಯಾವ ಕ್ಲಿಷ್ಟ ವಿಷಯವನ್ನು ಎತ್ತಿಕೊಂಡರೂ ಅದರ ಮೇಲೆ ತನ್ನ ಅನುಭವದ ಬೆಳಕನ್ನು ಬೀರಿ, ಕ್ಲಿಷ್ಟವಿದ್ದುದನ್ನು ಸ್ಪಷ್ಟ ಮಾಡಿ ತೋರಿಸುವ ಚತುರತೆಯು ಅವರಲ್ಲಿತ್ತು. ಈ ಜಿಲ್ಲೆಯ ಉಪಾಧ್ಯಾಯವೃಂದವು, ವಿಶೇಷವಾಗಿ ಮೂಲ ಶಾಲಾ ಅಧ್ಯಾಪಕರು, ಕಾಮತರು ತಮಗೆ ಮಾಡಿದ ಉಪಕಾರವನ್ನು ಎಂದೂ ಮರೆಯುವ ಹಾಗಿಲ್ಲ. ಉಪಾಧ್ಯಾಯಸಂಘಗಳ ಆಮಂತ್ರಣವನ್ನು ಎಂದೂ ನಿರಾಕರಿಸದೆ, ಉಪಾಧ್ಯಾಯರು ಅಪೇಕ್ಷಿಸಿದ ಅನುಭವಗಳನ್ನು ಅವರ ಮುಂದಿಡಲು ಕಾಮತರು ಯಾವಾಗಲೂ ಸಿದ್ಧರೇ ಆಗಿದ್ದರು.

ಕೆ. ಗೋಪಾಲ ರಾವ್.

# "ಹಲವು ಮಕ್ಕಳ ತಾಯಿ"

ಶ್ರೀ ಕಾಮತರು ಸಾಹಿತ್ಯಾಭಿರುಚಿಯುಳ್ಳ ಕಿರಿಯರಿಗೆಲ್ಲ ಹಿರಿಯ ಪ್ರೋತ್ಸಾಹಕರಾಗಿದ್ದರು. ಅವರ ಈ ಪ್ರೋತ್ಸಾಹಕಸ್ವಭಾವದ ಪ್ರಯೋಜನ ಹೊಂದಿ ತಮ್ಮ ಪ್ರತಿಭೆಯನ್ನು ಬೆಳಗಿಸಬಲ್ಲವರಾಗಿರುವವರನೇಕರು ಇಂದು ಕನ್ನಡ ಸಾಹಿತ್ಯ ಕ್ಷೇತ್ರದ ಪ್ರತಿಯೊಂದು ಶಾಖೆಯಲ್ಲಿಯೂ ಇರುವರು. ನಮ್ಮ ಜಿಲ್ಲೆಯ ಪ್ರಬಂಧ ಲೇಖಕರಲ್ಲಿಯೂ, ಕಥಾಕಾದಂಬರಿಕಾರರಲ್ಲಿಯೂ, ಕವಿತಾರಚಯಿತೃಗಳಲ್ಲಿಯೂ, ಪಠ್ಯಗ್ರಂಥಕರ್ತರಲ್ಲಿಯೂ, ಪತ್ರಿಕಾವ್ಯವಸಾಯಿಗಳಲ್ಲಿಯೂ ಅಗ್ರಗಣ್ಯರಾದವರನೇಕರು ಕಾಮತರಿಂದಲೇ - ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ—ಸ್ಫೂರ್ತಿಗೊಂಡು ಮುಂದಡಿಯಿಡಕಲಿತು ಇಂದು ಸುಸೂತ್ರವಾಗಿ ನಡೆಯಬಲ್ಲವರಾಗಿ ಮೆರೆಯುತ್ತಿರುವರೆಂದು ಧೈರ್ಯದಿಂದ ಹೇಳಬಹುದು. ಕನ್ನಡದ ಸೇವೆಗೆ ತಾವು ಹೇಗೆ ನೆರವಾಗಬೇಕೆಂದು ತಿಳಿಯದೆ ಕತ್ತಲೆಯಲ್ಲಿ ತತ್ತರಿಸುತಿದ್ದವರಿಗೆ ಕಾಮತರು ಕೈದೀವಿಗೆಯಾದರು; ತಾವು ಯಾವ ತರದ ಸೇವೆ ಮಾಡಬೇಕೆಂದು ದಾರಿಗಾಣದೆ ಹಿಂದೆಮುಂದೆ ನೋಡುತಿದ್ದವರಿಗೆ ಕಾಮತರು ಕೈಗಂಬವಾದರು; ಕನ್ನಡದ ಸೇವೆಯನ್ನು ತಮಗರಿತಂತೆ ಮಾಡಲು ಮುಂದರಿಸಿ ಮುಗ್ಗರಿಸಿ ಬಿದ್ದೇಳುತಿದ್ದ ಹಸುಗೂಸುಗಳಿಗೆ ಕಾಮತರು ಮೊದಲು ಅಂಬೆಗಾಲಿಕ್ಕಲಿಕ್ಕೂ, ಕ್ರಮೇಣ ಸರಿಹೆಜ್ಜೆಯಿಟ್ಟು ನಡೆಯಲಿಕ್ಕೂ, ಕೊನೆಗೆ ಕ್ರಮವಾಗಿ ಕುಣಿಯಲಿಕ್ಕೂ ಕಲಿಸಿಕೊಟ್ಟ ಮೊಲೆವಾಲ ತಾಯಾದರು.

ಕನ್ನಡ ಸಾಹಿತ್ಯದಲ್ಲಿ ನನಗಿರುವ ಅಭಿರುಚಿಯಿಂದಾಗಿ ಕನ್ನಡ ಕಥೆಕಾದಂಬರಿಗಳನ್ನು ನಾನಾರೀತಿಯ ಸಾಧನೆ-ಸಾಹಸಗಳಿಂದ ಪಡೆದು ಓದುವ ಸಂದರ್ಭದಲ್ಲಿ ನನಗೆ ದೊರೆತ ಕಾಮತರ "ಕ್ಷಾತ್ರತೇಜ" "ಪ್ರೇಮಪಿಪಾಸೆ"ಗಳು ನಮ್ಮವರಿಗೂ ಕನ್ನಡ ಲೇಖಕರಾಗುವುದು ಸುಸಾಧ್ಯವೆಂಬುದನ್ನು ಎತ್ತಿತೋರಿಸಿ, ನನ್ನಲ್ಲಿಯೂ ಕನ್ನಡ ಲೇಖಕನಾಗುವ ಪಿಪಾಸೆಯನ್ನು ಹುಟ್ಟಿಸಿದುವು. ಅಂದಿನಿಂದಲೂ ನಾನು ಮಾಡಿದ ಶತಪ್ರಯತ್ನಗಳ, ಮತ್ತು ಕಾಮತರು ನನಗೆ ಮೊತ್ತಮೊದಲು ಕೊಟ್ಟ ಪ್ರೋತ್ಸಾಹದ, ಫಲವಾಗಿ ಕನ್ನಡ ಮಾತೆಯ ಸಾಹಿತ್ಯೋದ್ಯಾನದಲ್ಲಿ ನನ್ನವೂ ಕೆಲವು ಚಿಕ್ಕಪುಟ್ಟ ಗಿಡಬಳ್ಳಿಗಳು ಕುಡಿತೋರುವಂತಾಯಿತೆಂದು ನಾನು ಹೆಗ್ಗಳಿಕೆ ಪಡಬೇಕಾಗಿದೆ. ಇದಕ್ಕಾಗಿ ನಾನು ಕಾಮತರಿಗೆ ಚಿರಋಣಿಯೇ ಸೈ.

ನನಗೆ ಕಾಮತರಿಂದ ದೊರೆತ ಪ್ರೋತ್ಸಾಹವು ಅನೇಕ ವಿಧವಾಗಿದೆ. ನಾನೂ, ನನ್ನ ಸಹಾಧ್ಯಾಯಿಗಳೂ ಆತ್ಮಮಿತ್ರರೂ ಆದ ಶ್ರೀ. ಅಲೆವೂರು ಶೇಷಪ್ಪಯ್ಯನವರೂ ಹಸ್ತಲಿಖಿತ "ಉದಯ ಭಾರತ" ಮಾಸಪತ್ರಿಕೆಗಾಗಿ "ಮೊದಲ ಮಾತು"

ಕೋರಿ ಕಾಮತರ ಬಳಿಗೆ ಹೋದಾಗ ಅವರು ನಮ್ಮನ್ನು ಕಿರಿಯರೆಂದು ತಾತ್ಸಾರ ಮಾಡದೆ ಅದನ್ನು ಸಂತೋಷದಿಂದ ಬರೆದುಕೊಟ್ಟು ತನ್ನ ಅಮೃತಹಸ್ತದಿಂದ "ಉದಯ ಭಾರತ"ದ ಶಂಕುಸ್ಥಾಪನೆಯನ್ನು ಮಾಡಿದರು.

ಕಾಮತರು ತನ್ನೊಡನಿದ್ದ ಮರಾಠಿ "ಮನೋರಂಜನ", "ನವಯುಗ", ಬಂಗಾಲಿ "ಭಾರತವರ್ಷ", "ಶಿಶು", ಕನ್ನಡ "ಜಯಕರ್ನಾಟಕ" ಮತ್ತು ಅವರ ಸ್ವಂತ "ಬೋಧಿನಿ", "ಆನಂದ"—ಇವುಗಳಲ್ಲಿ ನನಗೆ ಬೇಕಾದುವನ್ನು ಆರಿಸಿ ತೆಗೆಯಬಿಟ್ಟಿದ್ದರು. ನಾನು ಅವುಗಳನ್ನು ಪತ್ರಯೋಜನಕ್ಕೆ ಹಾಕಬಯಸಿ ಅದಕ್ಕಾಗಿ ಪ್ರಯತ್ನಪಟ್ಟೆನು.

ಬಂಗಾಲಿಯನ್ನು ಕಲಿಯುವ ಪ್ರಯತ್ನವು ಮಾತ್ರ ಅಕ್ಷರದಲ್ಲೇ ನಿಂತರೂ, ಮರಾಠಿಯು ನಮ್ಮ ಮಾತೃಭಾಷೆಯಾದ ಕೊಂಕಣಿಗೆ ತೀರ ಸಮೀಪವಾಗಿರುವುದನ್ನು ಕಂಡು, ನಿಘಂಟುವಿನ ಆಧಾರದಿಂದ "ಮನೋರಂಜನ"ದೊಳಗಿನ "ವಿಲಕ್ಷಣ ಧೈರ್ಯ" ಎಂಬ ಕಥೆಯೊಂದನ್ನೂ, "ಅವನಾರು?" ಎಂಬ ಕವಿತೆಯೊಂದನ್ನೂ ನಾನು ಮೊದಲಾಗಿ ಕನ್ನಡಕ್ಕೆ ಪರಿವರ್ತಿಸಿ ಕೈಬರಹದ "ಉದಯ ಭಾರತ"ದಲ್ಲಿ ಪ್ರಕಟಿಸಿದೆನು. "ಮಾಲೋಜಿಯ ಕಥೆ" ಎಂಬ ಹೆಸರಿನಿಂದ ಈ ಕಥೆಯನ್ನೂ, "ತುಂಬಿಯ ವಿಲಾಪ" ಎಂಬ ನನ್ನದೊಂದು ಕವಿತೆಯನ್ನೂ ಕಾಮತರು ತಮ್ಮ ಸಂಪಾದಕತ್ವದಲ್ಲಿ ಹೊರಟ ಕೆನರಾ ಹಾಯ್ ಸ್ಕೂಲ್ ಪತ್ರಿಕೆಯಲ್ಲಿ, "ಉದಯ ಭಾರತ"ಕ್ಕೆ ಆಶೀರ್ವಾದದೊಡನೆ, ಪ್ರಕಟಿಸಿದರು. (ಇದೇ ಕಥೆಯನ್ನು ಕಾಮತರು 1940ನೇ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಗ್ರಂಥದೊಳಗೆ ಸೇರಿಸಿದ್ದರು.) ಇದರಿಂದ ಉತ್ತೇಜನಗೊಂಡ ನಾವು "ಉದಯ ಭಾರತ"ದೊಳಗಿನ ಇನ್ನು ಕೆಲವು ಲೇಖನಕವಿತೆಗಳನ್ನು "ಸುವಾಸಿನಿ", "ಕಂಠೀರವ", "ಶಕ್ತಿ"ಗಳಿಗೆ ಕೊಟ್ಟು, ಅವೂ ಪ್ರಕಟವಾದುದನ್ನು ಕಂಡು ಮತ್ತಷ್ಟು ಧೈರ್ಯಹೊಂದಿದೆವು. ಪರಿಣಾಮವಾಗಿ, ಕೈಬರಹದ "ಉದಯ ಭಾರತ"ವನ್ನು ಮೂರೇ ತಿಂಗಳು ನಡೆಸಿದೊಡನೆ ಅದನ್ನು ನಾವು ತ್ರೈಮಾಸಿಕರೂಪದಲ್ಲಿ ಮುದ್ರಿಸಿ ಪ್ರಕಟಿಸುವ ಯೋಚನೆ ಮಾಡಿದೆವು.

ನಮ್ಮ ಈ ಯೋಚನೆಗೆ ಕಾಮತರ ಪ್ರೋತ್ಸಾಹವೂ ಯಥೇಷ್ಟವಾಗಿ ಇರಲು ನಾವು ಒಡನೆ ಅದನ್ನು ಕಾರ್ಯರೂಪಕ್ಕೆ ತಂದೆವು. ಕಾಮತರೇ ಸೂತ್ರಧಾರರಾಗಿ ನಮ್ಮನ್ನು ತನ್ನ ಶ್ರೇಯೋಭಿಕಾಂಕ್ಷೆಯೊಂದಿಗೆ ರಂಗದಲ್ಲಿ ಕುಣಿಯಬಿಟ್ಟರು. ಅವರು ಪ್ರಥಮ ಸಂಚಿಕೆಗೆ "ಮೊದಲ ಮನವಿ", "ಹರಕೆ" ಚಿತ್ರದ ಪಡಿಯಚ್ಚು, "ಹರಕೆ"ಯ ಕವಿತೆ, ಮತ್ತು "ಬೇಡ ಸೇದ ಬೇಡ!" ಕಥೆ—ಇವುಗಳಿಂದ ಸ್ಥೂಲವಾದ ಸಹಾಯವನ್ನು ಮಾಡಿದರಲ್ಲದೆ ಕೆನರಾ ಪ್ರಿಂಟಿಂಗ್ ವರ್ಕ್ಸನವರ ನೆರವನ್ನೂ ಅಣಿಮಾಡಿಕೊಟ್ಟರು. ಮತ್ತು ಇದನ್ನು ೩ ವರ್ಷ ಇಲ್ಲಿ ನೆರೆದ ಕನ್ನಡ

ಸಾಹಿತ್ಯ ಪರಿಷತ್ತಿನ ಅಧಿವೇಶನದ ಕಾಲದಲ್ಲಿಯೇ ಪ್ರಕಟಿಸುವಂತೆ ಸಹಕರಿಸಿದರು. ಅನಂತರವೂ ಕಾಮತರು ನಮಗೆ ಅಗತ್ಯವಾದ ಅನೇಕ ಹಿತಸೂಚನೆಗಳನ್ನು ಕೊಟ್ಟರಲ್ಲದೆ, ಪಡಿಯಚ್ಚು, ಲೇಖನಗಳ ಸಹಾಯವನ್ನೂ ಮಾಡಿದರು.

ಮೊದಲ ಸಂಪುಟವಾದೊಡನೆ "ಉದಯ ಭಾರತ"ವನ್ನು ಮಾಸಪತ್ರಿಕೆಯಾಗಿ ಪ್ರಕಟಿಸುವಾಗಲೂ ಅವರು ನಮಗೆ ಧರ್ಮಪ್ರಕಾಶ ಛಾಪಖಾನೆಯವರ ಪರಿಚಯಾದಿಗಳನ್ನು ಮಾಡಿಕೊಡಲು ಅನುಕೂಲರಾದರು. ಈ ಸಂಪುಟಕ್ಕಾಗಿ ಲೇಖನಸಹಾಯ ಕೊಡಲು ಅವರಿಗಾಗದಿದ್ದರೂ, ಇದೇ ವರ್ಷ ನಾವು ಹೊರಡಿಸಿದ "ತುಣುಕು ಮಿಣುಕು"ವಿನ ಒಂದೇ ಸಂಚಿಕೆಗೂ "ಸ್ಫುಟವಿಕಾರಗಳು", "ವೋಟಿನ ಫಲಿತಾಂಶ", "ಅಲ್ಲಿಷ್ಟು, ಇಲ್ಲಿಷ್ಟು"—ಇವುಗಳನ್ನು ಬರೆದುಕೊಟ್ಟು ಈ ಪತ್ರಿಕಾಶಿಶುವಿಗೂ 'ಸೂಲಗಿತ್ತಿ'ಯಾದರು. ಧನಸಹಾಯದ ಅಭಾವದಿಂದ "ತುಣುಕು ಮಿಣುಕು" ಜನನದಲ್ಲೇ ಮೃತಿಹೊಂದುವಂತಾದರೂ, ಅಂದಿನ "ಉದಯ ಭಾರತ"ವು ಆವೆರಡು ವರ್ಷಗಳ ಅಂತ್ಯದಲ್ಲಿ ವಿಶ್ರಮಿಸಬೇಕಾಯಿತಾದರೂ, "ಉದಯ ಭಾರತ"ವು ಕಾಮತರ ಶಿಷ್ಯರಲ್ಲಿ ಇನ್ನೊಬ್ಬರಾದ ಶೇಷಪ್ಪಯ್ಯನವರಿಂದ, ಅದರ ಅಂದಿನ ಧ್ಯೇಯಾದಿಗಳ ಮಾರ್ಪಾಟಿನಿಂದಲಾದರೂ, ಈಗಲೂ ನಡೆಯುತ್ತಿರುವುದು ಸಂತೋಷದಾಯಕವೂ, ಕಾಮತರ ಸಹಾಯ ಪ್ರಯತ್ನಾದಿಗಳಿಗೆ ಭೂಷಣಾಸ್ಪದವೂ ಎನ್ನಬೇಕು.

ನನ್ನ ಇನ್ನೊಬ್ಬ ಸಹಪಾಠಿಗಳಾದ ಶ್ರೀ. ಕದರಿ ಶ್ರೀನಿವಾಸ ರಾವ್ ಮತ್ತು ಇತರ ಕೆಲವು ಉತ್ಸಾಹೀ ತರುಣರು ಹೊರಡಿಸುತ್ತಿದ್ದ ಅದೊಂದು ಕೈಬರಹದ ಪತ್ರಿಕೆಯನ್ನು (ಇದನ್ನು ಕಡೆಗವರು "ಲೀಲೆ" ಎಂದು ಹೆಸರಿಸಿದರು.) ನೋಡಿದಾಗ ನಾನೂ ಒಂದನ್ನು ಪ್ರಾರಂಭಿಸಬೇಕೆಂದು ಬಗೆದಿದ್ದು, 1926ರಲ್ಲಿ ದಿವಂಗತ ಶ್ರೀ. ಕೆ. ರಾಘವಾಚಾರ್‌ರವರು ಮತ್ತು ಕೆಲವು ಮಿತ್ರರು "ಮಿತ್ರಮಂಡಳಿ"ಯನ್ನು ಸ್ಥಾಪಿಸಿ ಅದರ ಮುಖಾಂತರ "ಮಿತ್ರ" ಎಂಬ ಹಸ್ತಲಿಖಿತ ಮಾಸಪತ್ರಿಕೆಯನ್ನು ಪ್ರಕಟಿಸತೊಡಗಿದೊಡನೆ, "ಉದಯ ಭಾರತ"ವನ್ನು ನನ್ನ "ಮಿತ್ರವೃಂದ"ದವರ ಸಹಕಾರದಿಂದ ಹೊರಡಿಸಿದ್ದೆನು. ಆಬಳಿಕ ಈಗ "ಸ್ವದೇಶಾಭಿಮಾನಿ"ಯ ಸಂಪಾದಕರಾಗಿರುವ ಶ್ರೀ. ಎ. ಎಸ್. ಕಾಮತರಿಂದ "ನನ್ನ ಪತ್ರಿಕೆ", ಬೇರೆ ಕೆಲವರಿಂದ "ಕಲ್ಪವೃಕ್ಷ" ಮುಂತಾದ ಇನ್ನೂ ಕೆಲವು ಅಂತಹ ಪತ್ರಿಕೆಗಳೂ ಕಾಮತರ ನೇತೃತ್ವದಿಂದಲೇ ಮೂಡಿದ್ದುವು. ನಮ್ಮ "ಉದಯ ಭಾರತ"ವು ಮುದ್ರಿತವಾದಾಗ ಕಾಮತರು ತನ್ನ "ಮೊದಲ ಮನವಿ"ಯಲ್ಲಿ ಸಂಘಶಕ್ತಿಗಾಗಿ ನಾವೆಲ್ಲರೂ ಒಂದಾಗಿ ಮುಂದುವರಿದರೆ ಹಿತವೆಂದು ತನ್ನ ದೀರ್ಘದೃಷ್ಟಿಯಿಂದ ನೋಡಿ ಸೂಚಿಸಿದ್ದರು. ಇದನ್ನು ಲಕ್ಷಿಸಿ ನಾವು "ಮಿತ್ರ" ಮತ್ತು "ಲೀಲೆ"ಗಳನ್ನು "ಉದಯ ಭಾರತ"ದೊಂದಿಗೆ ಸೇರಿಸಿಕೊಂಡೆವು. ಆದರೆ ನಮ್ಮೊಳಗೆ ಆದಿಯಲ್ಲೇ ಅಂಕುರಿಸಿದ ಕೆಲವು

ಭಿನ್ನಾಭಿಪ್ರಾಯಗಳ ಪರಿಣಾಮವಾಗಿ ಈ ವ್ಯವಸ್ಥೆಯು ಫಲಪ್ರದವಾಗಲಿಲ್ಲವೆಂಬುದು ಶೋಚನೀಯವು. ಅಂತೂ ಕಾಮತರು ಮಾತ್ರ ನಮ್ಮೆಲ್ಲರಿಗೂ ನೇತ್ರಗಳಂತಿದ್ದರೆಂಬುದು ನಿರ್ವಿವಾದ.

ಕಾಮತರು ಕನ್ನಡಕ್ಕೆ ನಿಷ್ಕಾಮಸೇವೆ ಸಲ್ಲಿಸುತ್ತಿದ್ದರೆಂಬುದಕ್ಕೆ ಇದೊಂದು ಪ್ರತ್ಯಕ್ಷ ನಿದರ್ಶನವೆನ್ನಬಹುದು. ನಮಗಿತ್ತ ಸಹಾಯಕ್ಕೆ ಅವರು ಎಂತಹ ಪರಿಹಾರವನ್ನೂ ಬಯಸಿದುದಿಲ್ಲ, ಪಡೆದುದಿಲ್ಲ. ಅವರನ್ನೇ "ಉದಯ ಭಾರತ"ದ ಸಂಪಾದಕರಾಗಿ ಏರ್ಪಡಿಸಿದ್ದುದಾದರೆ ನಮ್ಮ ನಾನಾ ಸಂಸ್ಥೆಯವರೆಲ್ಲರೂ ಮನಃಪೂರ್ವಕವಾಗಿ ಒಂದಾಗಿ ಸೇರಿ ಕಾರ್ಯ ಸಾಗಿಸಲು ಮತ್ತು ಕಾರ್ಯ ಸಾಧಿಸಲು ಶಕ್ತರಾಗುತ್ತಿದ್ದೆವೆಂದೂ, ಈ ಸಮ್ಮಿಳಿತ ಮಿತ್ರಮಂಡಳಿಯು "ಉದಯ ಭಾರತ"ವನ್ನು ಇಂದಿಗೂ, ಉಚ್ಚ ರೀತಿಯಿಂದ, ಇತರರಿಗೆ ಆದರ್ಶಪ್ರಾಯವಾಗಿ, ಪ್ರಕಟಿಸಿಕೊಂಡು ಬರಲು ಸಾಧ್ಯವಾಗುತ್ತಿದ್ದಿತೆಂದೂ ನನಗೆ ಇಂದು ಮನದಟ್ಟಾಗುತ್ತಿದೆ. ಆದರೆ ಕಾಮತರು, ತನ್ನ ನಿಷ್ಕಾಮಬುದ್ಧಿಯಿಂದಾಗಿ, ತಾನಾಗಿ ಈ ಏರ್ಪಾಡನ್ನು ಸೂಚಿಸಲಿಲ್ಲ; ನನ್ನ ಅಂದಿನ ಹುಡುಗತನದ ಸಂಕುಚಿತಬುದ್ಧಿಯಿಂದಾಗಿ, ಇದು ನನಗೂ ಆಗ ಹೊಳೆಯಲಿಲ್ಲ. ಆದರೆ ಅಂದು ನಮಗೆ ದೂರವಾದ "ಮಿತ್ರಮಂಡಳಿ"ಯನ್ನು ಇಂದು ನಾನು ಸೇರಿ ಕಾಮತರು ಅಧ್ಯಕ್ಷರಾಗಿದ್ದಾಗ ನಾನು ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ ಅಂದಿನ ದೋಷಕ್ಕೆ ಇಂದು ಒಂದಷ್ಟು ಪರಿಹಾರವನ್ನಾದರೂ ಮಾಡುವಂತಾಯಿತೆಂಬುದಿಷ್ಟೇ ನನಗೆ ಮನಸ್ಸಮಾಧಾನ.

ಕಾಮತರ ಕೊನೆಯ ಕಾಂಕ್ಷೆಯೊಂದು ಮಿತ್ರಮಂಡಳಿಯಿಂದ "ಕನ್ನಡ ನುಡಿ"ಯಂತಹದೊಂದು ಪತ್ರಿಕೆಯನ್ನು ಹೊರಡಿಸಬೇಕೆಂಬುದಾಗಿದ್ದಿತು. ಅದನ್ನು ಕಾರ್ಯರೂಪಕ್ಕೆ ತರಲು ಅವರಿಂದಾಗದಂತಾದರೂ ಎಲ್ಲವೂ ಸರಿಹೋದರೆ ಮಿತ್ರಮಂಡಳಿಯು ಶೀಘ್ರದಲ್ಲೇ ಅವರ ಮನದಿಚ್ಛೆಯನ್ನು ಪೂರೈಸುವಂತಾಗಬಹುದೆಂಬ ಆಸೆಯಿದೆ. ಮಿತ್ರಮಂಡಳಿಯು ಏರ್ಪಡಿಸಿದ ದುಃಖಸೂಚಕ ಸಭೆಯಲ್ಲಿ ನಿರ್ಣಯಿಸಿದಂತೆ ಕಾಮತರ ಕನ್ನಡದ ಸೇವೆಯ ಶಾಶ್ವತವಾದ ಸ್ಮಾರಕವೊಂದನ್ನು ಮಿತ್ರಮಂಡಳಿಯ ಮೂಲಕ ಸ್ಥಾಪಿಸಬೇಕೆಂಬ ಲವಲವಿಕೆಯೂ ನಮಗೆಲ್ಲರಿಗೂ ಇದ್ದೇ ಇದೆ. ಅವರ ಗ್ರಂಥಗಳ ಪ್ರಕಟನಕಾರ್ಯವನ್ನು ಈ ಪುಸ್ತಕದಿಂದ ಮೊದಲುಮಾಡಿ ನಮ್ಮ ಕರ್ತವ್ಯಸಾಧನೆಯ ಪಥದಲ್ಲಿ ಈಗ ಸದ್ಯಕ್ಕೆ ನಮ್ಮಿಂದಾದಷ್ಟು ಅಳಿಲ ಸೇವೆಯನ್ನು ಕೈಕೊಂಡಿರುವೆವು. ಕನ್ನಡ ಭಾಷಾಭಿಮಾನಿಗಳ ಹಾಗೂ ಕಾಮತರ ಸ್ನೇಹಿತವರ್ಗದವರ ಔದಾರ್ಯದಿಂದ ನಮ್ಮ ಪ್ರಯತ್ನಗಳು ಸಫಲವಾಗುವುವೆಂಬ ಭರವಸೆಯಿಂದ ಇನ್ನು ನಾವು ಮುಂದೊತ್ತುವೆವು.

ಮಿತ್ರಮಂಡಳಿ,
ಮಂಗಳೂರು.

ಎಸ್. ಪಿ. ಭಟ್ಟ,
ಕಾರ್ಯದರ್ಶಿ.

# ಒಂದು ಮಾತು.

ಮನುಷ್ಯನ ನಿಜವಾದ ಯೋಗ್ಯತೆ ಗೊತ್ತಾಗುವುದು ಅವನ ಅನಂತರದಲ್ಲಿ. ಜೀವಂತವಾಗಿರುವಲ್ಲಿ ಆತನ ಗುಣವೂ ದೋಷವಾಗಿ ಪರಿಣಮಿಸುವುದೇ ಹೆಚ್ಚು. ಸರ್ವಸಮಾನವಾದ ಶರೀರವು ಪ್ರತ್ಯಕ್ಷವಾಗಿರುವಲ್ಲಿ, ಅಸಮಾನವಾದ ಯೋಗ್ಯತೆಯನ್ನು ಆ ಶರೀರದ ಮೂಲಕವಾಗಿಯೇ ಕಂಡುಹಿಡಿವುದು ಸರ್ವಸಾಧಾರಣವಲ್ಲ. ನಮ್ಮ ಮಿತ್ರರಾಗಿದ್ದ ಎಮ್. ಎನ್. ಕಾಮತರ ಭೌತಿಕ ಶರೀರವು ಆಯಾ ಭೂತಗಳೊಡಗೂಡಿತು. ಈಗ ಇಂದ್ರಿಯಗ್ರಾಹ್ಯವಲ್ಲದ, ಅವರ ಕೀರ್ತಿಶರೀರ ಮಾತ್ರ ಉಳಿದಿರುವುದು. ಆದರಿಂದ, ಬೂದಿಯಂತೆ ದೋಷವು ಮಾಯವಾಗುತ್ತಿದೆ. ಕಿಡಿಯಂತೆ ಕೀರ್ತಿ ಹೊಳೆಯುತ್ತಿದೆ. ಮಾತ್ರವಲ್ಲ; ಕಿಡಿಯದು, ಕನ್ನಡ ಸಾಹಿತ್ಯದೊಳಗಿನ ವಿಶಿಷ್ಟ ಪ್ರದೇಶದಲ್ಲಿ ಮಾರ್ಗದರ್ಶಕವಾದ ಒಂದು ಹೆದ್ದೀವಿಗೆಯೂ ಆಗಿದೆ, ಎನ್ನಬೇಕು. ಅಂಥ ದೀವಿಗೆಯನ್ನು ಬೆಳಗಿಸುವ ಈ ನಮ್ಮ ಪ್ರಯತ್ನಕ್ಕಾಗಿ ಯಾರೂ ನಮ್ಮನ್ನು ಹೊಗಳಲೊಲ್ಲರು. ಆದರೆ ಇಂಥ ಪ್ರಯತ್ನದಲ್ಲಿ ಕೈನೀಡದಿದ್ದರೆ ಮಾತ್ರ,—ತೆಗಳುವಲ್ಲಿ ಸಂಶಯವಿಲ್ಲ. ಸಂಧ್ಯಾವಂದನೆಯನ್ನು ಮಾಡುತ್ತಾ ಬಂದರೆ ಹೆಚ್ಚಿನ ಪುಣ್ಯವಿಲ್ಲ;—ಆಯಾ ದಿನಗಳ ಪಾಪ ಮಾತ್ರ ನಿವೃತ್ತವಾಗುವುದು; ಮಾಡದಿದ್ದರೆ ಮಾತ್ರ, ಪಾಪವು ರಾಶಿಗೂಡುವುದಂತೆ. ಅದರಂತೆ ಕೀ. ಶೇ. ಕಾಮತರ ಸ್ಮರಣೆ ನಮ್ಮ ಅಂತರಂಗವನ್ನು ಉದ್ಬುದ್ಧವನ್ನಾಗಿ ಮಾಡಬೇಕೆಂದು ನಾವು ಅವರ ಈ ಕಥಾಗುಚ್ಛವನ್ನು ಪ್ರಕಟಿಸುವ ಕಾರ್ಯದಲ್ಲಿ ಕೈನೀಡಿದ್ದೇವೆ. ಕೀರ್ತಿಶೇಷರಿಗೆ, ಕನ್ನಡ ಸಾಹಿತ್ಯದಲ್ಲಿದ್ದ ಶಕ್ತಿ ಎಂಥದೆಂಬುದು, ಕನ್ನಡ ನಾಡಿಗೇ ಗೊತ್ತಿದೆ. ಸಾಲದಾದರೆ, ಹಲವು ಮಂದಿ ವಿಮರ್ಶಕರು ಬರೆದ ಈ ಗುಚ್ಛದ ಲೇಖಗಳಿಂದಲೂ ತಿಳಿದುಕೊಳ್ಳಬಹುದು.

ಮಿತ್ರ ಮಂಡಳಿ,
ಮಂಗಳೂರು.

ಮುಳಿಯ ತಿಮ್ಮಪ್ಪಯ್ಯ,
ಅಧ್ಯಕ್ಷ.

# ಅಂದಿನ ಆವೂರು

# ಅಂದಿನ ಆವೂರು

## ಕದ್ದವರು ಯಾರು?

ಆವೂರಿನಲ್ಲಿ ಅಂದು ಸಂತೆ. ವಾರದಲ್ಲೊಂದು ದಿನ ಸಂತೆಯೆಂದಬಳಿಕ ಹಳ್ಳಿಯೆಲ್ಲ ಅಂದು ಗದ್ದಲದಿಂದ ತುಂಬಿಯೇ ಇದ್ದಿತು. ಅದರಲ್ಲೂ ಜಿಲ್ಲಾ ಕಲೆಕ್ಟರರವರು ಖುದ್ದಾಗಿ ಚಿತ್ತೈಸಿದ್ದಾರೆ. ಜಮಾಬಂದಿಯಲ್ಲ, ಸ್ಥಳತನಿಖಿಯಲ್ಲ, ಕಚೇರಿಯಲ್ಲ— ಒಬ್ಬರೇ. ಎಂದಿನಂತೆ ಯಾರೂ ಸರಬರಾಯಿಯ ತೊಂದರೆಗೀಡಾಗಬಾರದೆಂದು ಈ ದೊರೆಗಳು ತಮ್ಮ ಬಟ್ಲರನನ್ನೆ ಸಂತೆಗೆ ಕಳುಹಿ ಎಲ್ಲ ಸಾಮಾನನ್ನು ನಗದಾಗಿ ಕ್ರಯಕ್ಕೆ ಕೊಂಡುಬರಲು ತಿಳಿಸಿದ್ದಾರೆ. ಮೊಕ್ಕಾಂ ನಾಲ್ಕು ದಿನವಂತೆ. ಉಗ್ರಾಣಿಗೆ ಮಿಕ್ಕ ಇಂತಹ ಸರ್ಕೀಟುಕಾಲಗಳಲ್ಲಾದರೆ ಆ ನಾಲ್ಕು ದಿನಗಳೂ ಒಂದೇ ಉದ್ದ ಹಗಲಿನಂತಾಗುತಿದ್ದಿತು; ಶಾನುಭೋಗರಿಗೆ ಕ್ರೊಸ್‌ಸ್ಟಾಫು(Cross-staff)-ಸಂಕೋಲೆಗಳ ಸನ್ನಾಹದಿಂದ ರಿಕಾರ್ಡು ಲೆಕ್ಕಗಳ ಹಾಗೂ ಅಡಂಗಲುಗಳ ದಫ್ತರಿನಲ್ಲಿ ಅವಿತುಕೊಂಡಂತೆ ಜೀವಿಸುವಂತಾಗುತಿದ್ದಿತು. ಪಟೇಲರ ಮಾತೇ ಬೇಡ. ಗ್ರಾಮದ ಗ್ರಾಮವನ್ನೇ ತನ್ನ ಉದರದಲ್ಲಿಟ್ಟುಕೊಂಡು ಕಾಪಾಡುವ ಗ್ರಾಮದೇವತೆಯಾಗಿರುವ ಗ್ರಾಮೋದರನಾಗಿ ಮೆರೆವಂತಾಗುತಿದ್ದಿತು. ಈ ಸಲ ಮಾತ್ರ, ಉಗ್ರಾಣಿ, ಶಾನುಭೋಗರ ಎಮ್ಮೆಯಿದ್ದ ಹಟ್ಟಿಯ ಮಾಡಿಗೆ ಮುಳಿಹಾವಣಿ ಮಾಡುತಿದ್ದಾನೆ. ಶಾನುಭೋಗರು ಪಟೇಲರ ಒಕ್ಕಲುಗಳಿಗಾಗಿ ಹೊಸ ಚಾಲಗೇಣಿಚೀಟುಗಳನ್ನು ಬರೆದು ಅವುಗಳಿಗೆ ಅವರ ಬಲಗೈ (ಎಡಗೈ?) ಹೆಬ್ಬೆಟ್ಟಿನ ಮುದ್ರೆಗಳನ್ನು ಒತ್ತಿಕೊಳ್ಳುತ್ತಾರೆ. ಮತ್ತು ಪಟೇಲರು ವೀಳೆಯ

ಜಗಿಯುತ್ತ ತೂಗುಮಂಚದ ಹಲಗೆಯ ಮೇಲೆ ಪವಡಿಸಿದ್ದು ಅಡಿಕೆ ಹಾಳೆಯ ಬೀಸಣಿಗೆಯಿಂದ ಗಾಳಿ ಹಾಕಿಕೊಳ್ಳುತಿದ್ದಾರೆ.

ಕಲೆಕ್ಟರರ ಸವಾರಿ ಅಪ್ಪೂರಿಗೆ ಬಂದುದೇಕೆಂದು ಯಾರಿಗೂ ತಿಳಿದಿಲ್ಲ; ಅವರ ಆಫೀಸಿನ ಗುಮಾಸ್ತರಾಗಲಿ, ಪೇದೆಗಳಾಗಲಿ ಇದ್ದಿದ್ದರೆ, ಪಟೇಲರಿಂದ ಸಿಹಿಯಾಳಗಳನ್ನೂ, ಶಾನುಭಾಗರಿಂದ ನಸ್ಯವನ್ನೂ, ಉಗ್ರಾಣಿಯಿಂದ ಧೂಪದೆಣ್ಣೆಯ ಉಂಡೆಗಳನ್ನೂ ಕಾಣಿಕೆ ಪಡೆವಾಗ, ಕಲೆಕ್ಟರರ ಮನಸ್ಸಿನ ಇಂಗಿತವನ್ನು (ತಮಗೇ ತಿಳಿದಿದೆ ಎಂಬಂತೆ) ಮೆಲ್ಲನೆ ನಸುನಗುತ್ತ ಅಥವಾ ತುಸು ಗಂಭೀರವಾಗಿ ಸಣ್ಣ ಸ್ವರದಲ್ಲಿ ಸೂಚಿಸುತಿದ್ದರು. ಈಗ ದೊರೆಗಳ ಜತೆಯಲ್ಲಿ ಇರುವ ಪರಿವಾರವೆಲ್ಲವೂ ಒಬ್ಬ ಬಟ್ಲರನಲ್ಲೇ ಅಡಕವಾಗಿದ್ದಿತು. ದೊರೆಗಳಿಗೆ ಅಗತ್ಯವಾದುದನ್ನು ತರಲು ಅವನು ಗ್ರಾಮದಲ್ಲಿ ಕಾಣಸಿಗುವನು; ದೊರೆಗಳ ಜತೆಯವನಾಗಿ ಹಲವು ಜಿಲ್ಲೆಗಳಲ್ಲಿ ಇರುತಿದ್ದನಾದಕಾರಣ ಅವನ ಮಾತುಗಳು ಎಲ್ಲ ದ್ರಾವಿಡಭಾಷೆಗಳ ಒಂದು ಸಮ್ಮಿಲಿತಭಾಷೆಯಾಗಿ ಹೊರಡುತಿದ್ದುವು. ನಮ್ಮ ಶುದ್ಧತುಳುವರಿಗೆ ಅವನೊಡನೆ ಸಂಭಾಷಣೆ ಮಾಡುವುದೆಂದರೆ–ಹಕ್ಕಿಗಳೊಡನೆ ಮಾತಾಡಿದಹಾಗಾಗುತಿದ್ದಿತು. ಅವನೊಡನೆ ಯಾವ ಭಾಷೆಯಿಂದ ಆಡಿದರೂ ಅವನಿಗೆ ತಿಳಿಯುತಿದ್ದಿತು. ಅವನ ನುಡಿಗಟ್ಟು ಮಾತ್ರ ಯಾವನಿಗೂ ಅರ್ಥವಾಗುತಿರಲಿಲ್ಲ. ಹೀಗಾಗಿ ಕಲೆಕ್ಟರರು ಬಂದುದೇಕೆಂದು ಯಾರಿಗೂ ತಿಳಿಯಲೇ ಇಲ್ಲ. ತಿಳಿಯದಿದ್ದರೆ ಸುಮ್ಮನಿರುವರೇ? ಊಹಾಪೋಹೆಗಳಿಗೆ ಪ್ರಾರಂಭವಾಯಿತು. ಯಾರೋ ಒಬ್ಬ ಜೈನ ಶ್ರೀಮಂತನು ಮಡಿದಿರುವನಂತೆ, ಅವನ ಆಸ್ತಿಗೆ ವಾರಸುದಾರರಿಲ್ಲದುದರಿಂದ, ಅವನ ಆಸ್ತಿಯು ನಿಗಾ ನೋಡಲು ಅದಕ್ಕೆ ಸರಕಾರವೇ ವಾರಸಿನದೆಂದು ತೀರ್ಮಾನಿಸಲು ಅವರು ಬಂದಿರುವರೆಂದರು; ಗುತ್ತಿನ ಮನೆಯವರು ಹೊಸ ಭೂತಗುಡಿಯನ್ನು ಕಟ್ಟಿಸಲು ತೋಡುವಾಗ ಅಲ್ಲಿ ಕೊಪ್ಪರಿಗೆ ದೊರೆತುದನ್ನು ಇವರು ಹೇಗೋ ತಿಳಿದುಕೊಂಡು ಅದರ ಗೊತ್ತುಹಚ್ಚಲು ಬಂದಿರುವರೆಂದರು; ಸಂಜೆಹೊತ್ತಿಗೆ ಕೆಲವರು ಎಮ್ಮೆಗಳನ್ನು ಯಾವುದೋ ಊರಿನಿಂದ ಈ ಗ್ರಾಮದ ಹಾದಿಯಾಗಿ ಸಾಗಿಸಿ ಮಾರುವರಂತೆ; ಅವರು ಕಳ್ಳರೆಂದು ಅವರನ್ನು ಹಿಡಿಯಲು

ತಾವೇ ದಯಮಾಡಿಸಿದ್ದಾರೆಂದರು; ಹಲವು ಬೇನಾಮಿ ಅರ್ಜಿಗಳು ಪಠೇಲರ ವಿಷಯವಾಗಿ ಕಲೆಕ್ಟರರಿಗೆ ತಲಪಿರಲು ಅವುಗಳ ವಿಚಾರಣೆಗಾಗಿ ಸ್ವತಃ ಚಿತ್ತೈಸಿರುವರೆಂದರು; ಪುನಃ ಹೊಸ ಸೆಟ್ಲ್ಮೆಂಟನ್ನು ಜ್ಯಾರಿಗೆ ತರುವರು, ಎಲ್ಲರಿಗೆ ದಾಕು ಹಾಕಿಸುವರು, ಆವೂರನ್ನು ದೊಡ್ಡ ಶಹರನ್ನಾಗಿ ಮಾಡಿ ಈ ತಾಲೂಕಿನ ರಾಜಧಾನಿಯಾಗಬೇಕೆಂದು ಹೇಳುತ್ತಿರುವರು, ಯುದ್ಧಕ್ಕೆ ಜನ-ಸರಂಜಾಮುಗಳನ್ನು ಇಲ್ಲಿಂದ ಮಾಡುವ ಆಲೋಚನೆಯಲ್ಲಿರುವರು, ಇತ್ಯಾದಿ ಇತ್ಯಾದಿ ವದಂತಿಗಳು ಹರಡಿದುವು,—ಪಿಸುಮಾತಿನಲ್ಲೇ. ಇವೆಲ್ಲವೂ ಒಂದೆರಡುಮೂರು ಒಂದಾಗಿ, ಭೂತಗುಡಿಯ ಬಳಿಯಲ್ಲಿ ಕೆಲವರು ಎಮ್ಮೆಗಳನ್ನು ಕೂಡಿಸಿ ಯುದ್ಧದ ಸರಂಜಾಮಿಗಾಗಿ ಕಳುಹುವರಂತೆ—ಜೈನ ಶ್ರೀಮಂತನು ಮಡಿದಿರುವನೆಂದು ಬೇನಾಮಿ ಅರ್ಜಿಗಳನ್ನು ಪಠೇಲರು ಬರೆದುಕೊಂಡು ಮೃತರ ಆಸ್ತಿಯಿಂದ ಒಂದು ಕೊಪ್ಪರಿಗೆಯನ್ನು ಯುದ್ಧದ ಖರ್ಚಿಗೆ ಪಡೆಯುವಂತೆ ಸೂಚಿಸುವುದಕ್ಕಾಗಿ ಬಂದವರಂತೆ—ಎಂದೆಷ್ಟೋ ಹರಟೆಗಳೂ, ಪುರಾಣಗಳೂ, ಅನ್ಯಾಯವಾರ್ತೆಗಳೂ ಹಬ್ಬಿದುವು—ಪಿಸುಮಾತಿನಲ್ಲೇ.

ಪಿಸುಮಾತಿನಲ್ಲೇ,—ಏಕೆಂದರೆ ಈ ದೊರೆಗಳಿಗೆ ತುಳು, ಕನ್ನಡ, ಕೊಂಕಣಿ ಭಾಷೆಗಳು ಚೆನ್ನಾಗಿ ಬರುತಿದ್ದುವು. ಶ್ರೀಮಂತರೊಬ್ಬರ ಮನೆಯಲ್ಲಿ ದೇವಾಲಯಕ್ಕಾಗಿ ಮೋಪನ್ನು ಕಾಡಿನಿಂದ ಕಡಿದು ತರಲು ನಡೆದ ಹಂಚಿಕೆಯೊಂದನ್ನು ಇವರು ವೇಷ ಪಲ್ಲಟಿಸಿ ರಾತ್ರಿಹೊತ್ತಿಗೆ ಹೊಂಚಿನಿಂದ ಕೇಳಿ, ಮರುದಿನ ಭಜಕರು ಕಾಡಿನಲ್ಲಿ ಪ್ರವೇಶಿಸುವಾಗ ಅಲ್ಲಿದ್ದು ಅವರನ್ನು ವಿಪರ್ಯಾಸಕ್ಕೊಡ್ಡಿದರೆಂದೂ ಗ್ರಾಮದಲ್ಲೊಂದು ವೃತ್ತಾಂತವು ಹರಡಿದ್ದಿತು. ಅದಲ್ಲದೆ ಆ ಬಟ್ಲರನೂ ಆಗಾಗ ಗ್ರಾಮದಲ್ಲಿ ಸುಳಿದಾಡುತಿದ್ದನು; ದೊರೆಗಳು ಬೆಳಿಗ್ಗೂ, ಸಂಜೆಗೂ ಒಬ್ಬರೇ ಗ್ರಾಮದಲ್ಲಿ ಯಾರೊಡನೆ ಮಾತಾಡವೆ, ದಡದಡನೆ ಮೂರು ನಾಲ್ಕು ಮೈಲು ಅಡ್ಡಾಡುತಿದ್ದರು. ಹೀಗಾಗಿ ಉಸಿರಿನೊಳಗೆ ಮಾತುಗಳು ಸುಳಿಯುವಂತೆ ಮಾತ್ರ ಗ್ರಾಮಸ್ಥರು ಪರಸ್ಪರವಾಗಿ ಇಂತಹ ಊಹೆಗಳನ್ನು ಆಡಿಕೊಳ್ಳುತಿದ್ದರು.

ಶಾನುಭಾಗರು ಪಟೇಲರ ಬರಹಗಾರರು. ಪಟೇಲರು ಪರಂಪರೆಯಾಗಿ ಬಂದಿದ್ದ ಹುದ್ದೆಯನ್ನು ನೋಡುತ್ತ ತಮ್ಮ ಒಕ್ಕಲುಗಳಷ್ಟೇ ಹೆಬ್ಬೆಟ್ಟಿನ ಮುದ್ರೆಯನ್ನೊತ್ತುವ ವಿದ್ಯಾವಂತರಾಗಿದ್ದರು. ಪಟೇಲರಿಗೆ ಅರ್ಧ ಗ್ರಾಮವೇ ಅಡಿಯಾಳಾಗಿದ್ದಿತು; ಇಂತಹವರ ಹಣೇಬರಹವೇ ಶಾನುಭಾಗರ ಕೈಯಲ್ಲಿದ್ದಿತು. ಉಗ್ಗಪ್ಪ ಶೆಟ್ರು ಪಟೇಲರು, ನಾರಾಯಣ ರಾಯರು ಶಾನುಭಾಗರು,—ಆದರೂ ನಾರಾಯಣ ಶೆಟ್ರು ಎಂದು ಪಟೇಲರ ಹೆಸರು ಎಂದು ಚಾಲಗೇಣಿ ಒಕ್ಕಲುಗಳ ಹೇಳಿಕೆಯಿದ್ದಿತು. ಅವರಿಬ್ಬರೊಳಗೆ ಮೈತ್ರಿ, ವಿಶ್ವಾಸ ಅಷ್ಟಾಗಿದ್ದಿತು. ಈ ಒಕ್ಕಲುಗಳಿಗೆ ಜಿನಸಿನ ಅಂಗಡಿಯಾಗಿ ನಾರಾಯಣ ರಾಯರ ಅಂಗಡಿಯೇ ಇದ್ದಿತು. ಚಾಲಗೇಣಿ ಸಲ್ಲಿಸಿ ಒಕ್ಕಲುಗಳು ಏನಾದರೂ ಉಳಿಸಿದ್ದರೆ ಅದನ್ನು ಆ ಅಂಗಡಿ ನುಂಗುತಿದ್ದಿತು. ಈ ಅಂಗಡಿಯಲ್ಲಿ ವ್ಯಾಪಾರ ಮಾಡದಿದ್ದರೆ ಒಕ್ಕಲುಗಳಿಗೆ ಮುಂದಣ ವರ್ಷ ಗೇಣಿಗೆ ಯಾವ ಗದ್ದೆಯೂ ದೊರೆಯುವಂತಿರಲಿಲ್ಲ; ಶಾನುಭಾಗರಿಗೆ ಆಯವು ಹೆಚ್ಚುವಂತಿರಲಿಲ್ಲ. ಗ್ರಾಮ ಉದ್ಯೋಗಸ್ಥನೆಂದು ಗೌರವ ಮಾತ್ರವಿದ್ದರೆ ಸಾಕೇ? ಗೌರವವೆಂಬುದೇನು ಆಹಾರಪದಾರ್ಥವಲ್ಲವಷ್ಟೆ? ಅಂಗಡಿವ್ಯಾಪಾರವೇ ಶಾನುಭಾಗರ ಜೀವನ ವ್ಯಾಪಾರವಾಗಿದ್ದಿತು.

ಈ ಸಂತೆಯ ದಿನ ಕಲೆಕ್ಟರರು ಆವೂರಿನಲ್ಲಿ ಮೊಕ್ಕಾಂ ಮಾಡಿದ ಮೂರನೆಯ ದಿನ. ಶಾನುಭಾಗರ ಮನೆಯಲ್ಲಿ ಶಾನುಭಾಗರೇ ಅಡುಗೆ ಮಾಡುವ ದಿನವಾಗಿ ಬಂದಿದ್ದಿತು. ಶಾನುಭಾಗರ ಕುಟುಂಬ ನಾಗಮ್ಮ ಕೆರೆಗೆ ಹೋಗಿದ್ದರು; ಅವರು ನಾಳಿನ ದಿನ ತಾನೇ ಮನೆಯೊಳಗೆ ಅಡುಗೆ ಮಾಡಬಹುದಾಗಿದ್ದಿತು. ಹೀಗಾಗಿ ಶಾನುಭಾಗರು ಪಟೇಲರ ಚಾವಡಿಯಿಂದ ಗೇಣಿಚೀಟುಗಳನ್ನು ಬೇಗನೇ ಬರೆದು ಮುಗಿಸಿ, ದಪ್ತರು ಕಟ್ಟಿ ಹೊರಡುವುದರಲ್ಲಿದ್ದರು. ಅಷ್ಟರಲ್ಲಿ ಪಟೇಲರ ಧರ್ಮಪತ್ನಿಯವರು ಕೆರೆಯಿಂದ ಮಿಂದು ಒಳಕ್ಕೆ ಬಂದವರೇ, "ನನ್ನ ಗೆಜ್ಜೆಟೀಕು ಕಳವಾಗಿದೆ," ಎಂದರು. "ಕೆರೆಗೆ ಮೀಯಲು ಹೋದಾಗ ಅಲ್ಲಿ ನಾಗಮ್ಮನವರೊಡನೆ ಮಾತುಕತೆಯಾಯಿತು. ಮೀಯುತಿದ್ದೆವು. ನಾನು ಬಂದೆ. ನಾಗಮ್ಮ ಅಲ್ಲೇ ಇನ್ನೂ ಮೀಯುತಿದ್ದರು. ಅರ್ಧದಾರಿ ಬರುತ್ತಲೇ ಕೊರಳು

ಹಗುರವಾಗಿ ತೋರಿತು. ತಲೆಯ ಮೇಲಕ್ಕೆ ಒಂದು ಕಾಗೆ ಕರ್ರೆಂದು ಕೂಗಿತು. ಕೊರಳು ಮುಟ್ಟಿದಾಗ ಎದೆಯಿಂದೇನೊ ಜೀವ ಹಾರಿತು! ಗೆಜ್ಜೆಟೀಕು ಇರಲಿಲ್ಲ. ಅದಕ್ಕಾಗಿ ಪುನಃ ಕೆರೆಗೆ ಓಡಿದೆ. ನಾಗಮ್ಮ ಮನೆಗೆ ಹಿಂತಿರುಗಿದ್ದರು. ಅವರ ಬೆನ್ನು ಹಿಡಿದು ನಡೆದೆ. 'ನಿಮ್ಮಾಣೆ ನಾನರಿಯೆ,' ಎಂದರು. ಅಂತೂ ಇನ್ಯಾರೂ ಅಲ್ಲಿಗೆ ಏನಾಯಬಂದವರಿಲ್ಲ. ದನ ಕಾಯುವ ಹುಡುಗರು ಸಹ ಇದ್ದಿಲ್ಲ. ಭೂತಕ್ಕೊಂದು ತೆಂಗಿನಕಾಯಿ ಒಪ್ಪಿಸಬೇಕು. ಗೆಜ್ಜೆಟೀಕು ಬೇಗನೇ ಪತ್ತೆಯಾಗಬೇಕು," ಎಂದು ಪಟೇಲರಿಗೆ ಧರ್ಮಪತ್ನಿಯ ದೂರು, ಮೊರೆ, ಕೂಗು.

ಶಾನುಭಾಗರು ಕಟ್ಟುತಿದ್ದ ದಫ್ತರುಮೂಟೆಯ ಗಂಟು ಕಡಿದು ಗೇಣಿಚೀಟುಗಳೂ, ಲೆಕ್ಕದ ಪುಸ್ತಕಗಳೂ ಅದರ ಕರುಳಂತೆ ಹೊರ ಬಿದ್ದುವು. ಪಟೇಲರು ತೂಗುಮಂಚದಿಂದ ಫಕ್ಕನೆ ಏಳಲು ಯತ್ನಿಸಿ, ಹಲಗೆ ತೂಗಿ, ಯಾರೋ ಹಿಂದಣಿಂದ ನೂಕಿದಂತೆ ಜಗಲಿಯ ಮೇಲೆ ಬಿದ್ದರು! ಒಕ್ಕಲುಗಳಿಗೆ ನಗುವೂ ಇಲ್ಲ, ಅಳುವೂ ಇಲ್ಲ,—ದಿಗಿಲು! ಕೂಡಲೇ ಕುಪ್ಪಣ್ಣಯ್ಯ (ಮಾರಿಗುಡಿಯ ಅರ್ಚಕ)ನನ್ನು ಕರೆಯಲು ಯಾವನನ್ನೋ ಓಡಿಸಿದ್ದಾಯಿತು.

ಕುಪ್ಪಣ್ಣಯ್ಯನೂ ತನ್ನನ್ನೇಕೆ ಶೆಟ್ಟಿ—ಅಲ್ಲ, ಪಟೇಲರು-ಕರೆದುದೆಂದು ಕರೆಯಲು ಬಂದಿದ್ದ ಆಳಿನಿಂದ ತಿಳಿದೇ, ಅತ್ತ ಬರುತ್ತಾ ದಾರಿಯಲ್ಲಿ ಒಂದು ಕೇರೆಹಾವು ಕಪ್ಪೆಯನ್ನು ಅಟ್ಟಿಹೋದುದನ್ನೂ ಒಂದು ಕೋಳಿ-ಪಿಳ್ಳೆಯನ್ನು ಗಿಡುಗನು ಎತ್ತಿಕೊಂಡು ಹಾರಿಹೋದುದನ್ನೂ, ಶಕುನಗಳನ್ನಾಗಿ ತಿಳಿದು ನೆನಪಿನಲ್ಲಿಟ್ಟುಕೊಂಡು, ಚಾವಡಿಗೆ ಬರುವ ಮೊದಲೇ ಕಾಲು ತೊಳೆದುಕೊಂಡೇ ಬಂದನು.

ಕಾರ್ಯಕಾರಣಗಳನ್ನು ತಿಳಿಸುವ ಮೊದಲೇ ಕುಪ್ಪಣ್ಣಯ್ಯನು ಪಂಚಾಂಗವನ್ನು ತೆಗೆದುಕೊಂಡು, ತಾನು ದಾರಿಯಲ್ಲಿ ಕಂಡ ಶಕುನಗಳಲ್ಲಿ ಭರವಸೆಯನ್ನಿಟ್ಟು, ಕದ್ದವನನ್ನು ಬಲುವೇಗವಾಗಿ ಹಿಡಿದುತರುವಂತೆ ಅವನ ಬೆನ್ನಿಗೆ ಮಾರಿಯಮ್ಮನ ಗಣಗಳನ್ನು ಕಳುಹಿರುವಳೆಂದೂ, ಅವನನ್ನು ಒಂದೇ ದಿನದಲ್ಲಿ ಎತ್ತಿಕೊಂಡು ಚಾವಡಿಗೆ ತಂದುಮುಟ್ಟಿಸಿ

ಕೋಳಿ ಹಾಕುವರೆಂದೂ ಇತ್ಯಾದಿ ಹೇಳಿ, ಕಾಣೆಯಾದ ಗೆಜ್ಜೆಟೀಕಿನ ಮುನ್ನೂರು ರೂಪಾಯಿಗಳ ನಷ್ಟದ ನೋವನ್ನು ಕಡಿಮೆಯಾಗುವಂತೆ ಮಾಡಿದನು. ಎರಡು ಸೇರು ಅಕ್ಕಿ, ಎರಡು ತೆಂಗಿನಕಾಯಿ, ಒಂದು ಕುಂಬಳಕಾಯಿ,–ಇಷ್ಟು ಕಾಣಿಕೆ ಪಡೆದು, ವೀಳೆಯ ಜಗಿದು ಶಾನುಭಾಗರೊಡನೆ ತನ್ನ ಮನೆಯ ದಾರಿ ಹಿಡಿದು ನಡೆದನು.

ಶಾನುಭಾಗರಿಗೆ ಸಿಡಿಲು ಬಡೆದಂತಾಗಿದ್ದಿತು. ನಾಗಮ್ಮ ಅವರ ಮೂರನೆಯ ಹೆಂಡತಿ. ತಂದೆತಾಯಿ ಇಲ್ಲದ ಆ ಅನಾಥ ಕನ್ಯೆಯನ್ನು ನಾರಾಯಣ ರಾಯರು ವಿವಾಹವಾಗಿ ಎರಡು ವರ್ಷ ಮಾತ್ರ ದಾಟಿದ್ದಿತು. ನಾಗಮ್ಮ ತೀರ ಹಳ್ಳಿಯ ಹುಡುಗಿ—ಹದಿನೈದೇ ವರ್ಷ ವಯಸ್ಸಿನ ಹುಡುಗಿ. ನಾರಾಯಣ ರಾಯರಿಗೆ ಪುತ್ರಸಂತತಿಯಿದ್ದಿದ್ದರೆ ಇವಳನ್ನು ಅವರು ವಿವಾಹವಾಗುತಿದ್ದರೋ ಇಲ್ಲವೋ ಗೊತ್ತಿಲ್ಲ. ಆದರೆ ನಾರಾಯಣ ರಾಯರ ಪ್ರಥಮ ಪತ್ನಿಯು ಪುತ್ರರತ್ನವನ್ನು ಹಿಂದೆ ಬಿಟ್ಟಿದ್ದರೆ ನಾಗಮ್ಮನು ರಾಯರ ಸೊಸೆಯಾಗಬಹುದೆಂದು ನಾವೂ ನೀವೂ ತಪ್ಪಾಗಿ ಎಣಿಸುವಂತಾಗುತಿದ್ದಿತು. ಅನಾಥೆ, ಗತಿಹೀನೆ, ಮೂಢೆ, ಅದು ಕಾರಣವೇ ಅವಳಲ್ಲಿ ಠಕ್ಕಿಲ್ಲ, ವಂಚನೆಯಿಲ್ಲ, ಸರಳ ಸ್ವಭಾವ. ತಿಂಗಳಲ್ಲಿ ಅವೇ ಮೂರು ದಿನ ಹಿತ್ತಲ ಹೊರಗೆ ಯಾರೊಡನೆಯಾದರೂ ಮುಕ್ತಭಾಷಣ ಮಾಡಬಹುದಾಗಿದ್ದಿತು. ತಿಂಗಳಲ್ಲಿ ಇಪ್ಪತ್ತೇಳು ದಿನವೂ ಹಿತ್ತಲಲ್ಲಿಯೇ ಇರುವಳು. ಯಾರೊಡನೆ ಮಾತಾಡುವುದಕ್ಕೂ ಜಾತಿ ಕಟ್ಟಳೆ ಇದೆ. ಪತಿದೇವನ ಗೌರವಸಂರಕ್ಷಣೆಯ ಭಾರ ಬೇರೆ, ಹೀಗಾಗಿ ಹಳ್ಳಿಯ ಹವೆ, ಹಿತ್ತಲ ಹೊರಗೆ ಉಸಿರಾಡಲು ದೊರೆವುದೆಂದರೆ ತಿಂಗಳಲ್ಲಿ ಅವೇ ಮೂರು ದಿನ. ಮನೆಯಲ್ಲಿನ ಬಟ್ಟೆಗಳನ್ನು ಒಗೆದೂ, ತಾನೂ ಸುಖವಾಗಿ ಮಿಂದೂ, ಮನೆಗೆ ಬಂದು,—ಅವೇ ಮೂರು ದಿನ ಸ್ವಯಂಪಾಕದ ಕಷ್ಟ, ಹಾಳಾದ ಅಡುಗೆಯ ನಷ್ಟ, ಇವುಗಳನ್ನು ತಿಳಿದ ಸಿಡುಮೋರೆಯ ಗಂಡನಿಕ್ಕುವ ಕೂಳಿಷ್ಟು ಸಂತೋಷವಾಗಿ ಉಣ್ಣುವಳಾದರೂ, ಹೊರಬಯಲಲ್ಲಿ, ಕೆರೆಯ ಬಳಿಯಲ್ಲಿ ಕಾಣಿಸುವ ಇತರ ಹೆಂಗಸರೊಡನೆ ಆಡಿದ ಸಂಭಾಷಣೆಯ ನೆನಪೇ ಈ ಅನ್ನವು ಪರಮಾನ್ನವಾಗು

ವಂತೆ ಈ ಪದಾರ್ಥಗಳಿಗೆಲ್ಲ ಒಗ್ಗರಣೆ ಹಾಕಿದಂತೆ ಅವಳಿಗೆ ತೃಪ್ತಿಯನ್ನೂ, ರುಚಿಯನ್ನೂ ಉಂಟುಮಾಡುತಿದ್ದಿತು.

ಸಿಡಿಲು ಬಡೆದಂತಾಗಿದ್ದ ಶಾನುಭಾಗರು ಮನೆಗೆ ಬಂದು ಮುಟ್ಟುತ್ತಲೇ ತನಗೆ ಬಡೆದಂತಾಗಿದ್ದ ಸಿಡಿಲನ್ನು ನಾಗಮ್ಮನ ಮೇಲೆ ಕೆಡಹಿದರು. ಎರಡು ಮಾರು ದೂರದಿಂದ, "ಬಂದ ಮನೆಗೆ ಬೆಂಕಿ ಇಟ್ಟಿಯಾ? ಹುಟ್ಟಿದಲ್ಲಿ ಸುಟ್ಟು ಸುಡುಗಾಡು ಮಾಡಿದೆ. ಅಷ್ಟೇ ಸಾಲದಾಗಿದ್ದಿತೆ?" ಎಂದೊಮ್ಮೆಗೇ ಶಾನುಭಾಗರು ನುಡಿದ ಮಾತುಗಳ ಅರ್ಥವು ಅವಳಿಗೆ ತಿಳಿಯಲೇ ಇಲ್ಲ. ಅವಳು ಮನೆಯ ಮಾಡು ನೋಡಿದಳು; ದಿಗಿಲಿನಿಂದ ನೋಡಿದಳು; ಬೆಂಕಿಯು ಮಾತಿರಲಿ, ಹೊಗೆ ಕೂಡ ಏಳುತ್ತಿಲ್ಲ. "ನಾನು ಮನೆಯೊಳಗೆ ಕಾಲಿಡುವುದೇ ನಾಳೆ ಮಿಂದಾದಬಳಿಕಲ್ಲವೆ? ಆಗ ತಾನೆ ಬೆಂಕಿ ಮುಟ್ಟಬಹುದಲ್ಲವೆ?" ಎಂದಳು. ಶಾನುಭಾಗರು ಮೈಮುರಿದುಕೊಂಡು ಇವಳು ತನ್ನನ್ನೇ ಹೀಯಾಳಿಸಿದಳೆಂದು ಸಿಟ್ಟಾಗಿ— "ನೀನು ಮನೆಯೊಳಗೆ ಕಾಲಿಡುವುದು ನಾಳೆ! ಮಿಂದಾದಮೇಲೆ! 'ನಾಳೆ' ಯೆಂದರೆ ಗಣಪತಿಯು ಮದುವೆಯಾದ 'ನಾಳೆ!' ನೀನಿನ್ನು ಮಿಾಯುವುದುಂಟೆ? ನಿನ್ನನ್ನು ಮಿಾಯಿಸುವುದು. ಅಲ್ಲಿಂದಲೇ ಕೊಂಡೊಯ್ಯುವುದು,—ಶ್ಮಶಾನಕ್ಕೆ!" ಎಂದು ಗರ್ಜಿಸಿಬಿಟ್ಟರು,—ಒಂದು ಮಾರು ದೂರದಿಂದ.

ಶಾನುಭಾಗರು ಸಿಡಿಲೆರಗಿದಂತಾಗಿದ್ದರಷ್ಟೆ! ಈಗ ಹುಡುಗಿಯು (ಶಾನುಭಾಗರ ಪತ್ನಿ) ನಕ್ಷತ್ರಗಳನ್ನೇ ಕಂಡಳು. ಅವಳಿಗೆ ಈ ಮಾತುಗಳ ಅರ್ಥವಾಗಲಿಲ್ಲ. ಆದರೂ ಅಭಿಪ್ರಾಯವಾಯಿತು; ತನ್ನ ಮೇಲೆ ಏನೋ ಭಯಂಕರ ಅಪರಾಧ ಅಥವಾ ಅಪವಾದದ ಆರೋಪವಾಗಿದೆಯೆಂದು. ಅಂಗಳದಲ್ಲಿ ನಿಂತವಳು ಕೂತಳು. ಶಾನುಭಾಗರು ತಮ್ಮ ಎಲವಸ್ತ್ರ, ಕೈಕೋಲುಗಳನ್ನು ಜಗಲಿಯ ಮೇಲೆ ಮಡಗಿದರು. ಹಟ್ಟಿಯ ಮಾಡಿಗೆ ಮುಳಿಛಾವಣಿ ಮಾಡುತಿದ್ದ ಉಗ್ರಾಣಿಯು ಈ ಸಂಭಾಷಣೆಗೆ ಕಿವಿಕೊಟ್ಟನು:

"ನೀನು ಕೆರೆಯಲ್ಲಿ ಮಿಾಯುತಿದ್ದಾಗ ಮತ್ತಾರಿದ್ದರು?"

"ಪಟೇಲರ ಹೆಂಡತಿ. ಬೇರೆ ಯಾವ ಹೆಂಗಸರು ಸಹ ಇದ್ದಿಲ್ಲ. ಗಂಡಸರ ಮಾತಿರಲಿ."

"ಗಂಡಸರು ಸಾಯಲಿ! ಪಟೇಲರ ಹೆಂಡತಿಯೊಡನೆ ಏನು ಮಾತಾಡುತಿದ್ದೆ?"

"ಅವಳು, ಈ ದಿನ ಸಂತೆಯ ದಿನವಲ್ಲ, ಮುಂದಿನ ವಾರ ಸಂತೆಯ ದಿನ, ಅಂದರೆ ಇನ್ನೆಂಟು ದಿನಗಳಲ್ಲಿ ತನ್ನ ತಾಯಿಯ ಮನೆಗೆ ಹೋಗುತ್ತೇನೆಂದಳು. 'ನನ್ನ ತಂದೆಯ ಮನೆಯೂ ಅಲ್ಲೇ ಹತ್ತಿರ. ಆದರೆ ನನಗೆ ತಂದೆತಾಯಿಯಿಬ್ಬರೂ ಇಲ್ಲ,' ಎಂದೆ. ಅವಳು ಸ್ವಲ್ಪ ಮರುಗಿದಳು. ಹಾಗೇ ಅವಳು ಮಿಂದು ಹೋದಳು. ಅವಳು ಮಿಾಯುವ ನೀರು ಮಡಿಯಾಗಲೆಂದು ಸ್ವಲ್ಪ ಕಾದು ನಾನು ಮಿಂದು ಬಂದೆ. ಅಷ್ಟೆ."

"ಹೆತ್ತವರು ಸತ್ತರೂ ಅವರ ಹೆಸರಿಗೂ ಮಸಿ ಬಳೆಯಲು ಅವರ ನೆನಪೇಕೆ ನಿನಗೆ? ನೀರು ಮಡಿಯಾಗಲೆಂದು ಕಾಯುತಿದ್ದೆಯಾ? ಅಥವಾ ಅವಳು ಅತ್ತ ಹೋಗುತ್ತಲೇ ಅವಳು ಅಲ್ಲಿ ಬಿಟ್ಟುದನ್ನು ಎತ್ತಿತರಲು ಕಾಯುತಿದ್ದೆಯಾ?"

"ಅವಳು ಬಿಟ್ಟುದೇನು?—ಒಹೋ! ನಾನು ಬರುವಾಗ ದಾರಿಯಲ್ಲಿ ನನ್ನನ್ನು ಪುನಃ ಮಾತಾಡಿಸಿ, ತನ್ನ ಕೊರಳ ಗೆಜ್ಜೆಟೀಕನ್ನು ಕೆರೆಯ ಬಳಿ ನೋಡಿದೆನೆ?—ಎಂದಳು. ಅವಳ ಕೊರಳಿಗಿದ್ದಾಗ ಸಹ ನಾನು ನೋಡಿದ್ದಿಲ್ಲ ಎಂದೆನು. ಅಷ್ಟೇ, ಅವಳು ಅತ್ತ ಹೋದಳು, ನಾನು ಇತ್ತ ಬಂದೆ."

"'ಇತ್ತ ಬಂದೆ' ಎನ್ನಬೇಡ, 'ಇತ್ತ ತಂದೆ' ಎನ್ನು. ಎಲ್ಲಿಟ್ಟಿದ್ದಿ ಅದನ್ನು? ಈಗಲೇ ಕೊಡು. ನಾನು ಬಡವನು. ಈ ಮನೆ, ಹಿತ್ತಿಲು ಎಲ್ಲವೂ ಪಟೇಲರದು. ಅವರ ಪಟೇಲಿಕೆಯೂ, ನನ್ನ ಶಾನುಭೋಗಿಕೆಯೂ ನನ್ನವಾದರೂ, ನಮ್ಮಿಬ್ಬರ ಜೀವನವು ನಡೆಯುತ್ತಿರುವುದು ಅವರ ಅನುಗ್ರಹದಿಂದ. ಬಡತನವಿದ್ದರೆ ಚಿಂತಿಲ್ಲ. ಮೂಗುತಿಯಿದ್ದರೆ ಸಾಕು. ಮಂಗಲಸೂತ್ರ ಸಾಕು; ಗೆಜ್ಜೆಟೀಕಿನ ಆಸೆಮಾಡಬೇಡ. ಇದಾರಿಗೂ ಗೊತ್ತಿಲ್ಲ. ನಿನ್ನಲ್ಲಿ ಯಾರೂ ತಪ್ಪೆಣಿಸಿಲ್ಲ. ಭೂತಕ್ಕೆ ಹೇಳಿಕೊಂಡಿದ್ದಾರೆ. ಮಾರೀ

ಗುಡಿಗೆ ಬಲಿಯಾಗುವೆ. ಅದನ್ನು ಇತ್ತ ಕೊಡು. ಅಥವಾ ಎಲ್ಲಿದೆ ಯೆಂದು ಹೇಳು. ನಾನು ಅದು ಕೆರೆಯ ಬಳಿಯಲ್ಲೇ ಸಿಕ್ಕಿತೆಂದು ಪಟೇಲರಿಗೆ ಹೇಳಿ ನಂಬಿಸಿ ಬರುತ್ತೇನೆ. ಇತ್ತ ಕೊಡು. ಮೂರನೆಯವಳು ನೀನು. ನೀನು ಸತ್ತರೆ ನನಗೆ ಬಹಳ ಸಂಕಷ್ಟ. ಇನ್ನೊಂದು ಮದುವೆ ಯಾಗುವುದೂ ಕಷ್ಟ. ನಾನು ಅಡುಗೆ ಮಾಡಿಕೊಂಡಿರುವುದೂ ಕಷ್ಟ, ಮಕ್ಕಳಿಲ್ಲದೆ ಸಾಯುವುದೂ ಕಷ್ಟ. ಮನೆಕೆಲಸಕ್ಕೆ ಇಟ್ಟುಕೊಂಡು ಇತರ ರಿಂದ ಮನೆವಾರ್ತೆ ಸಾಗಿಸುವುದೂ ಕಷ್ಟ, ಇತ್ತ ಕೊಡು, ಅಯ್ಯೋ— ನಿನ್ನನ್ನು ಮುಟ್ಟುವುದಕ್ಕಿಲ್ಲವಲ್ಲಾ! ಶೂರ್ಪನಖಿಯಂತೆ ನಿನ್ನನ್ನು ಮಾಡಿ ಬಿಡುತ್ತಿದ್ದೆ. ಆದರೂ ನೋಡು. ದಂಡಿಸಬೇಕಾಗುವುದು; ಅನ್ನಾಹಾರ ಕೊಡಲಾರೆ. ಇತ್ತ ಕೊಡು. ಇಲ್ಲದಿದ್ದರೆ ತಲೆಯ ಮೇಲೆ ಕಲ್ಲು ಹೊತ್ತುಹಾಕುತ್ತೇನೆ. ಬೇಗ ಕೊಡು.''

ನಾಗಮ್ಮ ಅಂಗಳದಲ್ಲಿ ಬಿಸಿಲಿಗೇ ಕೂತಿದ್ದಳು. ನಕ್ಷತ್ರ ಕಂಡು ಕೂತಿದ್ದವಳು ಈಗ ಆ ನಕ್ಷತ್ರಗಳೆಲ್ಲ ಒಂದಾಗಿ ಚಂದ್ರನಂತಾಗಿ, ಆ ಚಂದ್ರನೇ ಅಡ್ಡವಾಗಿ ಕಪ್ಪು ಮೋಡದಂತಾಗಿ, ಅದರಿಂದ ಜಡಿಮಳೆ ಸುರಿ ದಂತಾಗಿ....................ಗೋಳೋ ಎಂದು ಅತ್ತಳು. ಮುಟ್ಟಾದವಳು ನೀರನ್ನು, ಬಾಯಿಮ ಮೊದಲು ಕುಡಿಯಲಾರದೆ, ಹಸಿವು ನೀರಡಿಕೆಗಳಿಂದ ಬೆಳಗ್ಗಿನಿಂದಲೂ ಬಾಡಿದ್ದಳು. ಪತಿದೇವನ ಒಂದೊಂದು ವಾಕ್ಯ, ಅದ ರೊಡನೆ ಹರಿದ ಬಿಸಿ ಉಸಿರು, ಅವನ ಕೈಕಣ್ಣುಗಳ ಕರಾಳ ಅಭಿನಯ, ಅವನು ಭೂತ, ಮಾರಿ, ಶೂರ್ಪನಖಿಗಳ ಹೆಸರೆತ್ತಿದ ಬಗೆ, ನೋಟಕ್ಕಿಂತ ನಾಲಗೆಯ ತೀಕ್ಷ್ಣತೆ, ಇವುಗಳೆಲ್ಲಕ್ಕೂ ಮೇಲಾಗಿ ''ತಲೆಯ ಮೇಲೆ ಕಲ್ಲು ಹೊತ್ತು ಹಾಕುವ'' ಹೊಸ ವಾಗ್ದಾನ—ಇವುಗಳಿಂದಾಗಿ ''ಇತ್ತ ಕೊಡು'' ಎಂದು ಅವನು ಒಮ್ಮೊಮ್ಮೆ ಹೇಳುತ್ತಿದ್ದಂತೆ, ಒಂದೊಂದಾಗಿ ಅವಳ ಪ್ರಾಣಗಳು ಅವಳ ದೇಹವನ್ನು ಬಿಡುವಂತಾಗಲು,—''ಬೇಗ ಕೊಡು'' ಎಂದು ಅವನು ಕೊನೆಯ ಸಲ ಗರ್ಜಿಸಿದ್ದೇ, ಬಿಸಿಯಾದ ಅಂಗಳದ ಧೂಳಿನಲ್ಲಿ ತನ್ನ ಕಣ್ಣೀರ ಧಾರೆಯಿಂದ ತಂಪನ್ನುಂಟುಮಾಡುತ್ತ ಅಲ್ಲೇ ಮಲಗಿದಳು.

ಶಾನುಭಾಗರು ಬಿಡುವರೆ? "ಈ ಆಟ ನನ್ನೊಡನೆಯೆ? ಇಷ್ಟರಲ್ಲೇ ಭೂತ ಹಿಡಿಯಿತೆ? ಮಾರಿ ಬಡಿಯಿತೆ?" ಎನ್ನುತ್ತ ನಿಜವಾಗಿಯೂ ಒಂದು ಕಲ್ಲನ್ನೆತ್ತಿಕೊಂಡು ಅವಳ ತಲೆಯನ್ನು ಈಗಲೇ ಜಜ್ಜುವನೆಂಬಂತೆ ಅಭಿನಯಿಸಿದರು. ನಾಗಮ್ಮನ ಕೈಮೈಗಳು ರವಷ್ಟೂ ಕದಲಲಿಲ್ಲ.

ಸಂಭಾಷಣೆಯ ಸ್ವಾರಸ್ಯವನ್ನು ಕೇಳುತಿದ್ದ ಉಗ್ರಾಣಿ ಪೂವನು ಮೆಲ್ಲನೆ ಮಾಡಿನಿಂದ ಕೆಳಕ್ಕಿಳಿದು, ಸದ್ದಿಲ್ಲದೆ ಶಾನುಭಾಗರ ಹಿಂದಕ್ಕೆ ಬಂದು, ಅವರ ಕೈಗಳಿಂದ ಆ ಕಲ್ಲನ್ನು ಫಕ್ಕನೆ ಕಿತ್ತುಕೊಂಡು ಅದನ್ನು ದೂರಕ್ಕೊಗೆದನು.

ಬಹುಶಃ ತಾತ್ಕಾಲಿಕ ಉನ್ಮತ್ತತೆಯಿಂದ ನಾಗಮ್ಮನನ್ನು ಕೊಂದುದಕ್ಕೆಂದು ಶಾನುಭಾಗರು ಜನ್ಮಾಂತ್ಯದವರೆಗೂ ಬಂದೀಖಾನೆಗೆ ಹೋಗಬಹುದಾಗಿದ್ದ ಪ್ರಸಂಗದಿಂದ ಅವರನ್ನು ಪೂವನೇ ಉಳಿಸಿದನು. ಉಗ್ರಾಣಿಯೆಂದರೆ ಗ್ರಾಮಪೋಲೀಸಲ್ಲವೆ? ಕೈಯಲ್ಲಿದ್ದ ಕಲ್ಲು ಮಾಯವಾದೊಡನೆ ಶಾನುಭಾಗರಿಗೆ ಹಿಡಿದ ಆವೇಶವು—ಪಾತ್ರಿಯ ಕೈಯ್ಯಲ್ಲಿದ್ದ ಬೆತ್ತಮುದ್ರಿಕೆ ಕಿತ್ತರೆ ಮುಗಿವಂತೆ—ಮುಗಿಯಿತು.

"ಶಾನುಭಾಗರೆ! ಒಂದು ಕೊಡಪಾನ ನೀರು ತಂದು ಅಮ್ಮನ ಮುಖದ ಮೇಲೆ ಚೆಲ್ಲಬಾರದೆ? ನೀವು ತಡಮಾಡಿದರೆ ಅವರು ಸತ್ತಾರು. ಇಲ್ಲವೇ ನಾನೇ ತಂದು ಚೆಲ್ಲುತ್ತೇನೆ," ಎಂದನವನು.

ಪೂವನೇನು ಬ್ರಾಹ್ಮಣನೆ? ಅವನು ಚೆಲ್ಲುವ ನೀರಿನ ಒಂದು ತಟಕಾದರೂ ಅವಳ ತುಟಿಗೆ ಅಂಟಿದರೆ ಅವಳ ಜಾತಿ ಕೆಡುವುದಲ್ಲ! ತಾನೇ ಓಡಿಹೋಗಿ ಒಂದು ಚೆಂಬು ನೀರನ್ನು ತಂದು ಅವಳ ತಲೆಯ ಮೇಲೆ ತನ್ನ ನಡುಗುವ ಕೈಗಳಿಂದ ಚೆಲ್ಲಿದನು, ಸುರಿದನು. "ನಿನ್ನನ್ನು ವಿಚಾರಿಸುವುದು," ಎಂದು ಅವನು ಅವಳನ್ನು ಬೆದರಿಸಿ ಆಗ ಹೇಳಿದ ಮಾತಿನ ನೆನಪಾಗಿದ್ದಿತೆ ಶಾನುಭಾಗರಿಗೆ?

ಹುಡುಗಿ ಮೆಲ್ಲನೆ ಕಣ್ತೆರೆದು ನೋಡಿದಳು. ಉಗ್ರಾಣಿಯು, "ಅಮ್ಮಾ! ಏಳಿ ಏಳಿ. ಇಲ್ಲಿ ಬಿಸಿಲು ಬಹಳ. ಹಟ್ಟಿಯ ಭಾವಣಿ ಮುಗಿದಿದೆ. ಅಲ್ಲಿ ಹೋಗಿ ಕೂತಿರಿ. ಊಟಕ್ಕಾದೊಡನೆ ಕರೆಯುವರು," ಎಂದನು.

ಶಾನುಭಾಗರ ಮಾತಿಲ್ಲ. ಅಮ್ಮ ಮೆಲ್ಲನೆ ಅಲ್ಲಿಗೆ ಹೋಗಿ ಕೂತಳು. ಶಾನುಭಾಗರ ಅಂದಿನ ಅಡಿಗೆ,—ಏನು ಹೇಳಬಹುದು! ನಳಪಾಕ, ಭೀಮಪಾಕ ಕೇಳಿರಬಹುದಷ್ಟೇ—ಇದು ಶಾನುಭಾಗಪಾಕ. ಉಪ್ಪನ್ನು ಬೇಯಿಸಿದರೆ ಅಕ್ಕಿಯನ್ನವಾಗುವುದುಂಟೆ? ಅಕ್ಕಿಯ ತೋವೆಗೆ ಒಗ್ಗರಣೆ ಹಿಡಿದೀತೇ? ಬದನೆ ಸುಟ್ಟದ್ದು ಸುಟ್ಟು ಬೂದಿಯಾಯಿತು. ಬೂದಿಯು ಗೊಜ್ಜು ಆಗುವುದುಂಟೆ? ಹೀಗಿರುವಾಗ ಬಡಿಸುವುದೇನು? ಉಣ್ಣುವುದೇನು?

ಆದರೆ ಸುಖಸಂತೃಪ್ತಿ ಇಷ್ಟರಲ್ಲೇ ಒದಗಿತು. ಪುಣ್ಯಕ್ಕೆ ಅಂದು ಸ್ಮಾರ್ತ ಏಕಾದಶಿ. ನಾಗಮ್ಮನ ಅಪರಾಧಅಪವಾದಗಳೂ, ನಾರಾಯಣ ರಾಯರ ಉನ್ಮಾದಪ್ರಮಾದಗಳೂ ಈ ವಿಪರ್ಯಾಸದಿಂದಾದ ಉಪವಾಸ ದಿಂದ ಪ್ರಾಯಶ್ಚಿತ್ತ ಹೊಂದಿ ನ್ಯಾಯವಾದುವು.

ಪಟೇಲರ ಮನೆಯಲ್ಲಿ ಗೆಜ್ಜೆಟೀಕು ಸಿಕ್ಕುವಹಾಗೆ ಎಷ್ಟೋ ದೇವರಿಗೆ ಎಂತೆಂತಹವೋ ಹರಕೆಗಳಾದವು. ಆದರೂ ಗೆಜ್ಜೆಟೀಕಿನ ಒಂದು ಗೆಜ್ಜೆಯಾದರೂ ಠೀಕಾಗಿ ಎಲ್ಲಿದೆಯೆಂದು ತಿಳಿಯಲೂ ಇಲ್ಲ; ಅದನ್ನು ಪಟೇಲರ ಪತ್ನಿ ಅಬ್ಬಕ್ಕಹೆಂಗಸು ಏನು ಮಾಡಿರಬಹುದೆಂಬ ಪ್ರಶ್ನೆಗೆ ಯಾವ ಮಂತ್ರವಾದಿ, ಪೂಜಾರಿ, ಜೋಯಿಸ ಮೊದಲಾದವರ ಟೀಕೆಯೂ ಹೊರಡಲಿಲ್ಲ.

ರಾತ್ರಿಯೂ ನಿರಾಹಾರವೆ! ನಾಗಮ್ಮ ಹಟ್ಟಿಯಲ್ಲೇ! ನಾರಾಯಣ ರಾಯರು ಜಗಲಿಯಲ್ಲೇ! ಗ್ರಾಮಪೋಲೀಸು-ಉಗ್ರಾಣಿ ಮನೆಹಟ್ಟಿಗಳ ಲ್ಲಿನ ಇವರಿಬ್ಬರ ಕಾವಲಿಗಾಗಿ ಇಲ್ಲೇ.

ನಾರಾಯಣ ರಾಯರಿಗೆ ನಿದ್ದೆ ಹತ್ತದು. ಶೆಟ್ಟಿಯ ಮಾತನ್ನು ಪಟೇಲನಂತೂ-ಮುನ್ನೂರು ರೂಪಾಯಿ ಮೌಲ್ಯದ ಸೊತ್ತನ್ನು ಕಳಕೊಂಡ ಉಗ್ಗಪ್ಪ ಶೆಟ್ಟಿಯಂತೂ-ನಂಬದಿರಲಾರನು. ತಿಂಗಳಿಗೊಂದು ಮುದಿ ಅಕ್ಕಿ ಕೊಟ್ಟು ಆತನು ಚಿಕ್ಕ ಸಾಲೆಯ ಮಾಸ್ತರರನ್ನು ತನ್ನ ಕೆಲಸಕ್ಕೆ ಇಟ್ಟುಕೊಳ್ಳುವನು. ಒಕ್ಕಲುಗಳ ಭತ್ತ (ಕಾಣಿಕೆಗಳು ಸಹ) ತನಗೆ ತಪ್ಪುವುದು. ಇತ್ತ ಅಂಗಡಿಮನೆಗಳನ್ನು ಬಿಡಬೇಕೆನ್ನುವನು; ವ್ಯಾಜ್ಯ

ವಾಗಲಿಲ್ಲ—ಅವನ ಅಕ್ಕಿ ದಾಸ್ತಾನು ಇಡುವ ಸ್ಥಳಕ್ಕಾಗಿ. ಅದರಿಂದ ಉಪ್ಪನ್ನದ ಕಾಸುಗಳು ವಾಯುವಾಗುವುವು. ಇಷ್ಟಕ್ಕೆಲ್ಲ ಕಾರಣ ನಾಗಮ್ಮ. ಆ ಕೆರೆಗೆ ಬೀಳುವುದಕ್ಕೆ, ಶೆಟ್ಟಿ ಹೋದಾಗಲೇ ಹೋದುದರಿಂದಾಯಿತು. ನಾಗಮ್ಮನ ಮೇಲೆ ಖಂಡಿತ ಸಂಶಯವಿದ್ದರೂ ಆತನ ರಿಕಾರ್ಡೆಲ್ಲ ತನ್ನ ಸ್ವಾಧೀನದಲ್ಲಿರುವುದಕ್ಕಿಂತಲೂ ಆತನ ಒಕ್ಕಲುಗಳ ಗೇಣಿಚೀಟು ರಶೀದಿಗಳೆಲ್ಲ ತನ್ನಿಂವಾಗಬೇಕಾದುದರಿಂದ, ತನ್ನ ಬದಲು ಮತ್ತೊಬ್ಬ ದೊರೆವವರೆಗೆ ನಾಗಮ್ಮನ ಮೇಲೆ ಸಂಶಯವಿಲ್ಲದಂತೆ ಪಟೇಲನು ತೋರಿಸಿಕೊಳ್ಳುವನು. ಆದುದರಿಂದ ತಾನೇ ನಾಗಮ್ಮನಲ್ಲಿ ಸಂಶಯವುಳಿಯದಂತೆ ಪ್ರಮಾಣ ಮಾಡಲು ಸರ್ವ ಪ್ರಯತ್ನಗಳನ್ನು ಮಾಡಬೇಕಾಗಿದೆ,—ಎಂದು ಇಡೀ ರಾತ್ರೆ ಚೆನ್ನಾಗಿ ಆಲೋಚಿಸಿ ನಿಶ್ಚೈಸುತ್ತಲೇ ಮುಂಜಾವಿನ ಹುಂಜವು ಕೂಗಲು, ನಾಗಮ್ಮನನ್ನು—ಅಂತರಿಕ್ಷದಲ್ಲಿ ಗಾಳಿಪಟದಂತೆ (ಪಿಶಾಚಿಯಂತೆ ಎನ್ನಲು ಹೇಸುವೆವು) ಅಲೆದಾಡುತಿದ್ದ ಕನಸಿನಲ್ಲಿ ಇಡೀ ರಾತ್ರಿಯನ್ನು ಕಳೆದ ನಾಗಮ್ಮನನ್ನು—ಎಬ್ಬಿಸಿ, ಉಗ್ರಾಣಿಯ ಕಾವಲಲ್ಲಿ ಕೆರೆಗೆ ಹೋಗಿ ಮಿಂದು ಬಾರೆಂದು ಕಳುಹಿದನು.

ನಾಗಮ್ಮನೊಬ್ಬಳೇ ಹೋಗಿದ್ದರೆ—ಇನ್ನಾರೂ ದಾರಿಯಲ್ಲಿ ಸಿಕ್ಕರೆ ಹಿಂದಿನ ದಿನದ ವೃತ್ತಾಂತ ಹೊರಡಬಹುದು; ಅವಳಾದರೂ ನೀರಲ್ಲಿ ಮುಳುಗಿ ಸಾಯುವಂತೆ ಪ್ರಯತ್ನಿಸಲೂ ಬಹುದು—ಎಂದೇ ಶಾನುಭಾಗರ ಎಚ್ಚರಿಕೆಯಿದು. ಅವಳು ಮಿಂದು ಬರುವುದರೊಳಗೆ ಮುಂದಿನ ಕಾರ್ಯಕ್ರಮವು ಗೊತ್ತಾಗಬೇಕಾಗಿದೆ.

ಅದೇ ವರ್ಷವೇನೋ ನಮ್ಮ ಸೆಟ್ಲ್ಮೆಂಟು ಆಗಿದ್ದಿತು. ಯುಗಯುಗಕ್ಕೆ ಭಗವಂತನು ಅವತಾರವನ್ನೆತ್ತುವ ಹಾಗೆ ತಲಾಂತರಕ್ಕೊಮ್ಮೆ ನಮ್ಮಲ್ಲಿ ಸೆಟ್ಲ್ಮೆಂಟಿನ ಅವತಾರವಾಗುವುದುಂಟು. ಅಧರ್ಮವನ್ನು ಕಿತ್ತು, ಧರ್ಮವನ್ನು ದೃಢಗೊಳಿಸಿ ಭಗವಂತನು ವೈಕುಂಠಕ್ಕೆ ತೆರಳುವನು. ಪ್ರಪಂಚವನ್ನು ಅಳೆದು ಬಲಿಯನ್ನು ಮೆಟ್ಟಿ ವಾಮನನು ಇಂದ್ರನ ಪದವಿಗೆ ಕೊರತೆಯಿಲ್ಲದಂತೆ ಮಾಡಿದನು. ಸೆಟ್ಲ್ಮೆಂಟು ಮಾಡಲು ಬರುವ ಉದ್ಯೋಗಸ್ಥರು ಭೂಮಿಯನ್ನೆಲ್ಲ ಅಳೆದು ಯಾರನ್ನೂ ಮೆಟ್ಟ್ಟ

ವುದಿಲ್ಲವೆಂದರೂ, ದೇಶದ ಸುಧಾರಣೆಯ ಖರ್ಚಿಗೆ ಕೊರತೆಯಿಲ್ಲದಂತೆ ಮಾಡುವ ನಾಮನಾವತಾರಿಗಳೇ ಆಗ ಮೂವತ್ತು ವರುಷಗಳವರೆಗೆ ತಮ್ಮ ನಿಜಗೃಹವನ್ನೈದುವರು.

ಈ ಅಧಿಕಾರಿಗಳ ಪರಿವಾರದಲ್ಲಿ ಆಗ ನೂರಾರು ಆಳುಗಳು ಬಂದಿದ್ದರು. ಇಲ್ಲಿಯ ಅಲೆದಾಟ ಮುಗಿದ ಬಳಿಕ ಇವರಲ್ಲಿ ಹೆಚ್ಚಿನವರಿಗೆ ಸ್ವದೇಶಕ್ಕೆ ಹಿಂದಿರುಗಲು ಮನವೇತಕ್ಕೆ ಒಡಂಬಡುವುದಿಲ್ಲವೋ ತಿಳಿಯದು. ಇವರ ಜೀವನಕ್ಕೆ ತಾಯ್ನಾಡು ಹಾಲೂಡಿಸದಿರಬಹುದು. ಇಲ್ಲಿಟ್ಟ ಕಾಲು ಹಿಂದೆಗೆಯಲು ಈ ವೀರರಿಗೆ ಮನ ಒಪ್ಪದಿರಬಹುದು. ಆಗಲೇ ಇವರು ತಮ್ಮ ಸರ್ವಾಂಗಪರಿಣತ ಬುದ್ಧಿಯನ್ನು ಪ್ರಕಟಿಸಿರುವರು. ಕೆಲವರು "ಬೀಡಾ, ಸೋಡಾ" ಮಾರುವರು. ಕೆಲವರು ಕಂಚಿನ ಪಾತ್ರೆಗಳನ್ನು ಎರಕಹೊಯ್ಯುವರು. ಕೆಲವರು ಜಟ್ಕಾ ಸಾರಥಿಗಳಾಗುವರು. ಕೆಲವರು ನಾರುಹುಣ್ಣಿನ ಕೈಕಾಲುಗಳನ್ನು ಪ್ರದರ್ಶಿಸುವ ಅಭಿನಯ ಮಾಡುತ್ತ, ತೋಡಿ ರಾಗದಲ್ಲಿ ತಮ್ಮ ದುಃಖವನ್ನು ಹಾಡುತ್ತ ತೋಡುಗಳ ಮಗ್ಗುಲಲ್ಲೂ, ಸಾರಂಗ ರಾಗದಲ್ಲಿ ತಮ್ಮಂತರಂಗವನ್ನು ಬಹಿರಂಗಪಡಿಸುತ್ತ ದಾರಿದಾರಿಗಳಲ್ಲೂ ನಿಂತು ಕಾಸುಗಳನ್ನು ಕೂಡಿಸುವರು. ಕೆಲವರು ಉತ್ತಮವಾದ ಕಾವಿಯ ಬಟ್ಟೆ ಧರಿಸಿ ಬೇಸಿಗೆಯಲ್ಲಿ ಉಪ್ಪಾರ ಮೇಸ್ತ್ರಿಗಳಾಗಿಯೂ, ಮಳೆಗಾಲದಲ್ಲಿ ಗೋಕರ್ಣಕ್ಕೆ ಹೋಗುವ ಯಾತ್ರಿಕರಾಗಿಯೂ ಪುರುಷಾರ್ಥ, ಪರಮಾರ್ಥಗಳೆರಡನ್ನೂ ಸಾಧಿಸುವರು. ಯಾವ ಊರಾದರೇನು? ಯಾವ ಜಾತಿಯಾದರೇನು? ಯಾವುದೊಂದು ಉದ್ಯೋಗದಿಂದ ಬದುಕಬಲ್ಲವರೇ ಬಲ್ಲವರು. ಒಂದೊಂದು ವೇಳೆ ರೈಲ್ವೇ ಸ್ಟೇಶನು, ಸಂತೆ, ಮಾರ್ಕೆಟು ಮೊದಲಾದುವುಗಳ ಬಳಿಯಲ್ಲಿ ಇವರ ಕೈಯಲ್ಲಿ ಯಾರುಯಾರ ಕಿಸೆಯಲ್ಲಿಂದ ಮಾಯವಾದ ವಸ್ತುಗಳು ದೊರೆತುದುಂಟು. ಜ್ಯೋತಿಷ್ಯ, ಶಕುನಫಲ ಹೇಳುವುದರಲ್ಲಿ ಅಸಾಧಾರಣ ಪಾಂಡಿತ್ಯವುಳ್ಳವರೂ ಇವರಲ್ಲಿರುವರು. ಸಂಸ್ಕೃತವನ್ನು ಇವರ ಬಾಯಿಯಿಂದ ಕೇಳಿದರೆ ದೇವತೆಗಳೂ ಮರುಗುವರು,— ಇವರಲ್ಲಿಷ್ಟು ಸಂಸ್ಕೃತಿಯಿಲ್ಲೆಂದು. ಇವರು ಕನ್ನಡವನ್ನಾಡಿದರೂ ಅದು ತುಳು, ತುಳುವನ್ನಾಡಿದರೂ ಅದು ತಮಿಳೋ,

ಮಲೆಯಾಳಿಯೋ ಆಗ ವಿಚಿತ್ರ ಪ್ರತ್ಯಯಗಳನ್ನೂ, ವಿಶೇಷ ಧ್ವನಿಗಳನ್ನೂ ಕೂಡಿ ಹೊರಡುತಿದ್ದುದರಿಂದ, ಇವರು ಯಾವ ಭಾಷೆಯನ್ನಾಡಿದರೂ ಅದು ಆ ಭಾಷೆಯಾಗಿರದೆ ಮನುಷ್ಯಮಾತ್ರರಿಗೆ ಸಂಬಂಧವಿರದ ದೇವಭಾಷಾಸಾರೂಪ್ಯವನ್ನು ಹೊಂದುವಂತಾಗುವುದು. ಇದಕ್ಕಾಗಿಯೇ ಮಾತೆಲ್ಲವೂ ನಾನೇ—ಅಕ್ಷರವೆಲ್ಲವೂ ನಾನೇ—ಎಂದು ಹಿರಿಯರ ಪವಿತ್ರ ವಾಕ್ಯವಿದೆ.

ಹೀಗೆ ಹಿಂದುಳಿದ ಆಳುಗಳಲ್ಲಿ ಆವೂರಿಗೆ ಸಮೀಪದ ಗ್ರಾಮದಲ್ಲಿ ಕಲ್ಲುಕುಟಿಗ–ಮಂತ್ರವಾದಿ–ಕಂಚುಗಾರನೊಬ್ಬನಿದ್ದನು. ಪ್ರೇತಗಳ ಉಚ್ಚಾಟನೆ, ಭೂತಬಾಧಾನಿವಾರಣೆ, ಗ್ರಹಪೀಡಾಶಾಂತಿ, ಇವುಗಳಿಂದ ಹಣ ಸಂಪಾದನೆಯಾಗದಿದ್ದರೆ ಮಾತ್ರ ಇವನು ಕಂಚುಗಾರನು; ಅದೂ ಸಾಗದಿದ್ದರೆ ಕಲ್ಲುಕುಟಿಗನು. ಆದರೆ ತನಗಾಗಿ ಒಂದು ತೋಟವನ್ನೂ ಮಾಡಿಕೊಂಡಿರಲಿಲ್ಲ. ಅಂತಹ ನಿಪುಣ. ತೋಟಗಾರನಾಗುವ ಬದಲು ಮಾಟಗಾರನಾಗುವುದುತ್ತಮವೆಂದೇ ಇವನ ಅಭಿಪ್ರಾಯವೆಂದು ಗ್ರಾಮದಲ್ಲಿನ ವೀರಭದ್ರಗುಡಿಯ ಕೀಳುಶಾಂತಿ–ಮೇಲುಶಾಂತಿಗಳು ಇವನನ್ನು ದೂರುತ್ತ ತಮ್ಮ ಮಾತ್ಸರ್ಯವನ್ನು ಸಮಾಧಾನಮಾಡಿಕೊಳ್ಳುತಿದ್ದರು.

ಇವನ ನೆನಪು ಶಾನುಭಾಗರಿಗೆ ಆ ದಿನ ಬೆಳಿಗ್ಗೆ ಉಂಟಾಯಿತು. ಪೂವನು ರಾತ್ರೆಗೆ ಮನೆಗೆ ಬಾರದಿರಲು ಕಾರಣವೇನೆಂದು ಸುಖನಿದ್ರೆಯಿಂದೆದ್ದುಬಂದ ಬಾಡಿದ ಮೋರೆಯ ರುಕ್ಕುಹೆಂಗಸು (ಉಗ್ರಾಣಿಯ ಪತ್ನಿ) ಈ ನೆನಪಿಗೆ ಹಾಯಾಗಿ ಒದಗಿದಳು. ರುಕ್ಕು ಹೆಂಗಸನ್ನು ಒಮ್ಮೆ ಕಂಡಮೇಲೆ ಅವಳ ನೆನಪು ಅಳಿಸಿಹೋಗುವುದು ಕಡಿಮೆ. ಆವೂರಿನಲ್ಲಿ ಯಾವುದೊಂದು ಬಗೆಯಲ್ಲಿ ಗಣನೆಗೆ ಬರುವ ಯಾವ ಗಂಡಸೂ, ಹೆಂಗಸೂ ಇವಳೊಡನೆ ಸಂಭಾಷಿಸದೆ ಇಲ್ಲ. ಕ್ಷತ್ರಿಯರ ಮೈಕಟ್ಟು, ಕುದುರೆಯ ನಡಿಗೆ, ಡ್ರಿಲ್ ಜಮೇದಾರನ ಬಾಯಿ! ಇವನ್ನು ನೋಡಿಯೇ ಕೆಲವರು ಇವಳು "ಗ್ರಾಮ ಪೋಲೀಸಿ" ಎಂದು ಕುಚೋದ್ಯ ಮಾಡುತಿದ್ದರು. ಆದರೂ ರುಕ್ಕು ನಿಜವಾಗಿಯೂ ರುಕ್ಮಿಣಿಯ ತದ್ಭವರೂಪವಾಗಿದ್ದಳು, ಎಂದರೆ ಅವಳ ಬಣ್ಣನೆ ಮುಗಿವಂತಿದೆ.

HYDERABAD (DECCAN)



ಶಾನುಭಾಗರು ನಸುನಕ್ಕರು. ರುಕ್ಕುವಿಗೆ ತನ್ನ ಈ ಮನೋರಮಣನ ವಿಷಯವಾಗಿ ಧೈರ್ಯವೂ, ನಿಶ್ಚಿಂತೆಯೂ ಆಗಲು, ಅವರು, "ರುಕ್ಕೂ,—ಆ ಮಂತ್ರವಾದಿಯನ್ನು ಇಲ್ಲಿಗೆ ಬರಮಾಡಬೇಕು. ಈ ಗಳಿಗೆಯಲ್ಲಿ ನಾಗಮ್ಮ ಮಿಂದುಬರುವಾಗ ಅವನು ಇಲ್ಲಿ ಹಾಜರಿರಬೇಕು," ಎಂದು ಉಗ್ರಾಣಿಗೆ ಕೊಡುವ ಅಪ್ಪಣೆಗಳನ್ನು ಉಗ್ರಾಣೀಪತ್ನಿಗೆ (ವಿನಯದಿಂದ) ಕೊಡುತ್ತ, ಅವಳ ಕುತೂಹಲಸಮಾಧಾನಕ್ಕಾಗಿ ಏಕೆಂಬ ಯಾವತ್ತೂ ವಿಷಯಗಳನ್ನು ಸಂಕ್ಷೇಪವಾಗಿ ತಿಳಿಸಿದರು. ರುಕ್ಕು (ಸಿಟ್ಟಾಗಬಾರದು) ಬೆಕ್ಕಿನಂತೆ ಮಂತ್ರವಾದಿಯ ಮನೆಯ ಕಡೆಗೆ ತೆರಳಿದಳು; ಒಂದೆರಡು ಬಾರಿ ಹಿನ್ನೋಟ ಬೀರಿದಳು; ಅದೇಕೆಂದು ಯಾರು ಬಲ್ಲರು? ಇದು ಅವಳ ಪದ್ಧತಿಯೆಂದೇ ಕೆಲವರು, ಇದು ರುಕ್ಕುವಿನ ಸೊಕ್ಕು ಎಂವೇ ಕೆಲವರು ಎನ್ನುವುದಿದ್ದಿತು. ಇರಲಿ; ನಮಗೇನು?

ರುಕ್ಕು ಮಂತ್ರವಾದಿಯ ಮನೆಗೆ ಹೋಗುವಾಗ,—ಅವನು ಹಣೆಗೆ ಭಸ್ಮ ಹಚ್ಚಿಕೊಳ್ಳುತ್ತ, ಕೈಲಾಸದಲ್ಲಿ ಪಾರ್ವತಿಯನ್ನೇ ಅರ್ಧಾಂಗವನ್ನಾಗಿಟ್ಟುಕೊಂಡ ಶಿವಶಂಕರನನ್ನು ಆತನ ಯೋಗನಿದ್ರೆಯಿಂದ ಎಬ್ಬಿಸುವಂತೆ ಕೂಗುತಲಿದ್ದಾನೆ! ರುಕ್ಕುವಿಗೆ ವೀಳೆಯ ಜಗಿಯಕೊಟ್ಟು, ಗ್ರಾಮ ಉದ್ಯೋಗಸ್ಥರಾಗಿರುವ ಶಾನುಭಾಗರು ತನ್ನಂತಹ ಪ್ರಜೆಯನ್ನು ಅಷ್ಟು ತ್ವರೆಯಾಗಿ ಬರಲು ಹೇಳಿಕಳುಹಿದ ಕಾರಣವೇನೆಂದು ರುಕ್ಕುವಿಗೆ ತಿಳಿಯದೆಯೇ ತಿಳಿದುಕೊಂಡನು. ಕವಡಿಗಳ ಚೀಲ, ಪಂಚಾಂಗದಂತಹದೊಂದು ಪುಸ್ತಕ, ಚೇಡಿಯ ತುಂಡು, ಎಲ್ಲವನ್ನೂ ತೆಗೆದುಕೊಂಡು ಎದ್ದು ರುಕ್ಕುವಿನೊಡನೆಯೇ ಶಾನುಭಾಗರಲ್ಲಿಗೆ ಬಂದನು. ಹಾದಿಯಲ್ಲಿ ನಡೆದುಬರುತ್ತ ಅವರೊಳಗೆ ನಡೆದ ಮಾತುಕತೆ ಬರೆಯಲು ನಾವು ಸಮರ್ಥರಲ್ಲ. ಅದನ್ನು ಬರೆಯಬೇಕೆಂದಿದ್ದೆವು; ಬರೆದರೆ ಅವನಾಡುವ ಆ ದೇವಭಾಷಾಸಾರೂಪ್ಯ ಹೊಂದಿದ ತುಳುಕನ್ನಡಗಳ ಪರಿಚಯವು ಸಾಕಷ್ಟಾಗುತಿದ್ದಿತು. ಆದರೆ ಅದಕ್ಕನುಕೂಲವಾದ ಅಕ್ಷರಸಾರೂಪ್ಯವುಳ್ಳ ಅಚ್ಚಿನ ಮೊಳೆಗಳು ಇನ್ನೂ ಸಿದ್ಧವಾಗಿಲ್ಲ. ಈ ಮಂತ್ರವಾದಿಯೇ ಮಾತ್ರ ಅವನ್ನು ಕಂಚಿನಲ್ಲಿ ಎರಕಹೊಯ್ದು ಕೊಡಬಹುದಾಗಿದ್ದಿತು. ಆದರೆ ಅದಕ್ಕೂ ಅವನಿಗೆ ಪ್ರೋತ್ಸಾಹ ದೊರೆತಿಲ್ಲ. ಈ

ದಿನಗಳೇ ಇಂತಹವು. ಉದ್ಯೋಗ ಮಾಡಬಲ್ಲವರು ನಿರುದ್ಯೋಗಿಗಳಾಗುವಂತೆ ನಾವು ಮಾಡುತ್ತೇವೆ, ಕೂಡಲೇ ನಿರುದ್ಯೋಗಿಗಳ ಸಮಸ್ಯೆ ಬಿಡಿಸಲು ಗಂಭೀರ ತರ್ಕಗಳನ್ನು ಮಾಡುತ್ತೇವೆ. ಹೀಗಾಗಿ ಕಂಚುಗಾರನು ಮಂತ್ರವಾದಿಯಾಗಬೇಕಾಯಿತಲ್ಲದೆ ನೂತನಭಾಷಾಶಬ್ದಗಳನ್ನು ಮುದ್ರಣಮಾಡಲು ಯೋಗ್ಯ ಸಹಾಯಕನಾಗಲಾರದೆ ಉಳಿಯುವಂತಾದ ದೋಷವು ಇತರರ ಪಾಲಿಗೆ ಬಂದಿತು.

ಶಾನುಭಾಗರು ಮಂತ್ರವಾದಿಯನ್ನು ಕೂಡಿಸುತ್ತಲೇ ಅವನು ತಾನು ಕಲ್ಲುಕುಟಿಗನಾಗಿದ್ದು ಕಟ್ಟಿದ ಯಾವುದೋ ಒಂದು ಮನೆಯ ಕೋಣೆಗಳ ನಕಾಶವನ್ನು ಜೇಡಿಮಣ್ಣಿನ ತುಂಡಿನಿಂದ ಬರೆದು, ಆಯಾ ಕೋಣೆಯಲ್ಲಿ ಇಷ್ಟಿಷ್ಟು ಕವಡಿಗಳನ್ನಿಟ್ಟು, ನಾಲ್ಕಾರು ದೇವರ ಹೆಸರುಗಳನ್ನು ಉಚ್ಚರಿಸಿ ಪ್ರಶ್ನೆ ಹೇಳತೊಡಗಿದನು. ನಮ್ಮ ಮಾತಿನಲ್ಲಿ ಅದರ ಅಭಿಪ್ರಾಯಚಮತ್ಕಾರವು ಹೀಗಾಗಿದೆ:—

ಬಹು ಬೆಲೆಯುದೊಂದು ವಸ್ತು ಕಾಣೆಯಾಗಿದೆ. ಅದನ್ನು ಯಾರೋ ಒಬ್ಬರು ಕದ್ದಿರಬಹುದಾಗಿ ಅನುಮಾನವೂ ಇದೆ. ಕದ್ದಿರಬಹುದಾದ ವ್ಯಕ್ತಿ ಕದ್ದುದಲ್ಲ. ಆದರೆ ಜಲದುರ್ಗೆಯ ಪ್ರೇರಣೆಯಿಂದ ಆ ವಸ್ತುವನ್ನು ಅಡಗಿಸಿಟ್ಟ ಮಾಯೆಯಾಗಿದೆ. ಆ ವ್ಯಕ್ತಿಯನ್ನು ಹಿಡಿದ ಜಲದುರ್ಗೆಯನ್ನು ಉಚ್ಚಾಟನೆಗೊಳಿಸಬೇಕು. ಆಗ ದುರ್ಗೆ ಬಿಟ್ಟು ಹೋಗುವಾಗ ಆ ವಸ್ತುವನ್ನು ವ್ಯಕ್ತಿಯ ಕೈಯಿಂದ ತಂದೊಪ್ಪಿಸುವಳು. ಜಲದುರ್ಗೆಯನ್ನು ಓಡಿಸಲು ಅಗ್ನಿದರ್ಶನವಾಗಬೇಕು. ಅಗ್ನಿಕುಂಡವನ್ನು ಮಾಡಿ ವ್ಯಕ್ತಿಯನ್ನು ಅದರ ಬಳಿ ನಿಲ್ಲಿಸಿ, ಕುಳ್ಳಿರಿಸಿ, ಬೆಂಕಿಯನ್ನು ಮುಟ್ಟಿಸಿ, ಕೆಂಡಗಳಿಂದ ಮಿಾಯಿಸಿ ವ್ಯಕ್ತಿಯ ಮೈಯಲ್ಲಿ ತುಂಬಿರುವ ಜಲದುರ್ಗೆಯನ್ನು ಓಡಿಸುವ ಪ್ರಯತ್ನ ಮಾಡಿದಲ್ಲಿ ಕಾರ್ಯವು ಕೈಗೂಡುವುದು.

ಇಷ್ಟು ಚೆನ್ನಾಗಿ, ವಿಜ್ಞಾನಶಾಸ್ತ್ರಕ್ಕೆ ಸರಿಯಾಗಿ, ಗ್ರಾಮ್ಯನಂಬಿಕೆಗಳಿಗೆ ಒಪ್ಪುವಂತೆ, ರುಕ್ಕುವಿನೊಡನೆ ನಾಲ್ಕು ಮಾತು ಆಡುವುದರೊಳಗೆ ಇವನು ಹೇಗೆ ಸ್ಪಷ್ಟವಾಗಿ ಪ್ರಶ್ನೆಯನ್ನು ಉತ್ತರಿಸುವನೆಂಬುದು ಚಮ

ತ್ಕಾರವಲ್ಲವೇ! ಮಂತ್ರವಾದಿಯೆಂದರೆ ಸುಮ್ಮನೆ ಮಂತ್ರಬಲದಿಂದಲೇ ಆಗಲಾರನು; ವಾದಿಯೂ ಆಗಿರಬೇಕು.

ಆಗಲೇ ಮಿಂದುಬಂದ ನಾಗಮ್ಮನನ್ನೇ ಜಲದುರ್ಗೆಯು ಪ್ರವೇಶ ಹೊಂದಿದ್ದಾಳೆಂದು, ನಾರಾಯಣರಾಯರು ಉಗ್ರಾಣಿಯಿಂದ ಒಂದು ಚಿಕ್ಕ ಹೊಂಡ ತೋಡಿಸಿ, ಅದರಲ್ಲಿ ಕಂಟಿಕಡ್ಡಿ ಎಲೆಗಳನ್ನು ಕೂಡಹಾಕಿ, ಬೆಂಕಿ ಹೊತ್ತಿಸಿ, ಆಗಾಗ ಧಾವಣಿಗಾಗಿ ತಂದಿದ್ದ ಹುಲ್ಲನ್ನು ಉರಿಸಿ, ಅಗ್ನಿಕುಂಡವನ್ನು ನಿರ್ಮಿಸಿ, ಮಂತ್ರವಾದಿಯು ಕಾರ್ಯಕ್ರಮವನ್ನು ಪ್ರಾರಂಭಿಸಬಹುದೆಂದರು.

ನಾಗಮ್ಮನಿಗೆ ಕನಸಿನಲ್ಲಿ ಕಂಡುದೆಲ್ಲ ಮಾಯವಾಗಿದ್ದಿತಾದರೂ ಮನಸಿನಲ್ಲೇನೂ ಮಾಯವಾಗಿದ್ದಿಲ್ಲವಷ್ಟೆ. "ಕಲ್ಲಿನ ಬದಲಾಗಿ ಕೆಂಡ" ವೆಂದೆಣಿಸಿದಳು. ಬಾಯಿ ಬಾರದು.

ಮಂತ್ರವಾದಿಯೂ ಗಂಡನೂ ಕೇಳುತ್ತಲೇ ಇದ್ದ ಪ್ರಶ್ನೆಗಳಿಗೆ "ನಾನೊಂದೂ ಅರಿಯೆ," ಎಂದೇ ಉತ್ತರ ಕೊಡುತಿದ್ದಂತೆ,--ಕುಂಡದ ಬಳಿ ಅವಳು ಕೂತಿರಬೇಕೆಂದಾಯಿತು. ಮಿಂದುಟ್ಟ ಒದ್ದೆ ಸೀರೆಯು ಮೈಮೇಲೆಯೇ ಒಣಗಹತ್ತಿತು. ಕೂದಲು ಕಟ್ಟಿಕೊಂಡಿರಲಿಲ್ಲ, ಒಣಗಲೆಂದು; ಅದೆಲ್ಲ ಬೆಂಕಿಯ ಧಗೆಗೆ ಒಣಗುತ್ತ, ಗಾಳಿಗೆ ತೂಗುತ್ತ, ಬೆಂಕಿಯ ನಾಲಗೆಗಳನ್ನು ಸೋಕುತ್ತ, ಅಷ್ಟಷ್ಟೆ ತುದಿಗಳು ಸುಡುತ್ತ ಕರಿಯಾದುವು. ನಿರಾಹಾರ, ದುಃಖ, ಜಾಗರಣ ಇವುಗಳಿಂದಾಗಿ ಕೆಂಪಗೆ ಉರಿಯುತಿದ್ದ ಕಣ್ಣುಗಳಲ್ಲಿ ಈ ಕುಂಡದಿಂದೇಳುವ ಹೊಗೆಯು ಇನ್ನಷ್ಟು ಉರಿಯನ್ನೂ ಚುರುಕನ್ನೂ ಹಬ್ಬಿಸಿತು. ಬಾಡಿದ ಮುಖ ಒಣಗಿತು. ಬಳಲಿದ ದೇಹ ದಣಿಯಿತು. ಜ್ವರವೇರಿತು.

ಕುಂಡದಲ್ಲಿ ಇನ್ನೂ ಮುಳಿಹುಲ್ಲು, ಕಡ್ಡಿಗಳು ಮತ್ತು ಸಾದೆಯು ಚೂರು ಸುರಿಯಲು, ಪ್ರಶ್ನೆಗಳು ನುಳಿಗರೆಯಲು, ಉತ್ತರವು ಹೊರಡದಿರಲು,—ನಾಗಮ್ಮನು ಧೊಪ್ಪನೆ ಕುಂಡದೊಳಗೆ ಬಾಗಿ ಬಿದ್ದಳು. ನಾರಾಯಣ ರಾಯರು ಅವಳನ್ನು ಎತ್ತಲು ಧಾವಿಸಿದರು. ಮಂತ್ರವಾದಿಯು ತಾನೇ ಅವಳನ್ನು ಎತ್ತಿದನು. ತಲೆ, ಮುಖ, ಎದೆಯ ಬಟ್ಟೆ,—ಇಷ್ಟೇ ಸ್ವಲ್ಪ

ಸ್ವಲ್ಪ ಮಾತ್ರ ಸುಟ್ಟಿದ್ದುವು. ಮಂತ್ರವಾದಿಯು, "ಜಲದುರ್ಗೆಯಿನ್ನು ಕೂಡಲೇ ಹೊರಡುವಳು," ಎಂದನು. ನಾರಾಯಣ ರಾಯರು, "ಸುಟ್ಟಿಲ್ಲಿಗೆ ಏನುಮುಟ್ಟಿಸಬೇಕು?" ಎಂದರು. ಬೆಣ್ಣೆಯೆಂದಾಯಿತು; ಅದಿಲ್ಲ. ಸೆಗಣಿಯೆಂದಾಯಿತು, ಈ ವೇಳೆಗೆ ತಕ್ಕ ಬೆಣ್ಣೆ!

ನಾಗಮ್ಮನ ಮಾತಿಲ್ಲ! ಉಸಿರೇಳುತ್ತಿದೆ! ಬೆದರಿದರು! ಆದರೂ ಮಂತ್ರವಾದಕ್ಕೆ ಆತಂಕವೇ?

ಅಷ್ಟರಲ್ಲಿ ಪಟೇಲರ ಮನೆಯಿಂದ ಹತ್ತಿಪ್ಪತ್ತು ಮಂದಿ ಒಕ್ಕಲುಗಳು ಶಾನುಭಾಗರಲ್ಲಿಗೆ ಅವರನ್ನು ಕರೆಯಬಂದರು. "ನಿನ್ನೆಯಿಂದ ಶಾನುಭಾಗರೇ ಇಲ್ಲ. ಗೆಜ್ಜೆಟೀಕನ್ನು ಹಿಡಿದು ಗಂಡನು ಮಾಯವಾದನೇ? ನೋಡೋಣ!" ಎಂದು ಪಟೇಲರು ಈ ನೆವದಿಂದ ಒಕ್ಕಲುಗಳನ್ನು ಅಲ್ಲಿಗೇ ಕಳುಹಿಸಿದ್ದರು. ಈ ಪರಿಯನ್ನು ನೋಡಿ ಅವರಿಗೆ ಅರ್ಥವಾಗದೇ? ಆದರೂ ಮಂತ್ರವಾದದ ಕಾರ್ಯಕ್ಕೆ ವಿಘ್ನವಾದೀತೆಂದು ಅವರೂ ಸುತ್ತುಗಟ್ಟಿ ನಿಂತರು.

ಮಂತ್ರವಾದವೇನೋ ಸಾಗಿತು; ನಾಗಮ್ಮನಿಗೆ ಮಾತ್ರ ಪ್ರಜ್ಞೆಯಿಲ್ಲ.

ಮಂತ್ರವಾದಿಯು, "ಇನ್ನು ರಾಹುಕಾಲ. ಇದು ದಾಟುವತನಕ ನನ್ನಿಂದೇನೂ ಸಾಗದು," ಎಂದು ದೂರವಾದನು. ಶಾನುಭಾಗರು, "ಇನ್ನೂ ಬಾಯಿ ಬಿಡುವುದಿಲ್ಲಯ್ಯ! ನಿನ್ನದೆಂತಹ ಮಂತ್ರ?" ಎಂದು ಗದರಿಸಿದರು; ಅಂತರಂಗದಲ್ಲಿ ಬೆದರಿದರು. ಜನ ಕೂಡಿದುದಕ್ಕೆ ಒಮ್ಮೆ ಹೆದರಿದರು; ಮತ್ತೊಮ್ಮೆ, "ನಾನೆಷ್ಟು ಪಟೇಲರಿಗಾಗಿ ಸೊತ್ತು ಸಿಗುವಂತೆ ಪ್ರಯತ್ನಿಸುತಿದ್ದೇನೆಂದು ಇವರೂ ಸಾಕ್ಷ್ಯ ನುಡಿಯುವರು. ಚೆನ್ನಾಯಿತು," ಎಂದು ಸಮಾಧಾನ ಮಾಡಿಕೊಂಡರು.

ಸುಮಾರು ಹನ್ನೆರಡು ಹೊಡೆಯುವ ಹೊತ್ತು. ಕಲೆಕ್ಟರರ ಬಟ್ಲರನು ಶಾನುಭಾಗರಲ್ಲಿಗೆ ಬಂದನು. ಅವನು ಎರಡು ತಾಸುಗಳ ಹಿಂದೆ ಆ ಕಂಚುಗಾರನಲ್ಲಿಗೆ ಹೋಗಿದ್ದನು. ಕಲೆಕ್ಟರರು ಅಂದೇ ರಾಜಧಾನಿಗೆ ಹೊರಡುವರು. ಅವರಿಗೆ ಆ ಊರಲ್ಲಿ ಜನರು ಪೂಜಿಸುವ ದೇವತೆಗಳ ಕಂಚಿನ ವಿಗ್ರಹಗಳಿದ್ದರೆ ಬೇಕಾಗಿದ್ದಿತು. ಅಂತಹವನ್ನು ಅವರೆಷ್ಟೋ

ಸಂಗ್ರಹಿಸಿದ್ದಾರೆ. ಕಂಚುಗಾರನು ಇಲ್ಲಿಗೆ ಬಂದುದನ್ನು ತಿಳಿದು ಬಟ್ಲರನೂ ಇಲ್ಲಿಗೇ ಬಂದಿದ್ದನು.

"ಪಂಜುರ್ಲಿಯದೊಂದು ಚೆಲುವಾದ ವಿಗ್ರಹ ಉಂಟು. ನಾಲ್ಕು ರೂಪಾಯಿಗೆ ಕೊಡಬಹುದು. ಗಿರಾಕಿಗಳಿಲ್ಲದೆ ಒಳಗೇ ಉಳಿದಿದೆ. ಹೊಸ ಭೂತಗುಡಿಯೇ ಆಗಲಿಲ್ಲವಲ್ಲ. ನೀವಾದರೂ ಕೊಂಡುಹೋಗಿರಿ. ಈ ಮಂತ್ರವಾದ ಮುಗಿಯುತ್ತಲೇ ಇನ್ನೆರಡು ತಾಸುಗಳಲ್ಲಿ ಬಂಗಲೆಗೆ ತರುತ್ತೇನೆ," ಎಂದು ಕಂಚುಗಾರನೆಂದನು. ಬಟ್ಲರನು ಅಲ್ಲಿಂದ ಎಲ್ಲವನ್ನೂ ನೋಡಿ ಹೊರಟುಹೋದನು.

ಕಂಚುಗಾರನ ಮನಸ್ಸು ನಾಲ್ಕು ರೂಪಾಯಿ ಸಿಗುವ ವ್ಯಾಪಾರದ ಮೇಲೆ. ಶಾನುಭಾಗರ ಮನಸ್ಸು ಮಂತ್ರವಾದ ಮುಗಿಸದಿರುವ ಮಂತ್ರವಾದಿ ಕಂಚುಗಾರನ ಮೇಲೆ. ಹೀಗಾಗಿ ಸ್ವಲ್ಪ ಕಲ್ಮಷ ಹುಟ್ಟಿತು. ಮಂತ್ರ ಮುಗಿಸದೆ, ಜಲದುರ್ಗೆಯನ್ನು ಹೊರಡಿಸದೆ ಕಂಚುಗಾರನು ಹೋಗಲಾರನು, ಅವನು ಹೋಗದೆ ಪಂಜುರ್ಲಿಯ ವಿಗ್ರಹ ಕಲೆಕ್ಟರರ ಕೈಸೇರದು. ಅಂತೂ ರಗಳೆಗಿಟ್ಟಿದೆ.

ಅರೆತಾಸಿನೊಳಗೆ ಪಟೇಲರು, ಉಗ್ರಾಣಿ ಮತ್ತು ಶಾನುಭಾಗರು ಕಲೆಕ್ಟರರ ಬಂಗಲೆಗೆ ಬರಬೇಕೆಂದೂ, ಕಂಚುಗಾರನೂ ಅಲ್ಲಿಗೆ ಬರಬೇಕೆಂದೂ ದೊರೆಗಳ ಅಪ್ಪಣೆಯಾಗಿವೆಯೆಂದು ಬಟ್ಲರನೇ ಅಲ್ಲಿಗೆ ಬಂದು ತಿಳಿಸಿದನು. ವಿಚಾರುವುದಕ್ಕುಂಟೇ? ಇಷ್ಟು ಮಂದಿ ಹೊರಡುವಾಗ ದೊರೆಗಳೇ ಅಲ್ಲಿಗೆ ದಯಮಾಡಿಸಿದರು!

"ನಿಮಗೆಲ್ಲರಿಗೆ ಅಲ್ಲಿಗೆ ಬರಹೇಳಿದ್ದೆ. ಆದರೆ ಇಲ್ಲಿ ನಿಮ್ಮ ಮತ ಸಂಬಂಧವಾದ ಏನೋ ಕೆಲಸವಾಗುತ್ತಿದೆಯೆಂದು ಪುನರಾಲೋಚಿಸಿ, ಅದನ್ನು ಭಂಗಗೊಳಿಸಬಾರದೆಂದು ನಾನೇ ಇಲ್ಲಿಗೆ ಬಂದೆ. ಇದೇನಾಗುತ್ತಲಿದೆ?" ಎಂದು ಅಪ್ಪಣೆ ಕೊಡಿಸಿದರು.

ತುಳು, ತಮಿಳು, ಕನ್ನಡ ಎಲ್ಲವೂ ಕಲೆಕ್ಟರರಿಗೆ ಗೊತ್ತಾಗುವುದೆಂದು ಎಲ್ಲರಿಗೂ ಗೊತ್ತು. ಮಂತ್ರವಾದಿಯು ಮಾತುಗಳು ಹೀಗಾದುವು:—

"ಇದು ಜಲದುರ್ಗೆಯು ಉಚ್ಚಾಟನೆ. ಈ ಹೆಂಗಸಿನ ದೇಹವನ್ನು ನಿನ್ನೆ ಇವಳು ಕೆರೆಯಲ್ಲಿ ಮಿಾಯುವಾಗ ಪ್ರವೇಶಿಸಿ, ಇವಳ ಮೂಲಕ ಪಟೇಲರ ಹೆಂಡತಿಯು ಗೆಜ್ಜೆಟೀಕನ್ನು ಅಡಗಿಸಿಡುವಂತೆ ಆ ದೇವತೆಯು ಮಾಡಿರುವಳು. ಮಂತ್ರದಿಂದ ನೋಡಿದ್ದಲ್ಲಿ ಇವಳೇ ಕದ್ದವಳೆಂದು ತಿಳಿದುಬರುತ್ತಿದೆ."

**ಕಲೆಕ್ಟರರು** (ಗಂಭೀರನಾಗಿ ನಕ್ಕು):—"ವಿಚಿತ್ರ ಮಂತ್ರವಾದ! ಇನ್ನೇನು ಮಾಡಬೇಕು?"

**ಮಂತ್ರವಾದಿ:**—"ಅಗತ್ಯವಾದಲ್ಲಿ ಆ ಕುಂಡದಲ್ಲಿ ಇವಳನ್ನು ಕೂಡ್ರಿಸಬೇಕು. ಏನೂ ಅಪಾಯವಿಲ್ಲ."

**ಕಲೆಕ್ಟರರು:**—"ಇವಳೇ ಕದ್ದಳೆಂದು ಪ್ರಶ್ನೆಯಲ್ಲಿ ಹೇಗೆ ತಿಳಿಯಿತು?"

**ಮಂತ್ರವಾದಿ:**—"ಗ್ರಹಚಾರಫಲದಿಂದ."

**ಕಲೆಕ್ಟರರು:**—"ಆಶ್ಚರ್ಯ! ಇಲ್ಲಿ ಬರಲು ನಿನಗೆ ಹೇಳಿದವರು ಯಾರು?"

**ಮಂತ್ರವಾದಿ:**—"ಏನೂ ತಿಳಿಯದ ಈ ಹೆಂಗಸು."

**ಉಗ್ರಾಣಿ:**—"ಬಡವೆ, ಅವಳ ತಪ್ಪಿಲ್ಲ, ದೇವರೇ! ನನ್ನ ಹೆಂಡತಿಯುವಳು."

**ಕಲೆಕ್ಟರರು:**—"ನಿನ್ನನ್ನು ಇಲ್ಲಿ ಕರೆಕಳುಹಿದ್ದುದು ಯಾರು?"

**ಶಾನುಭಾಗರು:**—"ನಾನು, ದೇವರೇ! ನನ್ನ ಹೆಂಡತಿ ಒಬ್ಬಳೇ ಮಾತ್ರ ಕೆರೆಯಲ್ಲಿ ಮಿಾಯುತಿದ್ದಳಂತೆ. ಆಗ ತಾನೇ ಪಟೇಲರ ಹೆಂಡತಿಯು ಗೆಜ್ಜೆಟೀಕು ಕಾಣೆಯಾಯಿತೆಂದು ತಿಳಿಯಬಂದಿತು. ಇವಳು ಎಷ್ಟು ವಿಚಾರಿಸಿದರೂ ತನಗೆ ತಿಳಿದಿಲ್ಲವೆಂದಳು. ಹೀಗಾಗಿ ಮಂತ್ರವಾದಿಯನ್ನು ಕರೆದುತರಬೇಕಾಯಿತು. ಈಗ ಸತ್ಯ ಹೊರಡುತ್ತಿದೆ."

ಕಲೆಕ್ಟರರು ಪಟೇಲರ ಹೆಂಡತಿಯನ್ನು ಕರೆಯಿಸಿದರು. ಆಕೆ ಎಲ್ಲವನ್ನೂ ಹಿಂದೆ ಹೇಳಿದಂತೆಯೇ ಹೇಳಿದಳು.

ಪಟೇಲರನ್ನು ವಿಚಾರಿಸಲು, ತಾನು ಯಾರನ್ನೂ ಅನುಮಾನಿಸಿಲ್ಲವಾದರೂ, ದೇವತೆಗಳಿಗೆಲ್ಲ ಹರಕೆ ಹೇಳಿಕೊಂಡಿದ್ದೇನೆಂದು ಅವರ ಮಾತು. ಖಂಡಿತವಾಗಿಯೂ ಆಭರಣ ಸಿಕ್ಕುವುದೆಂದೇ ಅವರ ವಿಶ್ವಾಸ!

**ಕಲೆಕ್ಟರರು:**—"ಆಭರಣ ಸಿಕ್ಕಿದರೆ?"

**ಪಟೇಲರು:**-"ನನಗಾಯಿತು. ಇನ್ನು ಅದನ್ನು ನನ್ನ ಹೆಂಡತಿ, ಮೈಮೇಲಿನ ಪರಿವೆಯಿಲ್ಲದ ಹೆಂಡತಿ, ಇಟ್ಟುಕೊಳ್ಳುವುದೇ ಬೇಡ. ಮುನ್ನೂರು ರೂಪಾಯಿ, ದೇವರೇ!" ಅವನ ಒಂದೊಂದು ನಿಟ್ಟುಸಿರಿಗೂ ಮುನ್ನೂರು ಮುನ್ನೂರು ರೂಪಾಯಿಯು ಬೆಲೆ ಬರುವಂತಿದ್ದಿತು.

**ಪಟೇಲರ ಹೆಂಡತಿ:**—"ಆದೀತು, ನೀವು ಕೊರಳಿಗಿಟ್ಟುಕೊಳ್ಳಿ. ಹೇಗೂ ತೋಳುಸರಿಗೆ, ಒಂಟಿ, ಕೈ ಬಳೆ ಇತ್ಯಾದಿ ಇವೆ; ಚಾವಡಿಯಲ್ಲಿ ಶೃಂಗಾರವಾದೀತು."

**ಶಾನುಭಾಗರು:**—"ನನಗಿಷ್ಟು ಕಷ್ಟವಾಗಿದೆ, ದೇವರೇ! ಈ ಖರ್ಚಿನ ಹಣವನ್ನಾದರೂ ಪಡೆಯಬೇಕಲ್ಲವೇ, ಪಟೇಲರಿಂದ? ಇಲ್ಲದಿದ್ದರೆ ಅವರ ಉದ್ಯೋಗಕ್ಕೆ ಸಂಬಂಧಪಟ್ಟ ರಿಕಾರ್ಡು, ಅವರ ಮನೆತನದ ಲೆಖ್ಖಾಚಾರ,—ಇದನ್ನೆಲ್ಲ ನಾನೇಕೆ ಮಾಡುತ್ತಿರಬೇಕು? ಇಲ್ಲವೇ, ಆ ಕೆಲಸ, ಈ ಮನೆಅಂಗಡಿಗಳಾದರೂ ನನಗೆ ಶಾಶ್ವತ ಸಿಗಬೇಕು."

**ಉಗ್ರಾಣಿಯ ಹೆಂಡತಿ:**—"ಮಂತ್ರವಾದವು ಕೈಗೂಡುವಂತೆ ಅವನನ್ನು ನಾನೇ ಕರೆದುತಂದವಳು. ನನಗೇನು ಬಹುಮಾನ?"

**ಉಗ್ರಾಣಿ:**—"ಶಾನುಭಾಗರ ಮತ್ತು ಅವರ ಹೆಂಡತಿಯ ಜಾಗ್ರತೆ ನೋಡುತ್ತ ಕಾವಲುನಿಂತವನು ನಾನು. ಇಲ್ಲದಿದ್ದರೆ ಇಲ್ಲಿ ನಿನ್ನೆ ಒಂದೋ, ಎರಡೋ ಹೆಣ ಬೀಳುತ್ತಿರಲಿಲ್ಲವೇ?"

ಇಷ್ಟಾಗುವಾಗ,—ನಾಗಮ್ಮನು ಅತಿ ಕಷ್ಟದಿಂದ, "ಹೂಂ," ಎಂದು ಕಣ್ತೆರೆದಳು.

"ಶಹಬಾಸ್! ಕೊಡು ನನ್ನ ಸೊತ್ತನ್ನು!" ಎಂದು ಮಂತ್ರವಾದಿ ವಿಕಾರವಾಗಿ ಆರ್ಭಟಿಸಿದನು! "ಕೂಡಲೇ ಕೊಡು, ಗೊತ್ತಿದೆ ನನಗೆ. ದೇವರಿಲ್ಲದ್ದಾರೆ, ಪಂಜುರ್ಲಿಯನ್ನು ಮಾರಬೇಕವರಿಗೆ. ತಡ ಮಾಡಬೇಡ!"

ನಾಗಮ್ಮನು ಒಂದು ಮಾತನ್ನೂ ಆಡಲಿಲ್ಲ. ಮಂತ್ರವಾದಿ ಇನ್ನೂ ಇನ್ನೂ ವಿಕಾರವಾಗಿ ಮುಖ ಮಾಡಿ ಅವಳನ್ನು ಚುರಚುರನೆ ನೋಡಿದನು.

ಕಲೆಕ್ಟರರು ಮೆಲ್ಲನೆ ದಿಗ್ಭ್ರಾಂತರಾದಂತೆ ಮಾಡಿ, ಮೈಯಲ್ಲೆಲ್ಲ ಹುಡುಕಿದಂತೆ ನಟಿಸಿ, ತಮ್ಮ ಅಂಗಿಕಿಸೆಯಿಂದ ಗೆಜ್ಜೆಟೀಕನ್ನು ಹೊರಗೆತ್ತಿ, ಏನೂ ಒಂದೂ ತಿಳಿಯದವರಂತೆ, "ಇದೆಲ್ಲಿಯದು, ನನ್ನ ಚೀಲದಲ್ಲಿ? ನಾನೇನೋ ಸುರುಳಿಕಟ್ಟಿದ ಹಾವಿನಂತಾಗಿದೆಯೆಂದು ಬೆದರಿದ್ದೆ!" ಎಂದರು.

ಸರ್ವರಿಗೂ ಆಶ್ಚರ್ಯವಾಯಿತು. ದೊರೆಗಳ ಮೇಲಿಂದ ದೇವಿ ದಯೆದೋರಿದಳು. ರಾಜದೈವ, ರಾಜಮರ್ಯಾದೆ ಕೊಟ್ಟಿತು. ಅಂತೂ ಗೆಜ್ಜೆಟೀಕು ದೊರೆಯಿತು.

ಮಂತ್ರವಾದಿಯ ಮುಖವು ಬಹಳವಾಗಿ ಅರಳಿತು. ಇನ್ನೂ ಅದು ಅರಳಿದ್ದಲ್ಲಿ ಅವನ ಬಾಯಿ ಸೀಳಿಹೋಗುತ್ತಿದ್ದಿತು. ಪಟೇಲರು ತಮ್ಮ ಬಳೆತೊಟ್ಟ ಕೈಯನ್ನು ಬಹಳ ಮೇಲಕ್ಕೆತ್ತಿ, "ಓ, ಓ," ಎಂದರು. ಅವರ ಹೆಂಡತಿ ನಕ್ಕು ಉಕ್ಕಿ, ಬಿಕ್ಕಿ ಅತ್ತಳು. ಶಾನುಭಾಗರು ನಿಂತವರು ಕೂತರು; ಕೂತು ಎದ್ದುನಿಂತರು. ಉಗ್ರಾಣಿಯು ಕೈಬೀಸಿ ಸಂಕೋಲೆಯಿಂದ ಹೊಲವನ್ನು ಅಳೆದಂತೇನೋ ಅಭಿನಯ ಮಾಡಿದನು. ರುಕ್ಕು ಆ ಗೆಜ್ಜೆಟೀಕನ್ನೇ ನೋಡಿ ಕಣ್ಣಿನಿಂದಲೇ ಅದನ್ನು ನುಂಗುವಳೋ ಎಂಬಂತಿದ್ದಳು.

ಧರ್ಮಾವತಾರಿಗಳಾದ ದೊರೆಗಳ ಸನ್ನಿಧಾನಪ್ರಭಾವದಿಂದಲೇ ಈ ಒಡವೆಯು ತಾನಾಗಿ ದೊರೆವಂತಾಯಿತೆಂದು ಅವರ ಮಹಿಮೆಯನ್ನು ಕೊಂಡಾಡಲು ಒಕ್ಕಲಕೂಟವು ಬಾಯ್ತೆರೆಯಿತು. ಎಲ್ಲರ ಕಣ್ಣುಗಳೂ ದೊರೆಗಳ ಮೇಲೆಯೇ!

"ಪಟೇಲರೇ! ನಿಮ್ಮ ಸೊತ್ತು ದೊರೆಯಿತಲ್ಲ! ಇನ್ನೇನೆನ್ನುವಿರಂತೆ?" ಎಂದು ದೊರೆಗಳು ಪಟೇಲರನ್ನು ಕೇಳಿದರು.

"ನಾವು ಹೇಳಿಕೊಂಡ ಹರಕೆಗಳನ್ನು ಆಯಾ ದೇವತೆಗಳಿಗೆ ಸಲ್ಲಿಸುತ್ತೇವೆ. ಇನ್ನು ಈ ಒಡವೆಯು ಮರೆಯಾಗದಂತೆ ಎಚ್ಚರವನ್ನು ತೆಗೆದುಕೊಳ್ಳುತ್ತೇವೆ. ಎಂತೂ ಮಂತ್ರವಾದಿಯವರ ಪ್ರಯತ್ನಗಳಿಗೆ ಅವರಿಗೆ ಬಹುಮಾನ ಕೊಡಬೇಕಾಗಿದೆ."

"ಪಟೇಲರೇ! ಈ ಹುಡುಗಿಗೆ ತಲೆಮೈ ಸುಟ್ಟಿವೆ. ಬಹಳ ಕಂಗಾಲಾಗಿದ್ದಾಳೆ. ಇವಳ ಮೇಲೆ ಮಂತ್ರವಾದ ನಡೆದೇ ಇದು ದೊರೆವಂತಾಗಿದೆಯಲ್ಲ! ಅವಳಿಗೇನು ಕಷ್ಟಪರಿಹಾರ?"

"ಅವಳಿಗೇನು? ಮಾಮೂಲಿನಂತೆ ಮುತ್ತೈದೆಯರಿಗೆ ನಮ್ಮ ಗುತ್ತಿನಿಂದ ಉಪಚಾರಗಳು ಸಲ್ಲುವುದುಂಟು. ಅದನ್ನು ಕೊಡಿಸುತ್ತೇನೆ. ಅವಳ ಮೇಲೆ ಉಂಟಾದ ಗುಮಾನು ನಿಜವಾದಂತಾಯಿತು. ಈ ಮಂತ್ರವೆಲ್ಲ ಅವಳ ಮೇಲೆ ನಡೆಯದಿರುತಿದ್ದರೆ ಒಡವೆ ಸಿಗುತಿತ್ತೇ?"

"ಶಾನುಭಾಗರೇನಂತೆ?"

"ದೈವಹಿಡಿದು ಹೀಗೆಲ್ಲ ನನಗೆ ನಗೆಗೇಡು ಮಾಡುವ ಹೆಂಡತಿಯಿಂದೇನು? ನನ್ನ ಸಂಕಟ ಅಪಾರ. ದೇವರೇ!"

"ಮಂತ್ರವಾದಿ, ಇಷ್ಟು ವಿಚಿತ್ರವಾದ, ಅದ್ಭುತವಾದ ಶಕ್ತಿಯು ನಿನ್ನಲ್ಲಿರುವಾಗ ಈ ಹಾಳು ಗ್ರಾಮದಲ್ಲಿ ನೀನಿನ್ನು ವಾಸಮಾಡುವುದು ಪ್ರಯೋಜನಕರವೇ? ರಾಜಧಾನಿಗೆ ಹೋಗೋಣ."

"ಅಪ್ಪಣೆಯಾದಂತೆ."

ಪಟೇಲರು, ಶಾನುಭಾಗರು, ಮೊದಲಾದವರು ಮಂತ್ರವಾದಿಯನ್ನು ವರ್ಗಾಯಿಸುವುದು ಬೇಡವೆಂದು ದೊರೆಯನ್ನು ಕೇಳಿಕೊಂಡರು.

ಆಗ ದೊರೆಯವರು ಅಪ್ಪಣೆ ಕೊಡಿಸಿದುದೇನೆಂದರೆ:—

"ನಿನ್ನೆ ಬೆಳಿಗ್ಗೆ ಕೆರೆಯಲ್ಲಿ ಮೀನು ಶಿಕಾರಿಮಾಡಲು ನಾನು ಹೋಗಿದ್ದೆ. ಹಿಂದಿರುಗುವಾಗ ಒಂದು ಕಡೆ ಮೀಳೆಯ ಕಟ್ಟಿದ್ದ ಚಿಕ್ಕ ವಸ್ತ್ರವೊಂದೂ, ಅದರ ಅಡಿಯಲ್ಲಿ ಈ ಆಭರಣವೂ ಅಲ್ಲಿದ್ದುದನ್ನು ಕಂಡೆ. ಅವನ್ನು ಎತ್ತಿಕೊಂಡು ಬಂಗಲೆಗೆ ಬಂದು, ಅವುಗಳ ವಾರಸಿ ಹುಡುಕಿ ಕೊಡಲು ಪೋಲೀಸ್ ಆಫೀಸರರು ಅವನ್ನು ಅಮಾನತು ಇರಿಸ

ಬೇಕೆಂದು ಸೂಚನೆ ಬರೆದು, ಈ ಹೊತ್ತು ರಾಜಧಾನಿಗೆ ಹೋಗು ವಾಗ ಒಡವೆಯನ್ನು ಕೊಂಡುಹೋಗಬೇಕೆಂದು ಚೀಲದಲ್ಲಿ ಮಡಗಿ ಕೊಂಡಿದ್ದೆ. ಆದರೂ ಇಟ್ಟ ಸ್ಥಳವನ್ನು ಮರೆತು ಈ ಬಡ ಹುಡು ಗಿಯೇ ಅದನ್ನು ಕದ್ದಿರಬಹುದೆಂದು ನೀವು ಊಹಿಸುವಂತೆ ಆದುದಕ್ಕೆ ಕಾರಣ ಯಾರು? ಪಟೇಲರೂ ಶಾನುಭಾಗರೂ ಕಾಣೆಯಾದುದನ್ನು ಗ್ರಾಮದಲ್ಲಿ ತಲಾಸಿಮಾಡುವ ಕ್ರಮವೇನೆಂದು ಕೇಳಿದ್ದೆ. ಈಗ ತಿಳಿದೆ; ಕಣ್ಣಾರೆ ಕಂಡೆ. ಮಂತ್ರಗಾರನಿಗೆ ಹೇಳಿಕೆ ಹೋಗುತ್ತಲೇ ಎಲ್ಲ ವನ್ನೂ ಅವನು ಈ ಹೆಂಗಸಿಂದ ತಿಳಿದು, ಪ್ರಶ್ನೆಯನ್ನು ಕಂಡಂತೆಯೇ ಹೇಳುವನು. ಸಣ್ಣ ಹಳ್ಳಿ. ಏನೊಂದು ಸುದ್ದಿ ಮನೆಯಿಂದ ಮನೆಗೆ ಸುಲಭವಾಗಿ ಹರಡುತ್ತದೆ. ಅದೇ "ಗ್ರಹಚಾರಫಲ"ವಾಗಿ ತೋರ ಬಹುದು. ಏನೂ ಅರಿಯದ ಈ ಬಡ ಹುಡುಗಿಯ ಮೇಲೆ ಬಹಳ ಅತ್ಯಾಚಾರ ನಡೆದಿದೆ. ಇದಕ್ಕೆ ಹೊಣೆಗಾರನು ಈ ಮಂತ್ರವಾದಿಯೇ. ಇವನನ್ನು ರಾಜಧಾನಿಗೆ ವರ್ಗಾಯಿಸಿ ಅಲ್ಲಿ ಇವನ ವಿಚಾರಣೆ ನಡೆಯ ಬೇಕಾಗಿದೆ.

"ಹಳ್ಳಿಯ ಜನರಲ್ಲಿರುವ ಮೂಢ ನಂಬಿಕೆಗಳನ್ನು ತನ್ನ ಪ್ರಯೋ ಜನಕ್ಕೆ ಬರುವಂತೆ ತಿದ್ದಿಕೊಂಡು, ಹಳ್ಳಿಗರನ್ನು ಕೊಳ್ಳೆಹೊಡೆವ ಈ ಮಂತ್ರ ಗಾರನು ಈಗ ಮಾಡಿರುವ ಈ ತಕ್ಸೀರಿಗೆ ಎರಡು ವರ್ಷ ಕಠಿನ ಸಜೆ ಯನ್ನಾದರೂ ಅನುಭವಿಸಬೇಕಾದೀತು. ಅವರಿಗೆ ಸಹಾಯಕರಾಗಿದ್ದ ಶಾನುಭಾಗರು, ಈ ಹೆಂಗಸು, ಈ ಉಗ್ರಾಣಿ, ಮೊದಲಾದವರ ಅಪ ರಾಧವು ಎಷ್ಟಾಗುವುದೆಂದು ನೋಡಿದರೆ, ಶಾನುಭಾಗರ ಅನ್ಯಾಯವು ಬಹಳವಾಗಿರುವಂತೆ ತೋರುತ್ತದೆ. ಇವರು ಈ ಕೆಲಸಕ್ಕೆ ಯೋಗ್ಯರಲ್ಲ. ಆದರೆ ಬರ್ತರಫ್ ಮಾಡಿದರೆ ಆ ಬಡ ಹೆಂಗಸು ಇನ್ನೂ ಹೆಚ್ಚಾಗಿ ನರಳುವಂತಾಗುವುದು. ಅದಕ್ಕಾಗಿ ಇವರ ನಡತೆಯನ್ನು ನಜರಿನಲ್ಲಿಟ್ಟು ಕೊಳ್ಳುವೆವು. ಇಂತಹವರು ಪಟೇಲರ ಖಾಸಗಿ ಕೆಲಸ ಮಾಡುತಿದ್ದು; ಪಟೇಲರು ಇವರ ಹಂಗಿನ ಮನುಷ್ಯರಾಗಿರುವ ಕಾರಣ, ಸ್ವತಃ ಓದುಬರಹ ಬಲ್ಲ ಯೋಗ್ಯರು ಯಾರೂ ಪಟೇಲರ ಕುಟುಂಬದವರಲ್ಲಿದ್ದಾರಾದರೆ, ಅವ ರನ್ನು ಹುಡುಕಿ, ಪಟೇಲಿಕೆಯನ್ನು ಅವರಿಗೆ ಕೊಡುವುದು ಉತ್ತಮವೆಂದು

ತೋರುತ್ತದೆ. ಉಗ್ರಾಣಿ! ನಿನ್ನ ನಜರು ನಿನ್ನ ಹೆಂಡತಿಯ ಮೇಲೂ ಇರತಕ್ಕದ್ದಲ್ಲವೇ?"

ಅತಿ ಸುಲಭವಾಗಿರುವ ಮಾತುಗಳಲ್ಲಿ ಈ ಅಭಿಪ್ರಾಯವನ್ನು ದೊರೆಗಳು ಅಪ್ಪಣೆ ಕೊಡಿಸಿದರು. ಆಗತಾನೇ ಒಕ್ಕಲುಗಳು ಆ ಮಂತ್ರ ವಾದಿಯ ಕಡೆಗೂ ರುಕ್ಕುವು ಈ ಬಡ ಹುಡುಗಿಯ ಕಡೆಗೂ ಧಾವಿಸಿ ದರು. ತಮ್ಮನ್ನು ಬಗೆಬಗೆಯಾಗಿ ಸುಲಿದ ಮಂತ್ರವಾದಿಯನ್ನು ಕೊನೆಯ ಬಾರಿ ಕಾಣುವುದಕ್ಕೆಂದು ಒಕ್ಕಲುಗಳು ತವಕಗೊಂಡರು. ರುಕ್ಕುವು ದೊರೆಗಳು ನಾಗಮ್ಮನಲ್ಲಿಟ್ಟ ಕನಿಕರವನ್ನು ತಿಳಿದು, ಎಷ್ಟೆಂದರೂ ಅವಳ ಹೆಂಗರುಳು ಕರಗಿ, ನಾಗಮ್ಮನ ಆರೈಕೆ ಮಾಡತೊಡಗಿದಳು. ತಾನು ಉಗ್ರಾಣಿಯ ಹೆಂಡತಿ, ಅಥವಾ, ತಾನು ಬ್ರಾಹ್ಮಣ ಹೆಂಗಸಲ್ಲವೆಂಬ ವಿಚಾರಗಳಾದರೂ ಅವಳಲ್ಲಿ ಉಂಟಾಗಲಿಲ್ಲ. ಪಟೇಲರು ಐವತ್ತು ರೂಪಾಯಿ ರೊಕ್ಕವನ್ನು, ಎಲವಸ್ತ್ರದ ಸೆರಗಿಂದ ಗಂಟುಬಿಚ್ಚಿ, ಹೆಂಡ ತಿಯ ಕೈಯಿಂದ ನಾಗಮ್ಮನ ಬಳಿ ಭಕ್ತಿಯಿಂದ ಕಾಣಿಕೆ ಇಡಿಸಿದರು. ಉಗ್ರಾಣಿಯು ಕಂಚುಗಾರನ (ಮಂತ್ರವಾದಿಯ) ಮನೆಗೆ ಓಡಿಹೋಗಿ, ಪಂಜುರ್ಲಿಯ ವಿಗ್ರಹ ತಂದು, ಬಟ್ಲರನ ಕೈಯಲ್ಲಿ ಭಕ್ತಿಯಿಂದ ಕಾಣಿಕೆ ಯಿಟ್ಟನು. ಶಾನುಭಾಗರು ದೊರೆಗಳು ನಿಂತಲ್ಲಿಯೇ ತಾವು ಕೂತರು. ಹೀಗೊಂದು ಕೊನೆಯ ಅಂಕದ ತೆರೆ ಇಳಿಯುವ ಸನ್ನಿವೇಶವಾಯಿತು. ನಂತರ ದೊರೆಗಳು ಆ ಗೆಜ್ಜೆಟೀಕನ್ನು ಪಟೇಲರಿಗೆ ಕೊಟ್ಟರು. ಮಂತ್ರ ವಾದಿಯನ್ನು, ನಾಲ್ಕು ರೂಪಾಯಿ (ವಿಗ್ರಹದ ಬೆಲೆ) ಕೊಟ್ಟು, ಇನ್ನು ಮಾಟಗಾರನಾಗುವ ಬದಲು ತೋಟಗಾರನಾಗಬೇಕೆಂದು ಬೋಧಿಸಿ ದರು. ತಮ್ಮ ಚೀಲದಿಂದ ಎಂತಹದೋ ಮುಲಾಮನ್ನು ನಾಗಮ್ಮನ ಸುಟ್ಟ ಗಾಯಗಳಿಗೆ ಹಚ್ಚಲು ಕೊಡಿಸಿದರು. ಅಲ್ಲಿಂದ ನಸುನಗುತ್ತ ಬಂಗಲೆಗೆ ಹೊರಟರು.

"'ಸುಮ್ಮನೇ ಸೆಟ್ಲ್‌ಮೆಂಟ್ ಮಾಡುತ್ತಾರೆ, ತೀರ್ವೆ ಹೆಚ್ಚಿಸುತ್ತಾರೆ,' ಎಂದು ದೂರುತ್ತಾರಲ್ಲ! ಇವರೇ ದೊರೆಗಳು. ಸೆಟ್ಲ್‌ಮೆಂಟ್‌ಬಾಬು ಗಳನ್ನು ವಿಚಾರಮಾಡುತ್ತ ತೀರ್ವೆ ಕೊಡಿಸುವವರು ನಿಜ. ಆದರೆ

ಏನೂ ಹೇಳಿರಿ. ದೊರೆಗಳು ಎಷ್ಟು ಚೆನ್ನಾಗಿ ನ್ಯಾಯ ತೀರಿಸಿದರು! ಬ್ರಿಟಿಷರಲ್ಲಿರುವ ನ್ಯಾಯಬುದ್ಧಿಯ ಮಂತ್ರಬಲವು ಎಂತಹ ಮಂತ್ರವಾದವನ್ನೂ ಗೆಲ್ಲುವುದಲ್ಲವೇ?'' ಎಂದು ಶಾನುಭೋಗರು ಪಟೇಲರಿಗೂ ಪಟೇಲರು ಶಾನುಭೋಗರಿಗೂ ಹೇಳುತ್ತಿರುವಾಗ ಒಕ್ಕಲುಗಳು ಕೇಳುತ್ತ ವಿಸ್ಮಿತರಾಗಿದ್ದರು.

ರುಕ್ಕುವಂತೂ ನಾಗಮ್ಮನನ್ನು ಬಿಟ್ಟಳೆಂಬ ಜಲದುರ್ಗಕ್ಕಿಂತ ನೂರು-ಮಡಿ ಹೆಗ್ಗಳಿಕೆಯ ನೆಲದುರ್ಗವಾಗಿ, ನಾಗಮ್ಮನು ಪೂರ್ಣ ಸೌಖ್ಯವಾಗುವತನಕವೂ ಅವಳ ಸೇವೆ ಮಾಡಿದಳು. ಶಾನುಭೋಗರ ಹಟ್ಟಿಯಲ್ಲಿ ಮಾತ್ರ ಎಮ್ಮೆಯಿಲ್ಲ. ಅದು ಚೊಕ್ಕವಾಗಿ, ಸುಂದರವಾಗಿ, ಹದವಾಗಿ, ರುಕ್ಕು-ಪೂವರ ಸಂಸಾರಕ್ಷೇತ್ರವಾಯಿತು.

ಯಾವ ಮಂತ್ರದ ಬಲವೂ ಇಲ್ಲದೆ ರುಕ್ಕುವು ಈಗ ಒಂದು ಮಗುವಿನ ತಾಯಿಯಾಗಿದ್ದಾಳೆ. ಮಗುವಿನ ಹೆಸರು ನಾಗಮ್ಮ. ರುಕ್ಕುವು ಈ ನಾಗಮ್ಮನನ್ನು ಗೆಜ್ಜೆಟೀಕಿಗಿಂತಲೂ ಬಿಗಿಯಾಗಿ ಕೊರಳಿಗೆ ಕಟ್ಟಿಕೊಂಡಿದ್ದಾಳೆ.

# ಭಾರತ ಪ್ರಯೋಗ

ಮಹಾಭಾರತವನ್ನು ವ್ಯಾಸಮಹರ್ಷಿಗಳು ರಚಿಸುವಾಗ, ಅದರ ಉಪಯೋಗದ ವ್ಯಾಸವು ಎಷ್ಟು ದೂರಕ್ಕೆ ಸುತ್ತಿರಬಹುದೆಂದು ಅವರೇ ತಿಳಿದಿದ್ದರೋ, ಇಲ್ಲವೋ,—ಆದರೂ, ಭಾರತದ ಉಪಯೋಗಕ್ಕಿಂತಲೂ ಅದರ ಪ್ರಯೋಗವು ಅತಿ ವಿಚಿತ್ರ ರೀತಿಯಲ್ಲಿ ಆವೂರಲ್ಲಿಯೂ ಆಯಿತು! ರಾಮನಾಥ ಭಾಗವತರು ಈ ಪ್ರಯೋಗ ಮಾಡಿತೋರಿಸಿದರು. "ಪರೋಪಕಾರಃ ಪುಣ್ಯಾಯ, ಪಾಪಾಯ ಪರಪೀಡನಮ್" ಎಂದು ಶತಕೋಟಿ ಗ್ರಂಥಗಳ ಸಾರಾಂಶತತ್ವವನ್ನು ವ್ಯಾಸರು ಈ ಅರ್ಧಶ್ಲೋಕದಲ್ಲಿ ಹೇಳಿದ ಮುಹೂರ್ತದಲ್ಲೇ, ರಾಮನಾಥ ಭಾಗವತರು ಈ ಶ್ಲೋಕಕ್ಕೆ ಮಾಡಬಹುದಾಗಿರುವ ವ್ಯಾಖ್ಯೆಯೇನಾಗಬಹುದೆಂದು ಅವರೂ ತಿಳಿಯದಂತಾಗಿದ್ದಿತು. ಹೇಗೂ ಇರಲಿ. ಪ್ರಯೋಗವಂತೂ ಆಗಿದೆ,—ಫಲವಾಗಿ, ಅದರ ಇತಿಹಾಸವನ್ನು ಇಲ್ಲಿ ಬರೆವುದಷ್ಟೇ ನಮ್ಮ ಪಾಲಿಗೆ ಉಳಿದಿದೆ.

ಮೂವತ್ತು ವರ್ಷಗಳ ಹಿಂದೆ ರಾಮನಾಥ ಭಾಗವತರ ಚರಿತೆಯು ಸುವಾಸನೆಯು (ಹೆಸರಿನೊಳಗಣ 'ನಾಥ'ವಲ್ಲ) ಆವೂರಿಂದ ಇಡೀ ಜಿಲ್ಲೆಯಲ್ಲೇ ಹಬ್ಬಿದ್ದಿತು. ಅವರು ಐದುವರೆ ಅಡಿ ಎತ್ತರದ ಆಳು; ಮಕ್ಕಳ ಪುಸ್ತಕಗಳ ಭಾಷೆಯಲ್ಲಿ ಹದ ಆಳು. ಬಾಯಲ್ಲಿ ಹಲ್ಲಿಲ್ಲ. ಅವು ಉದುರಿದುವೆಂದು ಅವರಿಗೆ ದುಃಖವಿಲ್ಲ; ನುಂಗುವುದಕ್ಕೆ ಸುಲಭವಾಯಿತೆಂದೇ ಅವರಿಗೆ ಸಂತೋಷ.—ಅಷ್ಟು ಸೂಕ್ಷ್ಮವಿಚಾರಿಗಳು ಅವರು. ನಮ್ಮ ಜಿಲ್ಲೆಯಲ್ಲೇ ಆಗಿರುವ ಯಕ್ಷಗಾನ ದಶಾವತಾರದ ಆಟಗಳ ಪ್ರದರ್ಶನವನ್ನು, ಅವರು ಆವೂರಿಗೆ ಬಂದು ಶಿಬಿರಸ್ಥಾಪನೆ ಮಾಡಿಕೊಳ್ಳುವ ಮೊದಲೇ,

ಇದೀ ಜಿಲ್ಲೆಯಲ್ಲಿ ಹೆಸರುಳ್ಳ ಪ್ರತಿಗ್ರಾಮದಲ್ಲೂ ಮಾಡಿ, ದಿಗಂತವಿಶ್ರಾಂತ ಕೀರ್ತಿ ಸಂಪಾದನೆಮಾಡಿದ್ದರು. ಮೇಳಗಾರರ ಪ್ರಯಾಣದ ಖರ್ಚು, ಊಟವಸತಿಗಳ ಏರ್ಪಾಡು, ಬಣ್ಣದ ಖರ್ಚು, ಮೇಲಾಗಿ ಭಾಗವತರಿಗೆ ರಾತ್ರಿಗೆ ಒಂದು ವರಹ, ಚಿಕ್ಕದೊಂದು ಹಂದರ, ನಾಲ್ಕಾರು ಕೂಲಿಜನರ ಮಜೂರಿ, ಅರ್ಧಮಣ ಎಣ್ಣೆ, ಎರಡಾಣೆಯ ನಸ್ಯ, ಒಂದಾಣೆಯ ಎಲೆ ಅಡಿಕೆ, ಅರ್ಧಪಾವು ಗಂಧಮೆಣಸಿನ ಕಾಳು, ಶ್ರುತಿಯವನಿಗೆ ನಾಲ್ಕು ಡ್ರಾಮು ಶರಾಬು,—ಇಷ್ಟಿದ್ದಲ್ಲಿ ಒಂದು ಪ್ರದರ್ಶನ. ವರ್ಷದಲ್ಲಿ ಏಳೆಂಟು ತಿಂಗಳು ಈ ಪ್ರದರ್ಶನಗಳ ಸರದಿ. ನಾಲ್ಕೈದು ತಿಂಗಳು ಅವಕಾಶ. ಆಗಲೂ ಭಾಗವತಶಿರೋಮಣಿಗಳು ಸುಮ್ಮನಿರುವುದು ಸರಿಯೆ?

ಆಟಕ್ಕೆ ಆತಂಕವಾಗಿದ್ದರೂ, ಕೂಟಕ್ಕೆ ತೊಂದರೆಗಳಿರವು. ಹಾಗೆಂದೇ, ತಾಳಮದ್ದಳೆ, ಇಲ್ಲವೇ, ಗ್ರಂಥವಾಚನಸಭೆಗಳು, ಅಲ್ಲಲ್ಲಿ ಜರಗುತಿದ್ದುವು. ಭಾಗವತರಿಗೂ ಹಿಮ್ಮೇಳಕ್ಕೂ ಎರಡು ರೂಪಾಯಿ, ಮಿಕ್ಕವರಿಗೆ ಜೀರಿಗೆ ಕಷಾಯ, ಅವಲಕ್ಕಿ ಪ್ರಸಾದ, ಒಂದು ಹೂಮಾಲೆ, ಒಂದು ಆರತಿ,—ಇಷ್ಟಕ್ಕೆ ಹಣವಿದ್ದರೆ ಯಥೇಷ್ಟವಾಗುವುದು. ಶ್ರೋತೃವೃಂದವೂ, ಭಕ್ತಸಮುದಾಯವೂ ಶ್ರೀಮಾನ್ ವೇದಮೂರ್ತಿ ಬ್ರಹ್ಮಶ್ರೀ ರಾಮನಾಥ ಭಾಗವತರನ್ನು ಚೆನ್ನಾಗಿಯೇ ಬಲ್ಲವರಾಗಿದ್ದರು. ಭಾಗವತರು ಎಂತೂ ಭಗವಂತನ ಸದ್ಭಕ್ತರೇ. ಜೈಮಿನಿಯಲ್ಲಿದೆಯಲ್ಲ, ಹಾಗೆ-ದುಷ್ಟಬುದ್ಧಿಯಲ್ಲಿಗೆ ಕುಂತಳೇಂದ್ರನ ಕಾಣಿಕೆ ತಂದ ವೈಷ್ಣವರ ವೇಷವನ್ನು ಭಾಗವತರು ಸದಾ ಧರಿಸಿಕೊಳ್ಳುತಿದ್ದರು. ಯಾವ ದೇವಾಲಯದ ಪೂಜೆಯ ವೈದಿಕರಿಗಿಂತಲೂ ಇವರ ವೇಷಭೂಷಣಗಳು ಚೆನ್ನಾಗಿ ಒಪ್ಪುತಿದ್ದುವು. ಜನರ ವಿಶ್ವಾಸವೂ ಭಟ್ಟರುಗಳಲ್ಲಿರುವುದಕ್ಕಿಂತ ಇವರಲ್ಲಿ ಹೆಚ್ಚಾಗಿಯೇ ಇದ್ದಿತು. ಒಂದೊಂದು ವೇಳೆ ದೇವದರ್ಶನಕ್ಕೆ ಹೋಗುವವರಿಗೆ ಇವರು ಅವರ ಸಂಕಟನಿವಾರಣೆಯಾಗುವುದೆಂದು ಒಂದು ಮಾತು ನುಡಿದರೆಂದರೆ, ದೇವರೇ ಪ್ರತ್ಯಕ್ಷನಾಗಿ ಅಭಯವನ್ನು ಪಾಲಿಸಿದನೆನ್ನುವಷ್ಟು ಆನಂದವಾಗುತಿದ್ದಿತು; ಮತ್ತೆ ಸಂಕಟ ಹೆಚ್ಚಿದರೂ, ವಿಪತ್ತು ಇಪ್ಪತ್ತುಮಡಿ ಹೆಚ್ಚಾದರೂ, ಈ ನುಡಿಕಟ್ಟೇ ಅವರಿಗೆ ಅವನ್ನು

ಮರೆವಂತೆ ಮಾಡುತ್ತಿದ್ದಿತು. ಯಾವುದೊಂದು ಮಾತುಕತೆ ನಡೆದರೂ, ಯಾವುದೊಂದು ಯಕ್ಷಗಾನ ಪ್ರಸಂಗದಿಂದ ಅಥವಾ ಮಹಾಭಾರತದಿಂದ ಒಂದು ನುಡಿಯನ್ನು ಹಾಡಿ, ಈ ವರ್ತಮಾನ ಪ್ರಸಂಗಕ್ಕೆ ಆ ಭೂತ ಕಾಲೀನ ಪ್ರಸಂಗವನ್ನು ಹೊಂದಿಸಿ, ಅನ್ವಯಿಸಿ, ವಿವರಿಸಿ, ಇತ್ಯರ್ಥ ಮಾಡಿಸುತ್ತಿದ್ದರು.

ಆವೂರ ದೇವಳದ ಬಳಿಯಲ್ಲೇ ಒಂದು ದೊಡ್ಡ ಸೇತುವೆಯನ್ನು ಕಟ್ಟಿಸುತ್ತಿದ್ದರು. ಬೇಸಗೆಯಲ್ಲಿ ಗಾಜಿನ ನೂಲೆಳೆಯಂತೆ ಕಾಣುತ್ತಿದ್ದ ನೀರ ಕಾಲಿವೆಯು ಮಳೆಗಾಲದಲ್ಲಿ ಆಚೆಯೀಚೆ ಅರ್ಧಮೈಲಿಗೂ ಅಗಲ ಗೊಂಡು, ಗ್ರಾಮವನ್ನು ಸುತ್ತಿ, ಪ್ರಳಯಕಾಲದ ಮತ್ಸ್ಯಾವತಾರಕಥೆಯ ನೆನಪನ್ನು ಹುಟ್ಟಿಸುತ್ತಿದ್ದಿತು. ಘಟ್ಟದಿಂದ ಈಚೆಗೆ ಬರುವ ವ್ಯಾಪಾರ ಕುಂದುತ್ತ ಬರುವಂತೆ ಕಾಫಿಯ ಬೆಲೆ ತಗ್ಗಿ, ಕಾಫಿಯೆಲ್ಲವೂ ದೂರದ ಬೇರೊಂದು ಬಂದರಕ್ಕೆ ಹೋಗುವಂತಾಗಿದ್ದರೂ, ಅಪಾರ ದ್ರವ್ಯ ವ್ಯಯಿಸಿ ಇದೊಂದು ಸೇತುವೆಯನ್ನು ನಿರ್ಮಾಣಮಾಡಿಯೇ ತೀರಬೇಕೆಂದು ಬೋರ್ಡಿನ ಅಧಿಕಾರಿಗಳು ಹಟತೊಟ್ಟರು. ಮರುವರ್ಷವೇ ಅದೇ ದಾರಿಯಾಗಿ ಗವರ್ನರರೂ ಸಂಚಾರಮಾಡುವರೆಂದು ತಿಳಿದುಬಂದಿತು. ಸೇತುವೆಗೆ ಬೇಕಾದ ಸಾಮಗ್ರಿಗಳೆಲ್ಲವೂ ಪರ್ವತಾಕಾರವಾಗಿ ಹಗಲೂ ರಾತ್ರಿ ಅತ್ತ ಬಂದು ಸಿಕ್ಕಿದಲ್ಲೆಲ್ಲ ಸುರಿದುಬಿದ್ದುವು. ಬೆಳಗ್ಗೆ ವಿಶಾಲ ವಾಗಿ ತೋರಿದ ರಸ್ತೆ ಸಂಜೆಯೊಳಗೆ, ಇಕ್ಕಡೆಗಳಲ್ಲೂ ಮುರಗಲ್ಲುಗುಪ್ಪೆ ಗಳು ಬಿದ್ದುದರಿಂದ, ಇಕ್ಕಟ್ಟಾಯಿತು. ಅಂತೆಯೇ, ಒಂದು ರಾತ್ರಿ ತಾಳ ಮದ್ದಳೆ ಯಾನೆ ಮೃದಂಗಸೇವೆ. ಭಾಗವತರು ಇವರೇ! ಇವರ ಹಿಮ್ಮೇ ಳದ ಐವರೂ ಅಲ್ಲೇ ಬರಬೇಕಿದ್ದಿತು. ಚದರಿಹೋಗಿರುವ ಸೈನಿಕರನ್ನು ಶಿಬಿರಕ್ಕೆ ಕರೆವ ದಂಡನಾಯಕನ ಕರೆಯಂತೆ ಭಾಗವತರ ಕರೆ ಹೋಯಿತು. ಅವರು ರಾತ್ರಿಯೂಟವನ್ನು ಸಂಜೆಯೊಳಗೆ ಮುಗಿಸಿ ಹೊರಟೇಬಂದರು. ದಾರಿಯಲ್ಲಿ ಈ ಮುರಗಲ್ಲಿನ ರಾಶಿಯಿದ್ದುದು ಅವರಿಗೆಲ್ಲಿಂದ ತಿಳಿಯ ಬೇಕು? ಐವರೂ ಕಗ್ಗತ್ತಲಲ್ಲಿ ಮುರಗಲ್ಲಿನ ಮೇಲೆ ಬಿದ್ದು, 'ಹುಯ್ಯೋ!' ಎಂದು ಕೂಗಿದರು. ಭಾಗವತರು ಆಗಲೇ, ತಮ್ಮ ಅಂಗಡಿ ಮುಚ್ಚಿ (ಈ

ಅಂಗಡಿಯ ಪ್ರಸ್ತಾವ ಮುಂದೆ ಬರುವುದು) ಹೋಗುತ್ತಿದ್ದವರು, ಅಲ್ಲಿಗೆ ಬಂದು, ಹತ್ತಿರದೊಂದು ಮನೆಯಿಂದ ಸೂಟಿ ಹಚ್ಚಿತಂದು, ಇವರು ಐವರ ಅವಸ್ಥೆಯನ್ನು ನೋಡಿ,

"ಕೇಳಿದನು ಮುರವೈರಿ ತನ್ನಯ ।
ಮೇಳದೈವರ ಸತಿಯ ಹುಯ್ಯಲ- ।
ನಾಳು ನೊಂದಪಮಾನವಾಳ್ದಂಗೆಂಬ ನುಡಿಯಿಂದ ॥"

ಎಂದು ಭಾರತದೊಳಗಣ ದ್ರೌಪದೀವಸ್ತ್ರಾಪಹರಣದ ಅಧ್ಯಾಯದ ಪದ್ಯಾರ್ಥವನ್ನೇ ಹಾಡಿಬಿಟ್ಟರು. ತನ್ನ ಮೇಳದ ಐವರೂ ಮುರದ ಮೇಲೆ* ಬಿದ್ದುದಕ್ಕೆ ಅವರಿಗೆ ಆದ ನೋವು ತನಗೆಂದು ಅವರನ್ನು ಸಮಾಧಾನಗೊಳಿಸಿ, ಮನೆಗೆ ಕರೆದುತಂದು, ಅಲ್ಲಿಂದ ಮುಂದೆ ತಾಳಮದ್ದಳೆಯ ಕೂಟಕ್ಕೆ ಎಲ್ಲರೊಡಗೂಡಿ ತೆರಳಿದ್ದೆನೆಂದು ಸಂಗೀತಗಾರರೇ ಯಾವಾಗಲೂ ಹೇಳುತಿದ್ದರು! ಅವರು ಭಾರತವನ್ನು ಅನುಕೂಲವಾಗಿ ಪ್ರಯೋಗ ಮಾಡಿದ್ದುದರ ಒಂದು ಉದಾಹರಣೆಯಿದು.

ಭಾಗವತರ ಅಂಗಡಿಯೆಂದೆನಲ್ಲಾ! ಅದೇನು? ಭಾಗವತಿಕೆಯಲ್ಲಿ ಕೀರ್ತಿವಂತರಾಗಲು ಯೌವನವನ್ನು ವ್ಯಯಿಸಿ, ಮುಪ್ಪಡಸಿದುದನ್ನರಿತು ವಾನಪ್ರಸ್ಥವನ್ನು ಕೈಕೊಳ್ಳುವ ಬದಲು ಇವರು ವ್ಯಾಪಾರಗ್ರಸ್ತರಾಗಿ, ಆವೂರ ಹೊಳೆಯ ಬಳಿಯಲ್ಲೇ, ಉಕ್ಕಡದ ಸಮೀಪ, ಚಿಕ್ಕದೊಂದು ಅಂಗಡಿ ತೆರೆದಿಟ್ಟು,— ಅವಲಕ್ಕಿ, ಬಾಳೆಹಣ್ಣು, ತೆಂಗಿನಕಾಯಿ, ಬೆಲ್ಲ, ಸಿಹಿಯಾಳ, ಹುರಿಯಕ್ಕಿ, ಎಲೆ ಅಡಿಕೆ, ಹಲಸಿನ ಚಕ್ಕೆ, ಕಬ್ಬಿನ ಜಲ್ಲೆ, ಚಿಮಿಣಿ ಎಣ್ಣೆ, ತೆಂಗಿನ ಎಣ್ಣೆ, ಮತ್ತು ಒಣಸೌದೆಕಟ್ಟು ಇತ್ಯಾದಿ ಚಿಲ್ಲರೆ ವ್ಯಾಪಾರ ನಡೆಸುತಿದ್ದರು. ಹೊಳೆಯಾಚೆಯೀಚೆ ಹೋಗಿಬರುವವರಿಗೂ ಇಲ್ಲಿ ಅರ ಪಟ್ಟಿಗೆಯ ನೀರೂ ದೊರೆವ ಏರ್ಪಾಡು ಮಾಡಿದ್ದರು. ಹೀಗೆ ಇದೊಂದು ಛತ್ರ; ಪ್ರಯಾಣಿಕರು, ರೈಲ್ವೇ ಇಂಜಿನಿನ ಹೋಲಿಕೆಯಲ್ಲಿ, ಪುನಃ ಇದ್ದಲು–ನೀರು ತುಂಬಿಸಿಕೊಳ್ಳುವ ಜಾಗೆ.

ಸಂಜೆಯಲ್ಲಿ ಯಾವ ದಿನವೂ ಇವರ ಅಂಗಡಿಯಲ್ಲಿ ಚಿಕ್ಕದೊಂದು ಸಭೆ ಸೇರದೆ ಇರುತಿದ್ದಿಲ್ಲ. ಈ ಸಭೆಗಳೇ ಹಳ್ಳಿಯಲ್ಲಿ ವರ್ತಮಾನಪತ್ರಿಕೆಗಳ

*ಮ್ಹೆರಿ (ಕೊಂಕಣಿ)=ಮೇಲೆ.

ಕರ್ತವ್ಯ ಮಾಡುತಿದ್ದುವು. ಪ್ರತಿಯೊಬ್ಬನಿಗೆ ತಿಳಿದ, ಹಾಗೂ ಪ್ರತಿಯೊಬ್ಬನ ಅಥವಾ ಪ್ರತಿಯೊಂದು ವಿಷಯದ ವಿಚಾರಗಳು ಈ ಕೂಟಗಳಲ್ಲಿ ನಿರ್ದಾಕ್ಷಿಣ್ಯವಾಗಿ ಹೊರಬೀಳುತಿದ್ದುವು. ಭಾಗವತರು ಅವರಿಗೆಲ್ಲ ಬೇಕಾದುದನ್ನು ಕೊಟ್ಟು, ಅವರು ತಾಂಬೂಲವನ್ನು ಮೆಲ್ಲುವಾಗ, ತಾವು ಭಾರತವನ್ನು ತಮ್ಮಷ್ಟಕ್ಕೇ ಓದುತಿದ್ದರು. ಸರ್ವಸಾಕ್ಷಿಯಾದರೂ ನಿರ್ಲಿಪ್ತನಾಗಿರುವ ಭಗವಂತನ ಹಾಗೆ, ಭಾರತಗ್ರಂಥವನ್ನು ಮುಂದಿಟ್ಟುಕೊಂಡು, ಬಹಳ ಭಕ್ತಿಯಿಂದಲೂ ಏಕಾಗ್ರಚಿತ್ತದಿಂದಲೂ ಮನನ ಮಾಡುವರು. ಬೇಕಾದ, ಬೇಡವಾದ ವಾರ್ತೆಗಳು ಇವರ ಕಿವಿಗೆ ಹೋಗುತಿದ್ದುವು; ಬೇಕಾದ, ಬೇಡವಾದ ಪದ್ಯಗಳ ಮೇಲೆ ಇವರ ಬೆರಳು ಹಾಯುತಿದ್ದಿತು. ದೀಪ ಹಚ್ಚುವ ವೇಳೆ, ಎಲ್ಲರೂ ನಮಸ್ಕಾರಪೂರ್ವಕವಾದ ಧನ್ಯವಾದಗಳನ್ನು ಹೇಳುವ ಮೊದಲು, ತಮ್ಮತಮ್ಮ ಬಾಯಲ್ಲಿನ ತಾಂಬೂಲವನ್ನು ಅಲ್ಲೇ ಸುತ್ತಲೂ ವಿಸರ್ಜಿಸಿ ಅರ್ಪಿಸಿ ಸಭೆ ಮಂಗಲವಾಗಲು, ಸುತ್ತಲೂ ಉಗುಳಿದುದೆಲ್ಲವೂ ಮಂಗಲಾನಂತರದ ಓಕುಳಿಯೆನಿಸಲು, ಅಂಗಡಿಯ ಬಾಗಿಲಿಕ್ಕಿ, ಬೀಗ ಬಿಗಿದು, ಭಾಗವತರು ಅಂಗಡಿಯ ಹಿಂದಣ ಮನೆಯೊಳಗೆ ಕಾಲಿಡುತಿದ್ದರು.

ಮುರವೈರಿಯ ಅವತಾರ ಹೊತ್ತು ಯಾವಂದು ತನ್ನ ಮೇಳದ ಐವರನ್ನು ಭಾಗವತರು ಉದ್ಧಾರಮಾಡಿದ್ದರೋ, ಆ ರಾತ್ರಿ ಸುಪ್ರಸಿದ್ಧವಾದ 'ಬಭ್ರುವಾಹನ ಕಾಳಗ'ದ ತಾಳಮದ್ದಳೆ. ಅರ್ಥಗಾರರಲ್ಲಿ ಪ್ರಮೀಳೆ, ಅರ್ಜುನ, ಬಭ್ರುವಾಹನ, ಕೃಷ್ಣ, ಸುಬುದ್ಧಿಯರೇ ಮುಖ್ಯ. ಮೇಳಕ್ಕೆ ಐವರು ಬಂದಿದ್ದರೂ, ಬಭ್ರುವಾಹನನ ಅರ್ಥ ಹೇಳಲು, ಯಾರು ರಂಗಸ್ಥಳದಲ್ಲಿ ವೇಷಕಟ್ಟಿಕೊಂಡು, ಕುಣಿದು, ಅಭಿನಯಿಸಿ, ಅರ್ಥ ಹೇಳುತಿದ್ದನೋ, ಆತನೊಬ್ಬನು ಬಂದಿರಲಿಲ್ಲ. ಉಳಿದವರು ಈ ಪ್ರಸಂಗವನ್ನೇ ಚೆನ್ನಾಗಿ ಅಭಿನಯಿಸಿ ಹೆಸರುಗೊಂಡಿದ್ದರು. ಹೀಗಾಗಿ ಬಭ್ರುವಾಹನನ ಮಾತಿರುವ ಪದ್ಯಗಳನ್ನು ಸಂಗೀತಗಾರರು ಹಾಡುವುದೆಂದೂ, ಅದಕ್ಕೆ ಸಂಬಂಧಪಟ್ಟ ಅರ್ಥವನ್ನು ಸ್ವಯಂ ಭಾಗವತರೇ ನುಡಿವುದೆಂದೂ ಅಂದಿಗೆ ನಿಶ್ಚಯವಾಯಿತು. ಎಂತೂ ಏಕಾದಶಿಯ ರಾತ್ರಿ;

ಅದೂ ಶನಿವಾರ; ತಿಂಗಳಬೆಳಕು ಚೆನ್ನಾಗಿದೆ;—ಎಂದಮೇಲೆ, ಕಾರ್ತಿಕ ಮಾಸದಲ್ಲಿ ಗ್ರಾಮಗಳಲ್ಲಿ ಯಕ್ಷಗಾನಕೂಟಕ್ಕೆ ಜನರು ಸೇರುವುದು ಕಡಿಮೆಯಾಗುವುದುಂಟೇ? ದೇವಸ್ಥಾನದ ಜಗಲಿಗಳಲ್ಲಿಯೂ, ಅಂಗಳ ದಲ್ಲಿಯೂ, ಎತ್ತಲೂ ತುಂಬ ಜನರು–ಗಂಡಸರು, ಹೆಂಗಸರು–ಕಿಕ್ಕಿರಿದು ಸೇರಿದರು. ಅವರವರು ಅವರವರ ಜಾತಿಗೆ ತಕ್ಕಂತೆಯೂ ಸ್ಥಿತಿಗೆ ತಕ್ಕಂತೆಯೂ ಸ್ವತಃ ತರಗತಿಗಳನ್ನು ಮಾಡಿಯೇ ಕುಳಿತರು. ಆದರೆ ಅರ್ಥಗಾರರೇ ಮೊದಲಾದವರಲ್ಲಿ ಜಾತಿಪರಜಾತಿಗಳ ಮಾತು ಅಷ್ಟು ಬಲವಾಗಿ ಇರುತ್ತಿರಲಿಲ್ಲ.

ಅವಕಾಶದ ಸದುಪಯೋಗಕ್ಕೆ ಇತರ ಉಪಾಯಗಳಾವುವನ್ನೂ ಕಾಣದೆ, ಯಕ್ಷಗಾನದ ಬಯಲಾಟಗಳನ್ನೋ ಈ ಬಗೆಯ ಕೂಟಗ ಳನ್ನೋ ಏರ್ಪಡಿಸಿಕೊಂಡು, ನಮ್ಮ ಗ್ರಾಮಜೀವನವು ವಿನೋದದೊಡನೆ ಜ್ಞಾನ, ಇತಿಹಾಸ, ಸಂಸ್ಕೃತಿಗಳನ್ನು ಅರಿತುಕೊಳ್ಳುವ ವಿಧಾನಗಳನ್ನು ಮಾಡಿಕೊಂಡಿದೆ. ಗೊಡ್ಡು ಹರಟೆ, ಒಣ ಹರಟೆ, ಟೊಳ್ಳು ಹರಟೆ, ಮುಂತಾದ ಹರಟೆಗಳ ವಿನೋದಪ್ರಚಾರಕ್ಕೂ ಇಂತಹ ಅವಕಾಶಗಳು ಗ್ರಾಮಗಳಲ್ಲಿ ಅತ್ಯವಶ್ಯಕವಾಗಿವೆ. ಪ್ರತಿದಿನವೂ ತಮ್ಮತಮ್ಮ ಇಕ್ಕಟ್ಟಿನ ಗಡಿ ಯೊಳಗೆ ಅನ್ನಬಟ್ಟೆಗಳ ವ್ಯವಸ್ಥೆಗಾಗಿಯೇ ಚಿಂತಾಪರರಾಗಿ ಗೇಯುತ್ತ ಲಿರುವ ಜನಗಳಿಗೆ (ಅದರಲ್ಲೂ ನಿರೀಕ್ಷಕರೇ ಧಾರಾಳ) ಇಂತಹದೊಂದು ಕೂಟ, ಕಂಬಳದ ಕೋಣಗಳ ಓಟ, ದೇಗುಲದ ಜಾತ್ರೆ, ಯಾವು ದೊಂದು ಶುಭಶೋಭನಾದಿಗಳ ಕಾಲದ ಸಮ್ಮಾನದ ಊಟ,—ಇವು ಅಂದಿನ ದಿನದ ಮಟ್ಟಿಗೆ ಅದ್ಭುತವನ್ನೂ ಮೆರುಗನ್ನೂ ಜೀವನಕ್ಕೆ ಕೊಟ್ಟು, ಅಂದಿನತನಕದ ಮಬ್ಬನ್ನು ದೂರಗೊಳಿಸುವುದು ಸಹಜವೇ. ಕೊಂಕಣಿ, ತುಳು ಮಾತಾಡುವ ಜನರೇ ಕೂಟದಲ್ಲಿ ಅಧಿಕಾಂಶವೇ ಆದರೂ, ಪ್ರಸಂ ಗವೂ, ಅರ್ಥವೂ ಕನ್ನಡದಲ್ಲೇ ಸಾಗುತಿದ್ದು, ಅದೇಕೋ, (ಸಾಮುದಾ ಯಿಕ ಚಿಂತನೆಯ ಏಕಾಗ್ರತೆಯ ಫಲವೋ?) ವಾತಾವರಣದಲ್ಲೆಲ್ಲ ಕನ್ನ ಡವೇ ಹಬ್ಬಿ, ಎಲ್ಲರೂ ಉಸಿರಾಟದೊಂದಿಗೆ ಕನ್ನಡ ಭಾಷಾಪಾಠಗಳನ್ನೂ ಸಾಗಿಸುತಿದ್ದಂತೆ ಈ "ಮೃದಂಗಸೇವಾಕೂಟ"ಗಳ ಪರಿಣಾಮವಾಗಿ

ದ್ದಿತು. ತುಳುನಾಡಿನಲ್ಲಿ ಕನ್ನಡದ ಅರಿವು ಉಳಿಯಲೂ, ಅದಕ್ಕಾಗಿ ನಾವು ಹೆಮ್ಮೆಪಡಲೂ ಇದೇ ಮುಖ್ಯ ಕಾರಣ.

ಪ್ರಸಂಗವು ಸಾಗಿತು. ಪ್ರವಿಸಾಳೆಯು ಮಾತುಗಳನ್ನು ಕೇಳುತ್ತ ಪ್ರತಿಯೊಬ್ಬರೂ ಸ್ಫೂರ್ತಿಹೊಂದಿರುತಿದ್ದಂತೆಯೇ, ಅರ್ಜುನ-ಬಭ್ರುವಾಹನರ ಸಂವಾದ ಕೇಳಿ—ಹ್ಯಾ—ಹ್ಯಾ—ಎಂದು (ಸಭಾನಿಯಮಗಳಿಗೆ ವಿರೋಧವಾಗಿಯೇ ಆದರೂ) ಚಪ್ಪಾಳೆ ಹೊಡೆದರು. ಇತಿಹಾಸಪ್ರಸಿದ್ಧವಾದ ಈ ಯುದ್ಧವು ಕಣ್ಣಮುಂದೆಯೇ ನಡೆಯುತ್ತಿರುವುದೆಂದೂ ಎಲ್ಲರೂ ಭಾವಿಸಿದರು, ಮಾತ್ರವೇ, ನಂಬಿದರು! ಚಪ್ಪಾಳೆಗಳು ಹೆಚ್ಚುತ್ತಬಂದಂತೆ, ಮೇಳದಲ್ಲಿ ಅರ್ಜುನನಾಗಿದ್ದವನಿಗೆ, ಇಂದು ಅರ್ಥ ಹೇಳುವಾಗ ನರ್ತನದ ದಣಿವಿಲ್ಲದಕಾರಣ, ಅವನ ಮಾತುಗಳು ಕುಣಿಕುಣಿದು ಬಂದುವು. ಭಾಗವತರು, ಇತರರನ್ನು ಬಭ್ರುವಾಹನನ ವೇಷ ಕಟ್ಟಿಸಿ, ತಿದ್ದಿ, ಕಲಿಸಿ ಕೊಟ್ಟು, ಕುಣಿಸಿ, ರಂಗಸ್ಥಳದಲ್ಲಿ ಅರ್ಥ ಹೇಳಿಸುತಿದ್ದವರು, ಇಂದು ತಾನೇ ಆ ಭೂಮಿಕೆಯನ್ನು ವಹಿಸಬೇಕಾಗಿ ಬಂದಿದ್ದುದರಿಂದ, ಒಂದು ಕಡೆ ಸಂಕೋಚ, ಒಂದು ಕಡೆ ಸ್ವಲ್ಪ ಸಭಾಕಂಪ, ಒಂದು ಕಡೆ ಯುವಕ ಇದಿರಾಳಿಯನ್ನು ಮಿಗಿಸಬೇಕೆಂಬ ಆತುರದಿಂದಾದ ಬೆದರಿಕೆ,—ಇವುಗಳಿಂದಾಗಿ ಪಾರ್ಥನಿಂದ ಸ್ವಲ್ಪ ಹೆಚ್ಚಾಗಿ ಬಯ್ಯಿಸಿಕೊಂಡರು. ಬಭ್ರುವಾಹನನಿಗೂ ಪಾರ್ಥನಿಗೂ ಆದ ಮಾತುಗಳನ್ನು ತಾವು ತಾತ್ಕಾಲಿಕವಾಗಿ ಆಡುತ್ತಿರುವೆವೆಂದು ಇಬ್ಬರೂ ನಂಬದೆ,—ಪಾರ್ಥನ ಮಾತು ಆಡುತಿದ್ದ ಸುಬ್ಬ ಕೊಟ್ಟಾರಿಯು ಮೇಳದ ಭಾಗವತ(ನಿವೃತ್ತ)ನಾಗಿದ್ದ ತನ್ನನ್ನು ವಿಸಾರಿ ಮಾತಾಡಿಪ ಗುರುದ್ರೋಹಿ, ಕೃತಘ್ನ, ಧನಿಯ ತಲೆಗಡಿಕನೆಂದುಮೊದಲಾಗಿ ಭಾವಿಸಿ, ಭಾಗವತರು ಅವನ ಮೇಲೆ ಚೆನ್ನಾಗಿ ಮುನಿದರು. ಆದರೂ, ಪ್ರೇಕ್ಷಕರ ಕೂಟವೆಲ್ಲ ಪಾರ್ಥನ ಕಡೆಗೆ ಒಲಿಯಿತು; ಬಭ್ರುವಾಹನನು ಎಷ್ಟೆಂದರೂ ಗಂಧರ್ವನಾಯಿಕೆಯ ಮಗ ಎಂಬಿತ್ಯಾದಿಯಾಗಿ, ಅದರಿಂದ ಪರಂಪರೆಯಾಗಿ ಹರಿಯುವ ಭಾವನಾಶ್ರೇಣಿಯನ್ನೆಲ್ಲ ಬಲು ಚೆನ್ನಾಗಿ ಈ ಪಾರ್ಥ—ಅರ್ಥಗಾರ ಸುಬ್ಬ ಕೊಟ್ಟಾರಿಯು—ಜನರಿಗೆಲ್ಲ ಬೋಧಿಸಿ ಉಚಿತಗೊಳಿಸುವಂತಾಯಿತು.

ಭಾಗವತರು ಇಷ್ಟನ್ನೆಲ್ಲ ತಿಳಿದು ಒಳಗೊಳಗೆ ಬೇಯುತ್ತಿದ್ದರೂ, ಗುರುವಾದ ಪರಶುರಾಮನನ್ನು ಭೀಷ್ಮನು ಸೋಲಿಸನೇ ಎಂದು, ತನ್ನ ಶಿಷ್ಯನ ಕೈಯಿಂದ, ತಾನೇ ಸೋಲುವಷ್ಟು ಚೆನ್ನಾಗಿ ತನ್ನ ಶಿಕ್ಷಣದ ಅಪ್ರತಿಮ ಮಹತ್ವವನ್ನು ಸಾರಿ ತನ್ನ ಧನ್ಯತೆಯನ್ನು ಹೊರಗೆ ಕೊಂಡಾಡಿಕೊಂಡರು.

ಕೂಟ ಮುಗಿಯಿತು. ಭಾಗವತರಲ್ಲಿ ಈ ಪಾರ್ಥನ ಮೇಲೆ ಹಗೆತನ ಬಿಗಿಯಿತು.

ಇದುವರೆಗೆ ತನಗೆ ಇದಿರಾಡಿದವರಿರಲಿಲ್ಲ. ಭಾಗವತಿಕೆಯಲ್ಲಿ ಏಕಚ್ಛತ್ರಾಧಿಪತಿಯಾಗಿದ್ದೆ; ಈಗೇನು ಉಪಾಯ?—ಎನ್ನುತ್ತ ಯೋಚಿಸಿ,—

" 'ಕೃತ್ರಿಮದ ಮುಖದಿಂದ ರಿಪುಗಳ ।
ಕಿತ್ತುಹಾಯಿಕಿ ನೆಲನನೇಕ- ।
ಚ್ಛತ್ರದಲಿ ನೆರೆಯಾಳುವುದು ನಯವೆ'ಂದನಾ ಶಕುನಿ ॥"

ಎಂದು ಮನಸ್ಸಿನಲ್ಲಿ ಖಚಿತಗೊಳಿಸಿ, 'ಮುಖದಲ್ಲಿ' ಕೃತ್ರಿಮವನ್ನೇ ತೋರಿಸಿಕೊಂಡು, ತನ್ನ ಏಕಚ್ಛತ್ರಾಧಿಪತ್ಯವನ್ನು ತಾನೇ ಪುನಃ ಲಭಿಸಿಕೊಳ್ಳಬೇಕೆಂದು ಸಮಯ ಕಾಯುತ್ತಾ ಕೂತರು. ಎಂದಿನಂತೆ, ಅಂಗಡಿವ್ಯಾಪಾರ, ಭಾರತವಾಚನ, ಮೊದಲಾದುವನ್ನು ಏನೇನೂ ಕಡಿಮೆವಾಡಲಿಲ್ಲ. ರಾಜಕೀಯ ವಿಚಾರಗಳಲ್ಲಿ ಹೇಳುವಂತೆ ಮಾತ್ರ, ಭಾಗವತರ 'ದೃಷ್ಟಿಕೋನವು ಬದಲಾಯಿತು!'

ಪಾರ್ಥನಾದ ಸುಬ್ಬ ಕೊಟ್ಟಾರಿಯೂ ಸ್ವಲ್ಪ ಚುರುಕಿನ ಹುಡುಗ. ಅಯ್ಯಗಳ ಸಾಲೆಗೆ 'ಓಂನಮಃ' ಕಲಿತುಕೊಳ್ಳಲು ಅವನೂ ಹೋಗಿದ್ದನು. ಹಿರಿಯರಂತೆ ಕೃಷಿಕರ್ಮದಲ್ಲಿರುತ್ತಲೇ ಅವನಿಗೆ ಗುತ್ತಿನ ಶೆಟ್ರ ಆಳಾಗಿ ದುಡಿವುದರ ಅನುಭವವು ಬಲು ಚೆನ್ನಾಗಿ ಬಂದಿದ್ದಿತು. ಬಿಟ್ಟೀ ಕೆಲಸ, 'ಹೊಲಿ'ಗೆ ತಂದ ಅಕ್ಕಿಯ ಸಾಲ, ಹೋರಿಗಳನ್ನು ಕೊಳ್ಳಲು ಮನೆಯ ಅಡವು, ಸಾಲ ತೆರಲು ಹಳೆಯ ಒಡವೆ ಆಭರಣಾದಿಗಳ ಮಾರಾಟ, ಕೊನೆಗೆ ಕೋರ್ಟಿನ ಅಮೀನರ ಮುಖಾಂತರ ಇಡೀ ಹಿಡುವಳಿಯ ಮಾರಾಟವೇ ಆಗಿ, ಸುಬ್ಬನು ನಡುದಾರಿಯಲ್ಲಿ ಬಿದ್ದನು. ಒಂದೆರಡು ವರ್ಷ ಬಿಟ್ಟೀಕೂಲಿಯ ದುಡಿತದಿಂದ ಹೊಟ್ಟೆ ಹೊರಬೇಕಾಯಿತು;

ಮೇಸ್ತ್ರಿತನವನ್ನು ನೋಡಿದರೂ ಸ್ವಲ್ಪ ಜಾಣನಾದ ಅವನಿಗೆ ಬೇಸರವೂ ಅತೃಪ್ತಿಯೂ ಹೆಚ್ಚಿದುವು.

ಈ ಸಂಧಿಯಲ್ಲಿ ಊರಿಗೆ ದಶಾವತಾರದವರು ಬಂದರು. ಇಡೀ ರಾಮಾಯಣವನ್ನು ಹತ್ತೆಂಟು ಬಯಲಾಟಗಳಲ್ಲಿ ಮುಗಿಸಿ ಅವರು ಹೊರಡುವುದರೊಳಗೆ ಮಳೆಗಾಲ ಕಾಲಿಟ್ಟಿತು. ಆಟದವರ ಕೂಟದಲ್ಲಿ ಕೂಲಿಯವನಾಗಿ ನಿಂತವನು, ಸ್ವಲ್ಪ ಮಿದುಳುಳ್ಳ ಜೀವಿಯಾದರೆ, ಹಲವ ರೊಡನೆ ಕಲೆತು, ಹಲವನ್ನು ಕಲಿತುಕೊಳ್ಳುವುದು ರೂಢಿ. ಇವನೂ ಹಾಗೆಯೇ ಆಟದ ವ್ಯವಸ್ಥೆ, ಕುಣಿತದ ರೀತಿ, ವೇಷಕಟ್ಟುವ ಕ್ರಮ, ಇತ್ಯಾದಿಗಳನ್ನು ಕಲಿತು, ಒಳ್ಳೇ ಬೆಳೆದ ಮೈಯುಳ್ಳ ಚುರುಕು ಕೂಲಿ ಯವನಾದುದರಿಂದ, ಮೆಲ್ಲನೆ ಅರ್ಜುನವೇಷದವರೆಗೂ ಸಿದ್ಧನಾಗುತ್ತ ಬಂದನು. ಆಟದಲ್ಲಿ ಸೇರುವವರಿಗೆ ಗ್ರಾಮಗಳಲ್ಲಿ ಅವರು ಮೆರೆವ ರೀತಿಯೊಂದಿದೆ. ಈ ರೀತಿಯಿಂದ ಅವರು ಪ್ರಸಿದ್ಧರೂ ಆಗುತ್ತಾರೆ; ಮನ್ನಣೆ (ಎಲೆ ಅಡಿಕೆ, ಸಿಹಿಯಾಳ, ಮಣೆ) ಪಡೆಯುತ್ತಾರೆ; ಕೆಲ ದಿನ ಗಳಲ್ಲಿ ರೀತಿಗೆಡಿಸಿಕೊಂಡು, ಆರೋಗ್ಯವನ್ನು ಕಳೆದುಕೊಂಡು, ಮೇಳ ದಿಂದ ಹೊರಬೀಳುತ್ತಾರೆ. ಇಂತಹ ವೇಳೆಗೆ, ಯಾವನು ಆಟಕ್ಕೆ ಅಂತಹ ವರ ಸ್ಥಾನದಲ್ಲಿ ಒದಗುವನೋ ಅವನು ಕೂಡಲೇ ಹೆಸರುಹೊಂದು ವನು. ಸುಬ್ಬ ಕೊಟ್ಟಾರಿಯೂ ಹೀಗೆಯೇ ಪಾರ್ಥನಾದುದು. ಆದರೆ, ಇವನಲ್ಲಿ ದುರ್ನಡತೆ ಇದ್ದಿಲ್ಲ; ಇದೊಂದೇ ವೃತ್ತಿ ತನಗೆಂದು ತಿಳಿದಿದ್ದುದ ರಿಂದಲೂ, ಹಲವು ಮುಖ್ಯ ವೇಷಧಾರಿಗಳು ಹೊಂತಗಾರರಾಗಿ ಆರೋಗ್ಯ ಕೆಡಿಸಿಕೊಂಡಾಗ ಇವನೇ ಅವರ ಸೇವೆ ಮಾಡುತ್ತಿದ್ದುದರಿಂದಲೂ, ಇದು ವರೆಗೂ ಉತ್ತಮನಾಗಿಯೇ ಇದ್ದನು. ಹೀಗೆ, ಎಲ್ಲಿಯಾದರೂ ಕರೆ ಬಂದರೆ, ಅರ್ಥ ಹೇಳುವುದು, ಮೃದಂಗ ಅಥವಾ ಚೆಂಡೆ ಬಾರಿಸುವುದು, ಶ್ರುತಿ ಊದುವುದು, ಬೇಕಾದರೆ ವೇಷವನ್ನು ಹಾಕಿ ಅಂದಿನ ಪ್ರಸಂಗ ತೀರಿಸಿಕೊಡುವುದು — ಇಷ್ಟೇ ಅವನ ಉದ್ಯೋಗವಾಗಿದ್ದಿತು.

ಇವನ ಹಿಂದಣ ಧನಿಗಳೂ ಅದೇ ಊರಿನವರು. ಆ ಗುತ್ತಿನ ಮನೆಯಲ್ಲಿ ಯಜಮಾನಿಕೆ ಬೇರೆಯಾಗಿದೆ, ನಿಜ; ಆದರೆ, ಗುತ್ತಿನ ರೀತಿ

ರಿವಾಜು'ಗಳು ಎಂದಿನಂತೆಯೇ ಇದ್ದುವು. ಸುಬ್ಬನಿಗೆ ಗುತ್ತಿನವರು ಹಿಂದೆ ಮಾಡಿದ್ದ ಅನ್ಯಾಯಗಳೆಲ್ಲವೂ ಆ ಮನೆ ಕಾಣುತ್ತಲೇ ನೆನಪಿಗೆ ಬರುತಿದ್ದುವು. ಆದರೆ ಇವನೇನು ಮಾಡುವನು? ಅವರ ನೆರಳಿನ ಉದ್ದಕ್ಕೂ ಸುಳಿಯುತಿದ್ದಿಲ್ಲ. ಈಗ ಪಾರ್ಥನೆಂದು ಹೆಸರಾಂತ ಸುಬ್ಬನು, ಒಮ್ಮೆ ತಮ್ಮ ಒಕ್ಕಲಾಗಿದ್ದವನಾದರೂ, ಈಗ ಈಕಡೆ ಕಣ್ಣೆತ್ತಿಯೂ ನೋಡುವುದಿಲ್ಲ—ಎಂದು ಗುತ್ತಿನ ಯಜಮಾನನೂ ಅಳಿಯನೂ ಹೇಳುತಿದ್ದರು. ಆದರೆ ಅವರೇನು ಮಾಡುವರು? ಇವನನ್ನು ತಮ್ಮವನನ್ನಾಗಿ ಮಾಡಿಕೊಳ್ಳಬೇಕೆಂದು ಅವರ ಆಸೆ ಬಹಳವಾಗಿದ್ದಿತು. ಜೂಜಿನ ಹುಂಜಗಳು, ಕಂಬಳದ ಕೋಣಗಳು, ಹೆಸರಾಂತ ಒಕ್ಕಲುಗಳು, ಯಾವ ಗುತ್ತಿನವನಿಗೆ ತಾನೇ ತನ್ನ ಆಸ್ತಿಗಿಂತ ಕಡಿಮೆಯಾಗಿ ಕಂಡಾವು? ನಮ್ಮ ಗುತ್ತಿನವರಲ್ಲಿ ಇಷ್ಟು ವಿಷಯಗಳಲ್ಲಾದರೂ ಹೆಮ್ಮೆ ಇರುವುದರಿಂದಲೇ, ತುಳುನಾಡಿನ ಗೌರವವು ಇನ್ನೂ ಅಳಿದುಹೋಗದೇ ಉಳಿದಿದೆ.

ಈ ಗೌರವಪಾಲನೆಯ ಸಾಧನಗಳಲ್ಲಿ, ತಮ್ಮ ಪಂತವು ಮೇಲಾಗಲೇ ಬೇಕೆಂಬ ಛಲವು ಗುತ್ತಿನವರಲ್ಲಿ ಬಹಳ ಹೆಚ್ಚಾಗಿದೆ. ನಿಜವಾಗಿಯೂ ಕೃಷಿಕರೇ ನೆಲದ ಒಡೆಯರು; ಅವರವರ ಭೂಮಿಗೆ ಅವರವರು ಸಮ್ರಾಟರು. ವಿಶೇಷ ಸುಧಾರಿತವಾಗಿರುವ ಮಹಾರಾಷ್ಟ್ರಗಳಲ್ಲಿ ಸಹ, ಅತ್ಯಲ್ಪ ಕಾರಣಗಳಿಂದ, ತಮ್ಮ ದರ್ಪಕ್ಕೆ, ಅಬ್ಬರಕ್ಕೆ, ಕುಂದು ಉಂಟಾಯಿತೆಂದು ಎಷ್ಟೋ ಮಹಾಯುದ್ಧಗಳಾಗಿ ಅಪಾರಹಾನಿಯಾಗುತ್ತಿದೆ ಎಂದಬಳಿಕ, (ಅದು ಅಗತ್ಯವಾಗಿಯೂ ಅನರ್ಥಕರ) ಎರಡು ನೆರೆಹೊರೆಯ ಗುತ್ತುಗಳೊಳಗೆ (ಅಲ್ಪ ಕಾರಣಗಳಿಂದಲೇ ಆಗಲೊಲ್ಲದೇಕೆ?) ಮಹಾವ್ಯಾಜ್ಯಗಳೂ ಮೊಕದ್ದಮೆಗಳೂ ಆಗಿ, ಇತ್ತಂಡಗಳಿಗೆ ಗುತ್ತನ್ನೇ ಮಾರಿತೊರೆವ ಸಂಭವಗಳುಂಟಾಗಿದ್ದರೂ, ಗೆದ್ದ ಮನೆಯವರು ತಮ್ಮ ಮನೆತನದ ಹೆಸರನ್ನು ಕಾಪಾಡಿಕೊಂಡ, ನಾಡಿನ ಅಚ್ಚಬಂಟರೆಂದು ಕೀರ್ತಿಹೊಂದಿದುದಿಲ್ಲವೆ? ಬಹುಶಃ ಈ ಹೆಸರಿನ ಹೆಗ್ಗಳಿಕೆಗಿಂತ ಸ್ವಾತಂತ್ರ್ಯವನ್ನೂ, ಛಲದಂಕತನವನ್ನೂ ಸೂಚಿಸುವ ಇನ್ನೊಂದು ಲಕ್ಷಣವು ಯಾವ ದೇಶದಲ್ಲಾದರೂ ಇರಬಹುದೇ? ತುಳುನಾಡು ಇತ್ತೀಚೆಗೆ ತಾನೂ ಸುಧಾರಣೆ

ಹೊಂದಿದೆ ಎನಿಸಿಕೊಳ್ಳುತ್ತಲಿದೆಯಾದರೂ, ಮೂವತ್ತು ವರ್ಷಗಳ ಹಿಂದೆ ಕುಲದ ಛಲಕ್ಕಾಗಿ ಬೆಳೆಸಿಕೊಂಡುಬಂದ ಅದೊಂದುಬಗೆಯ ಲಕ್ಷಣವು ಸುಧಾರಣೆಯ ಬೆಳಕಿನಲ್ಲಿ ಮಾಯವಾಗುತ್ತಬಂದಿರುವುದು ಶೋಚನೀಯ. ಗಂಡಾಳು, ಕಟ್ಟಾಳು, ಕೆಚ್ಚೆದೆಯ ವೀರ,— ಈ ಮಾತುಗಳಿಗೆ ಸಾವಿರಾರು ದೃಷ್ಟಾಂತಪುರುಷರು ನಮ್ಮ ಜಿಲ್ಲೆಯಲ್ಲಿದ್ದರು. ಈಗ ಶಾಂತಿಪ್ರಿಯರಾಗಿ ನಮುಭಯಗಳನ್ನರಿತೆವೆಂದು, ನಾವು ಇಂತಹವರ ಹೆಸರುಗಳನ್ನು ನೆನಪಿಗೆ ತರುವಂತಿಲ್ಲ. ಅರ್ಧಾಣೆಯ ಚೀಟನ್ನು ಲಕ್ಕೋಟೆಗೆ ಅಂಟಿಸಲು ಮರೆತುದು ಯಾರು ಎಂದು ಹುಡುಕಾಡಿ ಕಂಡುಹಿಡಿಯುವುದಕ್ಕೆ ಮೂವತ್ತಾರು ರೂಪಾಯಿಯನ್ನು ವ್ಯಯಿಸಿದ ಸರಕಾರವುಳ್ಳ ಯುಗದವರು ನಾವು! ಛಲದಂಕರು ನಮ್ಮಲ್ಲಿ ಕಡಿಮೆಯಾಗಿ, ಎಲ್ಲೆಲ್ಲಿಯೂ ನೆಮ್ಮದಿ ಹೆಚ್ಚಿದೆ ಎಂದು ಸರಕಾರದ ಆಡಳಿತವನ್ನು ಕೊಂಡಾಡುವವರೂ ನಾವೇ!

ಗುತ್ತಿನಮನೆ ನಾಣ್ಯ ಶೆಟ್ರು ಯಾರೋ ಸ್ವಲ್ಪ ಬಿರುಸಾದ ಕೂಲಿಯವರಿಗೆ ಕೊಟ್ಟ ಮಜೂರಿಯಲ್ಲಿ ಒಂದು ಸವೆದುಹೋದ ಅರ್ಧಾಣೆ ಇದ್ದಿತಂತೆ; ಆ ಆಳುಗಳು ಅರ್ಧಾಣೆಯನ್ನು ತಂದು ಗುತ್ತಿಗೇ ಒಪ್ಪಿಸಿ, ತಮಗೆ ಬೇರೆ ನಾಣ್ಯ ಕೊಡಿ ಎಂದರಂತೆ; ಗುತ್ತಿನ ನೆಂಟರಾರೋ ಅಲ್ಲಿದ್ದಾಗ ಈ ಆಳುಗಳ ದೂರು ಬಂದುದು ಗುತ್ತಿನ ಶೆಟ್ರಿಗೆ ಬಹಳ ಅವಮಾನವಾಯಿತೆಂದು, ಆ ನಾಣ್ಯವನ್ನು ಕೈಗೆ ಬಂದಂತೆ ದೂರಕ್ಕೆ ಒಗೆದು, ಬಾಯಿಗೆ ಬಂದಂತೆ ಅವರು ಬೈದರಂತೆ. ಬೈಗಳಿಗೆ ಹಿಂದೆ ಪ್ರತಿಧ್ವನಿಯಾಗಿ ಬೈಗಳೇ ಎದ್ದುವು. ಮುಂದೆ, ಗುತ್ತಿನವರು ಜನ ಕಟ್ಟಿ ತಮ್ಮನ್ನು ಹೊಡೆವರಂತೆ ಎಂದು ದೂರು ತಂದು ಆಳುಗಳು ಗ್ರಾಮಚಾವಡಿಗೆ ತಿಳಿಸಿದರು. ಗ್ರಾಮಚಾವಡಿಗೂ ಗುತ್ತಿನಚಾವಡಿಗೂ ನಂಟತನವಿದೆ; ಫಲವಾಗಲಿಲ್ಲ. ಗುತ್ತಿನಿಂದ ಎಂದೋ ಹಿಂದೆ ಅವಮಾನಪಟ್ಟವರೋ, ಅಥವಾ, ಅವರನ್ನು ಸ್ವಲ್ಪ "ಸಿಕ್ಕಿಸಿಹಾಕಬೇಕು" ಎಂದ ಮತ್ತಾರೋ ಈ ಆಳುಗಳಿಗೆ ಕಲಿಸಿಕೊಟ್ಟು, ಅವರಿಂದ ತಾಲೂಕು ಸ್ಟೇಶನಿಗೆ ಅರ್ಜಿ ಕಳುಹಿಸಿದರಂತೆ. ಅರ್ಜಿ ತನಖಿ ಮಾಡಲೂ, ಅದು ನಿಜವಾದರೆ ನೆಮ್ಮದಿ ಭಂಗಮಾಡದಂತೆ ಗುತ್ತಿನವರಿಂದ ಜಾಮೀನುಭದ್ರತೆ ಬರೆಸಿಕೊಳ್ಳಲೂ, ಸ್ಟೇಶನಿನ ಅಪ್ಪಣೆ ಗ್ರಾಮ

ಚಾವಡಿಗೆ ಬಂತು; ಒಬ್ಬ ಪೋಲೀಸು ಜವಾನನೂ ಅದರೊಡನೆ ಗ್ರಾಮಕ್ಕೆ ಬಂದನು.

ಗುತ್ತಿನಮನೆಯಿಂದ ಶೆಟ್ರು ಪಟೇಲಚಾವಡಿಗೆ ಈ ವಿಚಾರ ನೋಡಿ ಕೊಳ್ಳಲು ಹೋಗಿಬರುವಾಗ, ಸಂಜೆ ಅರಳಿದೆ; ಭಾಗವತರ ಅಂಗಡಿಯೂ ಅರಳಿದೆ. ಶೆಟ್ರು ತನ್ನ ಅಳಿಯನೊಡನೆ ಆಲೋಚನಾಪರರಾಗಿ ಅಂಗಡಿಗೇ ದಯಮಾಡಿಸಿದರು. ಭಾಗವತರು ಕಂಬಳಿಕೊಟ್ಟು, ಕುಳ್ಳಿರೆಂದು ನಗುತ್ತ ಹೇಳಿದರಲ್ಲದೆ, ಇದಕ್ಕೆ ಕೆಲವೇ ನಿಮಿಷ ಮುಂಚೆ ಅದೇ ದಾರಿಯಾಗಿ ಅತ್ತ ಹೋದ ಪಾರ್ಥನ ಅರ್ಥದ ಸುಬ್ಬನನ್ನಾಗಲಿ ತಾನು ಮನನಮಾಡುತಿದ್ದ ಭಾರತವನ್ನಾಗಲಿ ಮರೆಯದೆ ಕೂತರು. ಬಂದವರಿಗೆ ಎಲೆಅಡಿಕೆ ಕೊಟ್ಟ ಬಳಿಕ, ಭಾಗವತರ ಮಾತಿನಲ್ಲಿ 'ಕಾರ್ಯಕಾರಣ' ವಿಚಾರವಾಯಿತು. ಶೆಟ್ರು ಒಮ್ಮೆ ಗಂಭೀರವಾಗಿ, ಒಮ್ಮೆ ತುಚ್ಛೀಕರಿಸಿ, ಒಮ್ಮೆ ಹೆಮ್ಮೆಯಿಂದ ಉಡಾಯಿಸಿ, ಎಲ್ಲ ವೃತ್ತಾಂತವನ್ನೂ ವಿವರಿಸಿದರು.

"ಅಲ್ಲಾ, ತಮ್ಮಂಥಾವ್ರ ಮೇಲೂ ಕತ್ತಿ ಕಟ್ಟುವವರಿದ್ದಾರಲ್ಲ!" ಎಂಬುದು ಭಾಗವತರ ವಿಮರ್ಶೆ.

"ಕತ್ತೀ ಕಟ್ಟಲಿ. ಅರದಿಂದ ಅದರ ಬಾಯಿ ಮೊಂಡಾಗಿಸುತ್ತೇವೆ."

"ಆದ್ರೂ, ಇಷ್ಟೆಲ್ಲ ಯಾಕಪ್ಪಾ ಅರ್ಜಿ ಮಾಡಿದ್ರು?"

"ಅದೆಲ್ಲ, ನಮ್ಮ ನೆಂಟ್ರ ಇದಿರಲ್ಲಿ ನಾವು ಹಾಳು ದುಡ್ಡು ಚೆಲ್ಲಿ ದ್ದೇವೆಂದು ದೂರಿ, ನಮ್ಮ ಹೆಸರು ಹಾಳು ಮಾಡಿದರೂ, ನಾವು ಸುಮ್ಮನೆ ಇದ್ದುದಕ್ಕೆ, ಆ ಹಾಳು ಕೂಲಿಯವರ ಬುದ್ಧಿವಂತಿಕೆ! ನಾವೂ ಒಂದು ಕೈ ನೋಡದೆ ಬಿಡ್ತೇವೆಯೆ?"

"ಹಿಂದೆ ಧನಿ ಒಕ್ಕಲುಗಳೊಳಗೆ ಇದ್ದ ರೀತಿನೀತಿಗಳು ಎಲ್ಲ ಮಾಯ ವಾದುವಲ್ಲ. ಕಲಿಕಾಲ! ಇಲ್ಲಿ ಹೇಳುತ್ತಾರೆ ವೇದವ್ಯಾಸರು:—

'ಜಗವರಾಜಕವಾಯ್ತು, ಕುಮುದಾ- !
ಳಿಗಳು ಬಾಗಿಲ ಹೂಡಿದುವು, ಸೂ- ।
ರೆಗರು ಕವಿದುವು ತುಂಬಿಗಳು ಸಿರಿವಂತರಾ ಮನೆಗೇ ॥'

"ರಾಜರೇ ಇಲ್ಲ ಎಂಬಹಾಗೆ ಇವರೆಲ್ಲರ ಮದವೇನು? ಒಕ್ಕಲ ವರಿಗೊಂದು ಅಹಂಕಾರವೇ? ಹಣಕಾಸು ಸೂರೆ ಮಾಡುವುದಕ್ಕೆಂಬಂತೆ ಶ್ರೀಮಂತರ ಮನೆ ಹೊಗುತ್ತಾರಲ್ಲ!"

"ಹೌದನ್ನೇನೆ. ನಮ್ಮ ಸುದ್ದಿಯನ್ನೇ ಬರೆದಂತಿದೆಯಲ್ಲ! ಭಾಗವ ವತರೇ, ಮತ್ತೇನಾಯ್ತು?"

"ಹಾಗೇ ಇದೇ ಭಾರತವ್ರೋದಿಹೇಳಲೇ? ಅಂಥದ್ದೇನೂ ಶಕುನಫಲ ನೋಡುವಿರಾದರೆ, ಗ್ರಂಥದಲ್ಲಿ ಕಡ್ಡಿಹಾಕಿ ನೋಡಬಹುದು. ಇದೇ ನನ್ನ 'ಚಿಂತಾಮಣಿ.' ಶ್ರೀ ಕೃಷ್ಣಪರಮಾತ್ಮನ ಮಹಿಮೆ, ವೇದವ್ಯಾಸರ ಕಾವ್ಯ, ದ್ವಾಪರದ ಕಥೆ, ಇದರಲ್ಲಿ ಇಲ್ಲದ್ದೇನು? ನಮ್ಮಂಥವರಿಗೆಲ್ಲ ಇದೇ ದಾರಿ ತೋರಿಸಿ ನಡಿಸಿಕೊಂಡು ಹೋಗುವುದು!"

"ಹಾಗಿದ್ದರೆ ನಮಗಾಗಿ ಒಂದು ಕಡ್ಡಿ ಹಾಕಿ ನೋಡೋಣವೇ?"

ಭಾಗವತರು ಕೂಡಲೇ ಒಪ್ಪಿದರು. ಗ್ರಂಥವನ್ನು ಎತ್ತರದ ಮಣೆಯ ಮೇಲೆ ಮಡಗಿಟ್ಟರು. ಒಂದು ಬೀಡಾ(ವೀಳೆಯ)ವನ್ನು ಮಡಚಿಟ್ಟುದಾಯಿತು. ಶೆಟ್ರು ಅಳಿಯನೂ ಕೈಕಾಲುಮುಖ ತೊಳೆದುಕೊಂಡು, ಭಕ್ತಿಯಿಂದ ಕೈಮುಗಿದು, ನಾಲ್ಕಾಣೆಯ ಒಂದು ಪಾವಲಿಯನ್ನು ಅದೇ ಮಣೆಯ ಮೇಲೆ ಇಟ್ಟುದಾಯಿತು. ಭಾಗವತರು ಕಣ್ಮುಚ್ಚಿ, ಪ್ರಾರ್ಥನೆ ಮಾಡಿ, ಒಂದು ಕಸಬರಿಕೆಯ ಕಡ್ಡಿಯನ್ನು ತಂದು, ಶೆಟ್ರ ಕೈಯಲ್ಲಿ ಕೊಟ್ಟು, ಅದರಿಂದ ಗ್ರಂಥದೊಳಗೆ ಚುಚ್ಚುವಂತೆಯೂ, ಅದು ತೆರೆಯುವ ಪುಟದಲ್ಲಿ ತಗಲುವ ಪದ್ಯದಲ್ಲಿ ಶೆಟ್ರ ಮೇಲೆ ಬಂದ ಆಪತ್ತಿನ ವಿಚಾರಗಳೆಲ್ಲ ತೋರಿಬರುವುವಾಗಿಯೂ ತಿಳಿಸಿದರು.

ಗುತ್ತಿನ ದೈವವನ್ನು ನಡಿಸುವಾಗಲೂ ಬೆದರದ ಶೆಟ್ರು, ಈಗ ಈ ಕಸಬರಿಕೆಯ ಕಡ್ಡಿಯನ್ನು ಕೈಯಲ್ಲಿ ಹಿಡಿದು, ಅದೇನು ಗುದ್ದಲಿಯೋ, ಖಡ್ಗವೋ, ಕೊಡಲಿಯೋ, ಎಂಬಷ್ಟು ಭಾವನೆಯಿಂದ, ಗ್ರಂಥದೊಳಗೆ ಚುಚ್ಚಿಟ್ಟರು.

ಭಾಗವತರು ನಮಸ್ಕಾರಪೂರ್ವಕವಾಗಿ ಗ್ರಂಥವನ್ನೆತ್ತಿಕೊಂಡು, ಕಡ್ಡಿ ಚುಚ್ಚಿದ ಪುಟ ತೆರೆದು, ಕಡ್ಡಿ ತಗಲಿದ ಪದ್ಯವನ್ನು ಓದಿದರು. ಬಹಳ

ಸ್ವಾರಸ್ಯವಾಗಿ ಹಾಡಿದರು! ಏಕೆಂದು ನಿಮಗೆ ತಿಳಿಯದಿರದು. ಚರಣ ಕ್ಕೊಮ್ಮೆ ನಿಲ್ಲಿಸಿ ವಿವರಿಸಿದರು! ಏಕೆಂದು ಶೆಟ್ರಿಗೆ ಹೊಳೆಯದಿರದು. ಆ ಪದ್ಯವು ಇದು:—

"ಅರಸ ಕೇಳ್ ಬಿಲುವಿದ್ಯೆಯಲಿ ಮೂ ।
ವರು ಕಣಾ ಸಾಮರ್ಥ್ಯಪುರುಷರು; ।
ಧರೆಯೊಳೊಬ್ಬರಿಗೊಂದು ಗುಣ, **ಪಾರ್ಥಂಗೆ** ಮೂರು ಗುಣ ॥
ಭರಿತವಾಗಿಹುದಾತನೊಬ್ಬನ ।
ಸರಿಸದಲಿ ಮಾರಾಂತು ಜೀವಿಸಿ ।
ಮರಳಬಲ್ಲವನಾವನೈ? ಹೇಳೆಂದನಾ ಶಕುನಿ ॥"

**ಭಾಗವತ ಉವಾಚ:**—"ಶೆಟ್ರೇ, ಕೇಳಬೇಕು. ಇಂಥ ವಿದ್ಯೆ ಯಲ್ಲಿ ಮೂವರು ಸಾಮರ್ಥ್ಯಪುರುಷರು ಇರುವರು,—ಎಂದು ಮೊದ ಲಾಗಿ ಹೇಳಿದ್ದಾರೆ ವ್ಯಾಸ ಋಷಿಗಳು. ಈ ಮೂವರು ಯಾರು?"

"ಇಬ್ಬರು ಅವರೇ,—ಆಳುಗಳು; ಅರ್ಥಾಣೆಗಾಗಿ ಬಂದವರು. ಇನ್ನು ಅವರ ಜತೆಗೆ ಸೇರತಕ್ಕವನ್ಯಾರು? ಪಟೇಲರು ತೋರಿಸಿದ ಅರ್ಜಿ ಯಲ್ಲಿ ಅವರಿಬ್ಬರ ಹೆಸರೇ ಇದೆ. ನೀವು ಮೂವರೆಂದರೆ ಯಾರೆಂದು ನಾವು ಹೇಗೆ ಹೇಳಲಿ! ವ್ಯಾಸರಿಗೇ ಗೊತ್ತು."

"ಸರಿ, ಮೂವರು ಯಾರು ಬಲ್ಲಿರಾ? ಇವರಲ್ಲಿ ಒಬ್ಬೊಬ್ಬರಿಗೆ ಒಂದೊಂದೇ ಗುಣವಿದೆ, ಆದರೆ, **ಪಾರ್ಥ**ನಿಗೆ ಮೂರು ಗುಣ ಇದೆ ಎನ್ನು ತ್ತಾರೆ ಋಷಿಗಳು."

'ಪಾರ್ಥಂಗೆ ಮೂರು ಗುಣ,'—ಈ ಪಾರ್ಥನಾದರೂ ಯಾರಪ್ಪಾ? ಮೂರುಮುಡಿ ಜಾಣ? ಕಣ್ಣೋಜಿ? ಭಾಗವತರಿಗೆ ನಸುನಗು ತುಂಬಿಯೇ ಇದ್ದಿತು; ಶೆಟ್ರಿಗೆ ಪುನಃಪುನಃ ಈ ಪ್ರಶ್ನೆಯನ್ನು ಕೇಳಿದ ಕೌಶಲದಿಂದ ಸ್ವಲ್ಪ ಜ್ಞಾನೋದಯವಾಯಿತು. ಆದರೂ ಇಬ್ಬರೂ ಬಾಯಿಬಿಡಲಿಲ್ಲ. ಇನ್ನೂ ಆಲೋಚಿಸುತಿದ್ದಂತೆ ತೋರಿದರು; ಭಾಗವತರದಂತೂ 'ಕೃತ್ರಿ ಮದ ಮುಖ.'

"ಶೆಟ್ರೆ, ಕೇಳಿ! ಅವರಿಬ್ಬರ ಮಾತು ಹಾಗಿರಲಿ. ಇವನೊಬ್ಬನ, ಈ ಮೂರನೆಯವನೆಂಬ **ಪಾರ್ಥ**ನ, ಮುಮ್ಮಡಿ ವಿದ್ಯಾವಂತ **ಪಾರ್ಥ**ನ, ಸಮಾನವಾಗಿ ಇದಿರಲ್ಲಿ ನಿಂತು ಯುದ್ಧ ಮಾಡಿ, ವ್ಯಾಜ್ಯ ಅಥವಾ ಮೊಕದ್ದಮೆಯಲ್ಲಿ ಗೆಲ್ಲಬಲ್ಲವನು ಯಾವನಿದ್ದಾನೆ ಈ ಧರಿತ್ರಿಯಲ್ಲಿ?—ಎಂದು ಮಹಾ ತಂತ್ರಗಾರನಾದ ಶಕುನಿಯೇ ಎನ್ನುತಿದ್ದಾನಲ್ಲ! ಇನ್ನೂ ತಿಳಿಯಲಾರಿರಾ?— ಈ **ಪಾರ್ಥ**ನು ಯಾರಾಗಿರಬಹುದೆಂದು?"

"ಸರಿ, ಅವನೇ ಆ ಬೊಡ್ಡೀಮಗ ಪಾರ್ಥ,—ಸುಬ್ಬ ಕೊಟ್ಟ್ರಾರಿ! ಗೊತ್ತಾಯ್ತು. ಮುತ್ತಜ್ಜನ ಕಾಲದಿಂದ ನಮ್ಮ ಬಚ್ಚಲಿಗೆ ನೀರು ಹೊರುತಿದ್ದವ! ಈಗ ಭಾರೀ ಪಾರ್ಥನಾಗಿ ಹೋಗಿಬಿಟ್ಟಿದ್ದಾನೆ! ನಿಮ್ಮ ಬಭ್ರುವಾಹನನಿಗೆ ಇದಿರಾಗಿ ಅಂದೇ ಅರ್ಥ ಹೇಳಿದವ! ನಮ್ಮನ್ನು ಕಂಡರೆ ಕಣ್ಣು ಮುಚ್ಚಿಕೊಳ್ಳುತ್ತಾನೆ. ಬೆಕ್ಕೇ! ಗಂಟಾ! ಕಣ್ಮುಚ್ಚಿ ಹಾಲು ಕುಡಿದರೆ ಯಾರಿಗೂ ತಿಳಿಯದೆಂದೆಣಿಸಿದೆಯಲ್ಲಾ! ಹಃ! ಹಃ! ಈ ವ್ಯಾಸರ ಭಾರತವಿದೆ, ಈ ಪುಣ್ಯಾತ್ಮ ಭಾಗವತರಿದ್ದಾರೆ. ಇನ್ನು ನಿನ್ನ ಮುಚ್ಚಿದ ಕಣ್ಣನ್ನು ಕುಕ್ಕಿ ಕೀಳುತ್ತೇವೆಯೋ ಇಲ್ಲವೋ ನೋಡು! ಅಬ್ಬ, ಗುತ್ತಿನ ಮೇಲೆ ನಿನ್ನ ಕಣ್ಣೇ! ಹಂ!"

ಶೆಟ್ರು ಎದ್ದು ನಿಂತರು; ಅಳಿಯ ಕೆರಳಿ ನಿಂತನು. ಭಾಗವತರು ಗ್ರಂಥವನ್ನು ಮುಚ್ಚಿ, "ಒಮ್ಮೆಲೇ ಹಾಯಬೇಡಿರಿ; ಆಲೋಚಿಸಬೇಕು. 'ಎಷ್ಟೆಂದರೂ ನಮ್ಮ ಶಿಷ್ಯ, ನಮ್ಮಿಂದ ಬುದ್ಧಿವಂತಿಕೆ ಪಡೆದೇ ನಮ್ಮನ್ನು ಎದುರಾಡಿದುದರಲ್ಲಿ ತಪ್ಪಿಲ್ಲ,' ಎಂದೇ ಅಂದೇ ಹೇಳಿದ್ದೇನೆ; ಮತ್ತು ನಿಮ್ಮ ವಿಷಯವೇನೋ ನೀವೇ ನೋಡಿಕೊಳ್ಳಿರಿ. ಆದರೂ ಅವಸರ ಬೇಡ," ಎಂದು ಇಬ್ಬರಿಗೂ ಸಮಾಧಾನ ಹೇಳಿದರು.

ಅವರಿಬ್ಬರೂ ನಮಸ್ಕರಿಸಿ ಹೊರಟರು. ಅಂಗಡಿ ಮುಚ್ಚಿ, ನಾಲ್ಕಾಣೆಯನ್ನು ಎತ್ತಿಕೊಂಡು ಭಾಗವತರು ಮನೆಗೆ ಹೋದರು. ಮನೆಯಲ್ಲಿ ಭಜನೆ, ಭೋಜನ, ಎರಡೂ ಆಗುವಾಗಲೂ ಈ ಮುಮ್ಮಡಿ ವಿದ್ಯೆಯ ಪಾರ್ಥನ ಚಿತ್ರವೇ ಭಾಗವತರ ಕಣ್ಣು ಮುಂದಿದ್ದಿತು. ರಾತ್ರಿಯಾಯಿತು; ಕತ್ತಲಲ್ಲಿ ಬಿದ್ದುಕೊಂಡಿರುವ ಭಾಗವತರಿಗೆ ಆಗಲೂ ಅದೇ ಚಿತ್ರ ಕಾಣು

ತಿತ್ತು. ಭಾಗವತರು ವಿಧಿಯ ವಿಲಾಸವನ್ನು ಎಣಿಸಿ ನಿದ್ದೆಹೋದರು. ಕಣ್ಣು ಮುಚ್ಚಿಕೊಂಡು ಎರಡು ಘಳಿಗೆ ಕಳೆವುದರೊಳಗೇ—'ಓ ಓ' ಎಂದು ಯಾರೋ ಕೂಗಿ ಅಂಗಡಿಯ ಜಗಲಿಯ ಮೇಲೆ ಬಿದ್ದುಕೊಂಡಂತೆ ಅವರಿಗೆ ತಿಳಿಯಿತು. ಜಗ್ಗನೆದ್ದು, ಬಾಗಿಲ್ತೆರೆದು, ದೀಪದೊಡನೆ ಹೊರ ಬಂದರು.

ಅಲ್ಲಿ ಬಿದ್ದು ನರಳುತ್ತಾನೆ,—ಸುಬ್ಬ ಕೊಟ್ಟಾರಿ! ತಣ್ಣೀರು ತಂದು ಕುಡಿಯ ಕೊಟ್ಟು, ಪ್ರೇಮದಿಂದ ಮಾತನಾಡಿಸಿದರು. ಬಬ್ಬರ್ಯನ ಓಣಿಯಲ್ಲಿ, ಇಬ್ಬರು ದೊಣ್ಣೆಗಳಿಂದ ಬಡಿದು ಕಾಲ್ಮುರಿದರೆಂದೂ, ಅವರಲ್ಲೊಬ್ಬನು ಗುತ್ತಿನ ಶೆಟ್ರ ಅಳಿಯನೆಂದು ತಿಳಿಯಿತೆಂದೂ ಸುಬ್ಬನ ತುಂಡುಮಾತುಗಳ ಅರ್ಥ.

ಬೆಳಿಗ್ಗಿನ ಜಾವದ ಕೋಳಿ ಕೂಗಿತು. ಗದ್ದೆಗಳಿಗೆ ನೀರು ಬಿಡಲು ಹೋಗುವವರು ಅತ್ತ ಬರುತ್ತಲೇ, ಅವರ ಸಹಾಯದಿಂದ ಸುಬ್ಬನನ್ನು ಆತನ ಮನೆಗೆ ಕಳುಹಿಕೊಟ್ಟುದಾಯಿತು. ಬೇಲಿಗೆ ನೆಟ್ಟ ಕಾಡುಮೂಲಿಕೆ ಗಿಡಗಳ ಸೊಪ್ಪಿನ ರಸವನ್ನು ಸುಣ್ಣದಲ್ಲಿ ಬೆರಸಿ, ಸುಬ್ಬನಿಗಾದ ಗಾಯ ಗಳಿಗೆ ಲೇಪಿಸಿ, ಭಾಗವತರು ಅವನು ಸ್ವಲ್ಪ ಚೇತನ ಹೊಂದುವತನಕ ಅಲ್ಲಿದ್ದರು.

"ಇದು ಫಕ್ಕನೆ ಗುಣವಾಗದು. ನಾಲ್ವರನ್ನು ಕರೆದು, ಕಂಬಳಿಯಲ್ಲಿ ನಿನ್ನನ್ನು ತಾಲೂಕು ಆಸ್ಪತ್ರೆಗೆ ಸಾಗಿಸುವ. ಅಲ್ಲಿ ಒಳ್ಳೆಯ ಚಿಕಿತ್ಸೆ ಮಾಡುವರು. ಡಾಕ್ಟರರಿಗೆ ತಿಳಿಸಿ, ಸ್ಟೇಶನಿನಲ್ಲಿ ಒಂದು ದೂರು ಕೊಟ್ಟು ಬಿಡು. ನಿನಗೆ ತಿಳಿದುದನ್ನು ಹೇಳು. ಡಾಕ್ಟರರೇ ನಿನ್ನ ಗಾಯ ನೋಡಿ ರಿಪೋರ್ಟು ಬರೆಯುತ್ತಾರೆ. ನಿನಗೇನೂ ಖರ್ಚಿಲ್ಲದೆ, ಹೀಗೆ ದೊಣ್ಣೆ ಏಟು ತಿಂದುದಕ್ಕೆ ಪ್ರತಿಫಲವಾದರೂ ಸಿಕ್ಕಲಿ. ಗುತ್ತಿನವರಿಗೇನು ಕಡಿಮೆ? ಎಷ್ಟೆಂದರೂ ನನ್ನ ಮೇಳದವ. ನಿನ್ನ ಹಾನಿ ನನ್ನ ಹಾನಿಯೇ ಅಲ್ಲವೇ?" ಎಂದೆಲ್ಲ ಬೋಧಿಸಿ, ಅವನನ್ನು ಹಾಗೆಯೇ ತಾಲೂಕು ಆಸ್ಪತ್ರೆಗೆ (ಐದು ಮೈಲು ದೂರ) ಸಾಗಿಸಿದರು.

* * * * *

ಹದಿನೈದು ದಿನಗಳಾದುವು. ಸುಬ್ಬನು ಮರಳುವುದಕ್ಕೆ ಇನ್ನೂ ಹದಿನೈದು ದಿನಗಳು ಬೇಕು ಎಂದು ಭಾಗವತರಿಗೆ ಸುದ್ದಿ ತಲಪಿತು. ಅಷ್ಟರೊಳಗೆ ಹಾಗೇ ಒಂದು ದಿನ, ನಾಜ್ಯ ಶೆಟ್ರು ಅಳಿಯನೊಡಗೂಡಿ, ಭಾಗವತರಿದ್ದಲ್ಲಿಗೆ ಬಂದರು.

ಎಂದಿನಂತೆ ನಮಸ್ಕಾರ, ಎಲೆಅಡಿಕೆ, ಎಲ್ಲವೂ ನಡೆಯಿತು. ಭಾಗವತರು, ಒಂದೂ ಮಾತನ್ನೆತ್ತದೆ ಭಾರತವನ್ನೇ ಓದುತಿದ್ದರು. ಅದಕ್ಕಾಗಿ, ತಮ್ಮ ಬರೋಣದ ಕಾರಣ ತಿಳಿಸಲು ಪೀಠಿಕೆಯಾಗಿ ಶೆಟ್ರು, "ಏನು ಓದುತಿದ್ದೀರಿ, ಭಾಗವತರೇ?" ಎಂದರು.

ಭಾಗವತರು ಏನು ಓದುತಿದ್ದರೋ ನಾವರಿಯೆವು. ಆದರೆ, ಅವರು ಶೆಟ್ರಿಗೆ ಓದಿ ಹೇಳಿದ್ದುದು ಹೀಗೆ:—

" 'ಮಾರಿಗವುತಣವಾಯ್ತು ನಾಳಿನ ।
ಭಾರತವು...........................'

ಎಂದರೆ, ನಾಳೆಗೆ ಭಾರೀ ಕಚ್ಚಾಟಕ್ಕೆ ಕಾರಣವಾಗುವುದು. ಸಿಕ್ಕವರಿಗೆ ಬಲಿಕೊಟ್ಟೇ ತೀರುವ ದಿನಗಳು ಬರುವುವು," ಎಂದರು.

"ಅದೇ ನಾವಿಲ್ಲಿಗೆ ಬಂದುದು. ನಾವಿಬ್ಬರೂ ಸೇರಿ ಸುಬ್ಬನ ಕಾಲು ಮುರಿದೆವೆಂದು ನಮ್ಮ ಮೇಲೆ ದೂರು ಕೊಟ್ಟಿದ್ದಾನಂತೆ, ಅವ. ಮೊದಲೇ ಆ ಆಳುಗಳು ನಾವು ನೆಮ್ಮದಿ ಭಂಗಮಾಡುವವರೆಂದು ಬರೆದುಕೊಂಡ ಎಚ್ಚರಿಕೆದೂರು ಅಲ್ಲೇ ಇದೆ. ಇವೆರಡೂ ಸೇರಿ ನಮ್ಮ ಮೇಲೆ ಬಂತಲ್ಲಾ ಅವಾಂತರ? ಏನು ಮಾಡೋಣ, ಈ ಜನಕ್ಕೆಲ್ಲ ಯಾರು ಬೆಂಬಲ, ಏನವಸ್ಥೆ ಇದು?—ಎಂದು ನಿಮ್ಮಲ್ಲಿ ಆಲೋಚನೆ ಮಾಡಲು ಬಂದೆವು."

"ಸಾಕು, ಆ ದಿನವೇ ನಿಮಗೆ ಹೇಳಿದ್ದೆ: ನಮ್ಮ ಶಿಷ್ಯ ಅವ; ಅವನ ಮೇಲೆ ಕೈಯೆತ್ತಬೇಡಿರಿ ಎಂದು. ಅವನು ನಿಮ್ಮ ಮೇಲೆ ಆದ ಅರ್ಜಿಯಲ್ಲಿ ಸೇರಿದ್ದನೋ ಇಲ್ಲವೋ ನನಗೇನು ಗೊತ್ತು? ಕಚೇರಿಯಲ್ಲಿ ಈ ಗ್ರಂಥವು ಸಾಕ್ಷಿ ನುಡಿದೀತೇ? ಈಗ ಅವನ ಕಾಲು ಮುರಿದವರು ನೀವೋ, ಯಾರೋ, ನನಗೇನು ಗೊತ್ತು? ಅದೇ ರಾತ್ರಿ ನನ್ನೊಡನೆ ಅವನು

ಹೇಳಿದ್ದನು, ನಿಜ. ಆದರೆ ನಾನೇನು ಮಾಡಲಿ? ಊರಿನ ಆಸ್ಪತ್ರೆಗೆ ಕಳುಹಿಕೊಟ್ಟೆನು. ಅಲ್ಲಿ ಶಹರಿನ ಜನ; ಅಬ್ಬಾ! ಅವರಿಗೆ ಯಾವಾಗಲೂ ಹಳ್ಳಿಯ ಧನಿಕರನ್ನು ಕಂಡರಾಗದು. ಸುಬ್ಬನಿಗೇನು ಕಲಿಸಿ ಕೊಟ್ಟರೋ, ಏನೆಲ್ಲ ಆಗಿ ಇಷ್ಟು ಮುಂದರಿಯಿತೋ, ಯಾರು ಬಲ್ಲರು?"

"ಆದರೂ ತಾವು ಅನುಭವಸ್ಥರು. ಸುಬ್ಬನ ಗುರುಗಳು. ಏನಾದರೊಂದು ಪಂಚಾಯತಿ ಮಾಡಿ, ಇದನ್ನು ಸುಧಾರಿಸಿಬಿಡಿರಿ; ಐನೂರು ರೂಪಾಯಿ ಸುರಿದು ಕಚೇರಿಬಾಗಿಲು ಕಾಯುವುದ್ಯಾಕೆ? ನೀವೇ ಒಂದ್ಯೆವತ್ತು ಇಕೊಳ್ಳಿ. ಸುಬ್ಬನನ್ನು ಕಂಡು, ಹೇಗೂ ಮಾಡಿ ಸಮಾಧಾನ ಹೇಳಿ, ಅವನನ್ನು ಇಲ್ಲಿಗೇ ತರಿಸಿರಿ. ಅವನ ಆರೈಕೆಯನ್ನು ಇಲ್ಲಿಯೇ ಮಾಡಿಸುವ. ಬೇಕಾದ ಖರ್ಚನ್ನು ನಾವು ಕೊಡುತ್ತೇವೆ. ಈ ಅರ್ಜಿ ತೆಗೆದುಹಾಕಿಸಲಿ. ಅವನ ಸಮಾಧಾನಕ್ಕೆ ಇಪ್ಪತ್ತೈದು ರೂಪಾಯಿ ಕೊಡೋಣ. ಅದರಲ್ಲೇನು? ನಿಮ್ಮ ಮಾತನ್ನು ಅವನು ಮೀರಲಾರ; ನಾವಂತೂ ನಿಮ್ಮವರೇ!" ಎಂದು ಶೆಟ್ರು ಅಳುತ್ತ ನಗುವಂತೆ ಮಾತಾಡಿದರು. ನೂರು ರೂಪಾಯಿ ರೊಕ್ಕದ ಚೀಲವೂ ಗ್ರಂಥದ ಇದಿರಲ್ಲಿ ಕೂತಿತ್ತು.

ಹಣದ ಚೀಲದಲ್ಲಿ, ಲಕ್ಷ್ಮೀಕೃಪಾಕಟಾಕ್ಷವಿರುವ ಕಾರಣ, ಸೌಭಾಗ್ಯವನ್ನುಂಟುಮಾಡುವ ಸಾಧನೆಗಳು ಕೂಡಲೇ ಸೂಚಿತವಾಗುತ್ತಿವೆ ಎಂದು ವಿಶ್ವಾಸವುಳ್ಳವರಿಗೆ, —ಭಾಗವತರು ಕೂಡಲೇ ಶುಚಿರ್ಭೂತರಾಗಿ, ಗ್ರಂಥವನ್ನು ಸಾಷ್ಟಾಂಗ ವಂದಿಸಿ, ಶೆಟ್ರ ಸಲುವಾಗಿ ಸಂಪ್ರಾರ್ಥಿಸಿಕೊಂಡು, ಕಣ್ಣು ಮುಚ್ಚಿ ಭಕ್ತಿಯಿಂದ ಪುಟ ತೆರೆದು ಓದಿದ ಈ ಪದ್ಯಭಾಗದ ತಾತ್ಪರ್ಯವೂ ವಿಶ್ವಾಸ ಹೆಚ್ಚಿಸುವುದಲ್ಲವೇ?—

"'ಸಾವ ಹರಿಯುವೆ ಎಂದು ಗಗನದ ।
ದೇವತತಿ ಮರುಗಿತ್ತು ಶಕ್ರನ ।
ಸಾವಿರಾಲಿಗಳೊರತೆಯಿಟ್ಟುವು ಪೌತ್ರಮೋಹದಲಿ ॥'

"ಶೆಟ್ರೇ ಚೆನ್ನಾಯಿತು. ನಾಳೆಗೇ ನಮ್ಮ ಪಯಣ. ದೇವರಿಗೂ ನಿಮ್ಮುಭಯತರ ವಿಚಾರವಾಗಿ ಮರುಕ ಉಂಟಾಗಿದೆ. ಹೇಗೂ ಮಾಡಿ

ಸಂಧಾನಮಾಡಿಕೊಂಡೇ ಬರುತ್ತೇನೆ. ಸಂಜೆಗೆ ಇಲ್ಲಿ ದಯಮಾಡಿಸಬೇಕು," ಎಂದು ಭಾಗವತರು ನುಡಿದರು. ಶೆಟ್ರು ಬಾಯಿ ಅಗಲಮಾಡಿಕೊಂಡು ಅಳಿಯನೊಡನೆ ಸ್ವಗೃಹಾಭಿಮುಖವಾಗಿ ನಡೆದರು.

ಹದಿನೈದು ದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತಿದ್ದ ಸುಬ್ಬ ಕೊಟ್ಡಾರಿಗೆ, ಸುಮ್ಮನೆ ಮಲಗಿದ್ದಲ್ಲಿ ಹಿಂದಣ ಕಥಾವೃತ್ತಾಂತವು ಕಣ್ಣ ಮುಂದೆ ಮಿನುಗಿ ಮಾಯವಾಗುತ್ತಲೇ ಇದ್ದಿತು. ಬಭ್ರುವಾಹನ ಕಥಾ ಸಂದರ್ಭದಿಂದೀಚೆಗೆ ಭಾಗವತರು ಸ್ವಲ್ಪ ಗಂಭೀರವಾಗಿಯೂ, ಶೆಟ್ರು ಸ್ವಲ್ಪ ಕಠೋರವಾಗಿಯೂ, ತನ್ನನ್ನು ಕಾಣುತಿದ್ದುದು; ಭಾಗವತರು ಶೆಟ್ರ ಮಿತ್ರರಾಗಿದ್ದುದು; ಇತ್ಯಾದಿ ಸಂಭವಗಳನ್ನು ಊಹಾಪೋಹಗಳಿಂದ ಗುಣಿಸಿ, ಪರಿಶೋಧಿಸಿ, ಸುಬ್ಬನು ತನ್ನ ಅಂಪನ ಸ್ಥಿತಿಯ ಪಂಚಾಂಗವನ್ನು ಸರಿಪಡಿಸಿಕೊಂಡನು. ಭಾಗವತರ ಪ್ರೋತ್ಸಾಹವೋ, ಸೂಚನೆಯೋ, ಅಥವಾ ಸಮಾಧಾನವೋ, ಶೆಟ್ರ ಈ ಕಠಿನವೃತ್ತಿಯ ಹಿಂಬಲವಾಗಿದ್ದಿರ ಬಹುದೆಂದೇ ಅವನು ಭಾವಿಸಿದನು. ಈಗೇನೋ ಡಾಕ್ಟರರ ಸರ್ಟಿಫಿಕೇಟು ಸಮೇತವಾಗಿ ಪೋಲೀಸರಿಗೆ ದೂರು ಕೊಟ್ಟಿರುವುದು ನಿಜವಾದರೂ,—ಹಳ್ಳಿಯಲ್ಲಿ ಆಢ್ಯರಾಗಿಯೂ, ದಕ್ಷರಾಗಿಯೂ ಇರುವ ಈ ಭಾಗವತರೂ ಈ ಶೆಟ್ರೂ ಒಂದಾದಲ್ಲಿ, ಮೊಕದ್ದಮೆಯಾಗುವುದಿರಲಿ, ಇನ್ನು ಮುಂದೆ ತನಗೆ ಅಪಾಯಗಳು ಹೆಚ್ಚುವುವೆಂದೂ ಸುಬ್ಬನು ತಿಳಿದನು. ಹೀಗಾಗಿ, 'ಡೋಲಾಯಮಾನವೃತ್ತಿ'ಯಲ್ಲಿದ್ದಾಗ,—ಭಾಗವತರ ದರ್ಶನದ ಪುಣ್ಯಕಾಲವು ಆತನಿಗೆ ಆಸ್ಪತ್ರೆಯಲ್ಲಿ ಒದಗಿತು.

ಎಷ್ಟೆಂದರೂ ತನ್ನ ಪ್ರೀತಿಯ 'ಅಭಿಮನ್ಯು' ಸುಬ್ಬನು ಪಾರ್ಥನಾಗಿ ಒಂದೆರಡು ಸಲ ಮಾತ್ರ ವೇಷಹಾಕಿದ್ದನು. ಮೊದಲು ಬಿಲ್ಲುಹಬ್ಬದಲ್ಲಿ ಕೃಷ್ಣವೇಷ, ನಂತರ ಅಭಿಮನ್ಯುವೇಷ, ಕೊನೆಗೆ ಪಾರ್ಥವೇಷ, ಅದರಿಂದಾಗಿಯೇ ತನ್ನ ಇಡೀ ಮೇಳಕ್ಕೆ ಕೀರ್ತಿ ಉಂಟಾಗಿದ್ದಿತು. ಆ ವೃತ್ತಾಂತವನ್ನೆಲ್ಲ ಮನಸ್ಸಿಗೆ ತಂದುಕೊಂಡು—'ಮುಂಗೈನಿಗಳವನು ತಿರುಹುತ್ತ ಆಹವಕ್ಕನುವಾದನಭಿಮನ್ಯು' ಎಂಬ ಪದ್ಯವನ್ನೂ, ಈಗ 'ತೋಳತಲೆಗಿಂಬಿನಲಿ ಕೈದುಗಳೋಳಿಗಳ ಹಾಸಿನಲಿ' ಎಂಬ ಪದ್ಯವನ್ನೂ ನೆನೆದು ಭಾಗ

ವತರು ಸುಬ್ಬನ ಮಂಚದ ಬಳಿ ನಿಂತಿದ್ದು, ಕಣ್ಣೀರು ಸುರಿಸಿಯೇ ಬಿಟ್ಟರು.

ಸುಬ್ಬನ ಮನಸ್ಸು ಮೆತ್ತಗಾಯಿತು. ಗ್ರಾಮದಿಂದ ತನ್ನವರೆಂಬವರೊಬ್ಬರೂ ಅತ್ತ ಬಂದಿರದೆ, ಭಾಗವತರೊಬ್ಬರೇ ತನ್ನನ್ನು ಕಾಣಬಂದುದು ಅವನ ಮನಸ್ಸಿನಲ್ಲಿ ಹೊಳೆದು, ಬಾಲ್ಯದಲ್ಲಿ ಮೇಳದೊಡನೆ ಸಂದ ದಿನಗಳ ನೆನಪೂ ಹಿಂದೆಯೇ ಆಗಲು, ಸುಬ್ಬನು ಮಲಗಿದ್ದಲ್ಲಿಂದಲೇ ಭಾಗವತರಿಗೆ ಕೈಮುಗಿದನು. ತನ್ನ ಕೃತಜ್ಞತೆಯನ್ನು ಸೂಚಿಸಿಕೊಂಡನು. ಕೆಲವೇ ಮಾತುಗಳಲ್ಲಿ ಭಾಗವತರು ತಾನು ಬಂದ ಕಾರ್ಯಕಾರಣಗಳನ್ನು ವಿವರಿಸಿದರು. ಎಷ್ಟೆಂದರೂ ಗ್ರಾಮದಲ್ಲಿ ಆಢ್ಯರಾದ ಗುತ್ತಿನವರು; ಹಿಂದೆ ಸುಬ್ಬನ ಧನಿಗಳು; ಅವರ ವಿರೋಧ ಕಟ್ಟಿಕೊಂಡು ಅಲ್ಲಿ ಬಾಳುವುದು ಕಷ್ಟ; ಅರ್ಜಿಗಳಿಗೆಲ್ಲ ರುಜುವಾತು ಸಿಗುವುದು ಅಪರೂಪ; ಹೇಗಾದರೂ ಹೈಕೋರ್ಟಿನವರೆಗೆ ಅಪೀಲುಸಾಧನೆ ಮಾಡಬಹುದು. ಸುಬ್ಬ ಗರೀಬ, ಸಹಾಯಕರಿಲ್ಲದ ಏಕಾಕಿ; ಅಪಾರ ಹಣವು ಖರ್ಚಿಗೆ ಬೇಕಾದೀತು; ಮುರಿದ ಎಲುಬುಗಳಂತೂ ಜೋಡಣೆ ಹೊಂದುತ್ತಿವೆ; ಒಂದು ತಿಂಗಳು ನರಳಿದ್ದಕ್ಕೆ ಪ್ರತಿಫಲ ಪಡೆದು ಗುತ್ತಿನ ಒಕ್ಕಲಾಗಿ ಸುಖವಾಗಿ ಜೀವನ ಮಾಡಲು ಈಗ ಅನುಕೂಲವಿದೆ; ಈ ಸಂಧಾನವನ್ನು ಮಾಡಿಕೊಡುವ ಭಾರ ತಾನೇ ವಹಿಸಿದ್ದೇನೆಂದೂ ಮೊದಲಾಗಿ ಭಾಗವತರು ಎಲ್ಲವನ್ನೂ ಬೋಧಿಸಿದರು. ಸುಬ್ಬನು ಒಪ್ಪಿದನು.

ಭಾಗವತರು ಇತ್ತ ಬಂದಾಗಲೇ ಗುತ್ತಿನ ಶೆಟ್ರು ಕಾರ್ಯಾಂತರದಿಂದ, ಪಟೇಲರ ಮುಖಾಂತರವಾಗಿ, ಹಿಂದೆ ನೊಂದ ಆ ಕೂಲಿಯವರನ್ನು ಕರೆಯಿಸಿ, ತಾನೇ ವೀಳೆಯದೆಲೆ ಅವರಿಗೆ ಹಂಚಿದ ಮರ್ಯಾದೆಯಿಂದಲೇ ಪಟೇಲರ ಸಮ್ಮುಖ ಹೊಸ ವಾಜ್ಮೂಲ ಬರೆಯಿಸಿ ಹಿಂದೆ ಮಾಡಿದ ಅವರ ಅರ್ಜಿಯನ್ನು ರದ್ದುಪಡಿಸಿಕೊಂಡರು. ಒಂದು ರಿಕಾರ್ಡು ಈ ರೀತಿಯಾಗಿ ಮಾಯವಾಯಿತು.

ಭಾಗವತರೇ ಪಾರ್ಥನು ಮೂರನೆಯವನೆಂದು ಅಂದು ಹೇಳಿದ ಮಾತಿಗೆ ಯಾವ ತರದ ರುಜುವಾತೂ ಈಗ ಕೂಲಿಯವರು ಹೇಳಿದುದ

ರಲ್ಲಿ ಇದ್ದಿಲ್ಲ; "ದೈವಸಾಕ್ಷಿಯಾಗಿಯೂ ನಾವಿಬ್ಬರೇ," ಎಂದು ಅವರ ಹೇಳಿಕೆ. ಹೀಗಾದರೆ ಭಾಗವತರು ಬಭ್ರುವಾಹನನ ಅರ್ಥ ಹೇಳಿ ತಾನು ನೊಂದುಕೊಂಡುದಕ್ಕೆ ಹೀಗೆಲ್ಲ ವಾದಿಸಿದ್ದರು ಎಂದೂ, ಆದರೆ ಈಗ ಅವರ ಸಂಧಾನಕಾರ್ಯಕ್ಕೆ ಬೇಕಾದುದನ್ನೆಲ್ಲ ಒದಗಿಸಿಕೊಟ್ಟ ಬಳಿಕ ಇನ್ನೂ ಸಂಧಾನ ನಡೆಯದೆ ಹೋದರೆ ಎಲ್ಲ ವ್ಯಾಜ್ಯವನ್ನೂ ಭಾಗವತರ ಮೇಲೆಯೇ ತಿರುಗಿಸಬಹುದು ಎಂದೂ ಶೆಟ್ರೂ, ಅಳಿಯನೂ ಪಟೇಲರ ಪರಾಮರ್ಶೆಯಿಂದ ನಿಶ್ಚಯಮಾಡಿದರು.

ಸಂಜೆಗೆ ಭಾಗವತರ ಅಂಗಡಿಯಲ್ಲಿ ಇವರೊಳಗೂ, ಸುಬ್ಬನನ್ನು ಸಮಾಧಾನಪಡಿಸಿ ಹಿಂತಿರುಗಿದ ಭಾಗವತರೊಳಗೂ ಸಂಭಾಷಣೆ ನಡೆಯಿತು. ಸುಬ್ಬನು ಹಿಂತಿರುಗಿ ಬರುತ್ತಲೇ ಎಲ್ಲವೂ ಸರಿಯಾಗುವುದೆಂಬ ನಂಬಿಗೆಯಿಂದ ಸರ್ವರೂ ಸಂತೋಷಗೊಂಡರು.

ಕಾಲಕ್ರಮದಲ್ಲಿ ಸುಬ್ಬನು ಹಿಂತಿರುಗಿದನು. ಅಂದೇ ರಾತ್ರಿ ಗುತ್ತಿನಲ್ಲಿ ಮಹಾಸಂಭ್ರಮದಿಂದ ಗ್ರಂಥವಾಚನ ನಡೆಯಿತು. ಭಾಗವತರೇ ಊರಿನ ಸಮಸ್ತರ ಎದುರಿನಲ್ಲಿ 'ಭೀಷ್ಮಪರ್ವ'ವನ್ನು ಹಾಡಿ, ಗ್ರಾಮಸ್ಥರನ್ನು ಅದ್ಭುತ ಆನಂದಸಾಗರದಲ್ಲಿ ತೇಲಿಸಿಬಿಟ್ಟರು! ಭಾಗವತರಿಗೆ ಅಂದು ಯಾವ ಉದ್ದೇಶವಿದ್ದಿತೋ, ಅದನ್ನು ಅವರು ಅರ್ಥ ಹೇಳುವಲ್ಲಿ ಸೂಚಿಸದೆ ಬಿಟ್ಟಿದ್ದಿಲ್ಲ.

"ಕುಟುಂಬದೊಳಗೇ ಉಂಟಾದ ಮಹಾಕಲಹ; ಪಾಂಡವರು ಅಜ್ಜನನ್ನೇ ಸೋಲಿಸಿದ ಬಗೆ; ಭೀಷ್ಮನು ಶರತಲ್ಪದಲ್ಲಿದ್ದಾಗ ಅವರಲ್ಲಿ ಉಂಟಾದ ಮನೋವ್ಯಥೆ.—ಇದೇ ರೀತಿ ಊರಲ್ಲಿ ಧನಿ ಒಕ್ಕಲುಗಳೊಳಗೂ ಆಗುವ ಕಲಹಗಳೂ, ಗುರುಶಿಷ್ಯರೊಳಗೆ ನಡೆವ ಮನಃಕ್ಲೇಶಗಳೂ, ಕೊನೆಗೆ ಅವರಲ್ಲಿ ಉಂಟಾಗುವ ಮನೋವ್ಯಥೆ, ಪಶ್ಚಾತ್ತಾಪ,—ಇವುಗಳೆಲ್ಲವೂ ದ್ವಾಪರಯುಗದಿಂದಲೂ ಇದುವರೆಗೂ ನಡೆದುಬರುತ್ತಲೇ ಇವೆ. ಇವುಗಳಿಗೆ ಬೇರೆ ಸಮಾಧಾನವಿಲ್ಲ. ಭೀಷ್ಮನು ಹೇಳುತ್ತಾನೆ:—

'ಯಂತ್ರಿ ಪಿಡಿದಡೆ ಕಾದಿ ಬೀಳ್ವುವು ।
ಯಂತ್ರಮಯ ರೂಹುಗಳು; ಪಗೆಯಾ ।
ಯಂತ್ರಿಗೋ ರೂಹುಗಳಿಗೋ ನೀ ಪೇಳು ನಿಶ್ಚಯವ; ॥

ಯಂತ್ರಿ ಕೃಷ್ಣನು, ನಾವು ನೀವೀ ।
ತಂತ್ರ, ಸಕಲ ಚರಾಚರಂಗಳು, ।
ಯಂತ್ರಮಯ ರೂಹಿನೊಳು ಕಾರಣವಿಲ್ಲ ಕೇಳೆಂದ ॥'

"ವೇಷ ಹಾಕಿದ ಆಟದ ಗೊಂಬೆಗಳನ್ನು ಆಟಗಾರನು ಕುಣಿಸುತ್ತಾನೆ, ಅವನು ಕುಣಿಸುವಂತೆ ಗೊಂಬೆಗಳು ಭೀಷ್ಮ, ಅರ್ಜುನ, ಬಭ್ರುವಾಹನ, ಧನಿ, ಒಕ್ಕಲು ಇತ್ಯಾದಿಯಾಗಿ ಕಾದಾಡುತ್ತವೆ. ಒಂದು ಗೆಲುವುದು, ಮತ್ತೊಂದು ಸೋಲುವುದು. ಹಾಗೆಂದು ಆಟ ಮುಗಿಯುತ್ತಲೇ ಅವನ್ನೆಲ್ಲ ಒಂದು ಕಡೆ ತೂಗಹಾಕುತ್ತಾರೆ. ಅವುಗಳಲ್ಲಿ ಏನು ಹಗೆ ಇದೆ? ಆಟವಾಡಿಸುವವನಲ್ಲಿ (ಭಾಗವತನಲ್ಲಿ) ಏನು ಹಗೆಯಿದೆ? ನಾವೆಲ್ಲರೂ ತಂತ್ರಗಳು, ಗೊಂಬೆಗಳು. ಭಾಗವತನು (ಭಗವಂತನು) ಕುಣಿಸಿದಂತೆ ಕುಣಿಯುತ್ತೇವೆ. ಹಗೆಗಾಗಲಿ, ಯಾವುದಕ್ಕೇ ಆಗಲಿ, ನಮ್ಮಲ್ಲಿ ತಾನೇ ಯಾವ ಕಾರಣವೂ ಇಲ್ಲ. ಆಟವೆಲ್ಲಾ ಭಗವಂತನದು,' ಎಂದು ಭೀಷ್ಮಾಚಾರ್ಯರು ಪಾಂಡವರಿಗೆ ಸಮಾಧಾನ ಹೇಳುವವರಾದರು," ಎಂದು ಭಾಗವತರು ಭಾರತವಾಚನ ಮುಗಿಸಿ ಗ್ರಂಥಕ್ಕೆ ಆರತಿಯೆತ್ತಿದರು. ಸರ್ವರಿಗೂ ವೀಳೆಯ, ಪ್ರಸಾದ (ಪಂಚಕಜ್ಜಾಯ) ಹಂಚಲಾಯಿತು.

ಭಗವಂತನು ಗೊಂಬೆಗಳನ್ನು ಕುಣಿಸಿ ಕಾದಾಡುವಂತೆ ಮಾಡುವ ರೀತಿ ಕೇಳುತ್ತಲೇ ಶೆಟ್ರ ಅಳಿಯನಲ್ಲಿ (ಎಂಟನೇ ದರ್ಜೆ ಕಲಿತವ), ಭಾಗವತರೂ ಹೀಗೆಯೋ ಶೆಟ್ರನ್ನೂ ಸುಬ್ಬನನ್ನೂ ಕುಣಿಸಿದರೋ, ಎಂಬ ಸಂದೇಹವು ಮೂಡಿತು. ಆದರೂ ಪಟೇಲರೂ ಯಜಮಾನರೂ ಶ್ರದ್ಧೆಯಿಂದ ಮುಗ್ಧರಾಗಿದ್ದುದನ್ನು ಕಂಡು ಅಳಿಯ ಸುಮ್ಮನಾಗಬೇಕಾಯಿತು. ಅದಲ್ಲದೆ, ಈ ಸಾಮ್ಯವನ್ನು ಮುಂದೊತ್ತಿದರೆ, ಅಳಿಯನ ಹೆಸರೇ ಕೃಷ್ಣನೆಂದಿದ್ದ ಕಾರಣ, 'ಯಂತ್ರಿ ಕೃಷ್ಣನು' ತಾನೇ ಇಷ್ಟೆಲ್ಲ ಆಟ ಹೂಡಿ, ಅಂದು ಒಕ್ಕಲುಗಳನ್ನೂ, ಮುಂದೆ ಸುಬ್ಬನನ್ನೂ, ನಾಳೆ ಭಾಗವತರನ್ನೂ ಎತ್ತಿಕಟ್ಟುವ ಪರಿಶ್ರಮಕ್ಕೆ ಒಳಗಿಂದೊಳಗೇ ಯಜಮಾನರ ವಿರುದ್ಧವಾಗಿ ವರ್ತಿಸುವನೆಂಬ ಆರೋಪವೂ ನೆರೆದ ಸಭೆಯಲ್ಲಿ ಉಂಟಾಗಬಹುದೆಂದು ಕಲಿತ 'ಅಣ್ಣಾ'ನ ತಲೆಗೆ ತಿಳಿಯಿತು. ಹೀಗೆ ಎಲ್ಲವೂ ತಣ್ಣಗಾಯಿತು.
"ಭದ್ರಂ, ಶುಭಂ, ಮಂಗಲಂ!"

ಈಗ ಸುಬ್ಬನ ಹೊಲ ಗುತ್ತಿನ ಬಾಗಿಲ ಗದ್ದೆಯೇ ಆಗಿದೆ. ಭಾಗವತರು ಗ್ರಂಥವಾಚನ ಮಾಡುತ್ತಾರೆ. ಸುಬ್ಬನು ಅರ್ಥ ಹೇಳುತ್ತಿದ್ದಾನೆ. ಅಂದು ಹಾಳು ಅರ್ಥಾರ್ಣೆಗಾಗಿ ದೂರು ಕೊಟ್ಟವರು ಗುತ್ತಿನ ಶಾಶ್ವತ ಉಗ್ರಾಣಿಗಳಾಗಿದ್ದಾರೆ. ಪಟೇಲಚಾವಡಿಗೂ, ಗುತ್ತಿನ ಚಾವಡಿಗೂ, ಭಾಗವತರ ಅಂಗಡಿಯು ಚಾವಡಿಗೂ ಭಾರೀ ನಂಟು. ಊರು ಹೇಗಿದೆ, ಕಾಲಸ್ಥಿತಿ ಹೇಗಿದೆ ಎಂದರೆ ಭಾಗವತರು, "ಭಗವಂತನ ಮಹಿಮೆಯಿಂದ ಎಲ್ಲವೂ ಚೆನ್ನಾಗಿದೆ," ಎನ್ನುತ್ತಾರೆ. ನಾಜ್ಯ ಶೆಟ್ಟಿಗೆ ಮಾತ್ರ ಭಾರತವೇ ಚಿಂತಾಮಣಿಯಾಗಿದೆ. ಅಳಿಯ ಕೃಷ್ಣ ಶೆಟ್ಟಿಗೆ ಇನ್ನೂ ಮರೆತುದಿಲ್ಲ,—ಅಂದಿನ ಭಾರತ ಪ್ರಯೋಗ.

# ಬೊಗ್ಗ ಮಹಾಶಯನು

ನಮ್ಮೂರಿಗೆ ಮುನ್ಸಿಫ್ ಕೋರ್ಟು ಮರಳಿ ಬಂದಿತು!

ಎಂದರೆ,—ನಮ್ಮೂರಲ್ಲಿ ಇದ್ದ ಮುನ್ಸಿಫ್ ಕೋರ್ಟನ್ನು ಇಪ್ಪತ್ತು ವರ್ಷಗಳ ಹಿಂದೆ ಹದಿನೆಂಟು ಮೈಲು ದೂರದ ಮತ್ತೊಂದೂರಿಗೆ ಒಯ್ದಿದ್ದರು. ಅಂದಿನಿಂದ ಇಂದಿನವರೆಗೂ, ಪೇಟೆಯಲ್ಲಿ ವ್ಯಾಪಾರವೂ, ಜನರಲ್ಲಿ ಉತ್ಸಾಹವೂ, ಮುಖದಲ್ಲಿ ಗಾಂಭೀರ್ಯವೂ ಕುಂದುತ್ತ ಬಂದು, ಅಂದಿನಿಂದಾದ ಎರಡು ಖಾನೆಸುಮಾರಿಗಳಲ್ಲಿ ಜನಸಂಖ್ಯೆ ಕಡಿಮೆಯಾಗಿಯೇ ಏರಿದಂತೆ ತೋರಿಬಂದಿದ್ದಿತು. ಮುನ್ಸಿಫ್ ಕೋರ್ಟು ವರ್ಗವಾದ ಕೂಡಲೇ, ಹಲವು ಮನೆಗಳೂ ಖಾಲಿಯಾದುವು; ವಕೀಲರು ಆ ಮತ್ತೊಂದೂರ ವಕೀಲರಿಗೆ ಏಜಂಟರೇ ಮಾತ್ರವಾದರು; ವಕೀಲಗುಮಾಸ್ತರೂ ಬಂಡಸಾಲೆಗಳಲ್ಲಿ ಗುಮಾಸ್ತರಾದರು; ಕಕ್ಷಿಗಾರರಿಗೆ ಕೋರ್ಟುಸಮಯಕ್ಕೆ ಸರಿಯಾಗಿ ಅನ್ನ ಹಾಕುತಿದ್ದ, ಮತ್ತು ಉಳಿದ ಸಮಯದಲ್ಲೆಲ್ಲ ಕಕ್ಷಿಗಾರರಿಗೆ ನಿರಾತಂಕವಾದ ರಂಗಸ್ಥಳವಾಗಿದ್ದ, ಕೆಲವು ಹೊಟೇಲುಗಳು ಮಾಯವಾದುವು; ಅತ್ತಿತ್ತ ಓಡಾಡುವ ಬಿಟ್ಟೀ ಆಳುಗಳು ಊರು ಬಿಟ್ಟರು; ದೇವಸ್ಥಾನಕ್ಕೆ ಲಭಿಸುತಿದ್ದ ಕಾಣಿಕೆ, ಪೂಜೋತ್ಸವಕಾಲಗಳಲ್ಲಿ ನೆರೆಯುತಿದ್ದ ಜನಸಮೂಹ,—ಎರಡೂ ಕುಂದಿದುದರಿಂದ ಊರ ಸಿರಿಯೇ ಮ್ಲಾನವಾಯಿತು. ಇಪ್ಪತ್ತು ವರ್ಷಗಳವರೆಗೆ ಇಂತಹದೊಂದು ಕ್ಷಯರೋಗದಿಂದ ನರಳುತಿದ್ದ ನಮ್ಮೂರಿಗೆ, ಆಕಸ್ಮಿಕವಾಗಿ ಗುಣ ತೋರುವಂತಹ ಸಂಘಟನೆಯೊಂದು ನಡೆಯಿತು. ಆ ಸಂಘಟನೆಯಿಂದಾಗಿ ಮುನ್ಸಿಫ್ ಕೋರ್ಟು ನಮ್ಮೂರಿಗೆ ಮರಳಿ ಬಂತು.

ಅವೇ ಇಪ್ಪತ್ತು ವರ್ಷಗಳಲ್ಲಿ ನಮ್ಮೂರಿನವರಿಗೂ ಮತ್ತೊಂದೂರಿನವರಿಗೂ ಬಹಳ ಸ್ಪರ್ಧೆಸೆಣಸಾಟಗಳು, ಚಿಕ್ಕದೊಡ್ಡ ಪಿತೂರಿಗಳು. ವರ್ಷಕ್ಕೊಮ್ಮೆ ಊರೆಲ್ಲ ಸುಟ್ಟುಹೋಗುವ ಅಭ್ಯಾಸವು ನಮ್ಮೂರಿಗಿದ್ದಿತು; ಇದರಿಂದಾಗಿ ಕೋರ್ಟು ಮತ್ತೊಂದೂರಿಗೆ ವರ್ಗವಾದುದೆಂದು ಅಲ್ಲಿನವರು ಹೇಳುತ್ತ, ನಮ್ಮೂರನ್ನು 'ಸುಟ್ಟೂರು' ಎಂದು ನಾಮಕರಣ ಮಾಡಿದ್ದರು. ಮತ್ತೊಂದೂರಲ್ಲಿ ದೇವಳದ ಅರ್ಚಕರಿಗೂ ಮೊಕ್ತೇಸರರಿಗೂ ಪ್ರತಿ ವರ್ಷವೂ ಕಾಳಗವಿದ್ದುದರಿಂದ ಊರವರ ವಾಗ್ವಾದದಿಂದ ದೇವರನ್ನು ಸಂರಕ್ಷಿಸುವುದಕ್ಕಾಗಿ ತಮ್ಮ ಕೋರ್ಟು ಅತ್ತ ವರ್ಗವಾಗಿದ್ದಿತೆಂದು ನಮ್ಮೂರವರು ಹೇಳುತ್ತ, ಇತ್ತಂಡದವರು ಹಣವನ್ನು ದೇವಸ್ಥಾನದ ಭಂಡಾರದಿಂದ ಖರ್ಚು ಮಾಡುತಿದ್ದ ಕಾರಣ ದೇವರು ದಿವಾಳಿಯಾಗುತ್ತ ಬರುತ್ತಿರಲು ಮತ್ತೊಂದೂರಿಗೆ 'ಕೆಟ್ಟೂರು' ಎಂದು ನಮ್ಮೂರವರು ಹೆಸರಿಟ್ಟರು. ಸುಟ್ಟೂರು, ಕೆಟ್ಟೂರು,—ಇವೆರಡು ಊರುಗಳಲ್ಲಿನ ಮನೆತನಗಳು ಎಷ್ಟೋ ನೆಂಟಸ್ತಿಕೆಯುಳ್ಳವಾಗಿದ್ದುವು; ಈಗ ಸೊಸೆ ತವರೂರಿಗೆ ಹೋಗುವುದಕ್ಕಿಲ್ಲ, ಅಳಿಯನಿಗೆ ಮಾವನ ಮನೆಯ ಉಪಚಾರಗಳಿಲ್ಲ ಎಂಬಂತಾಯಿತು. ಮತ್ತೊಂದೂರಿನ ಅಕ್ಕಿ ನಮ್ಮೂರಲ್ಲೇ ಬಹಳವಾಗಿ ಮಾರಾಟವಾಗುತಿತ್ತು; ಈಗ ನಮ್ಮೂರವರು ಅಲ್ಲಿನ ಅಕ್ಕಿಯನ್ನು ಬಹಳ ಉಷ್ಣವೆಂದು, ಅಂದು ನಾಲ್ವತ್ತೆಂಟು ಸೇರಿನ ಮುಡಿಯಾಗಿದ್ದರೂ ಅದನ್ನು ಕನಿಷ್ಠ ಬೆಲೆಗೆ ಕೇಳಿ ಅದು ಮಾರಾಟವಾಗದಂತೆ ನೋಡಿಕೊಂಡರು. ನಮ್ಮೂರಿನ ಮುಖ್ಯ ಕೈಗಾರಿಕೆಯಾದ ಹಪ್ಪಳಸಾಟುಗಳನ್ನು (ಅವನ್ನು ತಯಾರಿಸುವಾಗ ಅವುಗಳಲ್ಲಿ ಬೆವರು, ಉಗುಳು, ಇತ್ಯಾದಿಗಳು ಬೆರೆತರೂ ತಿಳಿಯದಷ್ಟು ಅಜಾಗರೂಕ ಮೂರ್ಖರು ನಮ್ಮೂರವರೆಂದು) ಮತ್ತೊಂದೂರಿನವರು ಬಹಿಷ್ಕರಿಸಿದರು. ಇಂತಹ ಹಲವು ಪೀಕಲಾಟಗಳು ಎರಡೂ ಊರುಗಳಲ್ಲಿದ್ದುವು. ಆದರೂ ಅದೊಂದು ವಿಚಿತ್ರ ಘಟನೆಯಿಂದ ನಮ್ಮೂರಿಗೆ ಮುನ್ಸಿಫ್ ಕೋರ್ಟು ಮರಳಿ ಬಂದಿತು.

ನಮ್ಮೂರ ದೇವಸ್ಥಾನದ ಸುತ್ತಲಿನ ಜೋಯಿಸರೊಬ್ಬರ ಮನೆಯೊಳಗೆ ಹತ್ತಿರದ ಸೌತೆ ಬೆಳೆವ ಹಿತ್ತಲಿನಿಂದ ಒಂದು ರಾತ್ರಿ ನರಿಗಳು ನುಗ್ಗಿರಲು,—ಅವು ಮತ್ತೊಂದೂರಿನ ನರಿಗಳೆಂದಾಯಿತು. ಮತ್ತೊಂದೂರಿ

ನಲ್ಲಿ ಕೆಲವು ದಿನಗಳಿಗೆ ಹುಚ್ಚುನಾಯಿಯೊಂದು ಕಚ್ಚಲು, ಆ ನಾಯಿ ನಮ್ಮೂರದೆಂದು ಅಲ್ಲಿನವರ ದೂರು. ಮೇಷಮಾಸದಲ್ಲಿ ನಮ್ಮೂರಲ್ಲಿ ಆಣೆಕಲ್ಲುಮಳೆ ಒಂದುವರ್ಷ ಸುರಿಯಲು, ಮತ್ತೊಂದೂರಿನವರು ಮಾಡಿದ ಮಾಟದ ಫಲವಿದು ಎಂದು ಇಲ್ಲಿನವರ ಆಕ್ಷೇಪ; ಪ್ರತಿವರ್ಷ ಊರೆಲ್ಲ ಸುಡುವವರು ಸ್ವಲ್ಪ ನೀರನ್ನು ಕೊಡಿಸಿಡಲೆಂದು ತಾವು ಈ ಆಣೆಕಲ್ಲು ಮಳೆ ಕಳುಹಿದ್ದುದು ನಿಜವೆಂದು ಮತ್ತೊಂದೂರವರ ಸಮಾಧಾನ. ಇವೆರಡು ಊರುಗಳ ಎಲ್ಲೆಯಲ್ಲಿ ಹುಲಿಯ ಹಾವಳಿ, ಸರ್ಪಗಳ ಕಾಟ, ಸನ್ನಿಪಾತಪಿಡುಗುಗಳ ವ್ಯಾಪನ ಇದ್ದಲ್ಲಿ ಒಂದೂರಿನವರು ಮತ್ತೊಬ್ಬರನ್ನು ಅವರ ಮೂಲಕಾರಣರೆಂದು ಇಪ್ಪತ್ತು ವರ್ಷವೂ ಶಪಿಸದೇ ಇರಲಿಲ್ಲ. ಆದರೂ, ನಮ್ಮೂರಿಗೆ ಕೊನೆಗೆ ಹೇಗೋ ಮುನ್ಸಿಫ್ ಕೋರ್ಟು ಮರಳಿ ಬಂದಿತು.

ಅದು ಹೇಗೆ ಬಂದಿತು?

ಮತ್ತೊಂದೂರಿನ ಕೋರ್ಟ್ ಇನ್ಸ್‌ಪೆಕ್ಷನಿಗಾಗಿ ಜಿಲ್ಲಾ ಜಡ್ಜರವರು ಬಂದಿದ್ದು, ವಿಮರ್ಶೆ ಮುಗಿಸಿ ಹೊರಡುವಾಗ, ಅವರ ಬಟ್ಲರನು,— "ಖಾವಂದರೇ! ಹೇಗೂ ಮಂಗ್ಳೂರಿಗೆ ಹಿಂತಿರುಗಬೇಕು; ಅತಿ ಪುರಾತನ ದೇವಸ್ಥಾನಗಳೂ ವಿವಿಧ ಸೃಷ್ಟಿವೈಚಿತ್ರ್ಯಗಳೂ ಇದ್ದು, ಇಂಗ್ಲೆಂಡಿನ ಒಂದು ತುಂಡೇ ಎಂಬಂತೆ, ಹಿಂದಣ ದೊರೆಗಳಲ್ಲಿ ಹಲವರು ಕಂಡು ಕೊಂಡಾಡಿದ ನಮ್ಮೂರ ಮಾರ್ಗವಾಗಿ ಹಿಂದೆರಳೋಣವೇ? ದೂರವೂ ಒಂದೇ, ಸಮಯವೂ ಒಂದೇ; ಸ್ವಲ್ಪ ಆಡ್ಡಾಡಿದಹಾಗಾಯಿತು. ಅಲ್ಲಿಯೇನೂ ಕೋರ್ಟು ಇಲ್ಲ. ಇಷ್ಟು ದಿನ ಕೋರ್ಟಿನಿಂದ ಕೋರ್ಟಿಗೆ ಸಂದರ್ಶನ ಮಾಡಿ ಬಳಲಿರುವುದಕ್ಕೆ ಪ್ರತ್ಯಕ್ಷ ಇಂಗ್ಲೆಂಡನ್ನು ನೋಡಿದಂತಹ ಸಂತೋಷಸಂತೃಪ್ತಿಗಳು ಖಾವಂದರಿಗಾಗುವುವು," ಎಂದು ಹೇಳಿಕೊಂಡನು. ದೊರೆಗಳೂ ಕುತೂಹಲಚಿತ್ತರಾಗಿ ಆಗಬಹುದೆಂದು, ಶನಿವಾರ ಸಂಜೆ ಅಲ್ಲಿಂದ ಹೊರಟು ರವಿವಾರ ಬೆಳಿಗ್ಗೆ ನಮ್ಮೂರಿಗೆ ದಯಮಾಡಿಸಿದರು. ದೊರೆಗಳ ಬಂಗಲೆಯಿರುವಲ್ಲಿ ನಮ್ಮೂರ ದೇವಸ್ಥಾನದ ಕಾರ್ತಿಕ ಹುಣ್ಣಿಮೆಯ ಮಹೋತ್ಸವಗಳ ಸಂಭ್ರಮವೆಲ್ಲ ನಡೆಯುತ್ತಿದ್ದಿತು. ಬಟ್ಲರನು

ನಮ್ಮೂರವನೇ. ಅವನು ದೇವಸ್ಥಾನದ ಮೊಕ್ತೇಸರರಿಗೆ ದೊರೆಗಳು ಜಿಲ್ಲಾ ಜಡ್ಜರೆಂಬುದನ್ನು ತಿಳಿಸಿ, ಅವರನ್ನು ಹೇಗೂ ಮಾಡಿ ನಮ್ಮೂರವರು ಒಲಿಸಿಕೊಳ್ಳಬೇಕೆಂದನು. ಇಪ್ಪತ್ತು ವರ್ಷದಿಂದ ಕಾಯುತಿದ್ದವರಿಗೆ 'ಅತ್ಯಪೂರ್ವ ಸಂದರ್ಭ'ವೊಂದು ಈಗ ದೊರೆಯಿತು. ಪೂಜಾವಿಗ್ರಹಕ್ಕೆ ಸಲ್ಲತಕ್ಕ ವೈಭವಾಡಂಬರಗಳಿಂದ ದೊರೆಗಳನ್ನು ಬಹುಮಾನಿಸಿ ಎದುರುಗೊಂಡು, 'ವನಭೋಜನ'ದಲ್ಲಿ ದೇವರಿಗೆ ಅಭಿಷೇಕವಾಗುವಲ್ಲಿಗೆ ಕರೆದೊಯ್ದು, ಶತಮಾನಗಳಿಂದಲೂ ತೊಡಿಸಿಲ್ಲದಷ್ಟು ಆಭರಣಗಳನ್ನು ಪೂಜಾವಿಗ್ರಹಕ್ಕೆ ತೊಡಿಸಿ, ದರ್ಶನದ ಪಾತ್ರಿಯಿಂದ, "ದೊರೆಗಳು ಖಂಡಿತವಾಗಿಯೂ ಸದ್ಯದಲ್ಲಿಯೇ ಹಾಯ್ ಕೋರ್ಟ್ ಜಡ್ಜರಾಗುವರು" ಎಂಬ ಮಾತನ್ನು ನುಡಿಸಿ, ಪ್ರಸಾದಗಳನ್ನು ದೊರೆಗಳಿಗೊಪ್ಪಿಸಿ, ಊರ ಜನರ ಭಕ್ತಿಶಕ್ತಿಗಳೆರಡನ್ನೂ ದೊರೆಗಳಿಗೆ ತಿಳಿದುಬರುವಂತೆ ಸಲ್ಲಿಸಿದರು. ಬಟ್ಲರನಂತೂ ಅಂದು ಜಡ್ಜ್‌ದೇವತೆಯ ಉಪಾಸನೆಯನ್ನು ಊರವರು ಒಪ್ಪಿಸಿದ ಷೋಡಶೋಪಚಾರಗಳ ಮೂಲಕ ನೆರವೇರಿಸಿದನು. ಜಡ್ಜರು ಪ್ರಸನ್ನವದನರಾಗಿ, "ಇಲ್ಲಿಂದ ಕೋರ್ಟನ್ನು ಮತ್ತೊಂದೂರಿನ ಶ್ಮಶಾನಕ್ಕೆ ಒಯ್ದುದ್ದು ಸರಿಯಾಗಲಿಲ್ಲ; ಇಲ್ಲಿದ್ದರೆ ಊರ ಹೊರಗಾಗಿ, ಯಾವ ಗಲಭೆಯೂ ಇಲ್ಲದೆ, ಎತ್ತರದ ಬೆಟ್ಟಗಳು, ದೂರದ ಕಾಡುಗಳು, ಅಲ್ಲಲ್ಲಿ ಕಾಣುವ ಕೆರೆಗಳು, ಇತಿಹಾಸಪ್ರಸಿದ್ಧ ಕಟ್ಟಡಗಳು, ಮೊದಲಾದುವುಗಳ ನಿರ್ಬಾಧಕವಾದ ವಾತಾವರಣದಲ್ಲಿ ಆ ಸಂಪನ್ನ ಜನತೆಗೆ ನ್ಯಾಯವು ಸುಲಭವಾಗಿ ದೊರೆಯುವಂತಾದೀತು," ಎಂದು ಮೇಲಣ ಆಫೀಸರರಿಗೆ ವರದಿ ಬರೆಯುತ್ತ, ಮತ್ತೊಂದೂರು ಕೋರ್ಟಿನ ವಿಮರ್ಶೆಯನ್ನು ಈ ಶಿಫಾರಸಿಗೆ ಅನುಕೂಲವಾಗುವಂತೆ ಮಾಡಿದರು. ಜಡ್ಜರು ಹೀಗೆ ಬರೆದುದರಲ್ಲಿ ನಿಜವಾಗಿಯೂ ಪಕ್ಷಪಾತವಿರಲಿಲ್ಲ. ಮದ್ರಾಸಿನ ಹಾಯ್ ಕೋರ್ಟು ಇರುವ ಸ್ಥಳವನ್ನೂ, ನಮ್ಮೂರಲ್ಲಿ ಮುನ್ಸಿಫ್ ಕೋರ್ಟು ಇದ್ದ ಸ್ಥಳವನ್ನೂ ಯಾರೂ ಹೋಲಿಸಿಲ್ಲ. ಹಾಗೆ ಹೋಲಿಸಿದ್ದರೆ, ವರ್ಷದಲ್ಲಿ ನಾಲ್ಕು ತಿಂಗಳುಗಳಾದರೂ ಹಾಯ್ ಕೋರ್ಟನ್ನು ನಮ್ಮೂರಿಗೆ ವರ್ಗಾಯಿಸುತಿದ್ದರೆಂದು ಆಗತಾನೇ ವೃತ್ತಿಯಿಲ್ಲದೆ ಕಳವಳಿಸುತಿದ್ದ ನಮ್ಮೂರ ವಕೀಲರೊಬ್ಬರೇ ಮುಂದೆ ಬಹಿರಂಗವಾಗಿ ಆಡಿದ್ದುಂಟು.

ಮರುವರ್ಷವೇ ಇವರೇ ಜಡ್ಜರು ಮದ್ರಾಸು ಹಾಯ್ ಕೋರ್ಟಿನಲ್ಲಿ ಎಕ್ಟಿಂಗ್ ಜಡ್ಜರಾಗಿ ನೇಮಕಹೊಂದುವಂತಾಗಲು, ಆಗ ದರ್ಶನ ಪಾತ್ರಿಯು ಹಿಂದಣ ಮಾತನ್ನು ಅವನೇ ಬಟ್ಲರನು ಖಾವಂದರ ನೆನಪಿಗೆ ತಂದುಕೊಟ್ಟನು. ದೊರೆಗಳು ಹಾಯ್ ಕೋರ್ಟಿಗೆ ಸೇರಿದ ಒಂದೇ ತಿಂಗಳೊಳಗೆ ನಮ್ಮೂರಿಗೆ ಮುನ್ಸಿಫ್ ಕೋರ್ಟು ಮರಳಿ ಬಂದಿತು.

ಮೂರ್ಛಿತವಾದ ದೇಹದಲ್ಲಿ ಪುನಃ ಚೇತನವು ಸಂಚಾರ ಹೊಂದಿದಂತೆ ನಮ್ಮೂರು ಲವಲವಿಕೆ ತವಕದಿಂದ, ಸುಪ್ರಸನ್ನತೆಯಿಂದ, ಮೆರೆಯಿತು. ಹೋದ ಶ್ವಾಸವೆಲ್ಲ ಮರಳಿ ತುಂಬತೊಡಗಿತು. ವಕೀಲರು ಹೊಸ ಅಂಗಿಗಳನ್ನು ಹೊಲಿಸಿದರು. ಗುಮಾಸ್ತರು ಅಂಗಡಿಚಾವಡಿಗಳಿಂದ ವಕೀಲಚಾವಡಿಗಳಿಗೆ ಬಂದರು. ಮತ್ತೊಂದೂರಿನಿಂದ ಎಷ್ಟೋ ನೌಕರರು ಇತ್ತ ಬಂದು ಇಲ್ಲಿನ ಬಿಡಾರಗಳಾವುವೂ ಮುಚ್ಚಿರದಂತೆ ನೋಡಿದರು. ಪ್ರತಿ ಶನಿವಾರವೂ ಸಂತೆಗೆ ಪ್ರಾರಂಭವಾಯಿತು. ದೇವಸ್ಥಾನದ ನಗಾರಿಯ ಧ್ವನಿಯು ನಾಲ್ಕುಮಡಿ ಹೆಚ್ಚಿತು. ದರ್ಶನಪಾತ್ರಿಯ ಗೌರವವು ಹೆಚ್ಚಿ, ಅವನ ಬಾಯಿಯಿಂದ ಕನ್ನಡ ಮಾತು ಹೊರಡತೊಡಗಿ, ಮನೆಗೊಬ್ಬರಂತೆ ತಿರುಪತಿಗೆ ಯಾತ್ರಿಕರಾಗಿ ಹೊರಡುವಂತಾಯಿತು. ನಮ್ಮೂರಲ್ಲಿ ಮೊದಲೇ ಎರಡು ವಿದ್ಯಾಶಾಲೆಗಳು, ರಿಜಿಸ್ಟ್ರಿ ಆಫೀಸು, ಲೋಕಲ್ ಫಂಡಿನ ಆಫೀಸು, ಫೊರೆಸ್ಟ್ ರೇಂಜರರ ಆಫೀಸು, ಸಬ್-ಮೆಜಿಸ್ಟ್ರೇಟರ ಕಚೇರಿ, ಲೋಕಲ್ ಫಂಡಿನ ಆಸ್ಪತ್ರೆ, ಇಷ್ಟೆಲ್ಲ ಇದ್ದಿತು. ಈಗ ಮುನ್ಸಿಫ್ ಕೋರ್ಟು ಮರಳಿ ಬಂದಿತು. ಇವೆಲ್ಲ ಸೇರಿ ನಮ್ಮೂರು ಬಹಳ ಹೆಮ್ಮೆಯ ಊರೆಂದಾಯಿತು! ಮತ್ತೊಂದೂರಿನ ಪ್ರಸ್ತಾವವನ್ನೇ ಅಂತರಂಗದಲ್ಲಾಗಲಿ, ಬಹಿರಂಗವಾಗಿಯಾಗಲಿ, ಯಾರೂ ಎತ್ತುತಿರಲಿಲ್ಲ.

ಆವೂರಿಗೂ ನಮ್ಮೂರಿಗೂ ಮೂರು ಗಾವುದ ಹಾದಿ. ಆ ಕಾಲದ ರಸ್ತೆಗಳಲ್ಲಿ ಅಡ್ಡಾಡಿದವರಿಗೇ ಆ ಹಾದಿಯ ಸುಖ ಗೊತ್ತು. ಅದರಲ್ಲೂ ಬೇಸಿಗೆಯ ಬೇಗೆಯಲ್ಲಿ ಬೇರೆ; ಮಳೆಗಾಲದ ಇರುಳಲ್ಲಿ ಕೆಸರುಗದ್ದೆಯಂತೆ ತೋರುವಾಗ ಬೇರೆ. ಇಂತಹ ಮಾರ್ಗದಲ್ಲಿ ಎರಡೆತ್ತಿನ ಗಾಡಿ

ಹತ್ತಿ ರಾತ್ರಿ ಸವಾರಿ ಮಾಡಲಿದ್ದರೆ,—ಅದರಲ್ಲೂ ಜತೆಯಲ್ಲಿ ನವ ವಧು, ಬಳಿಯಲ್ಲಿ ಭಾವ, ರಾತ್ರಿಯಲ್ಲಿ ಹುಣ್ಣಿಮೆಯ ಬೆಳ್ದಿಂಗಳು, ಇರುವಾಗ,—ನೂರು ಸೂಡಿ ಬೈಹುಲ್ಲಿನ ಹಾಸಿಗೆಯ ಮೇಲೆ ಚೊಕ್ಕವಾಗಿ ಬಿಡಿಸಿದ ಕೇದಗೆಗರಿಯ ಚಾಪೆಯಮೇಲಿನ ಆಸನಶಯನಗಳ ವೈಭವ,—ಒಂದು ಸಲ ಇಳಿಜಾರು ದೊರೆತೊಡನೆ ಬಂಡಿಯಾಳು ಗಾಡಿ ನಿಲ್ಲಿಸಿ, ಅದರಡಿಯಲ್ಲಿ ಒಂದು ಹಗ್ಗಕ್ಕೆ ಸಿಕ್ಕಿಸಿದ ತುಂಡುಕೋಲನ್ನು ತಿರುಪಿ ಚಕ್ರಗಳಿಗೊಂದು ಮರದ ತುಂಡು ಒತ್ತುವಂತೆ ಮಾಡುವ ವಿಧಾನದಿಂದ ಪುನಃ ಎತ್ತು ಗಾಡಿಯೆಳೆದೊಡನೆ ಸವಾರಿಮಾಡುವವರ ದೇಹದಲ್ಲೆಲ್ಲ ಒಂದು ಬಗೆಯ ವಿದ್ಯುತ್ತು ಹರಿದಂತಾಗುವ ರೋಮಾಂಚನಕಾರಿ ಚಮತ್ಕಾರ,—ಎತ್ತಿಗೆ ಹುರುಳಿಯಿಡಲು ಅದನ್ನು ಬೇಯಿಸುವ ಖಾಲಿಡಬ್ಬಿಗಳು ಗಾಡಿಯ ಕೆಳಗೆ ತೂಗುತ್ತ ಅತ್ತಿತ್ತ ಗೂಟಗಳಿಗೆ ತಗಲಿ ಆಗುವ ಜಾಗಟೆಯ ನಿನಾದಾನಂದ,—ನಿದ್ರಿಸಿದಲ್ಲಿ ತೂಕಡಿಸುವ ಹಾಗೆಯೇ ಕಿವಿಯನ್ನು ಇರಿಯುವ 'ಬೀರಿ'ಯ ಉರುಳಾಟದ ಚೀತ್ಕೃತಿಯ, ಯಾವ ಇಲೆಕ್ಟ್ರಿಕ್ ಹೋರ್ನಿಗಿಂತಲೂ ಹೆಚ್ಚಾಗಿ ಆರ್ಭಟಿಸುತ್ತ ಭೂತಗಳನ್ನು ಉಚ್ಚಾಟನೆಗೊಳಿಸಿ, ದಾರಿಯುದ್ದಕ್ಕೂ ಇರುವ ಕಾಡುಗಳಲ್ಲಿನ ಹುಲಿಗಳಲ್ಲಿ ದಿಗಿಲನ್ನು ಹಬ್ಬಿಸುವ ವೈಚಿತ್ರ್ಯ,—ಆ ಹೋರ್ನಿನ ಜತೆಗೆ ಸಮತಾನವಾಗಿ ಬಂಡಿಯಾಳಿನ 'ಓಟ' ಪಲ್ಲವಿಯ ಆಲಾಪನೆ,—ತಾಸಿಗೆ ಮೂರು ಮೈಲುಗಳ ಸರಾಸರಿಯ ನಡಿಗೆಯಿಂದ ಊರಿಂದೂರಿಗೆ ಸೇರುವ ವಿಲಾಸ,—ಇದನ್ನೆಲ್ಲ ಬಲ್ಲವರೇ ಬಲ್ಲರು,—ಪರಮಾತ್ಮನನ್ನು ಬಲ್ಲವರ ಹಾಗೆ! ಮೆರವಣಿಗೆಯಲ್ಲಿ ಕಾಣುವ ಮದುಮಗನ ಹಾಗೆ ಹಣೆಗೆ ಬಾಸಿಂಗವನ್ನು ಕಟ್ಟಿದಂತೆ ಅಲಂಕಾರ ಹೊಂದಿ, ಕೊರಳಿಗೆ ಘಂಟಾಮಣಿಗಳ ಸರವನ್ನು ತೊಟ್ಟು ಕೊಂಡು, ಗಂಭೀರವಾಗಿ ಸವಾರಿಗಾಡಿಯನ್ನು ಎಳೆವ,—ಬೆನ್ನಮೇಲೆ ಮದುಮಗನ ರೇಶ್ಮೆದುಪ್ಪಟದಬದಲು ಗೋಣಿಚೀಲವನ್ನು ಹೊದೆದು ಕೊಂಡು, ಒಂದು ಕಣ್ಣನ್ನು ಬಂಡಿಯಾಳಿನ ಬಲಗೈಯ ಮೇಲೂ, ಮತ್ತೊಂದನ್ನು ನಡೆವ ಮಾರ್ಗದ ಮೇಲೂ, ಇಟ್ಟು, ತಟಪಟವೆಂದು ಒಡೆಯನ 'ಓಟ'ಗಳಿಗೆ ತಾಳಹಾಕುತ್ತ ನಡೆವ,—ಆ ಬಂಡಿಯೆತ್ತಿನ ಯುಗವೇ ಮಾಯವಾಗಿದೆ. ಮೋಟರಿನಲ್ಲೀಗ ನೂರು ಮೈಲುಗಳನ್ನು ಮೂರು ತಾಸು

ಗಳಲ್ಲೇ ದಾಟುವಾಗಲಾದರೂ ಅಂದಿನ ಸವಾರಿಗಾಡಿಯ ಪ್ರಯಾಣದ ನೂರು ವಾರಿನೊಳಗೊದಗುತಿದ್ದ ಸುಖಾನುಭವವು ನಮಗೆ ಈಗ ದೊರೆ ಯಲಾರದು; ಮೋಟರಿನ ಯುಗ ಮೇಲಾಟದ ಯುಗ, ಬಂಡಿಯ ಯುಗ ದಂಡಿಗೆಯ ಯುಗ.

ನಮ್ಮೂರಿಗೆ ಮುನ್ಸಿಫ್ ಕೋರ್ಟು ಮರಳಿ ಬರುತ್ತಲೇ ಹೊಸ ಮುನ್ಸಿಫರು ನೇಮಕಹೊಂದಿ ಬಂದರು. ಬಹು ಲಕ್ಷಣವುಳ್ಳವರು; ಸಾಧು; ದೇವಧರ್ಮ ಪಕ್ಷಪಾತಿಗಳು; ಸತ್ಯವನ್ನು ಶೋಧಿಸುವುದರಲ್ಲಿ ಚಾಣಾಕ್ಷರು; ವಯಸ್ಸು ಮೂವತ್ತೈದು; ಎಂ. ಎಲ್; ಆಗಲೇ ಅದು ಮೊದಲನೇ ಸಲ ಹುದ್ದೆ ಪಡೆದವರೆಂದು ಜತೆಯಲ್ಲಿ ತಮ್ಮ ತೀರ್ಥರೂಪ ರವರನ್ನು (ಸುಮಾರು ಅರುವತ್ತು ವಯಸ್ಸು) ಮಾತ್ರ ಕರೆದುತಂದಿದ್ದರು. ಹೆಚ್ಚಿನ ಆಡಂಬರದವರಲ್ಲ; ದವಲತ್ತಿನವರಲ್ಲ. ಒಂದು ಸಾಲಗ್ರಾಮ, ತಿರುಪತಿ ವೆಂಕಟರಮಣನದೊಂದು ಚಿನ್ನದ ಪ್ರತಿಮೆ, ಅದರ ಅಲಂಕಾರ ಗಳು, ಪೂಜಾಸಾಮಗ್ರಿಗಳು, ಎರಡು ಸಲಕ್ಕೆ ಬೇಕಾಗುವಷ್ಟು ಉಡುಪು, ಇಬ್ಬರಿಗೆ ಬೇಕಾಗುವಷ್ಟು ಹಾಸು, ಎರಡು ಕೊಡೆಗಳು, ಎರಡು ಊರು-ಗೋಲುಗಳು,—ಇಷ್ಟೇ ಅವರ ಸೊತ್ತು. ಮತ್ತೊಂದು ಪೆಟ್ಟಿಗೆಯಲ್ಲಿ ತುಂಬ ಗ್ರಂಥಗಳು: ದಪ್ಪವಾದವು, ಎಂ. ಎಲ್. ಪರೀಕ್ಷೆಗಾಗಿ ಮುನ್ಸಿ ಫರು ಓದಿದ ಗ್ರಂಥಗಳು; ಇತರ ಗ್ರಂಥಗಳಲ್ಲಿ ತತ್ವಜ್ಞಾನಕ್ಕೂ ಬ್ರಹ್ಮ ಜ್ಞಾನ (Theosophy)ಕ್ಕೂ ಸಂಬಂಧಪಟ್ಟ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಯವು.

ರಾಯರು ಚಿತ್ತೈಸುವರೆಂದು ತಿಳಿಯುತ್ತಲೇ ದೇವಸ್ಥಾನದ ಬಿರು ದಾವಳಿಗಳಿಂದ—ಹಿಲಾಲು, ದೀವಟಿಗೆ, ಬೆತ್ತ, ಛತ್ರ, ಚಾಮರ, ದಂಡಿಗೆ ಮೊದಲಾದುವುಗಳಿಂದ—ದೇವಸ್ಥಾನದ ಹತ್ತುಸಮಸ್ತರೂ, ಕೋರ್ಟಿನ ನೌಕರರೂ, ವಕೀಲರುಗಳೂ, ಇತರ ಸರಕಾರಿ ಹುದ್ದೇದಾರರೂ ಅವರನ್ನು ಎದುರುಗಾಣಿಸಿಕೊಂಡು, ವೇಗುಲದ ಸೇವೆಯ ವಾದ್ಯಗಾರರ ಸಂಗೀತ ದೊಡನೆ ಅವರ ನಿಲಯಕ್ಕೆ ಸಂಭ್ರಮವಾಗಿ ತಂದು ತಲಪಿಸಿದರು. ನಮ್ಮೂರ ಜನರಲ್ಲಿ ಎಲ್ಲ ಗಣನೀಯರಾದವರ ಪರಿಚಿತಿ ಮಾಡಿಕೊಂಡ

ಬಳಿಕ ರಾಯರು ತಮ್ಮ ನಿತ್ಯದ ದೇವಾರಾಧನೆಗೂ ಪಿತೃದೇವನ ಶುಶ್ರೂಷೆಗೂ ಮನವೊಲಿದರು. ಭೋಜನಾನಂತರದಲ್ಲಿ ಬ್ರಹ್ಮಜ್ಞಾನವನ್ನೋದುತ್ತ ಕುಳಿತರು.

ನಮ್ಮೂರವರ ಲಕ್ಷಣವೆಂದರೆ ಒಂದು ಆಣೆಯನ್ನು ಒಂದು ರೂಪಾಯಿಯಷ್ಟು ಸೂಕ್ಷ್ಮವಾಗಿ ವ್ಯಯಿಸುವುದು. ಪ್ರತಿಯೊಂದು ಮರವನ್ನು ಕಲ್ಪವೃಕ್ಷವೆಂದು ಇವರು ಪ್ರತ್ಯಕ್ಷವಾಗಿ ತೋರಿಸಿಕೊಡುವವರು. ಒಂದು ಬಾಳೆಹಣ್ಣಿನಿಂದ ಮೂರು ಬಗೆಯ ರುಚಿಕರವಾದ ಪಲ್ಯ ಮಾಡುವವರು. ಯುಗಾದಿಯ ದಿನ ಮಾತ್ರವಲ್ಲದೆ ಮತ್ತೆಂದೂ ಹೊಸ ಬಟ್ಟೆಬರೆಗಳನ್ನು ಕೊಂಡುಕೊಳ್ಳದವರು. ಇಂತಹವರಲ್ಲಿ, ಈ ದಿವ್ಯ ಸಾಮಾನ್ಯತೆಯುಳ್ಳ ಮುನ್ಸಿಫರು ನೆಲೆಗೊಳ್ಳುವಂತಾದುದು ಅಪೂರ್ವ ಪುಣ್ಯದ ಫಲ. ನ್ಯಾಯಸ್ಥಾನದಲ್ಲಂತೂ ಬಲು ನಮ್ರರಾಗಿ, ಶಾಂತರಾಗಿ, ಮೃದುನುಡಿ ವಿನಯಾದಿಗಳಿಂದ, ಕೋರ್ಟಿನಲ್ಲಿ ವ್ಯವಹಾರವಿರುವ ಸಮಸ್ತರನ್ನೂ ಒಲಿಸಿಕೊಂಡರು. ಕೋರ್ಟಿನಲ್ಲಾದರೂ ವ್ಯಾಜ್ಯದಲ್ಲಿ ಅವಗುಣ ಹೊಂದಿದ ಕಕ್ಷಿಗಾರರು ಸಹ ರಾಯರ ನ್ಯಾಯಬುದ್ಧಿಯನ್ನು ಕೊಂಡಾಡುತಿದ್ದರೇ ವಿನಾ, ಒಂದೇ ಒಂದು ಎದುರುಮಾತು ರಾಯರ ವಿಚಾರದಲ್ಲಿ ಊರಲ್ಲಿ ಕೇಳಿಸುತ್ತಿರಲಿಲ್ಲ.

ವಿದ್ಯೆಯಲ್ಲಿ ಹೆಚ್ಚಾಗಿ ಬ್ರಾಹ್ಮಣರೇ ಮುಂದರಿದ ಆ ಕಾಲದಲ್ಲಿ ನಮ್ಮೂರ ಸರಕಾರಿ ಆಫೀಸುಗಳಲ್ಲೆಲ್ಲ ಬ್ರಾಹ್ಮಣರೇ ಅಧಿಕಾರಿಗಳಾಗಿಯೂ ನೌಕರರಾಗಿಯೂ ಇದ್ದರು. ರಾಯರು ಕ್ಲಪ್ತವಾಗಿ ಹನ್ನೊಂದು ಘಂಟೆಗೆ ಕೋರ್ಟಿನಲ್ಲಿ ಸಿಂಹಾಸನವನ್ನೇರುವರು. ಐದು ಹೊಡೆವಾಗ ಅಂದಿನ ವಿಚಾರಣೆಯನ್ನು ಅಲ್ಲೇ ಮುಗಿಸಿ, ಕೆಳಗಿಳಿದು, ಕೋರ್ಟನ್ನು ಮುಚ್ಚಿಸಿ, ಸ್ವಲ್ಪ ಲಘು ಆಹಾರವನ್ನು ಸ್ವೀಕರಿಸಿ ದೇವಸ್ಥಾನದ ಮಾಳಿಗೆಯೊಂದರಲ್ಲಿ ಆಸೀನರಾಗುವರು. ಅಧಿಕಾರಿವರ್ಗದವರೇ ಮೊದಲಾಗಿ, ಅಂಗಡಿಗಾರರು, ಮೊಕ್ತೇಸರರು, ವಕೀಲರು, ಉಪಾಧ್ಯಾಯರು ಇತ್ಯಾದಿ ಎಲ್ಲರೂ ಅತ್ತ ಬರುವರು. ಚಿಕ್ಕದೊಂದು ಸಭೆಯಂತಾಗುವುದು. ರಾಯರು ಅಂದಿನ ವೃತ್ತಾಂತ ಪತ್ರಿಕೆಯಿಂದ ಪ್ರಪಂಚದ ವಿಚಾರಗಳನ್ನು

ಸಭಿಕರಿಗೆ ತಿಳಿಸಿ, ಕ್ರಮೇಣ ಥಿಯೊಸೊಫಿಯ (ಬ್ರಹ್ಮಜ್ಞಾನದ) ವಿಚಾರ ಮಾತನಾಡುವರು. ಎಂ. ಎಲ್. ಪಾಸಾದ, ಇಂಗ್ಲಿಷ್ ಬಲ್ಲ ರಾಯರು ಶಾಸ್ತ್ರವನ್ನು ಜ್ಞಾನಕ್ಕೆ ಸರಿಯಾಗಿ ಹೊಂದಿಸಿಕೊಂಡು ವಿವರಿಸುವಾಗ ಸಭಿಕರು ಬಾಯ್ತೆರೆದು ಸ್ವೀಕರಿಸುವರು. ಅಂತೂ ಅಲ್ಲಿಂದಲೇ ಒಂದು ಬ್ರಹ್ಮಜ್ಞಾನ ಸಂಘದ ಶಾಖೆಯನ್ನು ಸ್ಥಾಪಿಸುವಂತೆ ಸರ್ವಾನುಮೋದಿತ ವಾದ ಸೂಚನೆ ಹೊರಟಿತು.

ಕೋರ್ಟುಕಚೇರಿಗಳಲ್ಲಿ ವ್ಯವಹರಿಸುತ್ತಿದ್ದ ವಕೀಲರೆಲ್ಲರೂ ಮೆಂಬರ ರಾದರು. ಅಧಿಕಾರಿಗಳಾಗಿದ್ದ ಬ್ರಾಹ್ಮಣರಂತೂ ಮುಂದಾಗಿ ಸಂಘ ವನ್ನು ಸೇರಿಕೊಂಡರು. ಬಾಂಧವ್ಯದ ಮಾತು ಎಂದ ಬಳಿಕ, ಇತರ ಜಾತಿಗಳವರೂ ಸದಸ್ಯರಾಗಲು ಹಿಂತೆಗೆಯಲಿಲ್ಲ. ದೇವಸ್ಥಾನಕ್ಕೆ ಹೋಗು ತ್ತಿದ್ದವರ ಸಂಖ್ಯೆ ಬಹಳವಾಯಿತು. ದೇವಸ್ಥಾನವೂ ವಿನಿಯೋಗಗಳಲ್ಲಿ ಶುದ್ಧವಾಗಲೂ, ಭಕ್ತರಿಗೆ ಆಕರ್ಷಕವಾಗಲೂ, ತೊಡಗಿತು. ಊರಲ್ಲಿ ತಿಂಗಳಿಗೆ ಇಪ್ಪತ್ತೈದು ರೂಪಾಯಿ ಉತ್ಪನ್ನ ಅಥವಾ ವೇತನವುಳ್ಳ ಪ್ರತಿ ಯೊಬ್ಬನೂ ಥಿಯೊಸೊಫಿಸ್ಟನಾದನು. ವಾಮನ ಪಂಡಿತನ ಭಗವದ್ಗೀತೆ ಯನ್ನು ನಾಲ್ಕು ತಿಂಗಳತನಕ ಪ್ರತಿನಿತ್ಯವೂ ಓದಿ ಅರ್ಥ ಹೇಳಲು ಒಂದು ವ್ಯವಸ್ಥೆಯಾದುದರಿಂದ ಆ ವರ್ಷದಲ್ಲಿ ಮಳೆಗಾಲವು ಹೇಗೆ ಕಳೆ ಯಿತೆಂದು ಯಾರಿಗೂ ತಿಳಿಯದಂತಾಯಿತು. ಹಿಂದೂ ಧರ್ಮಶಾಸ್ತ್ರದ ಗ್ರಂಥಗಳಲ್ಲಿ ಒಂದೆರಡು, ಅಥವಾ ಎನಿಬಿಸೆಂಟರು ಆಗಲೇ ಪ್ರಕಟಿಸಿದ ಭಗವದ್ಗೀತೆಯ ಪುಸ್ತಕದ ಒಂದು ಪ್ರತಿಯು, ಪ್ರತಿಯೊಂದು ಮನೆಯಲ್ಲೂ ಉತ್ತಮ ಸ್ಥಾನವನ್ನು ಅಲಂಕರಿಸಿತು.

ಜಿಲ್ಲಾ ಜಡ್ಜರು ಈ ಕೋರ್ಟಿನ ಕೆಲಸವನ್ನೆಲ್ಲ ತನಿಖೆ ಮಾಡಿ ಅತ್ಯುತ್ತಮವಾಗಿದೆ ಎಂದು ಹೇಳುತ್ತ,—ತಾವು ಟೆನ್ನಿಸ್‌ಪ್ರಿಯರಾದುದ ರಿಂದ ಕೋರ್ಟಿನಲ್ಲಿನ ಪರಿಶ್ರಮದಿಂದ ಮೆದುಳು ದಣಿದವರಿಗೆ ಆಡುವುದ ಕ್ಕಾಗಿ ಒಂದು ಟೆನ್ನಿಸ್-ಕೋರ್ಟನ್ನೂ ಇಲ್ಲಿ ತೆರೆದರೆ ಉತ್ತಮವೆಂದು ಮುನ್ಸಿಫರಿಗೆ ಸೂಚಿಸಿದರು.

ಮಾರಣೆಯ ದಿನವೇ, ಅತ್ತಿತ್ತ ಚಲಾವಣೆಯಾಗುತ್ತಿದ್ದ ಗಾಡಿ ಗಳನ್ನೂ ಎತ್ತುಗಳನ್ನೂ ಕೋರ್ಟುಅಂಗಳದಲ್ಲಿ ರಾತ್ರಿವೇಳೆ ಇನ್ನು ಇರ

ಬಾರದಾಗಿ ಅಪ್ಪಣೆ ಕೊಡಿಸಿ ಅಲ್ಲೇ ಟೆನ್ನಿಸ್-ಕೋರ್ಟನ್ನು ನಿರ್ಮಾಣ ಮಾಡಲಾಯಿತು. ಮುನ್ಸಿಫರೂ, ಡಾಕ್ಟರರೂ, ಹೆಡ್‌ಮಾಸ್ತರರೂ, ಬಿ. ಎ., ಬಿ. ಎಲ್. ಕಲಿತ ವಕೀಲರೂ, ಕೊಲೇಜುತರಗತಿಗಳಲ್ಲಿ ಕಲಿತು ರಜಾಕಾಲದಲ್ಲಿ ಮನೆಗೆ ಮರಳಿದ್ದ ಹಲವು ವಿದ್ಯಾರ್ಥಿಗಳೂ, ಎಲ್ಲರೂ ಒಂದೊಂದು ಬೇಟನ್ನು ಹಿಡಿದುಕೊಂಡು ಅದೊಂದುಬಗೆಯ ಟೆನ್ನಿಸ್ ಆಟವನ್ನು ಸಾಯಂಕಾಲ ಆಡುವ ವ್ಯವಸ್ಥೆಯಾಯಿತು. ದೀಪ ಹಚ್ಚುವ ವೇಳೆ, ಸಾಯಂಸಂಧ್ಯೆಯ ಹೊತ್ತಿಗೆ, ಎಲ್ಲರೂ ದೇವಸ್ಥಾನಕ್ಕೆ ತೆರಳಿ, ಅಲ್ಲಿ ಬ್ರಹ್ಮಜ್ಞಾನ ಸಂಘದ ಆಶ್ರಯದಲ್ಲಿ ಒಂದು ತಾಸನ್ನಾದರೂ ಕಳೆದು ಮನೆಗೆ ಮರಳುವಂತಾಯಿತು. ಹೀಗೆ ಮುನ್ಸಿಫ್ ಕೋರ್ಟು ಮರಳಿ ಬಂದಂದಿನಿಂದ ದೇಹಾರೋಗ್ಯವೂ ಮಾನಸಿಕ ಆರೋಗ್ಯವೂ ಬೆಳೆಯಲು ಉತ್ತಮವಾದ ಅವಕಾಶವುಂಟಾಯಿತು.

ಇದೇ ರೀತಿಯಾಗಿ ಒಂದು ಸಂವತ್ಸರವು ಕಳೆಯಿತು. ಇಪ್ಪತ್ತು ವರ್ಷಗಳಲ್ಲಿ ನಮ್ಮೂರು ಅನುಭವಿಸಿದ್ದ ಸಂಕಷ್ಟಗಳೆಲ್ಲವೂ ಇದೊಂದು ಸಂವತ್ಸರದೊಳಗಾಗಿ ಮಾಯವಾಗಿ, ಆ ಸಂಕಷ್ಟಗಳು ಉಂಟಾಗಿಸಿದ್ದ ಗಾಯಗಳೂ ಮಾಯುತ್ತಬಂದುವು. ಆದರೆ ಅಷ್ಟರಲ್ಲೇ ರಾಯರಿಗೆ ಯಾವುದೋ ಒಂದು ತೆಲುಗು ಜಿಲ್ಲೆಗೆ ವರ್ಗವಾಯಿತು! ನಮ್ಮೂರು ಅಸಹನೀಯವಾದ ಸಂತಾಪ ತಳೆಯಿತು. ಆದರೆ ಹೊಸ ರಾಯರು ಸಹ ಬ್ರಹ್ಮಜ್ಞಾನಿಗಳು, ಟೆನ್ನಿಸ್‌ಪ್ರಿಯರು ಎಂಬುದನ್ನು ತಿಳಿದು ಆ ಸಂತಾಪವು ಕಡಿಮೆಯಾಯಿತು. ಅಂತೂ ಇಬ್ಬರೂ ರಾಯರುಗಳನ್ನು ತಮ್ಮೊಡನೆ ಕುಳ್ಳಿರಿಸಿಕೊಂಡು ಊರ ಮುಖಂಡರು (ಬ್ರಹ್ಮಜ್ಞಾನಿಗಳೇ ಮೊದಲಾಗಿ) ಒಂದು ಫೋಟೋಚಿತ್ರವನ್ನೆತ್ತಿಸಿಕೊಂಡರು. ರಾಯರು ವರ್ಗವಾದ ಪರವೂರಿಗೆ ಹೊರಡುವುದೆಂದಾಯಿತು.

ಇಂದು ಹೊರಡದೆ ಉಪಾಯವಿಲ್ಲ. ರಾಯರು ಬರುವಾಗ ತಂದುದೇನೋ ಅದನ್ನೆಲ್ಲ ಮೂಟೆಕಟ್ಟಿದ್ದಾಯಿತು. ಅಮಾವಾಸ್ಯೆಯಾದರೇನು? ಸವಾರಿಗಾಡಿ ಸಿದ್ಧವಾಗಿರುವಾಗ ಊರಿಂದ ಹೊರಡಲು ಹೆದರಬೇಕೆ? ಊರ ಹತ್ತುಸಮಸ್ತರು, ಬ್ರಹ್ಮಜ್ಞಾನ ಸಂಘದ ಸದಸ್ಯರು, ದೇವಸ್ಥಾನದ

ಮೊಕ್ತೇಸರರು, ಮುಖ್ಯ ವರ್ತಕರು ಇತ್ಯಾದಿಯಾಗಿ ಸಮಸ್ತರೂ ಅವರನ್ನು ಊರ ಗೇಟಿನತನಕ ಕಳುಹಿಕೊಟ್ಟರು. ರಾತ್ರಿಯೂಟವಾದ ಬಳಿಕ ತಾನೇ ಹೊರಟುದು! ಅದರಲ್ಲೂ ಅವರಿವರೊಡನೆ ಮಾತಾಡುತ್ತ, ಬ್ರಹ್ಮಜ್ಞಾನ ಸಂಘವನ್ನು ಸರ್ವರೂ ಕಾಪಾಡಿಬರಬೇಕೆಂದು ಹೇಳಿ, ಪ್ರತಿಯೊಬ್ಬರಿಂದ ವಾಗ್ದಾನ ಪಡೆದು ಮುನ್ನಡೆವಾಗ, ಅದು ಅಮಾವಾಸ್ಯೆಯೆಂಬುದು ತಿಳಿಯದವರಿಗೂ ಚೆನ್ನಾಗಿ ತಿಳಿದುಬರುವಂತಿದ್ದಿತು. ಹೇಗೂ ರಾಯರೂ ಅವರ ತೀರ್ಥರೂಪರೂ, ಸವಾರಿಗಾಡಿಯಲ್ಲಿ ಮಂಗಳೂರನ್ನು ಸೇರಿ ಅಲ್ಲಿಂದ ಹೊಸ ಊರಿಗೆ ಪ್ರಯಾಣ ಮಾಡುವುದಕ್ಕಾಗಿ, ಮುಂಬರಿದರು.

ನಮ್ಮೂರಿನಿಂದ ಮೂರು ಗಾವುದ ದೂರದಲ್ಲಿರುವ ಆವೂರನ್ನು ಹಾದು ಮಂಗಳೂರಿಗೆ ಗಾಡಿ ಚಲಿಸುವುದು. ಆವೂರಿಗೆ ತಲುಪಲು ಇನ್ನೆರಡು ಮೈಲುಗಳಿವೆ; ಅಷ್ಟರಲ್ಲಿ, ಗಾಡಿಯ ಬದಿಯಲ್ಲಿ ಯಾರೋ ಸುಳಿದಂತಾಯಿತು. ಅದಾದ ಐದೇ ನಿಮಿಷಗಳಲ್ಲಿ ಗಾಡಿಯ ಎಡಚಕ್ರವು ತಪ್ಪಿತು; ಗಾಡಿ ವಾಲುತ್ತ ದಡಲ್ಲನೆ ಮಾರ್ಗದ ಮೇಲೆ ಬಿದ್ದಿತು! ಅದೊಂದು ಚಕ್ರಕ್ಕೆ ಸಿಕ್ಕಿಸಿದ ಕೀಲೇ ಇದ್ದಿಲ್ಲ! ಗಾಡಿಯೊಳಗೆ ಕೂತಿದ್ದವರು ಆಕಾಶದ ಮೇಲೆ ಮಲಗಿದ್ದಂತೆ ಭಾವಿಸುವಂತಾಯಿತು! ಅವರಿಗೆ ಇತರ ಯಾವ ಪೆಟ್ಟೂ ಆಗದಂತೆ ೨೫೦ ಸೂಡಿ ಬೈಹುಲ್ಲಿನ ಹಾಸೇ ಅವರನ್ನು ಕಾಪಾಡಿತು. ಗಾಡಿಯವನು ಎತ್ತುಗಳ ಕೊರಳ ಹಗ್ಗವನ್ನು ಬಿಡಿಸಿದನು. ತನ್ನದೊಂದು ಕೈಯಲ್ಲಿ ಬಾರುಕೋಲನ್ನೂ ಮತ್ತೊಂದರಲ್ಲಿ ಒಂದು ಕತ್ತಿಯನ್ನೂ ಧರಿಸಿದನು. ಗಾಡಿಗೆ ತೂಗಿದ್ದ ಲಾಟಾನು ಆಗ ಒಡೆದುಹೋಗಿದ್ದಿತು. ಎತ್ತೆತ್ತಲೂ ಕತ್ತಲು!

ಗಾಡಿಯಿಂದ ಸಾಮಾನಿನ ಎರಡು ಗಂಟುಗಳನ್ನು ಗಾಡಿಯವನು ಹೊತ್ತನು; ಪೂಜಾದೇವರ ಕರಡಿಗೆಯನ್ನು (ಸುಮಾರು ೨೦೦೦ ರೂಪಾಯಿಯ ಸೊತ್ತು) ರಾಯರೇ ಹಿಡಿದುಕೊಂಡರು; ತೀರ್ಥರೂಪರು, ಪಾಪ, ಹಣ್ಣುಮುದುಕರು. ರಾಯರ ಕೈ ಹಿಡಿದು ಮುಂಬರಿದರು. ದೂರದಲ್ಲಿ ಕಾಣುತಿದ್ದ ದೀಪದ ಕಡೆಗೆ ಗಾಡಿಯವನು ಅವರನ್ನು ಕರೆದೊಯ್ದನು. ಎತ್ತುಗಳು ಅವನ ಬೆನ್ನ ಹಿಂದೆಯೇ, ಗುಲಾಮರಂತೆ ಕಾಲಿಟ್ಟವು. ಎಂತೂ, ದೀಪವಿರುವಲ್ಲಿಗೆ ಎಲ್ಲರೂ ಬಂದು ತಲಪಿದರು.

ಅದು ಆವೂರು ಭಾಗವತರ ಅಂಗಡಿಯ ದೀಪದ ಬೆಳಕಾಗಿದ್ದಿತು. ಪ್ರಯಾಣಿಕರನ್ನು ಕಾಣುತ್ತಲೇ, ಅಲ್ಲಿದ್ದ ನಾಲ್ಕಾರು ಜನಗಳನ್ನು ಸರಿಯ ಹೇಳಿ, ಕಂಬಳಿ ಹಾಸಿದನು. ಪ್ರಯಾಣಿಕರು ಕಂಬಳಿಯ ಮೇಲೆ ಕೂತರು; ತಮ್ಮ ಸಾಮಾನನ್ನು ಅಲ್ಲೇ ಮಡಗಿದರು.

ಮಾತು ನಡೆಯಿತು. ಗಾಡಿಯವನು ಎಲ್ಲವನ್ನೂ ವಿವರಿಸಿದನು. ಗಾಡಿಗೊಂದು ಕೀಲನ್ನು ಒದಗಿಸಿದರೆ, ಮತ್ತೊಂದು ಲಾಟಾನೂ ದೊರೆ ತರೆ, ಅವನು ಪ್ರಯಾಣಿಕರನ್ನು ಸುರಕ್ಷಿತವಾಗಿ ಮಂಗಳೂರಿಗೆ ಕೊಂಡೊಯ್ಯುವನಂತೆ. ಆದರೆ,—

ಆದರೆ,—ಅಂದೇ ಆ ಅಂಗಡಿಯ ಜಗಲಿಯ ಮೇಲೆ, ಆವೂರಲ್ಲಿ ಪರಡಿದ್ದ ಒಂದು ವಾರ್ತೆಯ ಪ್ರಸ್ತಾವವೂ ಚರ್ಚೆಯೂ ನಡೆದಿದ್ದಿತು. ಮೂರು ವರ್ಷಗಳ ಹಿಂದೆ ಕಣ್ಣಾನೂರು ಜೈಲಿಗೆ ರವಾನೆಯಾಗಿದ್ದ ಕೇಡಿ ಬೊಗ್ಗುವು ಅದೇ ವಾರದಲ್ಲಿ ಬಿಡುಗಡೆ ಹೊಂದಿ ಆವೂರಿಗೆ ಬಂದಿದ್ದಾನೆಂದೂ, ನಿನ್ನೆಮೊನ್ನೆ ಒಂದೆರಡು ಕಳವುಗಳಾಗಿದ್ದುವೆಂದೂ, ಇನ್ನು ಸರ್ವರೂ ಅತಿ ಜಾಗರೂಕತೆಯಿಂದಿರಬೇಕೆಂದೂ, ಅಲ್ಲಿ ಎಲ್ಲರಲ್ಲಿ ದಿಗಿಲು ಉಂಟಾಗಿದ್ದಿತು. ಅಮಾವಾಸ್ಯೆಯೇ ಕನ್ನ ಹಾಕುವವರಿಗೆ ಅತ್ಯ ಪೂರ್ವ ಸಂದರ್ಭವೆಂದೂ, ಅದೇ ರಾತ್ರಿ ಅವನು ಎಲ್ಲಿಯಾದರೂ ಕಳವು ಅಥವಾ ದರೋಡೆ ಮಾಡದೆ ಇರನೆಂದೂ ಮಾತು ನಡೆದಿದ್ದಿತು: ಬೊಗ್ಗುವು ಆವೂರಿನವನಲ್ಲ; ಆದರೆ ಮಂಗಳೂರಿನಿಂದ ತನ್ನೂರಿಗೆ ಹೋಗುವಾಗ, ಅವನ ಪದ್ಧತಿಯಂತೆ ಆವೂರಲ್ಲಿ ತನ್ನ ಕೈಚಳಕ ತೋರಿಸದೆ ಇರಲಾರನೆಂದು ಎಲ್ಲರೂ ನಂಬಿದ್ದರು. ಹೀಗಾಗಿ, ಭಾಗವತರು, ಪ್ರಯಾಣಿಕರಿಗೆ ಪ್ರಯಾಣ ಮಾಡುವುದಕ್ಕಾಗಲಿ, ತನ್ನಲ್ಲಿರುವುದಕ್ಕಾಗಲಿ, ಯಾವ ಅಭಿಪ್ರಾಯವನ್ನೂ ಸೂಚಿಸದೆ ಮೌನವಾಗಿದ್ದರು. ಗಾಡಿಯವನು ಏನು ಮಾಡುವುದಕ್ಕೂ ದಿಕ್ಕುತೋಚದಾದನು. ರಾಯರು, "ಎಲ್ಲವೂ ದೈವೇಚ್ಛೆ," ಎಂದು ಸುಮ್ಮನಾದರು; ರಾಯರ ತೀರ್ಥರೂಪರು, "ನಾವಿಲ್ಲೇ ಬಿದ್ದುಕೊಳ್ಳುವ, ಇದೊಂದು ಕರಡಿಗೆ ಪೂಜಾವಿಗ್ರಹದ್ದು, ಅದನ್ನು ತಲೆಗಿಂಬಾಗಿಟ್ಟುಕೊಳ್ಳೋಣ," ಎಂದರು. "ಹಾಗಿದ್ದರೆ, ಪಟೇಲರಲ್ಲಿ [ನನ್ನ.

ಪರಿಚಿತಿಯುಳ್ಳವರು) ನಾನು ಇಂದು ರಾತ್ರಿ ಕಳೆದು, ಬೆಳಿಗ್ಗೆ ಗಾಡಿ ದುರುಸ್ತಿ ಮಾಡಿಕೊಂಡು ಇತ್ತ ಬರುವೆನು," ಎಂದು ಗಾಡಿಯುವನು ಅರಿಕೆ ಮಾಡಿಕೊಂಡು, ಇನ್ನು ಅಲ್ಲಿರದೆ, ಸಮಾಧಾನಚಿತ್ತರಾದ ರಾಯರ ಅಪ್ಪಣೆ ಪಡೆದು ಹೊರಟನು. ಎತ್ತುಗಳನ್ನು ಅಂಗಡಿಗೆ ಸಮೀಪವಾಗಿ ಬೆಳೆದ ಎರಡು ಮರಗಳಿಗೆ ಕಟ್ಟಿದ್ದಾಯಿತು. ಭಾಗವತರು ಪ್ರಯಾಣಿಕರಿಗೆ ಒಂದು ದೀಪವನ್ನು ತಂದಿಟ್ಟು,—ಏನಾದರೂ, ಸಿಹಿಯಾಳ, ಬಾಳೆ ಹಣ್ಣು, ಅವಲಕ್ಕಿ, ಇತ್ಯಾದಿ ಬೇಕಾಗಬಹುದೋ ನೋಡೋಣ ಎಂದು ಕೂತರು. ಹೀಗೆ ಜಗಲಿಯುಲ್ಲಿ ಉಳಿದವರೆಂದರೆ ಇವರೇ ಮೂವರು.

ಪ್ರಯಾಣಿಕರು ಯಾರು ಏನೆಂಬುದು ಭಾಗವತರಿಗೆ ಗಾಡಿಯುವನಿಂದ ತಿಳಿದೇ ಇದ್ದಿತು. ನಡುರಾತ್ರಿಗೆ ಸಮೀಪವಾಗಿಬರುತಿತ್ತು. "ಇನ್ನು ಇವರು ನಿದ್ದೆಹೋಗಲಿ, ಹತ್ತಿರವೇ ತಾನೂ ಇರುವೆನು, ತನಗೂ ಬೆಂಬಲಕ್ಕೆ ಇವರಾದರು, ಎಲ್ಲಿಯಾದರೂ ಕೇಡಿಯು ಇಲ್ಲಿಗೆ ಬಂದರೆ? ಗಾಡಿಯ ಚಕ್ರದ ಕೀಲನ್ನು ಕಿತ್ತವನಾರು? ಅವನೇ ಆಗಿರಬೇಕು! ಮುನ್ಸಿಫರು ಪ್ರಯಾಣ ಮಾಡುವ ಸೋವು ಅವನಿಗೆ ತಿಳಿದಿರಬೇಕು," ಇತ್ಯಾದಿಯಾಗಿ ಭಾಗವತರು ಭಾವಿಸಿದರು. ಇನ್ನು ಭಾಗವತರೂ ನಿದ್ದೆಹೋಗುವುದೆಂದಾಯಿತು; ರಾಯರೂ ಮುದುಕನೂ ಮಲಗಿಕೊಂಡಿದ್ದರು.

ಅಷ್ಟರಲ್ಲಿ,—ನಡುಹರೆಯದ, ಕಿರುದೋತರವನ್ನುಟ್ಟು, ತುಂಡಂಗಿ ತೊಟ್ಟು, ತಲೆಗೊಂದು ಮುಟ್ಟಾಳೆಯುನ್ನಿಟ್ಟುಕೊಂಡ, ಗಟ್ಟಿಮುಟ್ಟಾದ, ಧಾಂಡಿಗನೊಬ್ಬನು ಅತ್ತ ಬಂದನು. ಅವನು ಬರುತ್ತಲೇ, ಮೂವರೂ ಎದ್ದು ಕೂತರು.

**ಭಾಗವತರು:**—"ಯಾರೋ ಅದು?"

**ಬಂದವನು:**—"ನಾನು."

**ಭಾಗವತರು:**—" 'ನಾನು' ಎಂದರೆ?"

**ಬಂದವನು:**—"ನನ್ನ ಗುರುತಿಲ್ಲವೇ? ನಾನು, ಬ್ಯೊಗ್ಗು."

**ಭಾಗವತರು:**—"ಏನು ಬೇಕು? ಸಿಹಿಯಾಳ, ಎಲೆ, ಅಡಿಕೆ, ಅವಲಕ್ಕಿ....?"

**ಬಂದವನು:**—"ಅವುಗಳಿಗಾಗಿ ಇಲ್ಲಿಗೆ ಬರಬೇಕೆ? ಮುರಿದ ಗಾಡಿಯಲ್ಲಿದ್ದ ಪ್ರಯಾಣಿಕರು ಇಲ್ಲಿಗೆ ಬಂದುದನ್ನು ತಿಳಿದು, ಇತ್ತ ಬಂದೆ."

**ರಾಯರು:**—"ನಮ್ಮಿಂದೇನಾಗಬೇಕು? ಅಥವಾ ನೀನೊಂದು ಹೊಸ ಗಾಡಿ ತರುವೆಯೋ ನಮ್ಮ ಸವಾರಿಗೆ? ಹಾಗಿದ್ದರೆ ಉಪಕಾರ."

**ಬಂದವನು** (ನಕ್ಕು):—"ಗಾಡಿಸವಾರಿಯ ಮಾತು ಹಾಗಿರಲಿ,—. ನಿಮ್ಮ ಬಳಿಯಿರುವ ಹಣವನ್ನು ಇತ್ತ ಕೊಡಿ. ಹಾಗಾದಲ್ಲಿ ತೊಂದರೆ ಇಲ್ಲದೆ, ನಾನು ಹಿಂದೆ ಹೋಗುವೆನು. ಬೇಕಾದಾಗ ಗಾಡಿ ಮಾಡಿಕೊಂಡು ಸವಾರಿ ಮಾಡಿರಿ. ನನ್ನ ಅಡ್ಡಿಯಿಲ್ಲ."

**ರಾಯರು:**—"ನಮ್ಮ ಬಳಿಯಲ್ಲಿ ಹಣವೇನೂ ಇಲ್ಲವಷ್ಟೆ! ಹಣವನ್ನು ಮೊದಲೇ ನಾವು ಹೋಗುವಲ್ಲಿಗೆ ಕಳುಹಿದ್ದೇವೆ. ಅಮಾವಾಸ್ಯೆ ರಾತ್ರಿ ಪ್ರಯಾಣ ಮಾಡುವವರು, ನಾವಿಬ್ಬರೇ ಇರುತ್ತಾ, ಹಣದ ಕಂಟಕವನ್ನೂ ಕಟ್ಟಿಕೊಳ್ಳುವೆವೇ? ನಿನಗೆ ಅಷ್ಟು ತಿಳಿಯದೇ? ಇದೋ, ಇದು ನಮ್ಮ ಬಟ್ಟೆ, ಹಾಸುಗೆ, ಇತ್ಯಾದಿ; ಇದು ಪುಸ್ತಕಗಳ ಪೆಟ್ಟಿಗೆ. ಇದು ದೇವರ ಪೂಜೆಯ ಕರಡಿಗೆ."

ಬಂದವನು ಒಂದೊಂದನ್ನೇ ಕಣ್ಣಿಟ್ಟು ನೋಡುತ್ತಿದ್ದನು. ಈಗ, ಕರಡಿಗೆಯ ಮೇಲೆ ಕಣ್ಣೂರಿದನು. ಅವನ ದೃಷ್ಟಿಯು ಮುಂದಕ್ಕೆ ಚಲಿಸಲಿಲ್ಲ. ಟಪ್ಪನೆ ಅದನ್ನು ಕಸುಕೊಂಡನು. ಕರಡಿಗೆಯೊಳಗೆ ಇದ್ದ ಚಿನ್ನದ ವಿಗ್ರಹ, ಅವರ ರತ್ನಾಭರಣಾದಿಗಳು ಎಲ್ಲವನ್ನೂ ನೋಡಿದನು.

**ಭಾಗವತರು:**—"ಅದೋ, ಬೊಗ್ಗು, ನೀನು ಇತರ ಕಳ್ಳರ ಹಾಗೆ ಕಳ್ಳನಲ್ಲ ಎನ್ನುತ್ತಾರೆ. ದೇವರು, ಧರ್ಮ, ಬಡವರು, ಅನಾಥರು, ಮೊದಲಾದವರಲ್ಲಿ ವಿಶೇಷ ಶ್ರದ್ಧೆಯುಳ್ಳವನಂತೆ. ಊಟ ಹಾಕಿದವರನ್ನು ಮರೆವವನಲ್ಲವಂತೆ. ಧನಿಗಳನ್ನು ಕದ್ದು ದರಿದ್ರರಿಗೆ ಧನ ಕೊಡುವವನಂತೆ. ಅದು ದೇವರ ವಿಗ್ರಹ, ದೇವರ ಆಭರಣಗಳು, ಅವನ್ನು ಕೊಳ್ಳೆಹೊಡೆಯುವುದೇ? ಇಗೋ, ಹೊಟ್ಟೆತುಂಬ ಬೇಕಾದಷ್ಟನ್ನು ನಿನಗೆ ಕೊಡುವೆ. ತಿನ್ನು. ಅವರು ಸರಕಾರದ ಹುದ್ದೇದಾರರು. ಸುಳ್ಳಾಡುವವರಲ್ಲ. ಇವರು ನಾಲ್ಕು ಊರಲ್ಲಿ ಸತ್ಯವಾದಿ ನ್ಯಾಯಶೀಲರೆಂದು ಹೆಸರ್ಗೊಂಡ ಮುನ್ಸಿಫರು.

ಇವರು ಅವರ ತಂದೆ, ಮುದುಕರು. ಇಂತಹವರನ್ನು ನೋಯಿಸಬೇಡ. ನಿನ್ನ ಹೆಸರಿನ ಕೀರ್ತಿ ಉಳಿಯಲಿ. ಇಷ್ಟು ವರ್ಷ ಗಳಿಸಿದ ಹೆಸರನ್ನು ಈಗ ಕಳೆದುಕೊಳ್ಳಬೇಡ. ಅವರದನ್ನು ಅವರಿಗೆ ಕೊಡು. ನಿನಗೆ ಬೇಕಾದುದನ್ನು ಹೊಟ್ಟೆ ತುಂಬ ತಿನ್ನು. ಹಾಗೆ ಬೇಕಾದರೆ ಒಂದು ವರಹ ನಾನೇ ನಿನ್ನ ಸದ್ಯದ ಖರ್ಚಿಗೆ ಕೊಡುತ್ತೇನೆ. ಅಥವಾ ಇಲ್ಲಿಯೇ ಬೇಕಾದರೆ ಮಲಗು. ನಮಗೇನೂ ಬೇಸರವಿಲ್ಲ. ನೀನು ಇತ್ತ ಬರುವೆಯೆಂದು ನಾವು ತಿಳಿದೇ ಇದ್ದೆವು. ಹುಂ.''

ಭಾಗವತರ ಮಾತು ಕೇಳುತ್ತ ಈ ಕೇಡಿಯು ಇನ್ನಷ್ಟು ಕಠಿನಚಿತ್ತನಾದನು. ಅವನ ಮಾತುಗಳು ಕರ್ಕಶವಾಗಿ ಹೊರಟುವು:—''ನೀವು ಹೇಳಿದ್ದೆಲ್ಲ ನಿಜ,—ಆದರೆ ಈಗಲ್ಲ, ಹಿಂದೆ. ನಾನು ಕೇಡಿಯೆಂದು ತಿಳಿದಂದಿನಿಂದ ನನ್ನ ಮೇಲೆ ಇಲ್ಲದ ಅಪರಾಧ ಹೊರಿಸಿ ಜೈಲುಪಾಲು ಮಾಡುತ್ತಿರುವರು. ಈಗ ದೇವಧರ್ಮ ನೋಡುವುದಕ್ಕಿಲ್ಲ. ಬಲಿಷ್ಠನೇ ಗೆಲ್ಲುವನು. ಈ ದೊಣ್ಣೆಯೊಂದೇ ನನಗೆ ದೇವರು. ಈ ದೊಣ್ಣೆಯೊಂದಿದ್ದರೆ ಹೊಟ್ಟೆಯು ಗತಿಗೆಡದು. ಈ ಕರಡಿಗೆ ನನಗೆ ಬೇಕು. ದೇವರು, ಧರ್ಮ, ಎಂದು ನಂಬಿ ಹಾಳಾದೆ. ಇದರಲ್ಲಿದ್ದುದು ನನಗೆ ನಾಲ್ಕು ವರ್ಷಕ್ಕೆ ಸಾಕು. ಅರಸನಂತೆ ಬಾಳಬಹುದು. ಈಗ ನಡುರಾತ್ರಿಯಾಯಿತು. ಇನ್ನಿಷ್ಟರಲ್ಲೇ ಮರಳುವೆನು. ಆದರೆ ಒಮ್ಮೆಲೇ ಕಠಿನನೆನಿಸಲಾರೆನು. ನೋಡೋಣ; ಇವರನ್ನು ಬಿಟ್ಟರೂ ನನ್ನ ಮೇಲೆ ರುಜುವಾತು ಬಲವಾಗುವುದು. ಆದರೂ ಹೊಸ ಗಾಡಿಯನ್ನು ಕಾದಿದ್ದಂತೆ ಇವರೆಂದರಲ್ಲ? ಹೋಗಲಿ, ಇನ್ನೊಂದು ತಾಸಿನೊಳಗಾಗಿ ಇವರು ಹೊಸ ಗಾಡಿ ತರಲಿ. ಇವರಿಗೆ ಅಪಾಯವೇನೂ ಇಲ್ಲದಂತೆ ಇವರು ಗಾಡಿ ಹತ್ತಿ ಹೋಗಬಹುದು. ನಾನು ಈ ಕರಡಿಗೆಯೊಡನೆ ಮರೆಯಾಗುವೆನು. ಇಲ್ಲದಿದ್ದಲ್ಲಿ ಇವರಿಗೆ ಇಲ್ಲೇ ಬಿದ್ದು ಸಾಯುವಹಾಗೆ ಬಡೆಯುವೆನು. ನೀವ್ಯಾರೂ ಮಾತೆತ್ತಕೂಡದು. ಅತ್ತಿತ್ತ ಹೋಗಲೂ ಕೂಡದು. ಅಂಗಡಿಯವರೇ! ನೀವು ಈ ಊರಲ್ಲಿ ಪರಿಚಿತರು. ನೀವು ಗಾಡಿ ತರಹೋದರೆ ಪಠೇಲರಲ್ಲಿಗೆ ಅಥವಾ ಇನ್ನೆಲ್ಲಿಗಾದರೂ ಹೋಗಿ ಜನಕೂಡಿಸಿ ತರುವಿರಿ. ಈ ಮುದುಕರಾಗಲಿ ಇವರಾಗಲಿ ಹೋಗಲಿ. ಅವರಿಗೊಂದು

ಲಾಟಾನು ಕೊಡಿರಿ. ಒಬ್ಬರು ಹೋಗಲಿ. ಇನ್ನೊಬ್ಬರು ಇಲ್ಲಿ ಇರಲಿ. ಒಂದು ತಾಸಿನೊಳಗೆ ಗಾಡಿ ತಂದರೆ ಅವರಿಬ್ಬರೂ ಸುರಕ್ಷಿತವಾಗಿ ಹೊರಡಲಿ. ಗಾಡಿ ಇಲ್ಲವಾದರೂ ಮರಳದೆ ಇದ್ದರೆ, ಇಲ್ಲಿ ಉಳಿದವರ ಕಾಲು ಮುರಿದುಹಾಕುವೆನು. ಗಾಡಿ ಇಲ್ಲದೆ ಮರಳಿದರೆ ನೀವು ಮೂವರನ್ನೂ ಇಲ್ಲಿ ಮರಗಳಿಗೆ ಕಟ್ಟಿಹಾಕಿ ಬಾಯಲ್ಲಿ ಬಟ್ಟೆ ತುರುಕಿಸಿಟ್ಟು ಬಾಯಿಕಟ್ಟಿ ಹೊರಡುವೆನು. ಹುಂ, ಇಷ್ಟೆ ನನ್ನ ದಯೆ," ಎಂದು ಕರಾಳ ನಗುವಿನಿಂದ ತಿಳಿಸಿದನು. ಆಕಾಶವನ್ನು ನೋಡಿ, "ಅಲ್ಲೇ ಕಾಣುವ ಆ ದೊಡ್ಡ ನಕ್ಷತ್ರವು ಇನ್ನೊಂದು ತಾಸಿನಲ್ಲಿ ನೆತ್ತಿಗೆ ಬರುವುದು. ಅಷ್ಟರಲ್ಲಿ ಬರಲಿ. ಇಲ್ಲದಿದ್ದಲ್ಲಿ ನಾನು ಹೇಳಿದಂತೆ ಖಂಡಿತವಾಗಿಯೂ ಮಾಡುವೆನು," ಎಂದನು.

ಇನ್ನು ಇವರೇನು ಮಾಡಬಹುದು? ಎಲ್ಲರೂ ಅವಾಕ್ಕಾದರು. ರಾಯರ ಬ್ರಹ್ಮಜ್ಞಾನಕ್ಕೆ ಈಗಲೇ ಪರೀಕ್ಷೆಯ ಕಾಲ. ವಿಧಿ, ಕರ್ಮಫಲ, ಎಲ್ಲವನ್ನೂ ಈಗಲೇ ಪರೀಕ್ಷೆ ಮಾಡಬೇಕೆಂದರು. ಕೇಡಿಯ ಮಾತಿಗೆ ಒಪ್ಪಿದರು. ವೃದ್ಧ ಪಿತನಿಗೆ ಸಮಾಧಾನ ಹೇಳಿ, ಒಂದು ಲಾಟಾನನ್ನು ಉರಿಸಿಕೊಂಡು, ಭಾಗವತರಿಗೆ ಶಾಂತರಾಗಿದ್ದು ಕೇಡಿಗೆ ಬೇಕಾದ ಆಹಾರವನ್ನು ಕೊಡಹೇಳಿ,—"ಒಂದು ತಾಸಿನೊಳಗೆ ನನ್ನಂತಹವನು ಬಲು ವೇಗವಾಗಿ ನಡೆದರೂ ಈ ರಾತ್ರಿಕಾಲದಲ್ಲಿ ಮೂರು ಮೈಲಿಗೆ ಮಿಕ್ಕಿ ಹೋಗಲಾರನು. ಆದುದರಿಂದ ಇಲ್ಲಿಂದ ಒಂದೂವರೆ ಮೈಲು ವರೆಗೆ ಹೋಗುವೆನು. ಗಾಡಿಯೊಂದು ದೈವೇಚ್ಛೆಯಿಂದ ದೊರೆತರಾಯಿತು. ಇಲ್ಲವಾದಲ್ಲಿ, ಹೀಗೆಯೇ ಹಿಂತಿರುಗುವೆನು. ಸುಮ್ಮನೆ ವೃದ್ಧರನ್ನು ಗಂಡಾಂತರಕ್ಕೀಡುಮಾಡುವುದೇ? ಅಂತೂ, ಮಹಾರಾಯಾ, ನಾನು ಬರುತ್ತೇನೆ; ಗಾಡಿ ದೊರೆಯಲಿ, ಇಲ್ಲದಿರಲಿ, ನಾನು ಬರುವತನಕ ಮಾತ್ರ ಇವರನ್ನು ಪೀಡಿಸಬೇಡ; ಬಂದ ತರುವಾಯ, ನಿನಗೆ ದೇವರು ಬುದ್ಧಿಕೊಡುವಂತೆ ಮಾಡು," ಎನ್ನುತ್ತಾ, "ಅಯ್ಯಾ, ನಾವು ಇಷ್ಟು ವರ್ಷವೂ ನಮ್ಮ ಸರ್ವಸ್ವವೆಂದು ಪೂಜಿಸಿದ ದೇವರ ದಯೆ ನಮ್ಮನ್ನು ಕಾಪಾಡುವುದು; ಇದರಲ್ಲಿ ಸಂದೇಹವಿಲ್ಲ. ನನಗೆ ಆಶೀರ್ವಾದವಿರಲಿ," ಎಂದು ತಂದೆಗೆ ಶರಣು ಬಂದು, ಕೇಡಿಯ ಕೈಗಳಲ್ಲಿದ್ದ ದೇವರ ಕರಡಿಗೆಯನ್ನು ವಂದಿಸಿ, ರಾಯರು ಹೊರಟರು.

ಇತ್ತ ಕೇಡಿಯು ಇವರೊಡನೆ ಮಾತಾಡದೆ ವೀಳೆಯ ಜಗಿಯುತ್ತ, ಇವರಿಬ್ಬರೂ ಮಾತಾಡದಂತೆಯೂ ಪರಸ್ಪರ ಆಡಿಕೊಳ್ಳದಂತೆಯೂ (ಅಂಗಡಿಯ ಹಿಂದೆಯೇ ಮನೆಯಿದೆಯಷ್ಟೆ) ಎಚ್ಚರವಿಟ್ಟು, ಒಂದು ಕೈಯಲ್ಲಿ ಕರಡಿಗೆಯನ್ನೂ ಮತ್ತೊಂದರಲ್ಲಿ ತನ್ನ ಲಾಠಿಯನ್ನೂ ಹಿಡಿದುಕೊಂಡೇ-ಕೂತಿದ್ದು, ಆಗಾಗ ಆಕಾಶ ನೋಡುತ್ತ, ಆ ದೊಡ್ಡ ನಕ್ಷತ್ರವು ನೆತ್ತಿಗೆ ಬರುವುದನ್ನು ಕಾಯುತ್ತಲೇ ಇದ್ದನು. ವೃದ್ಧರು ಮಂಕು ಹಿಡಿದಂತಿದ್ದರಾದರೂ ದೇವರಲ್ಲಿ ವಿಶ್ವಾಸವನ್ನಿಟ್ಟುದನ್ನು ನೋಡಿ, ಭಾಗವತರಿಗೂ ಈ ಸಂದರ್ಭಕ್ಕೊಪ್ಪುವ ಭಾರತದೊಳಗಣ ನಾನಾ ಪದ್ಯಗಳು ನೆನಪಾದುವು. ಆದರೆ ಪ್ರಯೋಗಿಸಿದರೆ ತಲೆಗೆ ಪೆಟ್ಟಾಗುವುದೆಂದು ಸುಮ್ಮನಿರಬೇಕಾಯಿತು.

ರಾಯರು ಲಾಟಾನು ಹಿಡಿದು ಹೊರಟು ಮಾರ್ಗಕ್ಕೆ ಬಂದವರೇ ನಮ್ಮೂರ ಕಡೆಗೆ ಧಾವಿಸಿದಂತೆ ಕಾಲಿಟ್ಟರು. ಟೆನ್ನಿಸ್ ಆಟದ ಅಭ್ಯಾಸದಿಂದ ಇದು ಸುಲಭವಾಯಿತಲ್ಲದೆ, ರಾಯರು ಸಿಂಹಾಸನದಲ್ಲೂ ರಾಯರು, ಇತರ ವೇಳೆಯಲ್ಲೂ ರಾಯರಾಗಿಯೇ ಇದ್ದಿದ್ದರೆ, ಇದು ಸಾಧ್ಯವಾಗುತ್ತಿರಲಿಲ್ಲ. ಕಗ್ಗತ್ತಲು, ಕಾಡು, ಒಬ್ಬಂಟಿಗರೇ ಭವಿಷ್ಯದ ಸಂಕಷ್ಟವೆಲ್ಲವನ್ನು ನೆನೆದು ಗೀತಾಪಾಠ ಹೇಳುತ್ತ ಧೈರ್ಯದಿಂದ ಮುನ್ನಡೆದರು; ಆಗಾಗ ಓಡಿದರು. ಒಂದು ಮೈಲು ಸಾಗಿತು. ದಾರಿಯುದ್ದಕ್ಕೂ, ಸಾಲುಮರಗಳೂ ಅವುಗಳ ಹಿಂದೆ ಕಾಡೂ ಹೊರತು, ಒಂದು ಅಂಗಡಿಯೂ ಇಲ್ಲ. ಅಲ್ಲೇ ಒಂದು ಭೂತದ ಗುಡಿ. ಅದಕ್ಕೆ ಬಾಗಿಲುಗಳಿಲ್ಲ. ದೊಡ್ಡದೊಂದು ಹುತ್ತವು ಎತ್ತರಕ್ಕೆ ಬೆಳೆದಿರಲು, ಅದಕ್ಕೆ ಒತ್ತಾಗಿ ಒಂದಾಳೆತ್ತರದ ಗೋಡೆಗಳನ್ನಿಟ್ಟು ಕಟ್ಟಿದ ಗುಡಿ! ಉದ್ದವಾದೊಂದು ಹುಲಿಯ ಗೊಂಬೆಯಿದೆ. ಅದರ ಬಣ್ಣ ಮಾಸಿ ಹೋಗಿದೆ. ಲಾಟಾನಿನ ಬೆಳಕಿಗೆ ಅದು ಒಂದು ಬಗೆಯಾಗಿ, ವಿಕಟವಾಗಿ, ವಿಕಾರವಾಗಿ, ಅಸಹ್ಯವಾಗಿ ಕಾಣುತ್ತಿದೆ. ರಾಯರು ಫಕ್ಕನೆ ದಿಗಿಲುಗೊಂಡರು. ಮೆಲ್ಲನೆ ಗರ್ಜಿಸಿದಂತಾಯಿತು. ರಾಯರ ಕಾಲು ತಡೆಯಿತು. ಗರ್ಜನೆ ಕರ್ಕಶವಾಗಿದ್ದಿತು; ಹತ್ತಿರಕ್ಕೆ ಬಂದಂತಾಯಿತು. ಇನ್ನಷ್ಟು ಕಾಲದಲ್ಲಿ, ದಾರಿಯಲ್ಲಿ ತನಗೆದುರಾಗಿ ಗರ್ಜನೆ ಸಮೀಪಕ್ಕೆ ಬರುತ್ತಿದೆ. ಗುಡಿಯಾಚೆಗೆ

ಮಾರ್ಗವು ಅರ್ಧವೃತ್ತದಂತಾಗಿ ತಿರುಗಿದೆ. ಜನರ ಸುಳಿದಾಟವಿಲ್ಲ. ಗರ್ಜನೆ ತೀರ ಹತ್ತಿರದಿಂದ ಕೇಳಿಸಿತು. ಓಹೋ, ಅದೊಂದು ಗಾಡಿ, ಎರಡೆತ್ತಿನ ಗಾಡಿ. ಗಾಡಿ ತುಂಬ ಹುಲ್ಲಿದೆ. ಗಾಡಿಗೆ ಲಾಟಾನು ಮಾತ್ರವಿಲ್ಲ. ಗಾಡಿಯವನು ಧೀರನು, ಒಡ್ಡಾಳು. ಕೈಕೋಲಿಂದ ಹೊಡೆಯದೆಯೇ, ಆ ಇಳಿಜಾರಿನಲ್ಲಿ ಎತ್ತನ್ನು ಮೆಲ್ಲನೆ ನಡೆಯಿಸುತ್ತಾನೆ. ಗರ್ಜನೆಯು 'ಬೀರಿ'ಯ ಧ್ವನಿ.

ರಾಯರ ಲಾಟಾನನ್ನು ಕಂಡು, ಗಾಡಿ ನಿಂತಿತು. ರಾಯರಿಗೆ ಈಗ ತಾನೇಕೆ ಅತ್ತ ಬಂದುದೆಂದು ಮನಸ್ಸಿನಲ್ಲಿ ಹೊಳೆಯಿತು. "ಮಹಾರಾಯಾ, ನನ್ನನ್ನು ಸ್ವಲ್ಪ ಉಳಿಸಬಾರದೇ? ದೇವರೇ ನಿನ್ನನ್ನು ಕಳುಹಿಸಿದನು. ನನ್ನೊಡನೆ ಬರುವೆಯಾ? ನಮ್ಮ ಗಾಡಿ ಚಕ್ರಕಳಚಿ ಇಲ್ಲಿ ಒಂದೇ ಮೈಲು ದೂರದಲ್ಲಿ ಬಿದ್ದಿದೆ. ನನ್ನ ಮುದಿ ತಂದೆಯವರೂ ನಾನೂ ಪ್ರಯಾಣಿಕರಾಗಿದ್ದೆವು. ಗಾಡಿಯವನು ಪಠೇಲರಲ್ಲಿ ಉಳಿದು ಬೆಳಿಗ್ಗೆ ಬರುವೆನೆಂದು ಹೋದನು. ಆದರೆ ನಮ್ಮನ್ನು ಒಬ್ಬ ಕೇಡಿಯು ಆತಂಕಿಸಿ ನಮ್ಮ ಪೂಜೆಯ ದೇವರನ್ನು ಸೆಳಕೊಂಡಿದ್ದಾನೆ. ಅದನ್ನಂತೂ ಕೊಡುವುದಿಲ್ಲವಂತೆ. ಅವನು ಪ್ರಸಿದ್ಧ ಕೇಡಿ ಬೊಗ್ಗುವಂತೆ. ಈ ವಾರವೇ ಬಿಡುಗಡೆ ಹೊಂದಿ ಕಣ್ಣಾನೂರಿನಿಂದ ಇತ್ತ ಬಂದವನಂತೆ. ನಾನು ಗಾಡಿಯನ್ನು ಈ ತಾಸಿನೊಳಗೆ ತಂದರೆ, ನಾವು ಮುಂದರಿಯಬಹುದಂತೆ; ಇಲ್ಲದಿದ್ದಲ್ಲಿ, ನಮ್ಮನ್ನು ಹೆಡಮುರಿ ಕಟ್ಟಿ, ದೇವರ ಕರಡಿಗೆಯೊಡನೆ ಅವನು ಮಾಯವಾಗುವನಂತೆ. ಹಿಂದೆ ಹೋಗದಿದ್ದರೆ ನನ್ನ ತಂದೆಯವರನ್ನು ಕೊಂದುಹಾಕುವನಂತೆ. ದೇವಧರ್ಮಗಳ ಮೇಲೆ ಅವನ ವಿಶ್ವಾಸ ಹಿಂದೆ ಇದ್ದುದು ಇನ್ನಿಲ್ಲವಂತೆ. ಅಲ್ಲೇ ಇರುವ ಅಂಗಡಿಜಗಲಿಯ ಮೇಲೆ ಇದ್ದಾನೆ. ನಾವು ಪೂಜೆಮಾಡುವ ದೇವರು ನಮ್ಮನ್ನು ಕಾಪಾಡುವನಾದರೆ ಕಾಪಾಡಲೆಂದು ಇತ್ತ ಗಾಡಿ ಹುಡುಕಿ ಬಂದೆ. ಈ ಅಮಾವಾಸ್ಯೆಯ ಕಗ್ಗತ್ತಲಿನ ನಡುರಾತ್ರಿಗೆ ನೀನು ಹೇಗೋ ಎದುರಾದೆ. ದೇವರೇ ನಿನ್ನನ್ನು ನಮ್ಮ ರಕ್ಷಣೆಗಾಗಿ ಕಳುಹಿಸಿದನು," ಎಂದು ಗಾಡಿಯವನನ್ನು ನಮಸ್ಕರಿಸಿ ರಾಯರು ಆನಂದಬಾಷ್ಪಗಳನ್ನು ಸುರಿಸಿದರು.

ಇಷ್ಟು ಮಾತುಗಳನ್ನು ರಾಯರು ಕ್ಷಣಾರ್ಧದಲ್ಲೆಂಬಂತೆ ಗಾಡಿಯವನಿಗೆಂದರು. ಗಾಡಿಯವನೂ ಸಹಸಂತಾಪದಿಂದಲೋ ಎಂಬಂತೆ ಕಣ್ಣೀರು ಮಿಡಿದನು. ರಾಯರನ್ನು ಕೂಡಲೇ ಗಾಡಿಯಲ್ಲಿ ಕುಳ್ಳಿರಿಸಿ, ಎತ್ತುಗಳನ್ನು ಓಡುವಂತೆ ಪ್ರೇರೇಪಿಸಿದನು. ಗಾಡಿಯು, ಕವುಚಿಬಿದ್ದ ಇವರ ಗಾಡಿಯನ್ನು ದಾಟಲು, ಗಾಡಿಯವನು ದೂರದಿಂದಲೇ ಅಂಗಡಿಯಲ್ಲಿ ಉರಿಯುತಿದ್ದ ದೀಪದ ಬೆಳಕನ್ನು ಕಂಡು, ಅಲ್ಲಿಗೇ ತಾವು ಹೋಗುವುದೆಂದು ತಿಳಿದುಕೊಂಡ ಕೂಡಲೇ, ರಾಯರಿಗೆ ಗಾಡಿಯೆತ್ತುಗಳ ಹಗ್ಗ ಹಿಡಿದು ಅಲ್ಲೇ ನಿಲ್ಲುವಂತೆ ಹೇಳಿ, ಲಾಟಾನನ್ನು ಅಲ್ಲೇ ಕಿರಿದುಮಾಡಿ ಗಾಡಿಗೆ ಕಟ್ಟಿಕ್ಕಿ, ತಾನೊಬ್ಬನೇ ಅಂಗಡಿಯ ಕಡೆಗೆ ನಡೆದನು.

ಇವನು ಯಾವನೋ ಯಾವುದೋ ಸಾಮಾನಿಗಾಗಿ ಬಂದಿದ್ದವನೆಂದು ಅಂಗಡಿಯವರು ತಿಳಿದರು; ಆದರೆ ಕೇಡಿಯ ಕೈಯ ಕೋಲನ್ನು ನೋಡಿ ಮಾತೆತ್ತಲಾರದಾದರು.

**ಗಾಡಿಯವನು**:—"ಸ್ವಾಮೀ, ನನಗೆ ಅರ್ಧಾಣೆಯ ವ್ಯಾಪಾರ ಕೊಡಿರಿ," ಎಂದು ಅರ್ಧಾಣೆಯನ್ನು ಅಂಗಡಿಯವರ ಬಳಿಗೆ ಬಿಸುಟನು.

**ಕೇಡಿ**:—"ಈಗ ವ್ಯಾಪಾರವಿಲ್ಲ. ಅಂಗಡಿಯವರು ಕೊಡಲಾರರು."

**ಗಾಡಿಯವನು**:—"ನೆಂಟರು ಮನೆಗೆ ಬಂದುಬಿಟ್ಟಿದ್ದಾರೆ; ಉಪಚಾರ ಮಾಡಬೇಡವೇ? ನನ್ನ ಮಗ, ಹಾಳು ಹುಡುಗ, ಸಂಜೆಗೇ ವೀಳೆಯ ತಾರದೆ ಮೋಸ ಮಾಡಿದ. ಇರಲಿ. ಅವರೇಕೆ ಸಾಮಾನು ಕೊಡಬಾರದು?"

**ಕೇಡಿ**:—"ನನ್ನಪ್ಪಣೆ ಹಾಗೆ!"

**ಗಾಡಿಯವನು**:—"ನಿಮ್ಮಪ್ಪಣೆ! ಎಂದರೆ, ನೀವು....?"

**ಕೇಡಿ**:—"ಘಟಿಂಗಾ! ನನ್ನ ಗುರುತಿಲ್ಲವೇ? ನಾನು ಕೇಡಿ ಬೊಗ್ಗು. ಇವರಲ್ಲಿಗೆ ಬಂದವರು ಅವರ ಸೊತ್ತನ್ನೇ ನನ್ನ ಕೂಡೆ ಇಟ್ಟು ಗಾಡಿ ತರಲು ಹೋಗಿದ್ದಾರೆ. ಒಂದು ತಾಸಿನ ವಾಯಿದೆ. ಆ ನಕ್ಷತ್ರ ನಡು ನೆತ್ತಿಗೆ ಬರುವವರೆಗೆ ಕಾದು, ನಂತರ ಈ ಮುದುಕನ ಕಾಲುಮುರಿದು, ಇವರಿಬ್ಬರನ್ನೂ ಮರಗಳಿಗೆ ಕಟ್ಟಿಕ್ಕಿ ಈ ಸೊತ್ತಿನೊಂದಿಗೆ ನಾನು ಮರೆಯಾಗುವೆನು,—ಎಂದು ನನ್ನ ಶರ್ತ; ಅವರೆಲ್ಲರೂ ಒಪ್ಪಿದ್ದಾರೆ. ಈಗ

ನೀನೂ ಬಂದೆ; ನಿನ್ನನ್ನು ಕಟ್ಟಿಹಾಕದೆ ನಿರ್ವಾಹವಿಲ್ಲ. ಶರ್ತದಂತೆ ಮಾಡದವನು ಬೊಗ್ಗುವೇ?"

**ಗಾಡಿಯುವನು**:—"ಹಾಗಿದ್ದರೆ, ಅಂಗಡಿಯವರ ಬದಲಾಗಿ ನೀವೇ ಅಲ್ಲೇ ಇರುವ ಒಂದು ಕಟ್ಟು ವೀಳೆಯದೆಲೆ, ಇಷ್ಟು ಸುಣ್ಣ, ಒಂದು ಹೊಗೆಸೊಪ್ಪಿನ ತುಂಡು, ಮೂರು ಅಡಿಕೆ, ಇತ್ತ ಬಿಸಾಡಿ. ನಾನು ಹೋಗುವೆನು. ನಾನೇಕೆ ನಿಮ್ಮೊಳಗಣ ವಾತಿಗೆ ಭಂಗ ತರಬೇಕು? ನನ್ನ ನೆಂಟರು ಎಷ್ಟು ಕಾಯುವರೋ?"

**ಕೇಡಿ**:—"ಸುಡು ನಿನ್ನ ನೆಂಟರನ್ನು; ಇಲ್ಲಿಂದ ಹೊರಟವನೇ ನಿನ್ನಲ್ಲಿಗೆ ಬರುತ್ತೇನೆ. ಆ ಮೇಲೆ ಅಲ್ಲಿಯೂ ನನ್ನ ಪರಾಕ್ರಮ ನೋಡುವೆ."

**ಗಾಡಿಯುವನು**:—"ನಿಮ್ಮ ಪರಾಕ್ರಮ ನಮಗೇಕೆ ತೋರಿಸುವಿರಿ? ನಾವು ತೀರ ಬಡವರು. ಅಥವಾ, ಅತ್ತ ಬರುವಿರಾದರೂ ನಾವೇನೂ ತಮ್ಮಂತಹ ಬಲಿಷ್ಠರನ್ನು ತಡೆವೆವೇ? ಅರ್ಥಾಣೆಯ ವ್ಯಾಪಾರ ಕೊಡಿರಿ. ದಮ್ಮಯ್ಯ."

**ಕೇಡಿ**:—"ಸಾಕು, ಹೊಲಸು ಮಾತಾಡಬೇಡ. ನಿಲ್ಲಲ್ಲಿ ಸುಮ್ಮನೆ. ಈ ನಕ್ಷತ್ರವು ನೆತ್ತಿಗೆ ಬಂತು. ಇನ್ನು ಈ ಮುದುಕನ ಕಾಲು ಮುರಿದು ಇವರಿಬ್ಬರನ್ನೂ ಮರಕ್ಕೆ ಕಟ್ಟುವುದನ್ನು ನೋಡು. ಸುಮ್ಮನಿರು— ಮಾತಾಡಿ ಗುಲ್ಲೆಬ್ಬಿಸಬೇಡ. ನನ್ನ ಕೆಲಸ ಕೆಟ್ಟೀತು. ನಿನ್ನನ್ನು ಕೊಂದೇ ಹಾಕುವೆನು."

ಹೀಗೆಂದು ಕೇಡಿಯು ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಬಲವಾದ ಒಂದು ಏಟನ್ನು ವೃದ್ಧರ ಕಾಲಿಗೆ ಕೊಡಲು ದೊಣ್ಣೆ ಎತ್ತಿದನು.

ಆದರೆ, ಎತ್ತಿದ ದೊಣ್ಣೆ ಗಾಡಿಯುವನ ಎಡಗೈಯೊಳಗೆ, ಗಾಡಿಯುವನ ಕೈಯಲ್ಲಿದ್ದ ಕೋಲು ಕೇಡಿಯ ಕುತ್ತಿಗೆಗೆ, ಹೇಗೆ ಬಿತ್ತೋ ಭಾಗವತರಿಗೆ ತಿಳಿಯಲೇ ಇಲ್ಲ. ಇವಾದ ಬಳಿಕ ಕೇಡಿಯನ್ನು ಗಾಡಿಯುವನು ಒಂದು ಸಲ ಹಿಂದಣಿಂದ ತನ್ನ ತೋಳುಗಳಿಂದ ಬಿಗಿಯಾಗಿ ಒತ್ತಿ ಹಿಡಿದು, ಅವನ ಬಾಯಲ್ಲಿ ಅರ್ಧ ಕಟ್ಟು ವೀಳೆಯದೆಲೆ ತುರುಕಿಸಿ, ತನ್ನ ಎಲವಸ್ತ್ರದಿಂದ ಅವನ ಬಾಯಿಯನ್ನು ಬಲವಾಗಿ ಬಿಗಿದು ಹಿಂಪಲಿಗೆ ಗಂಟ

ಕ್ಕಿದನು. ಬೆನ್ನ ನಡುವೆ ಒವ್ವು ಗುದ್ದಿ, ಅವನ ಎರಡೂ ಕೈಗಳನ್ನು ಆತನ ಕೈಯಲ್ಲಿದ್ದ ಹಗ್ಗದಿಂದಲೇ ಬೆನ್ನಹಿಂದಕ್ಕೆ ಕಟ್ಟಿದನು. ಅವನನ್ನು ಕೆಡವಿ, ಅಲ್ಲೇ ಕಟ್ಟಿದ್ದ ಎತ್ತುಗಳಲ್ಲಿ ಒಂದರ ಹಗ್ಗ ಬಿಚ್ಚಿ ಕಾಲುಗಳೆರಡನ್ನೂ ಕಟ್ಟಿಕ್ಕಿದನು. ಆಬಳಿಕ, ಅವನನ್ನು ನೆಲಕ್ಕೆ ಒರಗಿಸಿ, ತಪ್ಪಿಸಿಕೊಳ್ಳಲು ಯತ್ನಿಸಿದರೆ ಕೊಂದಿಕ್ಕುವೆನೆಂದನು. ಭಾಗವತರು ಈಗ ಪರಾಕ್ರಮಿಗಳಾಗಿ, ಕೇಡಿಯು ಬಿದ್ದಲ್ಲಿಗೆ ಬಂದು, ಅವನ ಎದೆಗೆ ಚೆನ್ನಾಗಿ ಎರಡು ಗುದ್ದಿದರು. ಅನಂತರ, ಗಾಡಿಯುವನು ವೃದ್ಧರ ಕೈಯಲ್ಲಿ ದೇವರ ಕರಡಿಗೆಯನ್ನು ಇಟ್ಟು, ಭಾಗವತರಿಂದ ಅವರ ಪುಸ್ತಕಗಳ ಕಟ್ಟನ್ನು ಹೊರಿಸಿ, ತಾನು ಬಟ್ಟೆಗಳ ಮತ್ತು ಹಾಸುಗೆಯ ಮೂಟೆಯನ್ನು ಹೊತ್ತುಕೊಂಡು, ವೃದ್ಧರನ್ನು ತನ್ನ ಕೈಕೊಟ್ಟು ನಡಿಸಿ, ಜಾಗ್ರತೆಯಾಗಿ ರಸ್ತೆಯಲ್ಲಿದ್ದ ಬಂಡಿಯ ಬಳಿಗೆ ಬಂದನು. ಅಲ್ಲಿ, ತಂದ ಹೇರುಗಳನ್ನು ಗಾಡಿಯಲ್ಲಿರಿಸಿ, ವೃದ್ಧರನ್ನು ರಾಯರೊಡನೆ ಬಿಟ್ಟು, ಭಾಗವತರೊಡನೆ ಅವರ ಮನೆಗೆ ಮರಳಿದನು. ನೆಲದ ಮೇಲೆ ಬಿದ್ದುಕೊಂಡು ಉರುಡಾಡುತಿದ್ದ ಕೇಡಿಯ ಕಾಲುಕಟ್ಟುಗಳನ್ನು ಬಿಚ್ಚಿ, ಅವನ ಕಾಲ ಹಗ್ಗಗಳನ್ನು ಬೆನ್ನಹಿಂದಣ ಕೈಕಟ್ಟಿಗೆ ಬಿಗಿದು, ಭಾಗವತರನ್ನು ಮನೆಯೊಳಗೆ ಹೋಗಬಿಟ್ಟು, ಕೇಡಿಯನ್ನು ರಾಯರ ಕವಚಿಬಿದ್ದ ಗಾಡಿಗೆ ಕೊಂಡೊಯ್ದು ಅದರೊಳಗೆ ಒರಗಿಸಿ, ಇತರರೂ ಸುಲಭವಾಗಿ ಬಿಡಿಸಲಾರದ ರೀತಿಯಲ್ಲಿ ಅವನನ್ನು ಚೆನ್ನಾಗಿ ಬಿಗಿದುಬಿಟ್ಟನು.

ರಾಯರ ಬಳಿಗೆ ಈ ಗಾಡಿಯುವನು ಬಂದನು. ಗಾಡಿಯೊಳಗೆ ಹುಲ್ಲು ಹಾಸಿ, ಚಾಪೆ ಸರಿಗೊಳಿಸಿ, ರಾಯರೂ ಅವರ ತೀರ್ಥರೂಪರೂ ಸವಾರಿಯಾಗುವಂತೆ ಕೇಳಿಕೊಂಡು, ಅವರನ್ನು ಕುಳ್ಳಿರಿಸಿಕೊಂಡು ಗಾಡಿಯನ್ನು ಮಂಗಳೂರಿನ ಕಡೆಗೆ ಓಡಿಸಿದನು. "ರಾಯರೇ, ನಾಳೆ ಪಠೇಲರ ಮನೆಯಿಂದ ನಿಮ್ಮ ಗಾಡಿಯುವನು ತನ್ನ ಗಾಡಿ ಸರಿಮಾಡಲು ಹೋಗುವಾಗಲೇ ಕೇಡಿ ಬೊಗ್ಗುವು ಅದರೊಳಗೆ ಕಟ್ಟಲ್ಪಟ್ಟು ಬಿದ್ದಿರುವುದರಿಂದ ಆತನಿಗೆ ಕಠಿನ ಶಿಕ್ಷೆ ದೊರೆವುದೆಂದು ನನಗೆ ವಿಶ್ವಾಸವಿದೆ. ಇನ್ನು ಕೆಲವರ್ಷಗಳತನಕ ಈತನ ಬಾಧೆ ಈ ಊರಿಗೆ ತಗಲದು," ಎಂದು ಗಾಡಿಯುವನೆಂದುದಕ್ಕೆ ರಾಯರು ನಕ್ಕರು.

ಗಾಡಿಯು, ಬೆಳಗಾಗುವ ಹೊತ್ತಿಗೆ, ಮಂಗಳೂರಿಂದ ನಾಲ್ಕು ಮೈಲು ದೂರವಾಗಿದ್ದಿತು. ಅದು ಉಷಃಕಾಲ. ರಾತ್ರಿಯಲ್ಲಿ ನಿದ್ದೆ ಇರಲಿ, ಇಲ್ಲದಿರಲಿ, ಈ ಮುಹೂರ್ತದ ತಂಗಾಳಿ ಎಂತಹವನಲ್ಲೂ ನವಚೇತನ ವನ್ನುಂಟುಮಾಡುವುದು. ನಕ್ಷತ್ರಗಳು ಒಂದೊಂದಾಗಿ ಅಡಗತೊಡಗಿ ದುವು. ಪ್ರಾತಃಸ್ಮರಣೆಗೆ ಪಂಚಪತಿವ್ರತೆಯರ ಸ್ತೋತ್ರವಾಗಲೆಂದೇನೋ, ಹಕ್ಕಿಗಳಲ್ಲಿ ಒಂದು 'ಸೀ—ತಾ' ಎನ್ನುವುದು; ಆಗ ಕೇಳಿಸುವುವೆಲ್ಲವೂ ಪಂಚಮ ಸ್ವರಗಳ ಇಂಚರಗಳೇ. ದೂರದಲ್ಲಿರುವ ಆ ಕಡಲನ್ನು ನೋಡಿರಿ; ಆಕಾಶವು ಕೆಳಕ್ಕಿಳಿಯುತ್ತ ಬಂದಂತೆ, ವಾಯುರೂಪದಿಂದ ದ್ರವರೂಪವಾಯಿತೋ ಎನ್ನಿಸುವಂತಿದೆ. ಮೋಡಗಳನ್ನು ನೋಡಿರಿ; ಯಾವಯಾವ ಸ್ವರ್ಗವಾಸಿಗಳು ರಾತ್ರಿಯಲ್ಲಿ ಪವಡಿಸಿದ ಹಾಸುಗೆಗಳೋ ಎನ್ನುವಂತಿದೆ. ಸೂರ್ಯಕಿರಣಗಳು ಬೆಳ್ಳಗಾಗಿ ತೋರುವುವಾದರೆ, ಈ ಮೋಡಗಳಲ್ಲಿ ಆ ಬಿಳುಪಿನೊಳಗೆ ಸೇರಿರುವ ಇತರ ಬಣ್ಣಗಳೆಲ್ಲ ಒಂದೊಂದಾಗಿ ಕ್ಷಣಕ್ಕೊಮ್ಮೆ ತೋರುತ್ತಿವೆ. ಭೂಮಿಯು ನಿರ್ಜೀವ ಪದಾರ್ಥ, ಜಡ ಮಣ್ಣು ಎಂದು ಹೇಳುವವರು ಬೆಳಿಗ್ಗಿನ ಜಾವದಲ್ಲಿ ಅವಳ ಸೊಬಗನ್ನು ಕಂಡರೆ, ಅವಳಲ್ಲಿ ಚೇತನವು ಮಿತಿಮೀರಿರುವುದ ರಿಂದಲೇ ವಿರುದ್ಧಭಾವದಿಂದ ಜಡವಾಗಿ ಕಾಣುವಳೋ ಎಂದು ಭಾಸ ವಾಗುವಂತಿದೆ. ಸೂರ್ಯನನ್ನು ಬರಿಗಣ್ಣಿಂದ ನೋಡಬೇಕಾದರೆ, ಆಗ ತಾನೇ. ಮನುಷ್ಯನ ಮಹತ್ವವು ಆಗಣ ಆತನ ನೆರಳಲ್ಲೇ ವ್ಯಕ್ತ,—ಅದೆಷ್ಟು ದೂರ! ಎಷ್ಟು ಭೂಭಾಗವನ್ನೂ ಇತರ ಸೃಷ್ಟಿಪದಾರ್ಥಗಳನ್ನೂ ತನ್ನ ಆಶ್ರಯದಲ್ಲಿ ಇರಗೊಡಿಸಬಲ್ಲುದು! ಸೃಷ್ಟಿಯ ಸೊಬಗು, ಮನುಷ್ಯನ ಮಹತ್ವ, ವಿಶ್ವದಲ್ಲಿನ ಪ್ರತಿಯೊಂದರಲ್ಲಿರುವ ಚೇತನದ ಪ್ರಕಾಶ, ಜೀವ ನದ ಉದ್ದೇಶ, ಎಲ್ಲವನ್ನೂ ಪ್ರಾತಃಕಾಲದಲ್ಲಿ ಪಂಚಭೂತಗಳು ಮೌನ ವಾಗಿ ಸಾರದೆ ಇಲ್ಲ. ಬ್ರಹ್ಮಜ್ಞಾನಿಗಳೂ ಧರ್ಮಪ್ರಾಣರೂ ಇಂತಹ ಪ್ರಾತಃಕಾಲದಲ್ಲಿ, ಎಷ್ಟೇ ಗಾಢನಿದ್ರೆಯು ಆಗ ಅವರಿಗೆ ಆವಶ್ಯಕವಾಗಿ ದ್ದರೂ, ಎಚ್ಚತ್ತುಕೊಳ್ಳದೆ ಇರಲಾರರು. ರಾಯರೂ ಅವರ ತೀರ್ಥ ರೂಪರೂ ರಾಮನಾಮಸ್ಮರಣೆಯೊಡನೆ ಕಣ್ತೆರೆದೆದ್ದು ಕೂತರು.

**ಗಾಡಿಯವನು:**—"ಸ್ವಾಮಿ, ಸುಖ ನಿದ್ದೆಮಾಡಿದಿರಾ?"

**ಇಬ್ಬರೂ:**—"ಹೌದು, ನಿನ್ನ ಉಪಕಾರ."

**ಗಾಡಿಯುವನು:**—"ಉಪಕಾರದ ಮಾತಿರಲಿ. ಗಾಡಿಯುವನ ಕೆಲಸವೇ ಇಷ್ಟು. ಅಷ್ಟೇ ಮಾಡಿದೆನು. ರಾಯರು ತಂದ ಗಾಡಿಯುವನು ಗಾಡಿಯುವನಲ್ಲ; ತಮ್ಮನ್ನು ಆತನು ಪಠೇಲರಲ್ಲಿಗೇತಕ್ಕೆ ಕೊಂಡೊಯ್ಯಲಿಲ್ಲ? ಈಗ, ಆ ಕೇಡಿಯು ಮೇಲೆ ಆಗುವ ಮೊಕದ್ದಮೆಯಲ್ಲಿ ಕೆಲ ತಿಂಗಳು ಅತ್ತಿತ್ತ ಓಡಾಡುತ್ತ ಇರಲಿ. ಹಃ! ಹಃ!"

**ರಾಯರು:**—"ಇನ್ನೆಷ್ಟಿದೆ ಮಂಗಳೂರಿಗೆ?"

**ಗಾಡಿಯುವನು:**—"ಇಲ್ಲೇ, ನಾಲ್ಕು ಮೈಲು, ಒಂದು ತಾಸಿನ ದಾರಿ."

**ರಾಯರು:**—"ಅಲ್ಲಿಗೆ ಸೂರ್ಯೋದಯಕ್ಕೆ ಸರಿಯಾಗಿ ತಲಪುವಂತಾಯ್ತು."

**ಗಾಡಿಯುವನು:**—"ಆದರೆ, ಸ್ವಾಮಿ, ನಾನು ಮಾತ್ರ ಆ 'ಗೇಟ'ನ್ನು ದಾಟಿ ಮಂಗಳೂರಿಗೆ ಬರಲಾರೆ."

**ರಾಯರು:**—"ಗೇಟಿನ 'ಫೀಸ'ನ್ನು ನಾವು ತೆರುತ್ತೇವೆ."

**ಗಾಡಿಯುವನು:**—"ಫೀಸಿಗಾಗಿ ಅಲ್ಲ,—ನನಗೆ ಅಲ್ಲಿಗೆ ಹೋಗಲು ಆತಂಕವಿದೆ. ನಾನು ನಿನ್ನೆ, ನೀವು ಹೋಗಬೇಕಾಗಿದ್ದ ಆ ಪಠೇಲರಲ್ಲೇ, ಗಾಡಿಯೊಡನೆ ಇರಬೇಕಾಗಿತ್ತು. ಈ ಗಾಡಿ ಅವರದು. ನಮ್ಮೂರಿಂದ ಅವರ ಮನೆಗೇ ಈ ಗಾಡಿಯಲ್ಲೇ ನಾನು ರಾತ್ರಿಯಲ್ಲಿ ತಲಪಿದ್ದರೆ ನನಗೆ ಹೆಚ್ಚಿನ ಪ್ರಯೋಜನವಿತ್ತು."

**ರಾಯರು:**—"ಅದೆಷ್ಟು, ಅದೆಷ್ಟು? ಅದರ ಇಮ್ಮಡಿ ನಾನೇ ಕೊಡುವೆನು."

**ಗಾಡಿಯುವನು:**—ಹಣದ ಮಾತೇ ಅಲ್ಲ. ಅದು ಬೇರೆ; ಈಗ, ನಾನು ತಮ್ಮನ್ನು ಈ ಗಾಡಿಯಲ್ಲಿ ಕೂಡ್ರಿಸಿ, ಇಲ್ಲಿಯತನಕ ತಂದು ಮುಟ್ಟಿಸಿದುದಕ್ಕೂ, ದಾರಿಯಲ್ಲಿ ಆ ಕೇಡಿ ಬೊಗ್ಗುವಿನಿಂದಾದ ವಿಪತ್ತಿನಲ್ಲಿ ನಾನು ತಮಗೆ ನೆರವಾದುದಕ್ಕೂ, ಪಠೇಲರಿಗೆ ಒಂದು ಪತ್ರ ಬರೆದುಕೊಟ್ಟರೆ ಸರಿ. ಗಾಡಿಯು ಬಾಡಿಗೆ ಕೊಟ್ಟುದರಲ್ಲಿ, ಗಾಡಿಯ

ಯಜಮಾನರಾದ ಆ ಪಟೇಲರಿಗೆಷ್ಟು ಎಂದು ತಿಳಿಸಿರಿ. ಉಳಿದುದೆಲ್ಲ ಈ ಎತ್ತುಗಳಿಗೆ! ನನಗೆ ಒಂದು ಕಾಸೂ ಅಗತ್ಯವಿಲ್ಲ."

ರಾಯರು ಅವಾಕ್ಕಾದರು. ಇವನಿಗೆ ಬೇಕಾದಂತೆ ಪತ್ರ ಬರೆದು ಕೊಟ್ಟರು. ಐದು ರೂಪಾಯಿಗಳು ಬಾಡಿಗೆಗೆ, ಒಂದು ರೂಪಾಯಿ ಎತ್ತುಗಳಿಗೆ, ತನ್ನದೊಂದು ದುಪ್ಪಟಿ ಗಾಡಿಯವನಿಗೆ, ಕೊಟ್ಟಾಯಿತು.

ಅಷ್ಟರಲ್ಲಿ ಮಂಗಳೂರಿಗೆ ಹೋಗುವ ಗಾಡಿಗಳು ಒಂದೊಂದಾಗಿ ಬರಹತ್ತಿದುವು. ಅವುಗಳಲ್ಲಿ ಒಂದನ್ನು ರಾಯರಿಗಾಗಿ ಬಾಡಿಗೆಗೆ ನಿಷ್ಕರ್ಷಿಸಿ, ಗಾಡಿಯವನು ಇಬ್ಬರಿಗೂ ನಮಸ್ಕಾರ ಮಾಡಿ, ತಾನು ಬಂದ ದಾರಿಯಲ್ಲೇ ಹಿಂತಿರುಗಿದನು.

ಯಥಾಕಾಲದಲ್ಲಿ ರಾಯರು ಮಂಗಳೂರಿಗೂ, ಅಲ್ಲಿಂದ ತಮಗೆ ವರ್ಗವಾದ ಊರಿಗೂ, ತಲಪಿದರು. ಕವಚಬಿಸ್ಟ ಗಾಡಿಯಲ್ಲಿ ಕಟ್ಟಿಕ್ಕಿದ ಕೇಡಿಗೆ ಏಳು ವರ್ಷದ ಕಠಿನ ಸಜೆಯಾಯಿತು. ಆ ಮೊಕದ್ದಮೆಯ ವಾರ್ತೆಯನ್ನು ಪತ್ರಿಕೆಯಲ್ಲಿ ರಾಯರು ಓದಿದರು.

ಆಗತಾನೇ ಅವರಿಗೆ ಗೊತ್ತು,—ತಮ್ಮನ್ನು 'ಕೇಡಿ ಬೊಗ್ಗು' ಎಂಬವನ ಬಾಯಿಂದ ತಪ್ಪಿಸಿ, ಮಂಗಳೂರಿಗೆ ತಲಪಿಸಿದ ಎರಡನೆಯ ಗಾಡಿಯವನು, ಅಂದಿನ ರಾತ್ರಿಯೊಳಗೆ ಆವೂರ ಪಟೇಲರಲ್ಲಿ ತನ್ನ ವಸತಿಯ ಹಾಜರಿ ಕೊಡಬೇಕಾಗಿದ್ದ, ಕಣ್ಣಾನೂರಿಂದ ಬಿಡುಗಡೆ ಹೊಂದಿದ ಬೊಗ್ಗು ಮಹಾಶಯನೆಂದು!

# ಆವೂರು ಮಠ

ಆವೂರ ಕಥೆಗಳನ್ನು ಹೇಳುತ್ತ ಬರುವಂತೆ, ಆವೂರನ್ನು ಕುರಿತು ಸ್ವಲ್ಪ ಭೂವಿವರಣೆ ಬರೆಯಬೇಕಾಗುವುದು. ಆವೂರಿಂದ ನಮ್ಮೂರಿಗೆ ಎರಡೇ ಗಾವುದ. ಇಲ್ಲಿ ತಾನೇ ವಾರದಲ್ಲೊಂದು ದಿನ ಸಂತೆ ಸೇರುವ ನಿಯಮವಿದೆ. ಸಂತೆಯಲ್ಲಿ ಮುಖ್ಯವಾಗಿ ತಾಳೇ ಬೆಲ್ಲ, ಹಸಿ ಮತ್ತು ಬೇಯಿಸಿದ ಗೆಣಸು, ಮತ್ತು ಒಣಮೀನು ವ್ಯಾಪಾರವಾಗುವುದನ್ನು ನೋಡಬಹುದು. ಆವೂರ ಪಟೇಲರು ಪ್ರತಿ ಸಂತೆಗೆ ಗಾಡಿತುಂಬ ಸರಕು ಕಳುಹುವರು; ಉಗ್ರಾಣಿಯೇ ಆ ದಿನ ಬಂಡಿಯಾಳು. ಸಂತೆಯು ರಾಜಧಾನಿಯಲ್ಲಾಗುವ ಕಾರಣ, ಪೇಟೆಯಿಂದ ಇತರ ಸಾಮಾನುಗಳನ್ನೂ, ತಾಲೂಕು ಕಚೇರಿಯಿಂದ ಟಪ್ಪಾಲು ಇತ್ಯಾದಿಗಳನ್ನೂ ಉಗ್ರಾಣಿಯು ಪಡೆದು ಸಂತೆಯಿಂದ ಅಂದೇ ಆವೂರಿಗೆ ಮರಳುವನು. ಇಂತಹದೊಂದು ಸಂತೆಯ ದಿನ, ಉಗ್ರಾಣಿ-ಬಂಡಿಯಾಳು ಸರಕು ಸಮೇತ ಸಂತೆಗೆ ಬರುತ್ತಲೇ, ತನ್ನ ಪುಣ್ಯಸ್ತ್ರೀಯು ಅಂದೇ ತನ್ನ ಉತ್ತರಾಧಿಕಾರಿಯನ್ನು ಹೆತ್ತುದನ್ನು ಕೇಳಿ, ಪುತ್ರದರ್ಶನದಿಂದ ಕೃತಾರ್ಥನಾಗಿ, ತನ್ನ ಗೆಳೆಯರಿಗೆಲ್ಲ ಮಿಠಾಯಿ ತಿನ್ನಿಸಿ, ಸಂತೇ ಕಾಫಿ ಕುಡಿಸಿ, ಅಂದಿನ ರಾತ್ರಿ ಅಲ್ಲಿ ಕಳೆದು ಮರುದಿನ ಆವೂರಿಗೆ ಮರಳುವುದಾಗಿ ಎಣಿಸಿದ್ದನಾದರೂ, ಪಟೇಲರು ಏನೆನ್ನುವರೋ ಎಂದು ಬೆದರಿದ್ದನು. ಆಗಲೇ ಅನುಕೂಲವಾಗಿ ಪಟೇಲರಲ್ಲಿ ಹಾಜರಿಕೊಡಲು ಅಂದೇ ಹೋಗಬೇಕಾಗಿದ್ದ ಬೊಗ್ಗು ಮಹಾಶಯನು ತನಗೆ ಸುಪರಿಚಿತನಾಗಿದ್ದ ಉಗ್ರಾಣಿಯನ್ನು ಕಂಡನು. ಸರಿ,—ಬಂಡಿಯಾಳಾಗಿ ಬೊಗ್ಗುವು ಪಟೇಲರಲ್ಲಿಗೆ ತೆರಳುವುದೆಂದಾಯಿತು; ಉಗ್ರಾಣಿಯು ಗೋಕುಲದಲ್ಲಿದ್ದ

ಬಾಲಲೀಲೆಯನ್ನು ಕಾಣುವುದೆಂದಾಯಿತು. ಆವೂರಿಂದ ಹೋಗುವ ದಾರಿಯಲ್ಲಿ ನಡೂರು ಬೊಗ್ಗುವಿನ ಸಂಭ್ರಮದ ಸೋದರಿಯ ಮನೆ. ಅಲ್ಲಿ ಬೊಗ್ಗು ರಾತ್ರಿಭೋಜನ ಮುಗಿಸಿ, ಗಾಡಿ ಹತ್ತಿ ಪಟೇಲರಲ್ಲಿಗೆ ಹೊರಟಾಗ, ರಾತ್ರಿಯಲ್ಲಿ ಆತನಿಗೆ ಪ್ರತಿದ್ವಂದ್ವಿಯಾಗಿದ್ದ ಬೊಗ್ಗುವಿನ ದರ್ಶನವಾದುದೂ, ಮುನ್ಸಿಫರೊಡನೆ ಮಂಗಳೂರಿನ ಪದವಿನತನಕ ಪ್ರಯಾಣ ಮಾಡಬೇಕಾಗಿ ಬಂದುದೂ, ಅವರಿಂದ ತನ್ನ ಗೈರ್-ಹಾಜರಿಯನ್ನು ಮತ್ತು ಉಪಕಾರಬುದ್ಧಿಯನ್ನು ಕುರಿತಾದ ಶಿಫಾರಸುಪತ್ರವನ್ನು ಪಟೇಲರಲ್ಲಿ ರುಜುವಾತಿಗಾಗಿ ಪಡೆಯಬೇಕಾಗಿ ಬಂದುದೂ ಹಿಂದಣ ಕಥೆಯಲ್ಲಿದೆ. ಆವೂರಿಂದ ಗಟ್ಟಕ್ಕೊಂದು ರಾಜರಸ್ತೆಯಿದೆ; ಆ ರಸ್ತೆ ಆವೂರ ಸೇತುವೆಯ ಮೇಲಿಂದ ಹಾದುಹೋಗಿದೆ; ಆವೂರಿಂದ ನಡೂರು ದಾಟಿ ನಮ್ಮೂರಿಗೆ, ನಮ್ಮೂರಿಂದ ಮತ್ತೊಂದೂರಿಗೆ ಪೆದ್ದಾರಿಗಳಿವೆ; ಗಟ್ಟಕ್ಕೆ ಹಾದಿರುವ ರಸ್ತೆ ಕವಲೊಡೆದಲ್ಲಿಂದ ಬಲಕ್ಕೆ ನಡೆದರೆ ಮಂಗಳೂರಿಗೆ ತಲುಪಲಾಗುವುದು;—ಎಂಬಿಷ್ಟು ವಿವರವನ್ನು ಹಿಂದಣ ಕಥೆಗಳಿಂದ ತಿಳಿಯುವುದು ಕಷ್ಟವಾಗಿಲ್ಲ.

ಬೊಗ್ಗು ಮಹಾಶಯನು ತನ್ನಷ್ಟಕ್ಕೆ ಹಾಡುತ್ತ ಬಂಡಿ ನಡೆಸಿ ಬರುತಿದ್ದಂಬು, ಅವನ ಮನಸ್ಸಿನಲ್ಲಿ ಏನು ಭಾವನೆಗಳಿದ್ದುವೋ, ನಾವರಿಯೆವು. ಆದರೂ ಎತ್ತಿನ ಗಾಡಿಯಲ್ಲಿ ಬಂಡಿಪ್ರಯಾಣ (ಸವಾರಿ) ಮಾಡುವ ಅಂದಿನ ರೀತಿ ಇಂದು ರೂಢಿಯಲ್ಲಿಲ್ಲ; ಆ ಸವಾರಿಯ ಸುಖವನ್ನು ನಾವು ಒಮ್ಮೆ ವಿವರಿಸಿದ್ದೇವಾದರೂ, ಅದರ ಕೀರ್ತಿಗಾನವನ್ನು ಮಾಡುವವರನ್ನು ಕಾಣದೆ ನಮಗೆ ಖೇದವಾಗುತ್ತಿದೆ. ಇನ್ನೂರೈವತ್ತು ಸೂಡಿ ಒಣಹುಲ್ಲಿನ ಹಾಸು, ಮೇಲೆ ಕೇದಗೆ ಗರಿಯ ಚಾಪೆ, ಅದನ್ನು ಮುಚ್ಚಿದೊಂದು ಮೈಸೂರು ಗೌಡರ ಕಂಬಳಿ, ಕಂಬಳಿಯ ಮೇಲೆ ನಮ್ಮ ಶಯನ. ಹೊರಬಯಲಿಂದ ತಂಗಾಳಿ, ಕಾಡಿನಿಂದ ಅಥವಾ ಗುಡ್ಡಗಳ ನಡುವಣಿಂದ ಬೀಸುತ್ತಲಿರಲು, ಎತ್ತಿನ ಕೊರಲ ಗಂಟೆಗಳು ಆಳಿನ 'ಓ ಓ' ರಾಗಕ್ಕೆ (ಪಾಡುದನಕ್ಕೆ) ತಾಳವಿಡುವಾಗ, ಕಣ್ಣೆವೆಗಳು ಹೇಗೋ ಭಾರವಾಗಿ ಕದ ಮುಚ್ಚಲು, ಆತ್ಮನು ಬಾಹ್ಯಸೃಷ್ಟಿಯನ್ನೇ ಮರೆವನು. ಗಾಡಿಚಕ್ರಗಳ ಕಿರಿಚಾಟವೂ, ಎತ್ತುಗಳ ಕಾಲುಹೆಜ್ಜೆಗಳ ದಡ

ದಡವೂ ಆತ್ಮನ. ಯೋಗನಿದ್ರೆಯ ಜೋಗುಳವನ್ನು ಹಾಡುತ್ತಿರುವಂತೆ
ತೋರುವುವು. ತಿಳಿಯದೇ ಗೊರಕೆಯ ದನಿ ಈ ಹಾಡಿನೊಡನೆ ಸಮ
ತಾನವಾಗಿ ಹೊರಡುವುದು. ತಟ್ಟನೆ ಎಚ್ಚರವಾದರೆ, ನಾಲ್ಕು ಮೈಲು
ದೂರ ಬಂದೆವು; ತಿಂಗಳಬೆಳಕಿಷ್ಟು ಚೆಲ್ಲಿದೆ; ಯಾವುದೋ ಬೆಟ್ಟ,
ಯಾವುದೋ ಸಾಲುಮರಗಳ 'ಬಹುಮಾನದ ಕಾವಲ' ನಡುವಣಿಂದ
ದೂರದಿಂದ ಸ್ವಲ್ಪ ಎತ್ತರಕ್ಕೆ ತಲೆಯೆತ್ತಿರುವ ಗುತ್ತಿನ ಮನೆಯೋ,
ಅಂಗಡಿಯೋ ತೋರುವುದು; ಮಾರ್ಗದ ಮೇಲೆ ರತ್ನಕಂಬಳಿಯಂತೆ
ಅಲ್ಲಲ್ಲಿ ಬಿಳುಪೂ, ಕಪ್ಪೂ, ಎಲೆಹಾಸೂ ತೋರುತ್ತಿದೆ; ಮತ್ತೊಬ್ಬನಾರೂ
ಮಾರ್ಗದ ಮೇಲೆ ಸುಳಿಯುತ್ತಿಲ್ಲ. ಅದೇನು? ಕಾಡಿನ ನಡುವೆ ಉರಿವ
ಸೂಟಿಗಳು? ಭೂತದ ಕೋಲವೇ? ಉರಿಗೊಳ್ಳಿಗಳೇ? ಪ್ರಯಾಣಿಕರೇ?
ಆಕಾಶವು ಎಷ್ಟೆತ್ತರ! ಅದರ ಬಣ್ಣವೇನು! ತುದಿಮುಟ್ಟಲಾಗದಷ್ಟೆತ್ತರ!
ಅದರಲ್ಲೆಲ್ಲ ಗಭೀರಮೌನತೆಯೇ ತುಂಬಿದೆ. ಮೌನಪ್ರಪಂಚಕ್ಕೆ ಆಕಾಶ
ವೆನ್ನುವರೇನು? ಅದೂ ಮೌನವೆನ್ನಬೇಡಿರಿ, ಈ ಮೌನವು ಕಿವಿಗಳಿಗೆ
ಗೋಚರವಾಗುವಷ್ಟಿದೆ! ಪುನಃ ನವಚೇತನ, ನವಹರ್ಷ ಹುಟ್ಟಿಸುವ
ತಂಗಾಳಿಯುಸಿರು ಬೀಸುತ್ತಿದೆ! ತಂಗಾಳಿಗೂ ಗೊರಕೆಗೂ ಸಂಬಂಧ
ವೇನೋ ಇದೆ. ಪುನಃ ಎಚ್ಚತ್ತಾಗ, ರಾಜಮಾರ್ಗವು ಹೊಲಗಳ ನಡು
ವಣಿಂದ ಹಾದುಹೋಗುತ್ತಿದೆ. ಆಗಾಗ, ಮೈಲುಕಲ್ಲುಗಳು ಬಿಳುಪೇರಿ
ನಿಂತು, ಎಷ್ಟು ದೂರ ಬಂದೆವು ಎಂದು ಮೌನವಾಗಿ ಸೂಚಿಸುತ್ತಿವೆ.
ಅಹಃ, ಬೆಳಕು ಹರಿಯುತ್ತಿದೆ, ತಂಗಾಳಿಯು ತಂಪೇರುತ್ತಿದೆ. ದೂರದಲ್ಲಿ
ದಿಗಂತದ ಮೇಲೊಂದು ಚಿನ್ನದ ರೇಖೆ ಕಾಣುತ್ತಿದೆ. ಎಚ್ಚರವಿರಬೇಕೆಂ
ದರೂ, ನಿದ್ದೆಯು ಕವಿದೇಬಿಡುವುದಲ್ಲ! ಯಾವುದೋ ಒಂದು ಕಲ್ಲು
ಗಾಡಿಯ ಚಕ್ರಕ್ಕೆ ನಿಷ್ಠುರತೆಯಿಂದ ಬಡೆದು, ಸವಾರಿ ಮಾಡುವವನ
ತಲೆಯು ಗಾಡಿಯ ಬದಿಗೆ ಬಡೆವಂತೆ ಎಚ್ಚರಿಸಲು,—ಬೆಳಗಾದ
ಮೇಲೂ, ವಿಶ್ವದ ಸೌಂದರ್ಯದ ಸಾಗರವೇ ಕಣ್ಣಮುಂದೆ ಮೆರೆ
ವಾಗಲೂ ನಿದ್ರಾಮೋಹವೇ?—ಎಂದು ಆತ್ಮಕ್ಕೊಂದು ಪ್ರಶ್ನೆ ಕೇಳಿ
ದಂತಾಗುವುದು. ಬೆಳಗಾಗಿದೆ; ಎದುರಿಂದಲೂ ಹಿಂದಣಿಂದಲೂ ಗಾಡಿ
ಯಾಗಲಿ, ಹೊಲಕ್ಕೆ ತೆರಳುವ ಕೃಷಿಕನ ಎತ್ತುಕೋಣಗಳಾಗಲಿ ಗೋಚರಿ

ಸುವುವು. ಚಿಕ್ಕದೊಂದು ತೊರೆಯು ಮೇಲಿಂದ ಗಾಡಿಯು ಹೋಗುತ್ತ, ಅದು ತಾಮ್ರದ ರಸದಂತೆ ಕಾಣುತ್ತಿದೆಯೇಕೆ? ಮುಂದೆ ಅಲ್ಲಲ್ಲಿ ಕಾಡಿನಲ್ಲಿ ಅಥವಾ ಗದ್ದೆಗಳಲ್ಲಿ ಗೇಯುವವರ ಮಾತುಕತೆಗಳ ಗುಲ್ಲು ಕೇಳಿಸುತ್ತಲೇ ಹೊಟ್ಟೆಗೆ ಹಸಿವಿನ ನೆನಪಾಗುವುದು. ಪಟ್ಟಣದಲ್ಲಿ ಮಾಡಿಕೊಂಡ ಕಾಫಿ-ದೋಸೆ ಅಥವಾ -ಇಡ್ಲಿಗೆಗಳ ಅಭ್ಯಾಸಕ್ಕೆ, ಹೆದ್ದಾರಿಯಲ್ಲೆಲ್ಲಿ ಅವಕಾಶ? ಆದರೆ ನಾಲಗೆ ನೀರೂರುವುದೇಕೋ! ಮನಸ್ಸಿಗೇಕೋ ಅಸಂತುಷ್ಟಿ!

ಮಂಗಳೂರು ಪದವಿನಿಂದ ಆವೂರಿಗೆ ಬರುತ್ತ, ಎಷ್ಟೋ ಊರುಗಳನ್ನು ದಾಟಬೇಕಾಗುವುದೆಂದು, ಹಗಲಲ್ಲಿ ಇನ್ನಷ್ಟು ಚೆನ್ನಾಗಿ ಗೊತ್ತಾಗುವುದು. ನೂರಾರು, ಸಾವಿರಾರು ಅಡಿ ಎತ್ತರದ ಬೆಟ್ಟಗಳು ಸುದೂರದಲ್ಲಿ ಸಾಲಾಗಿ ನಿಂತಿವೆ. ಅವನ್ನು ಅಲ್ಲಲ್ಲಿ ಕುರಿಚಲು ಗಿಡಗಳು ಮುಚ್ಚಿರುವಂತೆ, ನಡುನಡುವೆ ಒಡೆದು ಕಣಿವೆಗಳಾಗಿರುವಂತೆ, ನಮ್ಮ ಜಿಲ್ಲೆಯ ಗಡಿಯ ಗೋಡೆಗಳಾಗಿರುವ ಅವು ಇಲ್ಲಿನ ವಿಪರೀತ ಮಳೆಯಲ್ಲಿ ಕುಸಿದುಬೀಳವಂತೆ ಅವುಗಳಿಗೆ ಮುಳಿಛಾವಣಿ ಹೊದಿಸಿರುವಂತೆ, ಹುಚ್ಚು ಹುಚ್ಚಾಗಿಯೋ ಆದರೂ ಭಾವಿಸಬೇಕಾಗುವುದು. ಕೆಳತಳದಲ್ಲಿ ಹೊಳೆ; ಎಲ್ಲಿಂದಲೋ ಬಂದಿದೆ. ಎಷ್ಟು ಓರೆಕೋರೆ, ಹಾವಿನ ಸುಳಿವಿನಂತೆ! ಅದಕ್ಕೆ ನೀರಿನ ಕಪ್ಪ ತಂದೊಪ್ಪಿಸುವ ಹಳ್ಳಗಳೆಷ್ಟು! ಅದರ ಪಡಗಳ ಬಳಿ ಹೊಲಗಳೆಷ್ಟು! ಅತ್ತಿತ್ತ ಎತ್ತರಕ್ಕೆ ಹುಲ್ಲುಗಾವಲುಗಳೆಷ್ಟು! ರಿಸರ್ವ್ಡ ಕಾಡುಗಳ ಕಲ್ಲುಗಡಿಗಳೂ ಗೋಚರವಾಗದೆ ಇರುವುದಿಲ್ಲ. ಅಲ್ಲಲ್ಲಿಂದೆಲ್ಲ ಹೊಗೆ ಏಳುತ್ತಲೂ ಇದೆ; ಗುಲ್ಲು ಕೇಳಿಸುತ್ತಲೂ ಇದೆ.

ಆ ಹೊಗೆ, ಆ ಗುಲ್ಲು, ಒಂದೊಂದು ಗ್ರಾಮದಿಂದ ಒಂದೊಂದು ರೀತಿಯಾಗಿ ತಿಳಿಯಬರುವುದು. ಬತ್ತ ಬೇಯಿಸುವ, ಗೊಬ್ಬರ ಸುಡುವ, ಕಾಡು ಉರಿಯುವ, ಕಡೆಗಳಿಂದ ಹೊಗೆ ಏಳುತ್ತಿದೆ; ನೇಜಿ ನೆಡುವ, ಪೈರು ಕೊಯ್ಯುವ, ಹೊರೆ ಸಾಗಿಸುವ, ಕಡೆಗಳಿಂದ ಗುಲ್ಲು ಕೇಳುತ್ತದೆ. ಈ ಗ್ರಾಮಗಳಲ್ಲಿ ಆವೂರಿನ ಸ್ಥಾನವು ಕಡಿಮೆಯಾಗಿಲ್ಲ. ಒಂದೂರು ಎರಡೂರುಗಳ ಈಚೆಗೆ, ನಾಲ್ಕೂರು ಐದೂರುಗಳ ಆಚೆಗೆ, ಆರೂರು

ಏಳೂರುಗಳ ಒತ್ತಿನಲ್ಲಿ, ನಮ್ಮ ತುಳುನಾಡ ಅಪ್ರತ್ಯಕ್ಷ ಕವಿರಾಜ ಮುದ್ದಣನ ಬಾಲ್ಯವಿದ್ಯಾಭ್ಯಾಸದ ಲೀಲಾರಂಗವಾದ ಮೂರೂರು ಇದೆ. ಮೂರೂರಿನ ಅತ್ತ ತೋರುವುದು ಅತ್ತೂರು; ಅತ್ತೂರಿನ ಇತ್ತ ತೋರುವುದು ಇತ್ತೂರು; ಇತ್ತೂರಿನ ಆಚೆಗೆ ಆವೂರು.

ಆವೂರಿನ ವೈಶಿಷ್ಟ್ಯವೆಂದರೆ, ಅಲ್ಲಿನ ಮಠ,—ಅಯ್ಯಗಳ ಮಠ, ಅದು ಗುರುಮಠವೂ ಅಹುದು. ಮಠದಲ್ಲೇ ದೇವಾಲಯವಿದೆ. ದೇವ ವಿಗ್ರಹದ ಪೂಜೆ, ಉತ್ಸವಾದಿಗಳು, ಬ್ರಾಹ್ಮಣಸಂತರ್ಪಣೆ, ಆವೇಶ, ಮತ್ತು ಆಗಾಗ ಆಡಳಿತದವರಿಗೂ ಪೂಜಾರಿಗಳಿಗೂ, ಮೊಕ್ತೇಸರರು-ಪತ್ತುಸಮುಸ್ತರುಗಳೊಳಗೂ ಕಚ್ಚಾಟಗಳು,—ನಡಿಯುವ ಸ್ಥಳವೂ, ಮಾತ್ರವೇ ಅಲ್ಲದೆ,—ಭಜಕರ ಮಕ್ಕಳಿಗೆ ಅಯ್ಯಗಳು ವಿದ್ಯಾದಾನ ಮಾಡುವ ಮಠವೂ ಅದು. ಶೂದ್ರರು ಮಠದ ಹೆಬ್ಬಾಗಿಲ ಬಳಿಯ ಅಂಬಲದ ಮೊಗಸಾಲೆ ದಾಟಬಾರದೆಂದು ನಿಯಮವಿರುವಂತೆಯೇ, ವಿದ್ಯಾವಿಹೀನರು ಶೂದ್ರಸಮಾನರೆಂದು ಸರ್ವ ಬಾಲಕರಿಗೂ ಪಾಠ ಹೇಳುವ ಸ್ಥಳವೂ ಆ ಮೊಗಸಾಲೆಯೇ. ದೇವಳದ ಸುತ್ತು, ಸಮಾರಾಧನೆಗೆ ಬರುವ ಬ್ರಾಹ್ಮಣರು, ನಿರಂತರ ಉದ್ಯೋಗವು ಲೋಕನಿಂದೆಯಾಗಿರುವ ಕೆಲವು ಕೂಳುಂಬ ಜನರು, ಮತ್ತು ತಿರುಗಾಟವೇ ಮುಖ್ಯ ಕ್ರಮವಾಗಿಟ್ಟುಕೊಂಡು ಬೇರೆ ನೆಲೆಯಿಲ್ಲದ ದನಕರುಗಳು, ನಾಯಿಗಳು,—ಇವರಿಗಾಗಿದ್ದಿತು. ತೀರ್ಥಮಂಟಪದಲ್ಲಿ ಉತ್ತಮಜಾತಿಯವರೆಂಬವರಿಗೆ (ಸ್ತ್ರೀಪುರುಷರಾದಿಯಾಗಿ) ಸ್ಥಾನವಿತ್ತು. ಗರ್ಭಗೃಹದಲ್ಲಿ ಪೂಜಾರಿಗಳು, ಒಂದೆರಡು ಬೆಕ್ಕುಗಳು, ನೂರಾರು ಜಿರಲೆಗಳು, ಶಿಖರದ ಬುಡದಲ್ಲಿನ ಗೋಮುಟದಲ್ಲಿ ಅಷ್ಟೇ ಬಾವಲಿಗಳು,—ಇವರಿಗೆ ಮಾತ್ರ ಹೋಗಿಬರಲು ಆತಂಕವಿರಲಿಲ್ಲ. ಶಾಸ್ತ್ರವನ್ನು ಮೀರಿ ನಡೆವುದಕ್ಕೆ ಯಾವನಿಗೂ ಬುದ್ಧಿ ಬಾರದಂತೆ, ದೇವರ ಬೆದರಿಕೆಯಿದ್ದಿತು; ಅದಕ್ಕಿಂತಲೂ ಹೆಚ್ಚಾಗಿ ಮೊಕ್ತೇಸರರು ಹತ್ತುಸಮುಸ್ತರ ಅನುಮತಿಯಿಂದ ಪೂಜಾರಿಗಳ ವಶ ಕೊಟ್ಟ ನಿಯಮೋಲ್ಲಂಘನೆಗಳ ದಂಡನೆಯ ಶಸ್ತ್ರಗಳೂ ಇದ್ದುವು. ಆ ಕಾಲಕ್ಕೆ ಆ ನಿಯಮಗಳು ಅಗತ್ಯವೇ ಆಗಿದ್ದುವು; ಜನರಲ್ಲಿ ಅಷ್ಟು ಭಯಭಕ್ತಿ ಇದ್ದುದರಿಂದಲೇ, ಈಗ ಚಿಕ್ಕಾಸು ಕಾಣಿಕೆ ಸಿಗಲಾರದೆ ಇರುವ ದಿನಗಳ

ಲ್ಲಾದರೂ, ಅಂದು ಮೌಲ್ಯ ಕಟ್ಟಿದ ಹರಕೆಗಳಿಂದಾಗಿ, ದಿನಕ್ಕೈದು ಮಂದಿ ಬ್ರಾಹ್ಮಣರಿಗೆ ಸಂತರ್ಪಣೆಯು ಕೂಳೂ, ವಸತಿಗೆ ಅಂಬಲವೂ, ಉತ್ಸವಾದಿಗಳಿಗೂ ಸಮಾರಾಧನೆಗಳಿಗೂ ವ್ಯಾಜ್ಯಗಳಿಗೂ ಹಣವೂ, ಸೇಕಡಾ ೧೮ರ ಸಲೆ ಬಡ್ಡಿಯಲ್ಲಿ ಸಾಲವೂ, ದೊರೆವ ಅನುಕೂಲತೆಯಿದೆ. ಹಿಂದಿನವರು ಧರ್ಮಾತ್ಮರು; ಸಮಾಜಕ್ಕೆ, ಆ ಅನಾಗರಿಕ ದುರ್ದಿನಗಳಲ್ಲಿ (ಅಕ್ಕಿ ಮುಡಿಗೆ ಒಂದೂಕಾಲು ರೂಪಾಯಿ ಬೆಲೆ ಇದ್ದಾಗ) ಅವರು ಭಕ್ತಿಯಿಂದ ಸೇವೆ ಮಾಡಲು ಒಪ್ಪಿಸಿದ ಹರಕೆಯಿಂದ, ಅವರ ಧರ್ಮಬುದ್ಧಿಯು ಚಂದ್ರಸೂರ್ಯರಿರುವತನಕ ವಿರಾಜಿಸುವಂತಾಗಿದೆ. ಇವೇ ಇಪ್ಪತ್ತು ವರ್ಷಗಳಿಂದೀಚೆಗೆ, ಹರಕೆಗಳಿಗಾಗಿ ಮೌಲ್ಯ ಕಟ್ಟಿದವರು ಹತ್ತೆಂಟು ಮಂದಿಯೂ ಇಲ್ಲ. ದೇವರ ಆಭರಣಾದಿಗಳು ಹೆಚ್ಚಿದುದಿಲ್ಲ; ವ್ಯಾಜ್ಯಗಳು ಕಡಿಮೆಯಾಗಿಲ್ಲ; ದೈನಿಕ ಸಂತರ್ಪಣೆಗೆ ಇರುವ ಐವರು ಬ್ರಾಹ್ಮಣರಿಗೂ ಪೂಜೆಯ ಭಟ್ಟರ, ಆಡಳಿತೆದಾರರ, ದೇವಳದ ವಕೀಲರ ಹಾಗೂ ಕಚೇರಿಯ, ಕೆಲಸ ಮಾಡುವ ಹಕ್ಕುಜವಾಬುದಾರಿಗಳು ಸಲ್ಲುತ್ತಿವೆ. ಸರಕಾರದ ಅಧಿಕಾರಿಗಳಾರೂ ಆವೂರಿಗೆ ಬಂದಲ್ಲಿ, ಅವರನ್ನು ಎಂದಿನಂತೆ 'ಸ್ಪೆಶ್ಯಲ್' ವಸಂತಪೂಜೆ ಅಥವಾ ಹೂಪೂಜೆಗೆ ಬಿರುದುಬಾವಲಿಗಳಿಂದ, ದೀವಟಿಗೆ, ಹಿಲಾಲು, ಗೇಸ್‌ಲಾಯ್ಟ್ ಸಮೇತವಾಗಿ ಕರೆಯಿಸಿ, ಅವರಿಗೆ ನಾಲ್ಕು ಹರಿವಾಣ ತುಂಬ ಪ್ರಸಾದವನ್ನು ಬಹುಮಾನಿಸಿ, 'ಬೇಂಡ್' ವಾದ್ಯದಿಂದ ಅವರ ನಿವಾಸಕ್ಕೆ ಹಾಗೆಯೇ ಕಳುಹಿಕೊಡುವ ಪದ್ಧತಿ ಈಗಲೂ ಸಾಂಗವಾಗಿ ನೆರವೇರುತ್ತಲಿವೆ. ಒಂದೊಂದು ಸಲ, ದೈವಾನುಗ್ರಹದಿಂದ ಆಗಲೇ (ಅಧಿಕಾರಿಗಳ ಸವಾರಿ ಚಿತ್ತೈಸಿದಾಗ) ಆವೇಶವೂ ಮೈದೋರಿ, ಅಧಿಕಾರಿಯು ಮಹಾಧಿಕಾರಿಯಾಗಲೆಂದು ದರ್ಶನದ ಪಾತ್ರಿಯು ಅಮರವಾಣಿ ನುಡಿದುದೂ ಉಂಟು. ಇಂತಹ ನುಡಿಯು ಮುಂದೆ ಯಥಾರ್ಥವಾದಾಗ, ದೇವರಿಗೆ ಮನಿಯಾರ್ಡರು ಮೂಲಕವಾದರೂ ನಾಲ್ಕಾಣೆಯಷ್ಟು ಸಂದುದು ಮಾತ್ರ ದೇವಳದ ಲೆಕ್ಕ ಪುಸ್ತಕಗಳಲ್ಲಿಲ್ಲ.

ದೇವಳದ ಇತಿಹಾಸಕ್ಕಾಗಿ ಇಲ್ಲಿ ಬರೆಯುತ್ತಿಲ್ಲವಾದಕಾರಣ, ನಾವು ಮಠದ ಮೇರೆ ಮೀರುವುದು ಸಲ್ಲದು. ನಾವು ಯಾವ ಕಾಲದ

ಪ್ರಸ್ತಾಪವೆತ್ತಿ ಈಗ ಬರೆಯುತ್ತೇವೋ, ಅದು ಐವತ್ತು ವರ್ಷ ಅಥವಾ ಎರಡು ತಲೆ ಹಿಂದಣ ಮಾತು. ಆಗ ಮಠದಲ್ಲಿ ಪೂಜಾರಿಯಾಗಿದ್ದ ಬ್ರಾಹ್ಮಣನು ಪುತ್ರಸಂತತಿಯಿಲ್ಲದೆ, ಪುತ್ರೀಸಂಪತ್ತಿನಿಂದ ಅನುಗ್ರಹೀತನಾಗಿದ್ದನು. ಹಿರಿಯ ಮಗಳ ಮದುವೆಗೆ ನಿಶ್ಚಯವಾದಂದೇ ಅವನ ಮನೆ ಸುಟ್ಟಿತು; ಮದುವೆಯಾಗಿ ಮಗಳು ಗಂಡನ ಮನೆಗೆ ಹೋಗುವುದರೊಳಗೆ ಆ ಗಂಡನಿಗೆ ಗಂಡಾಂತರವಾಗಿ ಮಗಳು ಬಾಲವಿಧವೆಯಾದಳು. ಆಗ ಆವೂರಲ್ಲಿ ಇಪ್ಪತ್ತು ವಯಸ್ಸಿನ ಅವಿವಾಹಿತೆಯರಾದ ಆಪತ್ತುಗಳು ಇರಲಿಲ್ಲ. ಆಗ, ಹತ್ತರೊಳಗೆ ಹೆಣ್ಣಿಗೆ ಮದುವೆ, ಗಂಡಿಗೆ ಉಪನಯನ; ಇಪ್ಪತ್ತರೊಳಗೆ ಹೆಣ್ಣಿಗೆ ವೈಧವ್ಯ, ಅಥವಾ ಬಾಂಧವ್ಯ, ಗಂಡಿಗೆ ದ್ವಿತೀಯ ವಿವಾಹ ಅಥವಾ ಸಂತತಿಯ ದಾಹ, ಇವೇ ರೂಢಿಯಾಗಿದ್ದುವು. ಪೂಜಾರಿಯ ಎರಡನೇ ಮಗಳು ಸುಲಕ್ಷಣೆ, ಪ್ರವೀಣೆ. ಹಿರಿಯರಿಂದ ಓದು ಕಲಿತಿದ್ದಳು. ದೇವನಾಗರಿ ಬರಹವನ್ನು ತಂದೆಯಿಂದ ಕಲಿತು, ಶುಕ್ರವಾರ ದೇವೀಮಾಹಾತ್ಮ್ಯ, ಶನಿವಾರ ಶನಿಮಾಹಾತ್ಮ್ಯ, ದಿನಂಪ್ರತಿ ಸಹಸ್ರನಾಮ ಪಾರಾಯಣ ಮಾಡುತಿದ್ದಳು. ಅವಳಲ್ಲಿ ದುರ್ಗುಣವೆಂದರೆ, ಅವಳ ಹಣೆಯ ಮೇಲಿದ್ದ ಆ ಕುಂಕುಮದ ಬೊಟ್ಟು! ಈಶ್ವರನ ಹಣೆಗಣ್ಣಿನಂತೆ, ಕೆಂಪಗಾಗಿ, ಎದ್ದು ಬರುವಂತಿದ್ದಿತು. ಬಡ ಬ್ರಾಹಣನು ಉತ್ತಮ ಜಾತಕ ನೋಡಿ, ದೂರದ ಹಳ್ಳಿಯಿಂದ ಅಳಿಯನನ್ನು ಗೊತ್ತು ಮಾಡಿದನು. ಮದುವೆಯಾಯಿತು. ಪುತ್ರಹೀನನಾದ ಬ್ರಾಹ್ಮಣನು ಅಳಿಯನನ್ನು ಮನೆಯಳಿಯನನ್ನಾಗಿ ಸಾಕಿದನು. ಈತನು ಅಯ್ಗಳ ಸ್ಥಾನಕ್ಕೆ ಅರ್ಹತೆ ಪಡೆದ ಕಾರಣದಿಂದ, ಆವೂರು ಮಠದ ಮೊಗಸಾಲೆಯಲ್ಲಿ ಬಾ●ರಿಗೂ ಪಾಠ ಹೇಳಿಕೊಡಲು ಈತನನ್ನು ಮೊಕ್ತೇಸರರು ನೇಮಿಸಿದರು. ಬ್ರಾಹ್ಮಣನು ಸಂತೋಷಗೊಂಡನು.

ಗಂಡುಮಕ್ಕಳೇ ಇಲ್ಲದ ಮನೆಯಲ್ಲಿ ಮೊದಲನೇ ಪುತ್ರಿಯು ಬಾಲವಿಧವೆಯಾಗಿದ್ದಾಗ, ಎರಡನೆಯವಳು ಗರ್ಭಿಣಿಯಾದಳೆಂಬುದು ಬ್ರಾಹ್ಮಣನ ಸಂತೋಷವನ್ನು ಬಹಳ ಹೆಚ್ಚಿಸಿತು. ಇನ್ನು ಧೇವರ ಪೂಜೆಯನ್ನಾದರೂ ಅಲಕ್ಷ್ಯದಿಂದ ಮಾಡುವನಾದರೂ ಅಳಿಯನ ಮತ್ತು ಗರ್ಭಿಣಿ ಪುತ್ರಿಯ ಸೌಖ್ಯವು ಹೆಚ್ಚುವಂತೆ ಬಹಳವಾಗಿ ಜಾಗರೂಕನಾಗಿದ್ದನು.

ಗರ್ಭಿಣಿಗೆ ತಿಂಗಳು ತುಂಬಿತು; ಸಾಲೆಗೆ ವರ್ಷಾವಧಿ ಪರೀಕ್ಷೆಯ ಗಳಿಗೆಯೂ ತುಂಬಿತು. ಅಳಿಯ ಅಯ್ಯಗಳು ಒಂದು ಕಾಲನ್ನು ಮನೆಯಲ್ಲೂ ಮತ್ತೊಂದನ್ನು ಸಾಲೆಯಲ್ಲೂ ಇಟ್ಟು ಕಾಲಕ್ಷೇಪ ಮಾಡಬೇಕಾಯಿತು. ಆದರೂ ಸಾಲೆಯ ಬೆಂಬಲಕ್ಕೆ ದೇವರೇ ಇರುವಾಗ ಬೆದರಿಕೆಗೆ ಕಾರಣವುಂಟಾಗಲಿಲ್ಲ.

ಪರೀಕ್ಷೆಯ ದಿನ ಇಬ್ಬರು ಅಧಿಕಾರಿಗಳು ಆವೂರಿಗೆ ಹತ್ತಿರದ ಗ್ರಾಮದಿಂದ ಸೂರ್ಯೋದಯಕ್ಕೆ ಸರಿಯಾಗಿ ಗಾಡಿ ಹತ್ತಿ ಬಂದು ಮಠದ ಬಳಿಯಲ್ಲೇ ಇಳಿದರು. ಕೆರೆಗೆ ಹೋಗಿ, ಕೈಕಾಲುಮುಖ ತೊಳೆದು ದೇವರಿಗೆ ಹಣ್ಣುಕಾಯಿ ಸಮೇತವಾಗಿ ದೇವಳಕ್ಕೆ ದಯಮಾಡಿಸಿದರು. ಅವರು ವಿದ್ಯಾ ಇಲಾಖಾಧಿಕಾರಿಗಳು, ಇಬ್ಬರೂ ಬ್ರಾಹ್ಮಣರು, ರಾಜಧಾನಿಯಲ್ಲಿ ಇರತಕ್ಕವರು, ಎಂದು ಪೂಜಾರಿಗೆ ತಿಳಿದುದೇ ಅಳಿಯ ಅಯ್ಯಗಳಿಗೂ ತಿಳಿಯಿತು. ಈ ವಿಶೇಷ ವಾರ್ತೆ ಊರಲ್ಲೆಲ್ಲ ಹರಡಿತು. ಒಂದನೇ ಮೊಕ್ತೇಸರರು ಅಲ್ಲಿಗೆ ಬಂದರು. ರಥೋತ್ಸವಕ್ಕಾಗಿ ಅವರು ಮಾಡಿಕೊಳ್ಳುತ್ತಿದ್ದ ಅಲಂಕಾರ ತೀರಿದ ಬಳಿಕ ಉಪಚಾರಗಳು ಮುಗಿದು ಪ್ರಸಾದ ಕೊಡಲಾಯಿತು. ಶಾಲಾ ಪರೀಕ್ಷೆಗೆ ಪ್ರಾರಂಭವಾಗಬೇಕೆಂದು ಅಧಿಕಾರಿಗಳ ಅಪ್ಪಣೆಯಾಯಿತು. ಇಬ್ಬರು ಅಧಿಕಾರಿಗಳಲ್ಲಿ ಒಬ್ಬರು ಮೊಗಸಾಲೆಯಲ್ಲಿ ಒಂದು ಮುಕ್ಕಾಲಿಗೆಯ ಮೇಲೆ ಕೂತರು; ಮತ್ತೊಬ್ಬರು ಅಲ್ಲೇ ಇದ್ದ ಪತ್ತಾಯದ ಮೇಲೆ ಕೂತರು.

ಪರೀಕ್ಷೆಗೆ ಪ್ರಾರಂಭವಾಗುವ ಮೊದಲು ಮಕ್ಕಳನ್ನು ಬರಹೇಳಲು ಕರೆಕಳುಹಿದ ಪಾಟಾಳಿಯು ಇನ್ನೂ ಬಂದಿಲ್ಲ. ರಾಯದ್ವಯಕ್ಕೆ ಗಾಡಿ ಸವಾರಿಯ ನಿದ್ರಾಭಂಗದಿಂದಾದ ಪಿತ್ತವೂ ಇದೆ; ಬರೇ ಮಠದ ಸಾಲೆ, ದೇವರ ಮಕ್ಕಳು,–ಇವರನ್ನು ಪರೀಕ್ಷಿಸುವುದೇನು ಎಂಬ ಅಭಿಮಾನವೋ ದೈನಿಕ ಅಭ್ಯಾಸದ ಅಭಿಪ್ರಾಯವೋ ಉಂಟಾಗಿದೆ. ಅಷ್ಟರಲ್ಲಿ ಅಳಿಯ ಅಯ್ಯಗಳು ಎರಡು ತಟ್ಟೆಗಳಲ್ಲಿ, ಗಟ್ಟಿದ ಬೆಲ್ಲ, ಜ್ಯೇಷ್ಠಮಧು, ಮೆಂತೆ, ಕೊತ್ತುಂಬರಿ, ಜೀರಿಗೆ, ಮೆಣಸಿನಕಾಯಿ ಹುಡಿ ಬೆರಸಿದ್ದು, ದೇವರಿಗೆ ಬಿಟ್ಟ ಕಾಥೇವಾಡದ ಆಕಳಿನ ನಾಲ್ಕು ಕುಡುತೆ ಹಾಲಿನಿಂದಲೇ ಕಾಯಿಸಿದ್ದು,

ಚಿಗುರುಗಳಿಂದ ತಯಾರಿಸಿದ್ದ ಕಷಾಯವನ್ನೂ, ದೇವರ ಕಾಣಿಕೆಗೆ ಬಂದವು ಗಳಲ್ಲಿಂದ ಆರಿಸಿದ್ದ ಹತ್ತು ಬಾಳೆಹಣ್ಣುಗಳನ್ನೂ ಪರೀಕ್ಷಕರ ಮುಂದಿಟ್ಟು ಕೈಮುಗಿದು ನಿಂತರು. ಅಧಿಕಾರಿಗಳು ನಗುತ್ತ, ಸಂಭ್ರಮದಿಂದ ಆರೋ ಗಣೆಗೈದರು. ಹಣ್ಣು ಬಹಳ ರುಚಿ, ಕಷಾಯ ಬಹಳ ಸತ್ವವುಳ್ಳದು ಎಂದು ಬಹಳವಾಗಿ ಹೊಗಳಿ, ಬಹಳವಾಗಿ ಬೆವರಿ, ಬಹಳವಾಗಿ ತೇಗಿ ದರು. ಕೈತೊಳೆದು ವಿಶಾಸೆಗಳನ್ನು ಪೂಸಿದ ಬಳಿಕ, ಕರ್ಪೂರ ವೀಳೆಯದ ಹರಿವಾಣವೂ ಅಲ್ಲಿಗೆ ಸುಳಿಯಿತು; ವೀಳೆಯ ಜಗಿದಾಯಿತು. ನಗು ಹಿರಿದಾಯಿತು.

ವಿದ್ಯಾರ್ಥಿಗಳು ಅಷ್ಟರಲ್ಲಿ ಬಂದರು. ಅವರೆಲ್ಲರಿಗೆ ಅಂದೇ ಪರೀಕ್ಷೆಯೆಂದು ಗೊತ್ತಿದ್ದಿತು; ಯಾರ ಮನೆಯೂ ಅರ್ಧ ಮೈಲಿಗೂ ದೂರವಾಗಿದ್ದಿಲ್ಲ. ಆದರೆ, ಬರಲು ವಿಳಂಬವೇಕೆ? ಕೆಲವರು ಹಿಂದಿನ ಸಂಜೆ ಒಗೆದ ಬಟ್ಟೆಗಳು ಒಣಗಿರಲಿಲ್ಲ;— ಅವನ್ನು ರಾತ್ರಿಯಲ್ಲಿ ಒಲೆಯ ಬಳಿಯಿರಿಸಿ ಹೊಗೆಗೂ ಶಾಕಕ್ಕೂ ಒಣಗಿಸಿ ತರಬೇಕಾಗಿದ್ದಿತು. ಕೆಲವರು 'ಸ್ಲೇಟು'ಗಳ ಚೌಕವನ್ನು ದೊರೆಗೆಲೆಗಳಿಂದ ತಿಕ್ಕಿ ಬೆಳ್ಳನೆ ಮಾಡಿ, ಸ್ಲೇಟನ್ನು ಮಸಿಯಿಂದ ಕಪ್ಪನಾಗಿಸಿ ಇಟ್ಟಿದ್ದರು;— ಅವು ಸಿದ್ಧವಾಗಿರಲಿಲ್ಲ. ಹಲ ವರು ತಮ್ಮಲ್ಲಿಂದ ಹುಡುಕಿ, ಆರಿಸಿ, (ಅಥವಾ ನೆರೆಯವರಿಂದ ಎರವಿಗೆ ತಂದು) ಧರಿಸಿಬರಬೇಕಾಗಿದ್ದ ಅಂಗಿಟೊಪ್ಪಿಗಳು ಸಕಾಲದಲ್ಲಿ ಅವರಿಗೆ ದೊರೆಯದೆ ತಡವಾಯಿತು. ಹಳ್ಳೀದಾರಿಯಾಗಿ ಶಾಲೆಗೆ ಬರುತ್ತಾ, ಅವರು ಮನಸ್ಸಿನಲ್ಲೇ ದೇವರಿಗೆ ಪ್ರಾರ್ಥನೆ ಮಾಡಿದುದೆಷ್ಟು! ಮನೆಯ ವರು ಗಂಭೀರವಾಗಿ, ಅಥವಾ ನಕ್ಕು, "'ಪಾಸಾಗ'ದಿದ್ದರೆ ಇನ್ನು ಊಟಕ್ಕೆ ದೇವಸ್ಥಾನಕ್ಕೆ ಹೋಗು, ಅಥವಾ ಉಗ್ಗ ಸೆಟ್ಟಿಯ ಗದ್ದೆಗೆ ಗೊಬ್ಬರ ಹೊರುವವನಾಗು, ಜೋಕೆ!" ಎಂದು ಎಚ್ಚರಿಸಿದುದೆಷ್ಟು! ದಾರಿ ಯುದ್ದಕ್ಕೂ, "ಆ ಪೋರ ಬಲು ಜಾಣ!" "ಈ ಟೊಣಪ ಇವತ್ತು ಪರೀಕ್ಷೆಯಲ್ಲಿ ಮೇಲೆ ಬೀಳುವಂತಿಲ್ಲ!" ಎಂದು ಕಂಡವರೆಲ್ಲ ಅವರಿಗೆ ಕಂಡಂತೆ ಆಡಿದುದೆಷ್ಟು!

ವಿದ್ಯಾರ್ಥಿಗಳಲ್ಲಿ ಹಲವರು ಬಾಲಕರು. ಸಾಲೆಯಲ್ಲಿ ಎಷ್ಟು ದರ್ಜೆ ಗಳೆಂದು ಅವರವರಿಗೇ ಮತ್ತು ಅಯ್ಯಗಳಿಗೇ ಗೊತ್ತು. ಏಕೆಂದರೆ, ಕೆಲವರು

ಎತ್ತರದಲ್ಲೂ ಗಾತ್ರದಲ್ಲೂ ಅಯ್ಯಗಳಿಗೆ ಸರಿಸಮಾನರಾಗಿದ್ದರು! ಕೆಲವರು 'ಶ್ರೀ ಗಣಾಧಿಪತಯೇ ನಮಃ' 'ಓಂ ನಮಃ ಶಿವಾಯ' 'ಸಿದ್ಧಾಯ ನಮಃ'— ಇದನ್ನು ಇನ್ನೂ ಬಳಪದಲ್ಲಿ ಗೀಚಿ ಮುಗಿಸಿದವರಲ್ಲ. ಇನ್ನು ಕೆಲವರು 'ಆಯುವಂತನು ರಾಮಲಕ್ಷ್ಮಣ' ಸಂಧಿಯನ್ನು ರಾಮಾಯಣದಿಂದಲೂ, 'ಶ್ರೀವಧುವಿನಂಬಕಚಕೋರಕಂ ಪೊರೆಯೆ' ಸಂಧಿಯನ್ನು ಜೈಮಿನಿಭಾರತದಿಂದಲೂ, 'ಬಾಲಲೀಲೆ' 'ಬಭ್ರುವಾಹನ ಕಾಳಗ'ಗಳನ್ನು ಯಕ್ಷಗಾನ ಪ್ರಸಂಗಗಳಿಂದಲೂ, ಚೆನ್ನಾಗಿ (ಅವರವರಿಗೆ ತಿಳಿದಂತೆ) ರಾಗಗಳಲ್ಲಿ ಹಾಡುತಿದ್ದರು. ಹಣ, ವರಹ, ಗದ್ಯಾಣ, ಹೇರು, ಖಂಡುಗ, ಮಣ, ಕೋರ್ಜಿ, ವೀಸ, ಇತ್ಯಾದಿಗಳ ಕೋಷ್ಠಕಗಳನ್ನೂ, ಅಷ್ಟದಿಕ್ಕುಗಳು, ಅವುಗಳ ಪಾಲಕರು, ಅವರ ಹೆಂಡಿರು, ವಾಹನಗಳು, ಅಸ್ತ್ರಗಳು, ಮೊದಲಾದುವನ್ನೂ ಬಲ್ಲವರಾದ ಕೆಲವರಿದ್ದರು. ಓದುವುದು, ಬರೆವುದು, ಚಾಲತಿ ರೀತಿಯ ಲೆಕ್ಕ, ಹಳ್ಳೀ ಜನರ ಸಾಹಿತ್ಯ, ದಾಸರ ಪದಗಳು, ತುಂಡು ಪದಗಳು, ಇಷ್ಟೆಲ್ಲ ಅವರಿಗೆ ಗೊತ್ತು; ಅಯ್ಯಗಳಿಗೂ ಗೊತ್ತು: ಅಯ್ಯಗಳು ತನಗೆ ತಿಳಿದುದೆಲ್ಲವನ್ನು, ತನಗೆ ತಿಳಿದಷ್ಟೇ ಚೆನ್ನಾಗಿ, ಪ್ರತಿ ವಿದ್ಯಾರ್ಥಿಗೂ ಕಲಿಸುತಿದ್ದರು. ದಂಡ, ಕುಟ್ಟಿದೊಣ್ಣೆ ಆಟ ಮೊದಲಾದುವೂ ಇದ್ದುವು. ಕೆಲವರು ಸುಭಾಷಿತ ವಚನಗಳು, ಸರ್ವಜ್ಞನವಚನಗಳು, ಗಾದೆಗಳು, ಮುಂತಾದುವನ್ನು ಬಲ್ಲವರಾಗಿದ್ದರು. ಅವತಾರಗಳ ಕಥೆ, ರಾಮಾಯಣ, ಮಹಾಭಾರತ (ಕೃಷ್ಣಾವತಾರ), ಭಾಗವತಕಥೆ—ಎಲ್ಲರಿಗೂ ಕೂಲಂಕಷವಾಗಿ ತಿಳಿದಿದ್ದಿತು! ನಮ್ಮ ಗಣಿತ, ಭೂಗೋಲ, ವಿಜ್ಞಾನ, ಚರಿತ್ರೆ—ಆಗ ಇದ್ದಿಲ್ಲ. ರಾಜನೆಂದರೆ ಸರಕಾರ, ಸರಕಾರವೆಂದರೆ ಅಧಿಕಾರಿಗಳು, ಕಾನೂನು ಎಂದರೆ ಅವರು ಹೇಳುವ ಮಾತು,—ಅಷ್ಟೇ 'ಸಿವಿಕ್ಸ್' ತಿಳಿದಿದ್ದಿತು. ಮೃದಂಗ ಬಾರಿಸಲೂ, ಭಾಗವತಿಕೆ ವಹಿಸಲೂ, ಪತ್ರವ್ಯವಹಾರ, ಗೇಣಿಚೀಟು, ದಸ್ತಾವೇಜು ಬರೆಯಲೂ ಅಯ್ಯಗಳು ಬಲ್ಲರು, ಒಬ್ಬರಿಬ್ಬರು ವಿದ್ಯಾರ್ಥಿಗಳೂ ಕಲಿಯುತಿದ್ದರು. ಅಂಗಡಿ ಬಂಡಸಾಲೆಗಳ ಲೆಕ್ಕವಿಡುವ ಕ್ರಮವನ್ನು ವಯಸ್ಕರು ಕಲಿಯುತಿದ್ದರು. ಅತಿ ಸಾಮಾನ್ಯ ಗ್ರಹಚಾರ ಫಲ, ತೀರ ಸಾಮಾನ್ಯ ಕೈಕಂಡಪ್ರಯೋಗವ ಔಷಧ, ಶಕುನಗಳು, ಸಂಪ್ರದಾಯ, ಪ್ರಯಾಣಕ್ಕೆ ಮುಹೂರ್ತ, ಹಬ್ಬದ ದಿನಗಳು, ಇತ್ಯಾದಿ

ಗಳನ್ನು ಕಲಿತುಕೊಳ್ಳುತ್ತಿದ್ದರು. ಹಳ್ಳಿಯ ಜನರಲ್ಲಿ, ಭೂತ ಪಿಶಾಚಿ ಪ್ರೇತಗಳನ್ನು ಹಾಗೂ ಉಚಿತಾನುಚಿತಗಳನ್ನು ಕುರಿತು ಇರುತ್ತಿದ್ದ ನಂಬಿಕೆ ಗಳೆಲ್ಲವನ್ನು ಅವರು ತಿಳಿದೇ ಇರುತ್ತಿದ್ದರು. ದೀಪಾವಳಿಯ (ದಸರೆಯ) ಗೀತ ಹಾಡಿ, ತಮಗೆ ಪಂಚಕಜ್ಜಾಯ ಪಾನಕಗಳನ್ನೂ, ಗುರುಗಳಿಗೆ ಹಚ್ಚಡಗಳನ್ನೂ ಗ್ರಾಮಸ್ಥರಿಂದ ಪಡೆಯುತ್ತಿದ್ದರು. ಹೋಳೀಹಬ್ಬದ ಕಾಮದಹನಕ್ಕೆ ಬೇಕಾದ ಕಟ್ಟಿಗೆ ಸಂಗ್ರಹ ಮಾಡುವವರೂ, ದೇವಳದ ಉತ್ಸವಗಳಲ್ಲಿ ಪಲ್ಲಕ್ಕೀಸೇವೆ, ದೀವಟಿಗೆಸೇವೆ ಮಾಡುವವರೂ ಇವರೇ. ದೀಪಾರಾಧನೆಯ ಕಾಲದಲ್ಲಿ ಹಣತೆ ಹಚ್ಚುವ ಮತ್ತು ರಥೋತ್ಸವದ ಕೊನೆಯ ದಿನ ಓಕುಳಿ ಸ್ನಾನಮಾಡುವ ಕಾರ್ಯಭಾರವು ಇವರ ಮೇಲೆಯೇ ಇದ್ದಿತು.

ತುಂಬಿದ ಬಸುರಿಯಾದ ಅಯ್ಯಗಳ ಪತ್ನಿಗೆ ಹೆರಿಗೆಯ ಬೇನೆಯೂ, ನಂಬಿದ ಅಯ್ಯಗಳ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಬೇನೆಯೂ ಒಂದೇ ಮುಹೂರ್ತದಲ್ಲಿ ಪ್ರಾರಂಭಿಸಿದುವು. ದೇವಳದಲ್ಲಂತೂ ಪೂಜಾವಿಧಿ ಗಳು ನಡೆಯಲೇಬೇಕಾಗಿ, ಗರ್ಭಿಣಿಯ ತಂದೆ ಅಂತೂ ಉದ್ವಿಗ್ನರಾದರು. ಮನೆಯಲ್ಲಿ, ಗರ್ಭಿಣಿಯ ಹೆತ್ತ ತಾಯಿ, ಹಿರಿ ಅಕ್ಕ, ಕಿರಿ ತಂಗಿ, ಇಷ್ಟೇ ಮಂದಿ ತಾನೆ; ಸೋಮು ಹೆಂಗಸಿಗೆ ಕರೆ ಹೋಯಿತು. ಸೋಮು ಹೆಂಗಸು ಆ ಯುಗದ ಸೂಲಗಿತ್ತಿ. ಕಂಡರೆ ಪುರಾತನೆಯಂತಿದ್ದರೂ, ಕಾರ್ಯದಲ್ಲಿ ನೂತನೆಯಂತೆಯೇ ಇದ್ದಳು. ಇವಳನ್ನು ಕಾಣುತ್ತಲೇ ಗರ್ಭಿಣಿಯರು ಹೆರುವರೆಂದು ಮಾತಿದ್ದಿತು. ಹೆತ್ತುದು ಗಂಡಾದರೆ, ಮಗುವಿಗೆ ನಾಮಕರಣವಾಗುವತನಕ ದಿನಪಡಿಯೂ, ದಿನಕ್ಕೊಂದು ಕುಡುತೆ ಎಣ್ಣೆಯೂ, ಕೊನೆಗೆ ಒಂದು ರೂಪಾಯಿಯೂ, ಹೆರಿ ಗೆಯ ಕಾಲದಲ್ಲಿ ಗರ್ಭಿಣಿಯುಟ್ಟ ಸೀರೆಯೂ ಇವಳಿಗೆ ಸಿಗುವ ಮರ್ಯಾದೆ; ಹೆಣ್ಣಾದರೆ,—ಆ ರೂಪಾಯಿ ಮಾತ್ರ ಇಲ್ಲ. ಇದು ಆಗಣ ನಿಯಮ. ವೈದ್ಯರೂ, ತರಬೇತಾದ ಸೂಲಗಿತ್ತಿಯರೂ, ಶಸ್ತ್ರೋಪ ಚಾರಗಳೂ, 'ನರ್ಸಮ್ಮ'ನವರೂ ಇಲ್ಲದ ಹಳ್ಳಿಗಳಲ್ಲಿ ಆಗ ಸೋಮುಗಳೇ (ಅವರ ಜಾತಿ ಯಾವುದೇ ಇರಲಿ) ಗರ್ಭಪಾಲನೆಯ ದೇವಿಯರು. ಮಗು ಸತ್ತರೆ ಬ್ರಹ್ಮಚಾರಿಯ ಉಪದ್ರವ, ತಾಯಿ ಸತ್ತರೆ ಭೂತದ ಪೆಟ್ಟು;

ಸೋಮುವಿನ ಯಾವ ತಪ್ಪೂ ಇರದು. ಸೋಮು ಮನೆಗೆ ಬಂದಳೆಂದ ಬಳಿಕ, ಅಯ್ಯಗಳ ತಲೆ ಹಾಳಾಯಿತು. ಸಾಲೆ ಬಿಟ್ಟು ಹೋದರೆ ಪರೀಕ್ಷೆ ಕೆಡುವುದು, ಮನೆ ಬಿಟ್ಟು ನಿಂತರೆ ಹೆರಿಗೆ ಕೆಟ್ಟೀತು ಎಂದು ಅಯ್ಯಗಳಲ್ಲಿ ಭಯ. ಅವರು ಅಧಿಕಾರಿದ್ವಯವನ್ನು ಸಾಷ್ಟಾಂಗ ವಂದಿಸಿ, ಮನಸ್ಸಿನಲ್ಲಿ ಗುರುಹಿರಿಯರನ್ನು ಧ್ಯಾನಿಸಿ, ದೇವರಿಗೆ ಹರಕೆ ಹೇಳಿಕೊಂಡು ಸಾಲೆಯಲ್ಲೇ ನಿಂತರು.

ಆವೂರಲ್ಲಿ ಪರೀಕ್ಷೆ ಮುಗಿದು, ಮಧ್ಯಾಹ್ನ ಭೋಜನವಾಗಿ ಮೂರರೂರಿಗೆ ಸಂಜೆಗೆ ತಲಪಬೇಕೆಂದು ಅಧಿಕಾರಿಗಳು ಮೊದಲೇ ನಿರ್ಧರಿಸಿದ್ದಕಾರಣ, ಪರೀಕ್ಷೆ ಬೇಗಬೇಗನೆ, ಬೇಸರವಿಲ್ಲದೆ ಸಾಗಿತು. ಆ ಕಷಾಯ, ಅವೇ ಬಾಳೆಹಣ್ಣುಗಳು, ದೇವರ ಸಾನ್ನಿಧ್ಯ, ಅಯ್ಯಗಳ ನಮ್ರತೆ,–ಇವಿಷ್ಟೂ ಸರಿಯಾಗಿ ಪ್ರೇರೇಪಿಸುವಾಗ, ಲೀಲೆಯಿಂದ ಹೇಳಿದಂತೆ ಮಾಡುತಿದ್ದ ದಿವ್ಯ ಬಾಲಕರ ಮೇಲೆ ಪರೀಕ್ಷಕರು ಅನ್ಯಾಯ ಹೂಡುವರೇ? ಕಠಿನರಾಗುವರೇ? ಅಂದಿನ ಮಧ್ಯಾಹ್ನದ ಪೂಜೆಯು ಬೇಗನೇ ಮುಗಿವಂತೆ ಪೂಜಾರಿಗಳ ಮನಸ್ಸಿನಲ್ಲಿ ಪುತ್ರಿಯ ಹೆರಿಗೆಯು ಪ್ರೇರೇಪಿಸಿದುದರಿಂದಲೂ, ಪೂಜೆಯಾಗುತ್ತಲೇ ದೇವಾಲಯದಲ್ಲೇ ನೈವೇದ್ಯಪ್ರಸಾದವು ಅಧಿಕಾರಿಗಳಿಗೆ ಸಂತರ್ಪಣೆಯಾಗುವುದಾಗಿ ವಿನಂತಿಸಿದ್ದುದರಿಂದಲೂ ಪರೀಕ್ಷೆಯು ಬೇಗನೇ ಮುಗಿಯಿತು. ಮಕ್ಕಳು ಮನೆಗೆ ತೆರಳಿದರು; ಮಧ್ಯಾಹ್ನ ರಜೆ.

ಇನ್ನೂ ಸೋಮು ಹೆಂಗಸು ಹೆರಿಗೆಯ ಕೋಣೆಯಿಂದ ಬಟ್ಟಲು ಬಾರಿಸಲಿಲ್ಲ. ಮಗು ಹುಟ್ಟಿದಾಗ ತಾನೇ ಆ ಬಟ್ಟಲ ದನಿಯು ಹೊರಗಿದ್ದ ಗಂಡಸರಿಗೆ ಜನನಸಮಯವನ್ನು ಸೂಚಿಸಿ, ಅದನ್ನು ಜಗಲಿಯ ಮಾಡಿನ ಅಡ್ಡದ ಮೇಲೆ ಜೇಡಿಯಿಂದ ಬರೆಯಿಸುವುದು! ಪಂಚಪಾತ್ರೆಯೊಂದನ್ನು ಗರ್ಭಿಣಿಯ ಮೇಲಿಂದ ನಿವಾಳಿಸಿ, ಭೂತ ಪ್ರೇತ ಬ್ರಹ್ಮಚಾರಿಗಳ ಬಾಧಾನಿವಾರಣೆಗಾಗಿ ತೆಗೆದಿಟ್ಟುದಾಗಿದೆ. ಸುಖಪ್ರಸವವಾದರೆ, ಪೂಜಾರಿಗಳೂ ಅವರ ಹೆಂಡತಿಯೂ ಮಗುವಿಗೆ ಹೆಸರಿಡುವ ಮೊದಲೇ ತಿರುಪತಿಯಾತ್ರೆ ಮಾಡುವ ಹರಕೆ ಹೇಳಿಕೊಂಡಾಗಿದೆ. ದೇವಳದ

ಜೋಯಿಸರೊಬ್ಬರು, ಎರಡು ಕೆಂದಾಳೆಯ ಸಿಹಿಯಾಳ ತರಿಸಿ, ಒಂದನ್ನು ತಾನೇ ಮೊದಲು ಪ್ರಾಶನ ಮಾಡಿ, ಮತ್ತೊಂದನ್ನು ಅಭಿಮಂತ್ರಿಸಿ ಹೆರಿಗೆಯ ಕೋಣೆಗೆ ಗರ್ಭಿಣಿಗೆ ಕುಡಿಯಲು ಕಳುಹಿದುದಾಯಿತು. ಅಯ್ನಗಳು ಬರಹಬಲ್ಲವರೊಬ್ಬರಾಗಿ ಜನನದ ಗಳಿಗೆ ಬರೆದಿಡಲು ತಪ್ಪ ಬಾರದೆಂದು, ಸ್ನಾನವನ್ನೂ ಮಾಡದೆ, ಜಗಲಿಯಲ್ಲೇ ಕಾದುಕೂತರು. ಅಧಿಕಾರಿಗಳ ಭೋಜನ ಮುಗಿಯಿತು.

ಮಧ್ಯಾಹ್ನ ಮೂರು ಹೊಡೆದಾಗ ಮೂರೂರಿಗೆ ಗಾಡಿಕಟ್ಟುವು ದೆಂದು ನಿಶ್ಚಿತವಾಗಿ, ಅದುವರೆಗೆ ಮೂರು ತಾಸು ಇಬ್ಬರೂ ಅಧಿಕಾರಿ ಗಳು ಪರೀಕ್ಷಾಫಲ ಗುಣಿಸಿ, ನಿರ್ಧರಿಸಿ, 'ರಿಪೋರ್ಟು' ಮುಗಿಸಿ, ಹಿಂದಣ ರಾತ್ರಿ ಕಳೆದುಹೋಗಿದ್ದ ನಿದ್ರಾಸುಖವನ್ನು ಅನುಭವಿಸಿದರು. ಮೂರುವರೆಯ ಸುಮಾರಿಗೆ ಅವರು ಪುನಃ ಗಂಧಪ್ರಸಾದಾದಿಗಳನ್ನು ಪಡೆದು, ಒಂದನೇ ಮೊಕ್ತೇಸರರೊಡನೆ ಸುಖಸಂಕಥಾಲಾಪವಿನೋದ ಮಾಡುತ್ತ ದೇವಳದ ಮೊಗಸಾಲೆಯಲ್ಲಿ ಒಡ್ಡೋಲಗ ಮುಗಿಸಿ ಗಾಡಿ ಹತ್ತಿದರು. ಮೊಕ್ತೇಸರರ ಕೈಯಲ್ಲಿ ಒಂದು ಲಕೋಟೆಯನ್ನು ಒಪ್ಪಿಸಿ ದರು. ಅವರು ಮೂರೂರಿಗೆ ತೆರಳುವಾಗ, ಅಯ್ನಗಳು ಅಲ್ಲಿರಲಿಲ್ಲವಷ್ಟೆ; ಓದುಬರಹವಿಲ್ಲದ ಮೊಕ್ತೇಸರರು ಆ ಲಕೋಟೆಯನ್ನೇನು ಮಾಡುವರು? ದೇವಳದಲ್ಲಿ ಆರತಿ ಮುಗಿದು ಪ್ರಸಾದ ಹಂಚುವಾಗ ಮೊದಲನೆಯವ ರಾಗಿ ಅವರು ಪಡೆವ ಪಂಚಕಜ್ಜಾಯದ ಕಟ್ಟನ್ನಾದರೂ ಅವರು ಬಹಳ ಆರ್ತಿಯಿಂದ ಕಾಣಬಹುದಾಗಿದ್ದಿತು. ಈ ಲಕೋಟೆ ಏತಕ್ಕೆ? ಅದನ್ನು ಕೂಡಲೇ ದೇವಳದ ಶಾನುಭಾಗರಿಗೆ ಒಪ್ಪಿಸಿ ಅಯ್ನಗಳಿಗೆ ಕೊಡಲು ಅವರನ್ನು ಕಳುಹಿದರು.

ಶಾನುಭಾಗರು,—ಮೊಕ್ತೇಸರರ ಅಪ್ಪಣೆಯನ್ನು ಶಿರಸಾವಹಿಸಿ ಹೊರಟರಾದರೂ, ಮೊಕ್ತೇಸರರು ಅಲ್ಲೇ ಅಷ್ಟು ವೇಳೆ ಇದ್ದಕಾರಣ ತನ್ನ ಕೋಣೆ ಬಿಟ್ಟು ಹೊರಕ್ಕೆ ಬಂದಿರದುದರಿಂದ, ಇದೇ ವೇಳೆಯೆಂದು, ಲಕೋಟೆಯೊಡನೆ ಪೇಟೆಗೆ ಬಂದು, ಒಂದು ಪಾವಾಣೆಯ ಚಕ್ಕುಲಿಗಳನ್ನು ತಿಂದರು; ಒಂದು ಕುತ್ತಿ ತಣ್ಣೀರು ಕುಡಿದರು; ಎಲೆಅಡಿಕೆ ಜಗಿದು,

ಮೂಗುತುಂಬ ನಸ್ಯ ಸೇದಿದರು. ದೇವಳದ ಬಾಡಿಗೆಅಂಗಡಿ ಸ್ಥಳ ಗಳಲ್ಲೇ ಇವೆಲ್ಲವನ್ನು ಆವಷ್ಟು ಖರ್ಚಿಲ್ಲದೆಯೂ ಪೂರ್ಣ ಗೌರವ ದಿಂದಲೂ ದೊರಕಿಸಿಕೊಂಡರು. ಅನಂತರತಾನೇ ಅಯ್ಗಳ ಮನೆಗೆ ಕಾಲು ತಿರುಗಿಸಿ ಬರಬಹುದು.

ಬಂದರು. ಅಯ್ಗಳು ಎಡಗೈಯನ್ನು ತಲೆಯ ಮೇಲಿರಿಸಿಕೊಂಡು, ಬಲಗೈಯಲ್ಲಿ ಜೇಡಿತುಂಡನ್ನು ಸಿದ್ಧವಾಗಿಟ್ಟುಕೊಂಡು, ಜಗಲಿಯ ಮಾಡಿನ ಅಡ್ಡವನ್ನೇ ನೋಡುತ್ತ, ಸ್ನಾನವೂ ಆಹಾರವೂ ಇಲ್ಲದೆ, ಒಳಗಿಂದ ಕೇಳಬರುತಿದ್ದ ನಾನಾ ಬಗೆಯ ಮುಚ್ಚಿದ ಕೂಗುಗಳ ನಡುವೆ ಬಟ್ಟಲ ದನಿ ಎಂದಿಗೆ ಕೇಳಬರುವುದೋ ಎಂದು ಧ್ಯಾನಾಸಕ್ತರಾಗಿದ್ದರು.

"ಓ ಹೊಯ್! ಅಯ್ಗಳೇ! ಒಂದು ಚೀಟು ಇಕ್ಕೊಳ್ಳಿ! ನಿಮ ಗಂತಿದು," ಎಂಬ ಶಾನುಭಾಗರ ಕೂಗು ಅವರಲ್ಲಿ ದಿಗ್ಭ್ರಮೆಯನ್ನುಂಟು ಮಾಡಿತು.

**ಅಯ್ಗಳು:**—"ಏನು ಕೂಗಯ್ಯ ನಿಮ್ಮದು! ಅಪಸ್ವರ! ಮಗುವಿನ ಜನನವಾಯ್ತೆಂಬ ಶುಭವಾರ್ತೆ ಕೇಳಲು ಕಾದುಬಿದ್ದಿದ್ದೇನೆ, ಇಲ್ಲಿ ಚೀಟು ಬಂದದೆಯೆಂದು ಅವಲಕ್ಷಣವನ್ನು ಕೂಗುವಿರಲ್ಲ! ಕೃಷ್ಣಜನನವಾದಾಗ, ಕತ್ತೆ ಕೂಗುವುದಾಗಿ ವಸುದೇವನನ್ನು ಬೆದರಿಸಿದ್ದರೂ, ಅದೂ ಇಷ್ಟು ಬಲವಾಗಿ ಕೂಗಿಡುತ್ತಿರಲಿಲ್ಲ. ಸುಮ್ಮನಿರಿ."

**ಶಾನುಭಾಗ:**—"ಒಳಗಿಂದ ಜೀವಂತ ಸುಡುತ್ತಾರೋ ಎಂಬಂತಹ ಕೂಗುಗಳೇ ಕೇಳಿಸುತ್ತವಲ್ಲ! ಅದೇನು ಬಲು ಮನೋಹರ ಸ್ವರವೇ? ನಿಮ್ಮಂತಹ ಅಯ್ಯಗಳ ಕೈಹಿಡಿದ ಅಮ್ಮಗಳಿಗೆ ಕೈಲಾಸವಲ್ಲದೆ ಮತ್ತೇನು ಗತಿಯಾದೀತು?"

ಅಯ್ಗಳು ಭಾರೀ ಸಿಟ್ಟಾದರು; ಆದರೂ ವೇಳೆ ತಿಳಿದು ಸಮಾ ಧಾನವಾದರು.

**ಅಯ್ಗಳು:**—"ಅಯ್ಯ, ಸುಮ್ಮನಿರಬಾರದೇ? ಇನ್ನೂ ಉರಿಸು ತ್ತೀರಲ್ಲ! ತಮ್ಮ ಊಳಿಗ ಎಷ್ಟಿದೆಯೋ ಅಷ್ಟನ್ನೇ ಮಾಡಿ ನಡೆಯಿರಿ.

ದೇವಸ್ಥಾನದಿಂದ ವಾದ್ಯದವರು ಇಲ್ಲಿಗೆ ಬರಬಹುದಾದರೂ, ನಿಮ್ಮ ಸವಾರಿಯನ್ನು ಹೊರಡಿಸುವುದಕ್ಕಲ್ಲ, ಪುತ್ರಜನನಕ್ಕಾಗಿ.''

**ಶಾನುಭಾಗ**:—''ಜನನವೇ ಆಗಿಲ್ಲ, ಅದರಲ್ಲೂ ಪುತ್ರಜನನವಂತೆ! ಪುತ್ರಜನನವಾಗುವ ಮಾತಿರಲಿ, ಕಳತ್ರ ಉಳಿದರೆ ಪುಣ್ಯ ಎಂಬಂತೆ ಒಳಗಿಂದ ಗದ್ದಲವಾಗುತ್ತಿದೆಯಲ್ಲ!''

ಶಾನುಭಾಗರು ಈ ರೀತಿಯಾಗಿ ಅಯ್ಗಳ ಮೇಲೆ ರೇಗಿಯೇ ವ್ಯಂಗವಾಗಿ ಮಾತಾಡುವುದೇಕೆ, ಅಥವಾ ಇದು ಯೋಗ್ಯ ಸಂದರ್ಭವೇ?—ಎಂದು ವಾಚಕರು ಪ್ರಶ್ನಿಸಬಹುದು. ಈ ಅಭಿಪ್ರಾಯದ ಮಾತುಗಳು ಹೊರಟಿದ್ದುದು ನಿಜ; ಆದರೆ ಮಾತುಗಳು ಇವೇ ಎನ್ನಲು ಆಗತಾನೇ ಅಲ್ಲಿ ಸಂಕ್ಷಿಪ್ತಲಿಪಿ(Short-hand)ಯಲ್ಲಿ ಅವನ್ನು ಬರೆದಿಟ್ಟವರು ಯಾರೂ ಇದ್ದಿಲ್ಲ. ಶಾನುಭಾಗರೂ ಅಯ್ಗಳೂ ಎಂದಾದರೂ ಭೇಟಿಯಾದರೆ, ನಡೆವ ಮಾತುಕತೆಯೇ ಹೀಗಾಗಿದ್ದಿತು. ಇದಕ್ಕೂ ಬಹಳ ಕಾರಣಗಳಿಲ್ಲದೆ ಇರಲಿಲ್ಲ. ಶಾನುಭಾಗರು ಪಿತ್ರಾರ್ಜಿತವಾಗಿ ಬಹು ತಲಾಂತರಗಳಿಂದಲೂ ಈ ದೇವಳದ ಶಾನುಭಾಗಿಕೆಯನ್ನು ಅನುಭವಿಸಿ ಬಂದಿರುವವರು. ಇವರ ಮೂಲಪುರುಷರೇ ಇಲ್ಲಿ ದೇವಳ ಪ್ರತಿಷ್ಠೆಯಾದಾಗ ಪ್ರತಿಮೆಯ ಜತೆಗೆ ಬಂದ ಶಾನುಭಾಗರೆಂದು ಈಗಲೂ ಆವೂರಲ್ಲಿ ಹೇಳುವರು. ಇವರು ಆ ಕಾಲದಲ್ಲಿ ದೇವರ ಅರ್ಚಕರಷ್ಟೇ ಬಹುಮಾನ ಪಡೆದು, ಆವೇಶದ ಪಾತ್ರಿಗಳೂ ಆಗಿದ್ದು, ಲೆಕ್ಕಪತ್ರ, ಪತ್ರವ್ಯವಹಾರ, ವರ್ಗ ಊಳಿಗ, ಇತ್ಯಾದಿಗಳನ್ನು ಬರೆದಿಡುವ ಕ್ರಮ ತಿಳಿದವರಾಗಿದ್ದರು. ಅವರಿಗೆ ಕ್ರಮೇಣ ಶಾನುಭಾಗಿಕೆ ಮಾತ್ರ ಉಳಿಯಿತಾದರೂ ಊರಲ್ಲಿ ಓದುಬರಹದ ಅಧಿಕಾರಿಗಳು ಇವರೆಂದೇ ಹೆಮ್ಮೆಯಿದ್ದು, ಅರ್ಚಕರ ತರುವಾಯ ದೇವಳದ ಸಿಬ್ಬಂದಿಯಲ್ಲಿ ಇವರೇ ಮನ್ನಣೆಯ ಮಣೆ ಪಡೆದಿದ್ದರು. ಹಾಗೆಯೇ ಪರಂಪರೆಯಾಗಿ ಈ ಮನ್ನಣೆ ನಡೆದುಬಂದಿದ್ದಿತು. ಈಗಣ ಅರ್ಚಕರೂ ಈಗಣ ಅಯ್ಗಳೂ ದೇವಳದ ಸಿಬ್ಬಂದಿಗೆ ಸೇರಿದ ಬಳಿಕ ಮಾತ್ರ ಇವರ ಮಣೆಯು ಸ್ಥಾನ ತಪ್ಪಿತು. ಆಡಳಿತೆಮೊಕ್ತೇಸರರು, ಒಕ್ಕಲುಗಳಿಂದ ಪಡೆಯುತಿದ್ದ ಕಾಲಾವಧಿ

ಮರ್ಯಾದೆಯಲ್ಲಿ ಈ ಶಾನುಭೋಗರ ದೆಸೆಯಿಂದ ತನಗೆ ವಂಚನೆ ಯಾಗುತ್ತಿದೆಯೆಂದು ಶಾನುಭೋಗರ ಠೀವಿಯಿಂದಲೇ ಸಂದೇಹಗೊಂಡಿದ್ದರು. ಮೊಗಸಾಲೆಯಲ್ಲಿ ಅಯ್ಯಗಳು ಪಾಠ ಹೇಳಲು ಉಪಕ್ರಮಿಸಿದ ಬಳಿಕ, ಒಕ್ಕಲುಗಳ ಹಸುರುವಾಣಿ ಮೊದಲಾದ ಕಾಣಿಕೆಗಳು ಶಾನುಭೋಗರ ಬಳಿ ತಲಪದಂತಾಗಿ, ಅಯ್ಯಗಳೇ ಲೆಕ್ಕಕ್ಕೆ ಬರೆಯಿಸಿಕೊಳ್ಳಬೇಕೆಂದು ಮೊಕ್ತೇಸರರೆಂದರು. ಅದರಿಂದ ಹುಟ್ಟುಜಾಣನಾಗಿರುವ ತನ್ನ ಗುಟ್ಟನ್ನು ಮೊಕ್ತೇಸರರು ತಿಳಿದಂತಾಯಿತೆಂದು ಶಾನುಭೋಗರು ಊಹಿಸಿ ಮುಖ ಕಹಿ ಮಾಡಿಕೊಂಡರು. ಅನಂತರ, ಶಾನುಭೋಗರು ಬರೆದ ಲೆಕ್ಕಪತ್ರವನ್ನು ಅವರೇ ಪ್ರತಿದಿನ ಬೆಳಿಗ್ಗೆ ದೇವರ ಎದುರಲ್ಲಿ ಓದಿಹೇಳುವ ಸಂಪ್ರದಾಯವಿದ್ದಿತು; ಇನ್ನು ಅದನ್ನು ಅಯ್ಯಗಳು ಓದಿಹೇಳಿದಬಳಿಕವೇ ಸಾಲೆಯ ಕೆಲಸ ಪ್ರಾರಂಭಿಸಬೇಕೆಂದು ಮೊಕ್ತೇಸರರೆಂದರು. ಬರೆವವನು ತಾನು, ಓದುವವನು ಈತನು ಎಂದೂ, ಅಯ್ಯಗಳು ದೇವರ ಗುಮಾಸ್ತರು, ತಾನು ದೇವಳದ ಗುಮಾಸ್ತರು ಎಂದೂ, ಶಾನುಭೋಗರು ಭೇದ ಕಲ್ಪಿಸಿಕೊಂಡರು. ಮೊಕ್ತೇಸರರು ಶಾನುಭೋಗರ ಒಕ್ಕಣೆಯನ್ನು ಕೆಲವೇಳೆ ಅಯ್ಯಗಳಿಂದ ತಿದ್ದಿಸಿದಮೇಲೆ, ಹಾಗೂ ತಾಲೂಕು ಕಚೇರಿಗೆ ಅರ್ಜಿಗಳನ್ನು ಬರೆದು ವಕೀಲರಿಗೆ ಅನುಭವವನ್ನು ತಿಳಿಸುವ ಮತ್ತು ಹತ್ತು ಸಮಸ್ತರೊಡನೆ ಸಮಾಧಾನ ಮಾಡಿ ಅವರನ್ನು ಸಮುದಾಯಿಸುವ ಕೆಲಸವನ್ನೂ ಅಯ್ಯಗಳಿಗೆ ಒಪ್ಪಿಸಿದಮೇಲಂತೂ ತನಗೊಬ್ಬ ಇದಿರಾಳಿ ಭೀಮನು ಹುಟ್ಟಿದನೆಂದು ದುರ್ಯೋಧನ ಶಾನುಭೋಗರು ಖಂಡಿತ ನಂಬಿದರು.

ಅಂದಿನಿಂದ ಕಂಡಲ್ಲೆಲ್ಲ, ಬೆನ್ನ ಹಿಂದೆಲ್ಲ ಅಯ್ಯಗಳನ್ನು ದೂರಿ ಬೈದು ನಿಂದಿಸುವುದು ಶಾನುಭೋಗಿಕೆಯ ಅಂಗವಾಯಿತು. ಅದರ ಉದಾಹರಣೆಯಾಗಿ ಮೇಲಿನ ಮಾತುಗಳು. ಆ ಕೊನೆಯ ಮಾತಾಗುವಾಗಲೇ, ಚೀಟನ್ನು ಅಲ್ಲಿ ಬಿಸುಟು ಶಾನುಭೋಗರು ಅಲ್ಲಿಂದ ಜಾರಿದರು. ಅಯ್ಯಗಳ ಕೈಯಲ್ಲಿದ್ದ ಜೇಡಿತುಂಡು ಅವರ ಬಲವಾದ ಮುಷ್ಟಿ ತುಂಬ ಇದ್ದಿತೆಂಬುದನ್ನೂ, ಬರೆಯಲೆತ್ತುವ ಬಲಗೈಯು ಬಿಸುಡಲೆತ್ತಿದರೆ, ಅದೇ ಪರ್ವತಾಸ್ತ್ರವಾಗಿ, ತನ್ನ ತಲೆಯ ಯಾವ ಭಾಗದಲ್ಲಾದರೂ ಬಿದ್ದು ಆರೋಗ್ಯಭಂಗವನ್ನು ಉಂಟುಮಾಡೀತೆಂಬುದನ್ನೂ ಶಾನುಭೋಗರು ತಿಳಿದಿದ್ದರು.

ಅವನು ಅಲ್ಲಿಂದ ಹೋದುವೇ, ಚೀಟನ್ನು ಅಯ್ಯಗಳು ನೋಡಿದರು. ಅದು ಅವರ ಬರಹದ್ದಲ್ಲ. ಪರೀಕ್ಷಕರ ಕೈಬರಹದ್ದೆಂದು ತಿಳಿದರು, ಪರೀಕ್ಷೆ ಮುಗಿದು ಅವರು ಏನೋ ಷರಾ ಬರೆದುದಿರಬೇಕೆಂದು ಊಹಿಸಿದರು. ಇಲ್ಲಿಯಂತೂ ಈ ಜನನದ ನಿರೀಕ್ಷೆ ಇನ್ನೂ ಮುಗಿದಂತಿಲ್ಲ, ಎಂದು ಲಕೋಟೆ ಒಡೆದರು.

ಅದನ್ನು ಓದೋಣವೆನ್ನುವಾಗಲೇ, ಎರಡು ಹಂಡೆಗಳೇ ಅಟ್ಟದಿಂದ ಕೆಳಕ್ಕೆ ಬಿದ್ದಂತಹ ಗದ್ದಲವಾಯಿತು. ಓದು ತಡೆಯಿತು, ಕಿವಿ ಮನೆಯೊಳಗೇ ನೀಡಿಕೊಂಡಿತು. ಬೇರೆ ಸದ್ದೇ ಇಲ್ಲ!

ಬಟ್ಟಲನ್ನು ಎತ್ತಿಕೊಂಡ ಸೋಮು ಹೆಂಗಸು ಅದನ್ನು ಬಡೆಯಲು ಅಲ್ಲಿ ಯಾವುದೊಂದು ವಸ್ತುವನ್ನೂ ಕಾಣದೆ, ನಿವಾಳಿಸಿಟ್ಟ ಆ ಪಂಚಪಾತ್ರೆಯಿಂದ ಬಡೆಯುತ್ತಿರಲು ಎರಡೂ ಕೈಗಳಿಂದ ಅವೆರಡು ಪಾತ್ರೆಗಳೂ ಕೆಳಕ್ಕೆ ಬಿದ್ದು ಈ ಗದ್ದಲವಾಗಿದ್ದಿತು. ಯಾರಾದರೂ ಸತ್ತರೆ, ಸರ್ವರಿಗೂ ತಿಳಿಯುವಂತೆ ಇಗರ್ಜಿಗಳಲ್ಲಿ ಗಂಟೆ ಬಾರಿಸುವರು; ನಮ್ಮಲ್ಲಿ ಸತ್ತರೆ ಸ್ವಾಭಾವಿಕ ಗೋಳಾಟವಂತೂ ಊರಿಗೆಲ್ಲ ಡಂಗುರ ಸಾರುವುದು. ಜನನವಾದರೆ, ಇಗರ್ಜಿಗಳ ಗಂಟೆಗಳು ಮೌನ; ನಮ್ಮಲ್ಲಿ ಬಟ್ಟಲ ಢಣಢಣವೇ ಜನನದ ಗಳಿಗೆಯನ್ನು ಸಾರಿ, ಮನೆಯಲ್ಲಿ ಇನ್ನೊಂದು ಬಟ್ಟಲು, ಜನ್ಮಗ್ರಹಣ ಮಾಡಿದ ಪುಣ್ಯಾತ್ಮನಿಗಾಗಿ ಬೇಕಾಗುವುದೆಂದು, ಅಥವಾ, ಅವನು ಕುಟುಂಬದ ಅನ್ನದ ಬಟ್ಟಲನ್ನೇ ಮುಂದೆ ಒಡೆಯಲಿರುವನೆಂದು ಅರ್ಥವಾಗುವ ಮುಂಜಾಗ್ರತೆಯನ್ನು ಸರ್ವರಿಗೂ ಸೂಚಿಸುವುದು.

ಚೀಟನ್ನು ಅಯ್ಯಗಳು ಓದುತಿದ್ದಂತೆಯೇ ಈ ಧ್ವನಿಯು ಸೂಚಿತವಾಗಲು,—ಅವರ ಮುಖಕಮಲವು ಅರಳಿತು. ಗಳಿಗೆಯನ್ನು ಬರೆದಿಡಲು ಗಡಿಯಾರಗಳೇನು ದೇವಳದ ಪೂಜೆಯ ಭಟ್ಟರಲ್ಲಿದ್ದುವೇ?

ಪರೀಕ್ಷಕರು ಕಳುಹಿದ್ದ ಚೀಟನ್ನು ಓದುತಿದ್ದ ವೇಳೆ, ಎಂದರೆ, ಮನೆಗೆ ದನಗಳು ಹುಲ್ಲುಗಾವಲಿಂದ ಮರಳುತ್ತ ದಾರಿಯುದ್ದಕ್ಕೂ ಕಾಣುತಿದ್ದ ವೇಳೆ, ಅಥವಾ ಕೆಮ್ಮಣ್ಣುಗುಡ್ಡದ ತುದಿಯ ಮೇಲೆ ಸೂರ್ಯನು ಇಳಿದಿದ್ದಾಗ ಅಯ್ಯಗಳಿಗೆ ಪ್ರಥಮ ಪುತ್ರಜನನವಾಯಿತೆಂದು ಸೋಮುವಿನ ಸಂಕೇತವನ್ನು ವಿವರಿಸಿ ಬರೆದುದಾಯಿತು.

ಅಯ್ಯಂಗಾರ್ಯರು ಮಠದ (ಆವೂರು ದೇವಳದ ಮೊಗಸಾಲೆಯು) ವರ್ಷಾವಧಿ ಪರೀಕ್ಷೆಯಲ್ಲಿ ಹನ್ನೆರಡು ಮಂದಿ (ಪ್ರತಿಯೊಬ್ಬನು ಹನ್ನೆರಡು ವರ್ಷ ಪ್ರಾಯಕ್ಕೆ ಕಡಿಮೆಯವನಾಗಿದ್ದಿಲ್ಲ) 'ಪ್ರಾಯಶ್ಚಿತ್ತ' ಯೋಗ್ಯತೆ ಹೊಂದಿದುದರಿಂದ, ಅಯ್ಯಂಗಳಿಗೆ ಹನ್ನೆರಡು ವರಹ (ರೂಪಾಯಿ ೪೮ ಮಾತ್ರ) 'ಗ್ರೇಂಟು' ಕೊಡಲು, ನಮ್ಮೂರು ತಾಲೂಕು ಖಜಾನಾ ಅಧಿಕಾರಿಗಳಿಗೆ ಈ ಚೀಟು ಅಧಿಕಾರ ಕೊಟ್ಟಿದ್ದಿತು.

ಇಡೀ ಮನೆ ಬೆಳಗುವ ಪುತ್ರಸಂತಾನ ಉತ್ಪತ್ತಿಯಾಯಿತೆಂದು ದೇವಳದ ಮಠಾರದಲ್ಲೆಲ್ಲ ಮಹದಾನಂದ. ಸರ್ವರಿಗೂ ಸಕ್ಕರೆ ಹಂಚಲಾಯಿತು. ತಾನು ಕುಲೋದ್ಧಾರಕ, ಮುಕುಟವರ್ಧನ, ಹುಟ್ಟಿದ್ದೇನೆಂದು ಕೂಸು ಅರಚಿಕೊಂಡುದೂ ದಿಗಂತವ್ಯಾಪಿಯಾಗಿ ಕೇಳಬಂದಿತೆನ್ನಬಹುದು. "ಸೋಮು ಹೆಂಗಸು ಗರ್ಭಿಣಿಗೆ ಮುಟ್ಟಿದರೇ ಗಂಡು ಮಗು," ಎಂದು ಅವಳ ಕೀರ್ತಿಯೂ ಅಷ್ಟೇ ಹರಡಿತು.

ಬಾಣಂತಿಯೂ ಮಗುವೂ ಕ್ಷೇಮ. ತೊಟ್ಟಿಲಲ್ಲಿಡುವ ದಿನ ಬಂದಿತು. ಹೆಸರಿಡಲು ಉಪಾಯವಿಲ್ಲ. ಅಜ್ಜ ಅಜ್ಜಿಯಂದಿರು ತಿರುಪತಿ ವೆಂಕಟರಮಣನನ್ನು ಕಂಡು ಮರಳಿದಬಳಿಕವೇ ಮೊಮ್ಮಗನಿಗೆ ಹೆಸರು ತಾನೆ! ಆ ಕಾಲದಲ್ಲಿ ತಿರುಪತಿಯಾತ್ರೆಗೆ ವೈಕುಂಠಯಾತ್ರೆಯೆಂದೇ ಕಲ್ಪಿತಾರ್ಥವಾಗುತ್ತಿದ್ದಿತು. ಇದ್ದ ಹನ್ನೆರಡು ವರಹಗಳನ್ನು ಅದಕ್ಕಾಗಿ ವ್ಯಯಿಸುವುದೇ? ಅಯ್ಯಂಗಳು ತಾನೇ ಆ ಅತ್ತೆಮಾವಂದಿರು ಹೊತ್ತ ಹರಕೆಯ ಭಾರವನ್ನು ದೇವರ ಮುಂದೆ ಹೊತ್ತುಕೊಂಡು, ತಿರುಪತಿ ವೆಂಕಟರಮಣನ ಗುಲಾಮತನವನ್ನು ಸ್ವೀಕರಿಸಿದುದರ ಪ್ರಮಾಣಕ್ಕಾಗಿ ಬಲಗಾಲಿಗೆ ಬೆಳ್ಳಿಯ ಸರಿಗೆಯೊಂದನ್ನು ತೊಟ್ಟುಕೊಂಡರು. ತಿರುಪತಿಯಾತ್ರೆ ಅವರು ಎಂದೂ ಮಾಡುವವರಲ್ಲವೆಂಬುದಕ್ಕೆ ಅದೊಂದು ಪ್ರಮಾಣವಾಗುವಹಾಗೆ ಮುಂದೆ ಆಯಿತು; ಏಕೆಂದರೆ, ಅವರ ಜೀವಮಾನದಲ್ಲಿ ಅವರ ಮುಖದರ್ಶನ ಮಾಡುವ ಭಾಗ್ಯವು ಶ್ರೀವೆಂಕಟರಮಣನ ಹಣೆಯಲ್ಲಿರಲಿಲ್ಲ.

ಕುಲವರ್ಧನನಿಗೆ ಅಯ್ಯಂಗಳು ತಮ್ಮ ತೀರ್ಥರೂಪರ ಹೆಸರಿಟ್ಟು 'ನಾರಾಯಣ' ಎಂದು ಕರೆದರು. ಆದರೆ, ಮಾವನ ಹೆಸರನ್ನು ಉಚ್ಚರಿ

ಸಲು ಅಧಿಕಾರವಿಲ್ಲದ ಬಾಣಂತಿಸೊಸೆಯು ಮಗುವನ್ನು 'ಅಪ್ಪ' ಎಂದಳು. ಮಗನು ಅಂದಿನಿಂದ ಊರಿಗೆಲ್ಲ 'ಅಪ್ಪ'ನಾದನು [ಈಗಿನಂತೆ 'ಬೇಬಿ'ಯಾಗಲಿಲ್ಲ). ತಾಯಿ ಹರಸಿ ಕರೆದ ಹೆಸರು ವ್ಯರ್ಥವಾದೀತೇ?

ಮಗು ಹುಟ್ಟಿದ ಮುಹೂರ್ತದಿಂದ ಅಯ್ಗಳು ಶಾಲೆಯ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ತನ್ನ ಎಳೇ ವಯಸ್ಸಿನಲ್ಲಿ ದಿವಂಗತ ರಾದ ತನ್ನ ತೀರ್ಥರೂಪರು ಈಗ ಪ್ರತ್ಯಕ್ಷ ಅಪ್ಪನಾಗಿ ಮನೆಯಲ್ಲಿರು ವಾಗ, ಆ ಜನ್ಮದಲ್ಲಿ ತನ್ನನ್ನು ಸಲಹಿದವನನ್ನು ಈ ಜನ್ಮದಲ್ಲಿ ತಾನು ಸಲಹುವಾಗ ಬೇರೆ ವಿದ್ಯಾರ್ಥಿಗಳಿರಬಾರದಾಗಿ ಅಯ್ಗಳು ಉದ್ಯೋಗ ದಿಂದ ನಿವೃತ್ತಿಪಡೆದರು.

ಅದುವರೆಗೆ ಶಾನುಭಾಗರ ಮೇಲೆ ಇವರಿಗೆ ಇದ್ದ ಮತ್ಸರವು ಇನ್ನು ಇಲ್ಲವಾಯಿತು. ಶಾನುಭಾಗರಿಗೆ ಒಂದರನಂತರ ಮತ್ತೊಂದಾಗಿ ಮೂರು ವಿವಾಹಗಳಾಗಿದ್ದರೂ ಸಂತತಿಯೇ ಇದ್ದಿಲ್ಲ; ಅವರ ಕುಟುಂಬದ ಮೇಲೆ ನಾಗನ ಶಾಪ ಬಹಳವಾಗಿದ್ದಿತು. ಮೊದಲ ಮಗುವೇ ಗಂಡಾಗಿ, ಅದು ಹುಟ್ಟಿದಾಗಲೇ ಲಕ್ಷ್ಮೀಪ್ರಸನ್ನತೆಯನ್ನಾದ ಶುಭವಾರ್ತೆ ತಂದ ಶಾನುಭಾಗರನ್ನು ಅಯ್ಗಳು ಮರೆವರೇ? ಅವರ ಮನೆಗೆ ತಾನೇ ಸಕ್ಕರೆ ಮುಟ್ಟಿಸಿ, ಇನ್ನು ತಾನು ಅಯ್ಗಳಲ್ಲವೆಂದೂ ತಿಳಿಸಿ ಗೆಳೆತನ ಗಳಿಸಿದರು.

ಅಪ್ಪ ಹುಟ್ಟಿದಂದೇ, ಕಳೆದ ನಾಲ್ಕು ವರ್ಷ ಸಪರಿವಾರರಾಗಿ ತೀರ್ಥಯಾತ್ರಾಕ್ಷೇತ್ರ ಸಂಚಾರ ಮಾಡುತ್ತಲಿದ್ದ ಆವೂರು ಮಠದ ಗುರುಗಳು ಅಲ್ಲಿಗೆ ಮರಳಿದ್ದು, ಮೊಗಸಾಲೆಯಲ್ಲಿ ಒಡ್ಡೋಲಗಂಗೊಡು ವಂತಹವರಾದರು! ಶ್ರೀಪಾದಂಗಳವರ ಚರಣರಜವು ಸೋಂಕಿದುದರಿಂದ ಆವೂರು ಪವಿತ್ರವಾಯಿತು. [ಬಸ್ಸುಗಳು ಓಡಾಡುತ್ತಿರದ ಆ ಕಾಲ ದಲ್ಲಿ ಈ ರಜವೇ ಆವೂರಲ್ಲಿ ಗಣನೆಗೆ ಬರುತಿದ್ದಿತು.)

ಮಕ್ಕಳಿಂದ ಮನೆಯ ಯಜಮಾನನ, ಹಳ್ಳಿಯಿಂದ ಸಾಮ್ರಾಜ್ಯದ, ದೇವಸ್ಥಾನದಿಂದ ಭಜಕಸಹಸ್ರದ, ಮಠದಿಂದ ಮಠಾಧೀಶರ ಪರಿಚಯವು ಸರ್ವಸುಲಭವಾಗಿಯೂ ಸಮಗ್ರವಾಗಿಯೂ ದೊರೆವುದು ಖಂಡಿತ ವಾಗಿದೆ. ನಾವು ಆವೂರು ಮಠದ ಸ್ಥಿತಿಯನ್ನು ಬಣ್ಣಿಸಿವಾಗಲೇ,

ಶ್ರೀಗುರುಗಳ ಪರಿಚಯುವನ್ನು ಕೆಲಮಟ್ಟಿಗೆ ಮಾಡಿಕೊಟ್ಟಂತಾಗಿದೆ. 'ಕುಂಪಣಿ ಸರಕಾರ'ದ ಕಾಲದಿಂದಲೂ ಈ ಮಠಾಧೀಶರಾದವರಿಗೆ ಎಷ್ಟೋ ವಿಶಿಷ್ಟ ಸಲಕರಣೆಗಳನ್ನೂ ಬಹುಮಾನ ವ ಬಿರುದುಗಳನ್ನೂ ಸರಕಾರವು ದಯಪಾಲಿಸಿದೆ. ದೇಶೀಯ ರಾಜರುಗಳಲ್ಲಿ,—ಸಮ್ರಾಟರಂತೆಯೇ ಸಾಮಂತರು—ಸಹ ಹಲವರು ಇಂತಹ ವಿಶೇಷ ಬಿರುದಾವಳಿಗಳನ್ನೂ ಉಂಬಳಿಗಳನ್ನೂ ಬಹುಮಾನಿಸಿದುದಿದೆ. ಈಗ ತಾನೇ ಬಿಜಯಂಗೈದ ಶ್ರೀಪಾದಂಗಳವರು ಎಂತಹವರಲ್ಲಾದರೂ ಭಕ್ತಿಯುನ್ನು ಹುಟ್ಟಿಸುವಂತೆ ಆಜಾನುಬಾಹುಗಳಾಗಿಯೂ, ಶಾಂತಸ್ಮಿತವದನರಾಗಿಯೂ, ರಕ್ತಚಂದನಕಾಂತಿಯ ಮೈಬಣ್ಣವುಳ್ಳವರಾಗಿಯೂ, ಬ್ರಹ್ಮಚರ್ಯದೊಡನೆ ಸನ್ಯಾಸವೂ ಪುಟಕೊಟ್ಟ ತೇಜಸ್ಸುಳ್ಳವರಾಗಿಯೂ, ವಿದ್ವತ್ತಿಕೆಯ ಹಾಗೂ ಲೌಕಿಕ ಜೀವನದ ತತ್ವಪರಿಚಯದ ದೆಸೆಯಿಂದ ಶುದ್ಧವಾದರೂ ಸಂಕುಚಿತವಾಗದ ಧರ್ಮಾಭಿಮಾನವುಳ್ಳವರಾಗಿಯೂ ಇದ್ದರು. ಆ ಕಾಲದಲ್ಲಾದರೂ ಇವರನ್ನು ಸಂದರ್ಶಿಸುವುದಕ್ಕೂ ಭಯಪಡುತ್ತಿದ್ದ ಧರ್ಮನಿಷ್ಠರೆಷ್ಟೋ ಇದ್ದರು. ಇವರು ಎಣಿಸಿದುದು ಆಗಿಯೇ ಹೋಗುವುದೆಂದೂ, ಆಡಿದುದು ಸತ್ಯವಾಗುವುದೆಂದೂ, ಅನುಗ್ರಹಿಸಿದುದು ಶಾಶ್ವತವಾಗುವುದೆಂದೂ ಸಮಾಜದಲ್ಲಿ ನಂಬದವರಿದ್ದಿಲ್ಲ. ಶ್ರೀಪಾದಂಗಳವರಿಗೆ ದೇಶದಲ್ಲಿ ಎಲ್ಲೆಲ್ಲಿಯೂ ಮಠಗಳೂ ಇದ್ದುವು; ಶಿಷ್ಯಸಮುದಾಯವೂ ಇದ್ದಿತು. ಗುಣಕರ್ಮಗಳಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರಾಗಿರುವವರು ತಮ್ಮ ಸಮಾಜದಲ್ಲಿರುವರು; ಈ ಶಿಷ್ಯಕೋಟಿಯೇ ತಮ್ಮ ಜನಾಂಗವೆಂದು ನಂಬಿ, ಶ್ರೀಗುರುಗಳು ಧಾರಾಳವಾಗಿ ಕಾಣಿಕೆ ಪಡೆದು, ಮಠಗಳು ಶಾಶ್ವತವಾಗಿ ಇಂತಹ ಶಿಷ್ಯಕೋಟಿಯ ಧರ್ಮ-, ಅರ್ಥ-, ಕಾಮ-, ಮೋಕ್ಷ-ಸಾಧನೆಗಳಿಗಾಗಿ ಸಹಾಯಕವಾಗುವಂತೆ ಏರ್ಪಡಿಸಿದ್ದರು. ಆವೂರಿಗೆ ಬಾರದೆ ನಾಲ್ಕು ವರ್ಷಗಳು ಕಳೆದಿದ್ದುವು; ಈಗ ಬಂದುದೇ, ಸಾಲೆಯಿದ್ದ ಆ ಅಂಬಲದಲ್ಲಿಳಿದು, ಸಾಯಂಪೂಜಾದಿಗಳು ಮುಗಿಯಲು, ಈ ಜನಗಳ ಶ್ರೇಯಸ್ಸು ವೃದ್ಧಿಹೊಂದುವಂತೆ ಏನುಮಾಡುವುದೆಂಬುದನ್ನು ಮರುದಿನ ಬೆಳಿಗ್ಗಿನಿಂದಲೇ ಆಲೋಚಿಸಿ ಚಾತುರ್ಮಾಸದೊಳಗೆ ಒಂದು ನಿಶ್ಚಿತವನ್ನು ಮಾಡಬೇಕೆಂದರು. ಹಾಗೆಯೇ ಅವರು ಮಾಡಿದರು.

ಹಿಂದೂಧರ್ಮಶಾಸ್ತ್ರವು ಸಂಸ್ಕೃತದಲ್ಲಿ ಛಂದೋಬದ್ಧವಾಗಿರುವ ಪ್ರಯುಕ್ತ, ಅದರ ತಿರುಳನ್ನಾದರೂ ಗ್ರಹಿಸಲೂ, ಆಗಮಸಂಸ್ಕಾರ ಮೊದಲಾದುವನ್ನೆಲ್ಲ ನಡೆಸಲೂ, ಲೌಕಿಕದಲ್ಲಿ ಅರಿವನ್ನುಂಟುಮಾಡಿ ಪೌರೋಹಿತ್ಯ ವಹಿಸಲೂ ಮೀಸಲಾಗಿ ದೀಕ್ಷೆಪಡೆದ ವೈದಿಕರು ಸಂಸ್ಕೃತ ಭಾಷಾಪಂಡಿತರಾಗಿ, ಮಠದ ಸುತ್ತಲೂ ನೆಲೆನಿಂತಿರುವಹಾಗೆಯೂ, ಶಿಷ್ಯರುಗಳಲ್ಲಿ ಸಂಸ್ಕೃತಾಭಿಮಾನವೂ ಸಂಸ್ಕೃತಿಯ ಅಭಿಮಾನವೂ ಸದಾ ಊರ್ಜಿತವಾಗಿರುವಹಾಗೆಯೂ, ಒಂದು ನಿಧಿಯನ್ನು ಆವ್ವೂರ ಗೃಹಸ್ಥರ ಕಾಣಿಕೆಗಳಿಂದ ಕೂಡಿಸಿ, ಮಠದಿಂದಲೂ ಅದಕ್ಕೆ ಸೇರಿಸಿ, ಅಂತಹ ನಿಧಿಯ ಬಡ್ಡಿಯಿಂದ ಸಂಸ್ಕೃತ ಪಾಠಶಾಲೆಯೊಂದು ನಡೆದು ಬರುವಂತೆ ವ್ಯವಸ್ಥೆ ಮಾಡಿ, ಮಠಾಧೀಶರು ಅಧ್ಯಕ್ಷರಾಗಿಯೂ ಆವ್ವೂರ ವರು ಸದಸ್ಯರಾಗಿಯೂ ಇರತಕ್ಕ ಆಡಳಿತೆಮಂಡಳಿಯನ್ನು ಶ್ರೀಗಳವರು ನಿಯಮಿಸಿದರು. ವ್ಯಾಪಾರವೇ ಧನವೃದ್ಧಿಗೆ ಸಹಾಯವೆಂದು ನಿಶ್ಚಿತ ನಂಬಿ ವ್ಯಾಪಾರಿಗಳೂ ಜಮೀನುದಾರರೂ ಆದರೂ, ಧರ್ಮಶ್ರದ್ಧೆಯುಳ್ಳವ ರಾಗಿ ತಮ್ಮ ಶಾಸನವನ್ನು ಪಾಲಿಸಿಬರುತಿದ್ದ ಗಣನೀಯರನ್ನೇ ಈ ನಿಧಿಯ ಆಡಳಿತೆಗೆ ನೇಮಿಸಿದರು. ಕೂಡಲೇ ಸಂಸ್ಕೃತ ಕಲಿಸುವ ವಿದ್ಯಾಶಾಲೆಯೊಂದು ಆವ್ವೂರ ಮಠದ ಮೊಗಸಾಲೆಯಲ್ಲಿಯೇ ಸ್ಥಾಪನೆ ಹೊಂದಿತು. ಆ ವಿದ್ಯಾಶಾಲೆಯಿಂದ ಪುರೋಹಿತರಾಗಿ, ಪುರಾಣನಿರೂಪಕ ರಾಗಿ, ವ್ರತಾದಿಗಳನ್ನು ಮಾಡಿಸುವವರಾಗಿ, ಕವಿಗಳೂ ಸಂಸ್ಕೃತಿಪಾಲ ಕರೂ ಆಗಿ ಇತ್ತೀಚೆಯವರೆಗೂ ಹೊರಬಿದ್ದು, ಸಮಾಜಕ್ಕೂ ಆವ್ವೂ ರಿಗೂ ಶ್ರೀಮಠಕ್ಕೂ ಕೀರ್ತಿ ತಂದು, ಶ್ರೀಗಳವರ ಅಂದಿನ ದೀರ್ಘದರ್ಶಿತ್ವ ವನ್ನು ತುಳುನಾಡೆಲ್ಲ ಹೊಗಳುವಂತೆ ಮಾಡಿರುವರು. ಹೀಗೆ ನಾರಾ ಯಣನ ಜನನವಾದೊಡನೆ, ಮಠದ ಮೊಗಸಾಲೆಯಲ್ಲಿದ್ದ ಅಯ್ಗಳ ಸಾಲೆಯೂ ನಾರಾಯಣಸ್ಮರಣೆಯನ್ನು ಮಾಡಿ ಮುಗಿದರೂ, ಈ ಚಿರ ಸ್ಮರಣೀಯವಾದ ವಿದ್ಯಾಶಾಲೆಯೂ, ಅದರ ಶಾಖೆಗಳೋ, ಪರಿವರ್ತಿತ ಪ್ರತಿಬಿಂಬಗಳೋ,— ಎಂಬಂತಹ ಸಂಸ್ಥೆಗಳೂ ಈಗಲೂ ಉಳಿದಿವೆ. ಕಾಲಕ್ಕೇ ಹಿಡಿದ ಕಲಿಯು ಇವನ್ನು ಬಾಧಿಸದೆ ಬಿಡಲಾರನಾದರೂ, ಆಡಿಗಲ್ಲಿನ ಅಡಿಯಲ್ಲಿ ಆ ತೇಜಃಪುಂಜರಾದ ಪುಣ್ಯಪುರುಷರ ಆತ್ಮದ

ಆಕಾಂಕ್ಷೆಯು ಸ್ಥಿರವಾಗಿರುವ ಕಾರಣ, ಈ ನಿಧಿಯೂ ವಿದ್ಯಾಶಾಲಾದಿಗಳೂ ಇನ್ನೂ,—ಇವುಗಳ ತರುವಾಯ ಉಂಟಾದ ಇವೇ ಮಾದರಿಯ ಎಷ್ಟೋ ಸಂಸ್ಥೆ, 'ಫಂಡು'ಗಳ ಅವಸಾನವನ್ನು ಕಂಡೂ—ಉಳಿದಿವೆ. ಇಂತಹವರ ಚರಣರಜವು ಪವಿತ್ರವೆಂದು ಯಾರು ತಾನೇ ಹೇಳಲೊಲ್ಲರು? ಈ ದೂಳೇ ಸಮಾಜಕ್ಕೂ ದೇಶಕ್ಕೂ ಪರುಷಸ್ಪರ್ಶದಂತಾಗಿರುವುದು. ಇಂತಹದನ್ನು ಕರುಣಿಸತಕ್ಕ ಶ್ರೀಪಾದಂಗಳಿನ್ನೊಬ್ಬರು ಎಂದಿಗೆ ಬರುವರು?

ಆದರೆ, ಊರ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ—ಸಾಮಾನ್ಯ ಕನ್ನಡ ಓದುಬರಹ ಲೆಕ್ಕಗಳಿಗಾಗಿ ಸಾಲೆ ಎಲ್ಲಿ? ಸಂಸ್ಕೃತ ಸಂಸ್ಕೃತಿಗಳಿಗೆ ಮಠದ ವಿದ್ಯಾಶಾಲೆಯಾಯಿತು; ಅದು ಮಠದ ಭಜಕರಿಗೇ ಮಾತ್ರ; ಇತರರಿಗೆ? ಅಯ್ಗಳು ಇನ್ನು ಸಾಲೆಗೆ ಮನಸ್ಸುಕೊಡಲಾರದಾದರು; ವರ್ತಕನೊಬ್ಬನಲ್ಲಿ ಶಾನುಭೋಗರಾದರು. ಆವೂರ ಮಕ್ಕಳಿಗೆ ಓದು ಬರಹಕ್ಕೆ ಉಪಾಯವಿರಲಿಲ್ಲ. ಹಾಗೆಂದು ಮಠದಲ್ಲಿ ಮಾತ್ರವೇ ಸಾಲೆಯಿರಬೇಕೆಂದೇನೋ ನಿಯಮವಿದ್ದಿಲ್ಲವಷ್ಟೆ. ಒಬ್ಬ ಶಿಕ್ಷಿತರ ತರುವಾಯ ಮತ್ತೊಬ್ಬರು,—ಎಂದರೆ ಅವರೇ ಅಯ್ಗಳ ಸಾಲೆಯಿಂದ ಹೊರಬಿದ್ದವರಲ್ಲಿ ಕೆಲವರು,—ತಮ್ಮ ಮನೆಗಳಲ್ಲೇ ಚಿಕ್ಕ ಸಾಲೆಗಳನ್ನು ತೆರೆದರು. ಹತ್ತೆಂಟು ಕಡೆ ಮಕ್ಕಳ ಸಾಲೆಗಳಾದುವು. ವಿದ್ಯಾಪ್ರಚಾರ ನಡೆದರೂ, ಅದು ಏಕಪ್ರಕಾರವೂ ಆಗಿದ್ದಿಲ್ಲ, ವ್ಯವಸ್ಥಿತವೂ ಆಗಿದ್ದಿಲ್ಲ. ಹೀಗೆ ಐದು ವರ್ಷಗಳು ಕಳೆದುವು.

ಹೀಗೆ ಉಂಟಾದ ಹಲವು ಮನೆಸಾಲೆಗಳಲ್ಲಿ ಒಂದು ಉತ್ತಮವಾಗಿದ್ದಿತು. ಅದನ್ನು ಬೋರ್ಡಿನವರು ಪ್ರೋತ್ಸಾಹಿಸಿ, ಅವರೇ ಉಪಾಧ್ಯಾಯರನ್ನು ತಮ್ಮ ಉಪಾಧ್ಯಾಯರನ್ನಾಗಿಟ್ಟುಕೊಂಡು, ಶಾಲೆಯನ್ನು ನಡೆಸಿಬಂದರು. ಈ ಶಾಲೆಗಾಗಿ ಊರವರ ಸಹಾಯದಿಂದ ಹೊಸ ಕಟ್ಟಡವಾಯಿತು.

ಈ ಶಾಲೆಗಳಲ್ಲಿ ಮೂರು ದರ್ಜೆಗಳಿದ್ದುವು. ಉದ್ದಕ್ಕೊಂದು ಕೋಣೆ; ಆ ಮೂಲೆಗೆ ಮೂರನೇ, ಈ ಮೂಲೆಗೆ ಒಂದನೇ, ನಡುವೆ ಎರಡನೇ ದರ್ಜೆಗಳು. ಹೆಡ್‌ಮಾಸ್ಟರರು (ಇನ್ನು ಅಯ್ಗಳು ಇಲ್ಲ)

ಎರಡನೇ ದರ್ಜೆಯ ಉಪಾಧ್ಯಾಯರು. ಇವರು ವಯಸ್ಸಿನಲ್ಲಿ ಉಳಿದಿಬ್ಬರಿಗಿಂತ ಜ್ಯೇಷ್ಠರು. ಕನಿಷ್ಠರು ಮೂರನೇ ದರ್ಜೆ ಕಲಿಸುತ್ತಿದ್ದರು; ಮೊದಲನೇಯದರಲ್ಲಿ ಬಾಲಕರು ಯುವಕರೊಬ್ಬರ ವಿದ್ಯಾರ್ಥಿಗಳಾಗಿದ್ದರು.

"ಕಲ್ಲು ಮುಚ್ಚಿದ, ಮಣ್ಣಾಗೋಡೆಯ, ।
ಹುಲ್ಲುಛಾವಣಿ ಬಿದಿರುಕಂಬದ, ।
ಮುಳ್ಳುಬೇಲಿಯ ಸುತ್ತುವಲಯದ, ಸಗಣಿ ಸಾರಣೆಯ ॥"

ಈ ಶಾಲೆಯು ಇಂದಿಗೂ ಇದ್ದು ಬಿಡೀ ಜಾನುವಾರುಗಳ ದೊಡ್ಡಿಯಾಗಿದೆ! ಅಲ್ಲಿ ಅಂದು ಕಲಿತವರು ಈಗ ಮುದುಕರಾಗಿದ್ದು, ಆ ದಾರಿಯಾಗಿ ಹೋಗುತ್ತಾ, ಇದೇನು ಒಕ್ಸ್‌ಫರ್ಡಿನ ಈಟನ್ ಕೋಲೇಜಿನಂತಿದೆ ಎಂದೇ ಹೆಚ್ಚಳಗೊಂಡು, ವಿನಾಸೆಗೆ ಕೈಯನ್ನೆತ್ತಿ, "ಇಲ್ಲೀಗ ನಾನು ಕಲಿತುದು," ಎನ್ನುವುದುಂಟು. ಹುಟ್ಟೂರು, ಹೆತ್ತ ತಾಯಿ, ಕಲಿತ ಶಾಲೆ,— 'ಸ್ವರ್ಗಾದಪಿ ಗರೀಯಸಿ!'

ಅಯ್ಯಗಳ ಸಾಲೆಯೂ ಮುಗಿಯಿತು, ಅಯ್ಯಗಳೇ ಮುಗಿದರು. ಅಯ್ಯಗಳು ಅಯ್ಯಗಳಾಗಿ, ಹೊಸ ಶಾಲಾಪದ್ಧತಿಯ ಮಿರುಗಿನಿಂದ ಮೈಗಳ್ಳರೆಂದು ಬೈಗಳನ್ನು ಹೊಂದುವಹಾಗಾಯಿತು. ಆದರೂ ಈ ಶಾಲೆಯು ಕ್ರಮವೂ ಅಯ್ಯಗಳ ಸಾಲೆಯ ಕ್ರಮಗಳನ್ನು ಬಿಡದೆ, "ಶ್ರೀಗಣಾಧಿಪತಯೇ ನಮಃ"ದಿಂದಲೇ ಪ್ರಾರಂಭಿಸಿ, ಅಕ್ಷರಮಾಲೆಯನ್ನೂ, ಅಕ್ಷರಸಂಯೋಜನೆಯ ಕ್ರಮ, ಕೋಷ್ಠಕಾದಿಗಳ ಪರಿವಿಡಿಗಳನ್ನೂ ಕಲಿಸುತ್ತಿದ್ದಿತು. ಆ ತುಂಡು ಪದಗಳು, ದಾಸರ ಪದಗಳು, ಯಕ್ಷಗಾನ ಪ್ರಸಂಗಗಳು, ರಾಮಾಯಣ ಜೈಮಿನಿಭಾರತ ಮೊದಲಾದುವೆಲ್ಲ ಮೂಲೆಪಾಲಾದುವು. ಈ ಸಮಯದಲ್ಲಿ ಓದುವುದಕ್ಕೆ ಗಾರ್ತ್‌ವೇಟ್ ದೊರೆ ರಚಿಸಿದ ಮೊದಲನೇ ಪುಸ್ತಕವೊಂದೇ ಮಕ್ಕಳ ಕೈಯಲ್ಲಿದ್ದಿತು. ಮಕ್ಕಳು ಮನೆಗೆ ಕೊಂಡೊಯ್ಯಲು ಮರೆತ ಪುಸ್ತಕಗಳನ್ನು ಕೂಡಿಸಿಟ್ಟುವೇ ಶಾಲೆಯ ಪುಸ್ತಕ ಭಂಡಾರ ಹೊರತು, ಶಾಲೆಯಲ್ಲಿ ಮಿಕ್ಕ ಯಾವ ಪುಸ್ತಕಗಳೂ ಇದ್ದಿಲ್ಲ. ಇಂಡಿಯಾ ದೇಶದ ಶಿಲಾಛಾಪೆಯ ಭೂಪಟವೊಂದು ಗೋಡೆಗೆ ಒರಗಿ ತೂಗುತ್ತಿದ್ದಿತು. ಅದು ತೂಗಿದ್ದಷ್ಟಕ್ಕೆ ಗೋಡೆ ಯಾವಾಗಲೂ 'ಮಟಮಾ

ಸ'ನ್ನು ಸಹ ಬಳಿದುಕೊಳ್ಳುತ್ತಿರಲಿಲ್ಲ; ಏಕೆಂದರೆ, ಆ ಭೂಪಠವನ್ನು ಯಾರೂ ಮುಟ್ಟಲು ಅಂಜುವರು. ಅದರ ಉಪಯೋಗವೆಂದರೆ, ಗೋಡೆಗೆ ತೂಗುತ್ತಿರುವುದು, ಅಷ್ಟೆ; ಮೊದಲನೇ ಮೂರು ದರ್ಜೆಗಳಲ್ಲಿ ಅದರ ಎಂತಹ ಉಪಯೋಗವೂ ಇದ್ದಿಲ್ಲ. ಅದನ್ನೆತ್ತಿದರೆ ಇಂಡಿಯಾ ದೇಶಕ್ಕೆ ಭೂಕಂಪವಾಗುವುದೆಂದು ನಂಬಿದ್ದರೋ ಏನೋ! ಬರೆವುದಕ್ಕೆ ಮೂರು ದರ್ಜೆಗಳಲ್ಲೂ 'ಸ್ಲೇಟು'; ಅಯ್ಯಳ ಸಾಲೆಯಲ್ಲಿದ್ದಷ್ಟೇ ಪ್ರಾಮುಖ್ಯತೆಯನ್ನು ಸ್ಲೇಟು ಅಂದೂ ತಳೆದಿದ್ದಿತು. ಎಂದರೆ,—ಪಾಠ ಕಲಿಯದೆ ಇದ್ದವನು ಅದನ್ನು ಹೊತ್ತುಕೊಂಡು, 'ಪರೆಂಗಿಮಣೆ' ಎಂಬಾ ವಾಯು ನಿರ್ಮಿತವಾದ ಕುರ್ಚಿಯಲ್ಲಿ ಕೂತುಕೊಳ್ಳಬೇಕಾಗಿದ್ದಿತು; ಮತ್ತು ಉಪಾಧ್ಯಾಯರು ಜ್ಞಾನವೃಕ್ಷದ ಬೇರೆಂದು ಕರೆದ ಬೆತ್ತವು ವಿದ್ಯಾರ್ಥಿಯಲ್ಲಿ ಚುರುಕನ್ನು ಹುಟ್ಟಿಸಲು ತೊಡಗುವಾಗ, ಈ ಸ್ಲೇಟು ಒಡ್ಯಾಣವಾಗಿ ಆತ್ಮರಕ್ಷಣೆ ಮಾಡುತಿದ್ದಿತು. ಮೇಲ್ತರಗತಿಯಲ್ಲಿ ಮಕ್ಕಳು, ಕೆಳತರಗತಿಯವರು ಸ್ಲೇಟಿನಲ್ಲಿ ಬರೆದು ತರುವಂತೆಯೇ, ಕಾಗದದಲ್ಲಿ 'ಕೋಪಿ' ಬರೆದು ತರುತಿದ್ದರು. ಇದಕ್ಕಾಗಿ 'ಗಜೇಟಿ'ನ ಕಾಗದ (ಸಕ್ಕರೆ ಕಟ್ಟುವುದಕ್ಕೆ ಅಂಗಡಿಯವರು ಉಪಯೋಗಿಸುತಿದ್ದ ಕಾಗದ) ತಂದು ಮನೆಯಲ್ಲಿಯೇ ಕತ್ತರಿಸಿ ಹೊಲಿದು ಕೊಡುತಿದ್ದರು. ಅದರ ಮೇಲೆ ಮೊದಲು ಉದ್ದಕ್ಕೆ, ಅದಾದ ಬಳಿಕ ಅಗಲಕ್ಕೆ, ಎರಡು ಅಂಗುಲ ದೂರದ ಗೀಟುಗಳನ್ನೆಳೆದು ದೊಡ್ಡಕ್ಷರದಲ್ಲಿ ಕೋಪಿ ಬರೆವುದಿದ್ದಿತು. ಬೇರೆ 'ಎಕ್ಸರ್ ಸಾಯ್ಸ್' ಪುಸ್ತಕಾದಿಗಳಿದ್ದಿಲ್ಲ. ಪಾಠದಲ್ಲಿ ಶಬ್ದಾರ್ಥ ಹೇಳುತಿದ್ದರಲ್ಲದೆ ಒಂದೊಂದು ವೇಳೆ ಉಪಾಧ್ಯಾಯರೇ ಅದನ್ನು ಮಕ್ಕಳಿಗೆ ಬರೆದುಕೊಟ್ಟು ಬಾಯಿಪಾಠ ಮಾಡಿಸುತಿದ್ದರು. ಬೇರೆ ಭೂಗೋಳ, ಇತಿಹಾಸ, ಇತ್ಯಾದಿಯ ಮಾತೇ ಇದ್ದಿಲ್ಲ; ಸಸ್ಯಗಳು, ಪ್ರಾಣಿಗಳು, ನೋಡಸಿಕ್ಕುವುದೇ ಅಲ್ಲದೆ ಅವುಗಳನ್ನು ಕುರಿತೂ ಪಾಠಗಳೆಂದರೆ ಉಂಟೇ? ಗಣಿತದಲ್ಲಿ +, −, ×, ÷ ಈ ಸಂಸ್ಕಾರಗಳಲ್ಲದೆ, ನಿತ್ಯವೂ ಬಾಯಿಲೆಕ್ಕಗಳೇ (ಅವನ್ನು ಬೆರಳು ಮಡಚದೆ ಉತ್ತರಿಸಬೇಕು). ಒಂದೊಂದು ಪ್ರಶ್ನೆಲೆಕ್ಕ ಮಹಾಪ್ರಯಾಸದ, ಬುದ್ಧಿವಂತಿಕೆಯ ಪರಮಾವಧಿಯ, "ಮೂರು ತಾರಕ್ಕೆ ಐದು ಬಾಳೆಯ ಹಣ್ಣಾದರೆ, ಐದು ತಾರಕ್ಕೆಷ್ಟು?" ಎಂಬ ತರಗತಿಯವಿದ್ದುವು.

ಆದರೂ, ಬೆಳಿಗ್ಗೆ ೭ರಿಂದ ೯॥ ಘಂಟೆತನಕವೂ, ಮಧ್ಯಾಹ್ನ ೨ರಿಂದ ೪॥ ಘಂಟೆತನಕವೂ ಎಡೆಬಿಡದೆ ಪಾಠಗಳು ನಡೆಯುತಿದ್ದುವು. ಆಟದ ಮಾತಿರಲಿಲ್ಲ. ಕೇವಲ ವಾರ್ಷಿಕ ಪರೀಕ್ಷೆಯೊಂದೇ 'ಗುರಿ.' ಈ 'ಗುರಿ' ದಾಟಿದವನು ಮಹಾತ್ಮನು, ಈ 'ಗುರಿ'ಯಲ್ಲಿ ಬಿದ್ದವನು ನರಕಕ್ಕಿಳಿವನು ಎಂಬ ಭಾವನೆ ಮಕ್ಕಳಲ್ಲೂ ಇದ್ದಿತು. ಶಾರೀರಿಕ ಶಿಕ್ಷಣದ ಎರಡು ಮುಖ್ಯ ಅಭ್ಯಾಸಗಳೆಂದರೆ,— ಚೇಳು ಬಾಗುವುದು, ದಂಡ ತೆಗೆಯುವುದು. ಇವನ್ನು ಪರೀಕ್ಷೆಗೆ ಒಂದು ತಿಂಗಳಿಂದ ಕಲಿಸಲು ಪ್ರಾರಂಭಿಸುತಿದ್ದರು; ಪರೀಕ್ಷೆಯ ಕೋಪಿಯನ್ನು ಶಾಲೆಯಲ್ಲಿ ಬರೆಯಿಸುತಿದ್ದುದೂ ಆಗಲೇ. ಉಳಿದ ಸಮಯವೆಲ್ಲ ಎಲ್ಲ ಪಾಠಗಳನ್ನು ಬಾಯಿಪಾಠ ಮಾಡಲು ವಿನಿಯೋಗವಾಗುತಿದ್ದಿತು.

ನವ್ಯಾಗಣ ಶಿಕ್ಷಣಕ್ರಮದ ಹೋಲಿಕೆಯಲ್ಲಿ ಇವೆಲ್ಲವೂ ಅಪಹಾಸ್ಯಕರ, ಮೂಢರ ಕ್ರಮ ಎಂದು ತೋರಬಹುದು. ಅಯ್ಗಳ ಸಾಲೆಗಳಲ್ಲಿಯೇ ಕಲಿತವರು ಮುಂದೆ ಆಧುನಿಕ ಶಿಕ್ಷಣ ಹೊಂದಿ ಸರಕಾರದಲ್ಲಿ ಅತ್ಯುಚ್ಚ ಪದವಿಗೇರಿದವರಿದ್ದಾರೆ, ಈ ಹಳೇ ಶಾಲೆಗಳಲ್ಲಿ ಬಾಯಿಪಾಠ ಮಾಡಿಯೇ ಮುಂದೆ ವಿಶ್ವವಿದ್ಯಾಲಯದ ಮೇಲ್ಮೆಟ್ಟಲು ಹತ್ತಿದವರೂ ಇದ್ದಾರೆ. ಈಗಣ ಶಿಕ್ಷಣಕ್ರಮಕ್ಕೂ ಇದಕ್ಕೂ ಇರುವಷ್ಟೇ ಭೇದವು ಇದಕ್ಕೂ ಅಯ್ಗಳ ಸಾಲೆಯಲ್ಲಿನ ಕ್ರಮಕ್ಕೂ ಇದ್ದಿತು. ಇನ್ನು ಹತ್ತು ವರ್ಷಗಳಲ್ಲಿ ಉಂಟಾಗಬಹುದಾದ ಶಿಕ್ಷಣಕ್ರಮವು ೧೯೩೭ನೇ ಇಸ್ವಿಯದನ್ನು ನಾಚಿಕೆಗೇಡೆಂದು ಎನಿಸದೆ ಇರಲಾರದು. ಅಂದಿಗೆ ಅದೇ ಸುಖ, ಚೆಂದ; ಇಂದಿಗೆ ಇದೇ. ಅಂದು ಆ ಕ್ರಮದಿಂದ ಕಲಿತವರೇ ಅಲ್ಲವೇ, ಈಗಣ ಸುಶಿಕ್ಷಿತ ತಲಾಂತರದ ಹಿರಿಯರಾಗಿದ್ದಾರೆ!

ಬರಬರುತ್ತ ಜನರಲ್ಲಿ ನಿರುದ್ಯೋಗಸ್ಥಿತಿ ಹೆಚ್ಚಿತು. ಮೊದಲು ನಾಲ್ಕಕ್ಷರ ಬಲ್ಲವರಾಗಿ, 'ಮಿಡ್ಲ್ ಸ್ಕೂಲ್' ಪರೀಕ್ಷೆಯ 'ಸರ್ಟಿಫಿಕೇಟು' ಪಡೆದವರೂ, 'ಜನರಲ್ ಟೆಸ್ಟ್' ಪಾಸಾದವರೂ, ಹುಜೂರು ಶಿರಸ್ತೆದಾರಿ, 'ಡಿಪ್ಯೂಟಿ ಕಲೆಕ್ಟರಿ', ಮೊದಲಾದ ಹುದ್ದೆಗಳನ್ನೇರಿದರು. ಕ್ರಮೇಣ 'ಬಿ. ಎ.'ಗೂ 'ಎಟೆಂಡರಿ' ಕೆಲಸ ಸಿಗುವುದು ದುರ್ಲಭವಾಗುತ್ತ ಬಂದಿತು.

ಅಷ್ಟರೊಳಗೆ ವಿದ್ಯಾಭ್ಯಾಸದ ಖರ್ಚು ಬಹಳವೇರಿತು. ಮಧ್ಯಮ ಸ್ಥಿತಿಯವರು ಇದ್ದ ಮನೆ, ಹಿತ್ತಿಲು, ಮನೆಯ ಚರಸೊತ್ತು, ಆಭರಣಾದಿಗಳನ್ನು ಮಾರಿಯೂ ಅಡವಿಟ್ಟೂ ಮಕ್ಕಳಿಗೆ ಕಲಿಸಿ, ಅವರಿಗೆ ವಿದ್ಯಾಲಾಭವಾಗಲೆಂದು ವ್ಯಯಿಸಿದ ಮೂಲಧನದ ಬಡ್ಡಿಯು ಕೂಡ ದೊರೆವುದು ಕಷ್ಟವಾಯಿತೆಂದು ತಿಳಿದರು. ಆಗ ತಾನೇ, ಅಯ್ಯಗಳಲ್ಲಿ ಕಲಿತವರು ನೆಮ್ಮದಿಯಹಾಗಿದ್ದುದರೊಡನೆ, ಬೋರ್ಡು ಶಾಲಾ ಶಿಕ್ಷಣಕ್ರಮದಲ್ಲಿ ಶಿಕ್ಷಿತರಾದ ತ್ರಿಶಂಕುಗಳನ್ನು ಹೋಲಿಸಿ, ಗಾರ್ತ್ವೇಟ್ ದೊರೆಗಳ ಮೊದಲನೇ ಪುಸ್ತಕವನ್ನು ಅಪಾರ್ಥ ಮಾಡಿ, ಸದ್ಯಸ್ಥಿತಿಗೆ ಅನ್ವಯಿಸಿ ಪರಿಹಾಸ್ಯ ಮಾಡತೊಡಗಿದರು. ಅದೆಂತೆನೆ:—

ಗಾರ್ತ್ವೇಟರ ಮೊದನೇ ಪುಸ್ತಕದ ಪಾಠಗಳ ಕ್ರಮವು ಅಕ್ಷರಮಾಲೆಯ ಕ್ರಮವನ್ನು ಅನುಸರಿಸಿಲ್ಲ. 'ಅ', 'ಇದು' ಎಂಬಿವು ಮೊದಲನೇ ಪಾಠದಲ್ಲಿದ್ದು 'ಅದು', 'ಇದು'ಗಳ ಪರಿಚಯ; ಎರಡನೇ ಪಾಠದಲ್ಲಿ 'ವ' 'ನ' ಅಕ್ಷರಗಳು, ಇವುಗಳಿಂದ 'ಅವನದು' 'ಇವನದು', 'ವನ' ಇವುಗಳ ವ್ಯುತ್ಪತ್ತಿ; ಅನಂತರ 'ನನ್ನ'ಗಳಿಂದ 'ನನ್ನದು'; 'ತ', 'ತಾ', 'ಳ' ಗಳಿಂದ 'ತಾಳ'........ಹೀಗೆಲ್ಲ ಕೊನೆಯವರೆಗೂ ಪಾಠಕ್ರಮ. ಮೊದಲನೇ ಪುಸ್ತಕ ಓದಿದವನು ಯಾವ ಪುಸ್ತಕವನ್ನೂ ಓದಲು ಹಿಂದೆಗೆಮಂತಿರಲಿಲ್ಲ. ಮತ ಅಥವಾ ಧರ್ಮವಿಷಯವೇನೂ ಇರಲಿಲ್ಲ. (ಸರಕಾರವು ಏನೆಂದರೂ ಸರ್ವ ಧರ್ಮಗಳನ್ನೂ ನಿಷ್ಪಕ್ಷವಾಗಿಯೋ ಸಮಾನದೃಷ್ಟಿಯಿಂದಲೋ ಕಾಣುವುದೆಂಬುದಾಗಿ ಇದೆಯಷ್ಟೆ!) ಇಡೀ ವರ್ಷದ ಓದಿನಲ್ಲಿ ಒಂದು ಪದ್ಯವು ಇದ್ದಿತು; ಅದನ್ನು ಬಾಯಿಪಾಠ ಮಾಡುವುದಲ್ಲದೆ, ಅರ್ಥವನ್ನೂ ಹೇಳಬೇಕಾಗಿದ್ದಿತು. (ಇಡೀ ಪುಸ್ತಕದಲ್ಲಿನ ಪ್ರತಿಯೊಂದು ಶಬ್ದದ ಅರ್ಥವನ್ನು ವಿದ್ಯಾರ್ಥಿಯು ತನ್ನ ಮನೆಯಲ್ಲಾಡುವ ಭಾಷೆಯಲ್ಲಿ ಹೇಳಲು ಕಲಿತುಕೊಳ್ಳಬೇಕಾಗಿದ್ದಿತು. ಶಾಲೆಯಲ್ಲಿ ಉಪಾಧ್ಯಾಯರು ಕನ್ನಡದಲ್ಲೇ ಮಾತಾಡುತಿದ್ದರಾದರೂ, ಅರ್ಥ ಕಷ್ಟವಾದಾಗ ಮಕ್ಕಳಿಗೆ ಅವರವರ ಮಾತಿನಲ್ಲೇ (ತುಳು, ಕೊಂಕಣಿ, ಹಿಂದೂಸ್ಥಾನಿಗಳಲ್ಲೇ) ವಿವರಿಸುತಿದ್ದರು. ಆ ಅಪೂರ್ವ ಅದ್ವಿತೀಯ ಪದ್ಯವು ಇದೆಂದು ನೆನಪು:—

"ಬಾಲ್ಯಕರು ಹಾದಿಯುಲಿ ನಿಲ್ಲದಾಡದಲೀ ।
ಶಾಲೆಯುನು ಸೇರುವುದು ಹೊತ್ತು ಮಾಡದಲೀ ॥
ಶೀಲತನದಿಂ ಕಲಿತು ಓದಿ ಸುಗುಣದಲೀ ।
ಬಾಲತನವೆಂಬುವುದ ಹಾಕಿ ವಿದ್ಯದಲೀ ॥"

"ನೀತಿಬೋಧೆ, ಬಾಲಕರಿಗೆ!" ಎಂದು ನಗಬಾರದು. ಅಂದಿನ ರೀತಿಯೂ ವಿಶ್ವಾಸವೂ ಹಾಗೆ. ಇಂದು ಆವೂರಿಗೆ ಬೇಕಾದುದು ಕಡಲೆ ಪುರಿ, ಜಟ್ಕಾಸಾಬಿ; ಮುಂದೆ ಮೆಶೀನ್‌ಗನ್ನು, ಎರೋಪ್ಲೇನು, ಸ್ವರಾಜ್ಯ, ಸ್ವಯಂನಿರ್ಣಯ, ಇತ್ಯಾದಿ. ಈ ಪದ್ಯದಲ್ಲಿನ 'ಶೀಲತನ' ಗಾರ್ತ್‌ವೇಟರಿಗೇ ಗೊತ್ತು. ಇರಲಿ.

ಆವೂರ ವಿದ್ಯಾರ್ಥಿಗಳು ಹೊಸ ಶಾಲೆ ಸೇರಿ, ಮುಂದೆ ಬಿ. ಎ. ಆದರೂ ಹಿಂದಣ ಜನರಲ್ ಟೆಸ್ಟಿನವರಂತೆ ಡಿಪ್ಯೂಟಿ ಕಲೆಕ್ಟರರಾಗಲಿಲ್ಲ, ಮಾತ್ರವಲ್ಲ, ಇದ್ದುದನ್ನೆಲ್ಲ ಕಳೆದುಕೊಂಡರೆಂಬ ದುಃಖದಿಂದ, ಈ ಪುಸ್ತಕವನ್ನೇ ದೂರಿದರು.

"ಮೊದಲೇ, 'ಅದು, ಇದು.' ಅವರು ಬೇರೆ ತಲಾಂತರ, ನಾವು ಬೇರೆ. ವಿದ್ಯಾಲಾಭಕ್ಕಾಗಿ ಆಸ್ತಿಪಾಸ್ತಿಗಳೂ, ತಾಯಿ ಓಲೆಮಂಗಲಸೂತ್ರಗಳೂ ಅಡವಾಗಿ ಹೋದುವು. ಆಗ, 'ಅದು ಇವನದು' ಎಂದರೆ ಆಸ್ತಿಪಾಸ್ತಿಗೂ, 'ಇದು ಅವನದು' ಎಂದರೆ ಚಿನ್ನಾಭರಣಕ್ಕೂ ಅನ್ವಯಿಸುವಂತಾಯಿತು. ಶಿಕ್ಷಿತನಾದ ನನಗೆ, 'ಆ ವನ ನನ್ನದು' ಎಂಬ ಮೂರನೇ ಪಾಠದಲ್ಲಿ ಸೂಚಿತವಾದ ವನವೇ ವನವಾಸಕ್ಕಾಯಿತು. ಧರ್ಮಮತಗಳ ಮಾತೇ ಇಲ್ಲದೆ, ಅಯ್ಗಳ ಮಠ ಎಂದಿದ್ದುದು 'ಇಸ್ಕೂಲ್' ಎಂದಾಗಿ 'ಯೇಸುಕುಲ'ವಾಯಿತು. ಇನ್ನು, ನಾಲ್ಕನೇ ಪಾಠದಲ್ಲಿದ್ದ 'ನನ್ನ ತಾಳ ತಾ' ಎಂಬಂತೆ, ಶನಿವಾರಸೋಮವಾರಗಳಲ್ಲಿ ತಾಳ ಹಿಡಿದು ಭಿಕ್ಷೆ ಎತ್ತುವುದೇ ಗತಿ," ಎಂದು ಕುಚೋದ್ಯ ಮಾಡಿ ನುಡಿಯುತಿದ್ದರು. ಆವೂರಲ್ಲಿ ಈಗಲೂ ಈ ಕುಚೋದ್ಯವು ಶಿಕ್ಷಿತ ನಿರುದ್ಯೋಗಿಗಳನ್ನು ಕುರಿತಾಗಿ ಆಗಾಗ ಪ್ರಕಟವಾಗುತ್ತಿದೆ. ನಗಬಲ್ಲವರು ನಗುವುದಿಲ್ಲ, ನಗುವನ್ನೇ ಮಾತ್ರ ಬಲ್ಲವರು ನಗುತ್ತಾರೆ— ಗಾರ್ತ್‌ವೇಟರ ಕಾಲದಿಂದ ನೆಲೆಗೊಂಡ ಶಿಕ್ಷಣಕ್ರಮವನ್ನೂ ಅದರ ಪರಿಣಾಮವನ್ನೂ!

ವಾರ್ಷಿಕ ಪರೀಕ್ಷೆಗೆ ದೊರೆಗಳೇ ಬಂದರು. ಇವರ ಜತೆಯಲ್ಲಿ ಒಬ್ಬನು ಬಟ್ಲರನು. ದೊರೆಗಳನ್ನು ಯಾರೂ ಹೆಸರೆತ್ತಿ ಕರೆಯದೆ, 'ದೊರೆ' ಎನ್ನುತಿದ್ದರಾದರೂ, ಮಹಾತ್ಮನಾದ ಬಟ್ಲರನು ಮಾತ್ರ ದೊರೆಸ್ವಾಮಿ! ಹೆಸರೂ ಹಾಗೆ, ಅವನ ರೀತಿಯೂ ಹಾಗೆ. ಯಾರು ದೊರೆಗಳನ್ನು ಕಾಣಬಂದರೂ ಯಾವ ಮಾತನ್ನೂ ಆಡದೆ, ಬಲಗೈಯ ಹೆಬ್ಬೆಟ್ಟಿಂದ ತೋರುಬೆರಳನ್ನು ತಿಕ್ಕುತ್ತಲೇ ನಗುತ್ತ ನಿಲ್ಲುವನು. ದೊರೆಗಳು ಟಾಕಣಸವಾರರು. ಆದರೆ, ಕಾಲುಗಳ ನಡುವೆ ಕುದುರೆಯನ್ನು ಒತ್ತಿಹಿಡಿದು ನಡೆಸಂತೆ ಕಾಣುತಿದ್ದರು. (ಕುದುರೆ ಆಡಿನಂತೆ ನಡೆವುದು; ದೊರೆಗಳು ಬೆನ್ನಮೇಲೆ ಕೂತಾಗ, ಅವರ ಕಾಲು ಬೇಕಾದಲ್ಲಿ ನೆಲವನ್ನು ಮುಟ್ಟಲು, ಕುದುರೆ ನಿಲ್ಲುವುದು; ನೆಲದಿಂದ ದೊರೆಯು ಕಾಲೆತ್ತಿದಕೂಡಲೇ, ಕುದುರೆ ನಡೆವುದು,—**ನಡೆವುದು,** ಓಡುವುದಲ್ಲ.) ಆವೂರು ಬೋರ್ಡು ಶಾಲೆಯನ್ನು ಇವರು ಪ್ರವೇಶಿಸಿದ್ದೇ ಇಲ್ಲ. ಹೆಡ್ ಮಾಸ್ಟರರು ಅವರ ಬಟ್ಲರನನ್ನು (ದೊರೆಗಳಿಗೂ ಸ್ವಾಮಿಯಾದ ಅವನನ್ನು) ಕಂಡು, ಅವನ ಬೆರಳ ತಿಕ್ಕಾಟವನ್ನು ಕೆಲನಿಮಿಷ ತಡೆದಿದ್ದರು, ಅಷ್ಟೇ. ರೂಪಾಯಿಯ ನಾಣ್ಯವು ದೊರೆಸ್ವಾಮಿಯ ಕೈಗೆ ದೊರೆತರೆ, ರೂಪಾಯಿಯ ೧೯೨ ಪೈಗಳಿಗೆ ಸರಿಯಾಗಿ ೧೯೨ ಸಲ ತಿಕ್ಕುವಷ್ಟು ವೇಳೆಗೆ ಆ ಎರಡು ಬೆರಳುಗಳು ಸುಮ್ಮನಾಗಿ, ಬಂದವರು ತಂದ ಅರ್ಜಿಯನ್ನೋ ಇತರ ರಿಕಾರ್ಡನ್ನೋ ದೊರೆಗಳಿಗೆ ತಲಪಿಸಿ, ಉತ್ತರರೂಪವಾದ ಅಪ್ಪಣೆಯ ಪತ್ರವನ್ನು ತರುತಿದ್ದುವು. ಈ ವಿಚಿತ್ರರೂಢಿಯನ್ನು ಸಂದರ್ಶನಕ್ಕೆ ಹೋದವರೇ ತಿಳಿದಿದ್ದರಲ್ಲದೆ ದೊರೆಗಳು ತಿಳಿದಿರಲಿಲ್ಲ.

ಮಕ್ಕಳು ಅಯ್ಯಗಳ ಸಾಲೆಯ ಪರೀಕ್ಷಾಕಾಲದಲ್ಲಿ ಪರೀಕ್ಷೆಗೆ ಬರುತಿದ್ದಂತೆ ಸಿಂಗಾರವಾಗಿ ಬಂದರು. ಮುಖ್ಯ ಪರೀಕ್ಷಕರು ಕೃಷ್ಣಯ್ಯನವರು; ಇವರನ್ನು ಉಪಾಧ್ಯಾಯರು ಶಿರಸಾವಂದಿಸಿ ಶಾಲೆಯೊಳಕ್ಕೆ ಕರೆತಂದರು. ಇವರು ರಿಕಾರ್ಡು ನೋಡಿ, 'ಮಾರ್ಕ್'ಪಟ್ಟಿ ತುಂಬಿಸಿ, 'ಪಾಸು ಫೈಲು' ನಿರ್ಧಾರ ಮಾಡುವವರು. ನಿಜವಾದ ಪರೀಕ್ಷೆಯನ್ನು ಇವರ ಹಸ್ತಕರು ಮಾಡಿದರು. ಇವರಿಗೆ ಉಪಾಧ್ಯಾಯಮಂಡಲಿಯೇ ಹೆದರುತಿದ್ದಿತು. ದೊರೆಗಳಿಗೆ ದೊರೆಸ್ವಾಮಿ ಇರುವನೆಂದಬಳಿಕ ಕೃಷ್ಣ

ಯ್ಯನವರಿಗೆ ಕೃಷ್ಣಪ್ಪಯ್ಯನವರೊಬ್ಬರು ಬೇಡವೇ? ಉಪಾಧ್ಯಾಯರು ಇವರನ್ನು ಕಂಡು ಬೆಪ್ಪಾದಬಳಿಕ, ಮಕ್ಕಳು ಕಪ್ಪಾಗಬೇಡವೇ? ಇವರು ಎರಡು ಸಿಹಿಯಗಾಳ ಕುಡಿದು, ಮತ್ತೆರಡನ್ನು ಒಂದು ಕಡೆ ಇಟ್ಟುಕೊಂಡರು. ಇವರ ಪ್ರಕೃತಿ ಬಹಳ ಉದಾರ; ಯಾವಾಗಲೂ 'ಬೆಂಚಿ'ನ ಮೇಲೆಯೇ ಕೂತುಕೊಳ್ಳುವರಲ್ಲದೆ, ಕುರ್ಚಿಯ ಮೇಲಲ್ಲ. ಇವರನ್ನು ಹಿಡಿಯ ತಕ್ಕ ಕುರ್ಚಿ ಆವೂರು ಗುತ್ತಿನಲ್ಲಾಗಲಿ, ದೇವಾಲಯದ ಉತ್ಸವಪೀಠಗಳಲ್ಲಾಗಲಿ ದೊರೆಯಲಾರದಾಗಿದ್ದಿತು. ಗವಿಯೊಳಗಿಂದ ಹೊರಡುವಂತೆ ಇವರ ಬಾಯಿಂದ ಮಾತುಗಳ ಧ್ವನಿ ಹೊರಡುತಿದ್ದಿತು. ಮಕ್ಕಳು ಒಬ್ಬೊಬ್ಬರಾಗಿ ಇವರಿದ್ದಲ್ಲಿಗೆ ಹೋಗಿ, ತೋರಿಸಿದ ಪುಟ ಓದಿ, ತೋರಿಸಿಕೊಟ್ಟ ಕಾಪಿ ಬರೆದು, ಕೇಳಿದ ಲೆಕ್ಕಕ್ಕೆ ಉತ್ತರಕೊಟ್ಟು, ಆ ಪದ್ಯವನ್ನು ರಾಗದಿಂದ ಹಾಡಿ, ಶರಣಾಗತರಾಗಿ ದಿವ್ಯಸನ್ನಿಧಿಯಿಂದ ಮರಳಬೇಕಾಗಿದ್ದಿತು. ಕೆಲಮಕ್ಕಳಿಗೆ ಇವರು, ಎಂದೂ ಕಾಣದ, ಯಾವಾಗಲೂ ಕೇಳಿ ತಿಳಿದಿದ್ದ, ಗುಮ್ಮನಂತೆ ತೋರುತಿದ್ದರು. ಬೆಳಿಗ್ಗೂ ಸಂಜೆಯೂ ಪರೀಕ್ಷೆ ನಡೆಯಿತು. ಕೊನೆಗೆ ಚೇಳು ಬಾಗುವ, ದಂಡ ತೆಗೆಯುವ ವೇಳೆ ಬಂತು. ಅದಾಗುವಾಗ ಮಾರ್ಕ್‌ಪಟ್ಟಿ ತಯಾರಾಯಿತು. ಪ್ರತಿ ದರ್ಜೆಯಲ್ಲೂ ಒಬ್ಬಿಬ್ಬರೇ ಹೊರತು ಇತರರೆಲ್ಲ ಪಾಸೆಂದು, ತೆಗೆದಿಟ್ಟ ಸಿಹಿಯಗಾಳಗಳನ್ನು ಮೊದಲು ಕುಡಿದು, ಕೃಷ್ಣಪ್ಪಯ್ಯನವರು ನಗುತ್ತ ಗುಡುಗಿಸಿ ಅಪ್ಪಣೆ ಕೊಡಿಸಿದರು. ಆಗ ತಾನೇ, ಉಪಾಧ್ಯಾಯರು ಬೆಪ್ಪಾಗಿದ್ದವರು ಈಗ ಬೆಚ್ಚಗಾದರು; ಮಕ್ಕಳು ಕಪ್ಪಾಗಿದ್ದವರು ಕುಪ್ಪಳಿಸತೊಡಗಿ ಚಪ್ಪಾಳೆ ಹಾಕಿದರು.

ದೊರೆಗಳು ಟಾಕಣ ಹತ್ತಿ ನೆಲದಿಂದ ಕಾಲೆತ್ತಿದರು; ಸವಾರಿ ಮುನ್ನಡೆಯಿತು—ದೊರೆಸ್ವಾಮಿ 'ಸರ್ಕೀಟು'ಪೆಟ್ಟಿಗೆಗಳೊಡನೆ ಎರಡೆತ್ತಿನ ಗಾಡಿಯಲ್ಲಿ ಮೊದಲೇ ಸವಾರಿ ಮಾಡಿದ್ದನು. ಆವೂರಿಂದ ಮತ್ತೊಂದೂರಿಗೆ ತಲಪುವತನಕ ಅವನು ಕೈಬೆರಳುಗಳನ್ನು ತಿಕ್ಕಿದುದಿಲ್ಲ. ವಿದ್ಯಾರ್ಥಿಗಳ 'ರಿಸಲ್ಟಿ'ನ (ಪರೀಕ್ಷೆಯ ಫಲಿತಾಂಶದ) ಫಲವಾಗಿ, ಮಾಸ್ಟರರ ಬಕ್ಷೀಸಿನಿಂದ ಅವನ ಕೈಗಳಿಗೆ ಅಷ್ಟು ವಿರಾಮ ದೊರೆನಂತಾಗಿದ್ದಿತು. ಕೃಷ್ಣಯ್ಯನವರೂ ಕೃಷ್ಣಪ್ಪಯ್ಯನವರೂ ಅಂದು ದೇವಳದಲ್ಲಿ ಉತ್ಸವ

ನೋಡಲು ನಿಂತು, ಮನ್ನಣೆ ಹೊಂದಿ, ನಡುರಾತ್ರಿಯ ಬಳಿಕ ಗಾಡಿ ಹತ್ತಿ ಹೊರಟರು.

ದೇವಳದಲ್ಲಿ ಉತ್ಸವಕಾಲದಲ್ಲಿ ಅಂದು ಪಾಸಾದ ಮಕ್ಕಳ ಗಲಾಟೆ ಬಹಳವಾಗಿದ್ದಿತು. ಆದರೆ ಅವರನ್ನು ಹಿರಿಯರಾಗಲಿ ಉಪಾಧ್ಯಾಯರಾಗಲಿ ಅಂದು ತಡೆದುದಿಲ್ಲ; ಕೃಷ್ಣಪ್ಪಯ್ಯನವರು ಕೂತ ಪಠಾರದಲ್ಲಿ ಮಾತ್ರ ಮಕ್ಕಳು ಸುಳಿದಿಲ್ಲ.

ಇಂತಿದು ಆವೂರು ಮಠದ ಅಯ್ಗಳ ಸಾಲೆಯಿಂದ ಬೋರ್ಡು ಶಾಲೆಯತನಕ ಅಂದು ವಿದ್ಯಾಭ್ಯಾಸ ಸಾಗಿದ ಒಂದು ಚಿತ್ರ. ಎಷ್ಟೋ ಮಾಸಿದ್ದಿರಬಹುದು; ಅದರ ಮೇಲೆ, ೫೦ ವರ್ಷಗಳ ಕಾಲವು ದಾಟಿ ಹೋಗುವಾಗ, ಎಷ್ಟೋ ದೂಳು ಸಂಚಿತವಾಗಿದ್ದುದನ್ನು ನಾವು ಅಕ್ಕರೆಯಿಂದ, ಜತನದಿಂದ ಪೂಸುವುದಕ್ಕೆ ಅಂದಿನ ಎಲವಸ್ತ್ರವನ್ನು ಉಪಯೋಗಿಸದೆ ಇಂದಿನ ಸುವಾಸನೆಯ ದ್ರವ ಹಚ್ಚಿದ 'ಟುವಾಲ'ನ್ನು ಉಪಯೋಗಿಸಿದುದರಿಂದ, ಚಿತ್ರದ ಮೇಲೆ ಬೇರೆ ರೇಖೆಗಳೂ ಬೇರೆ ವಾಸನೆಗಳೂ ಮೂಡಿದ್ದಿರಬಹುದು. ಆದರೆ, ಆ 'ಸಾಲೆ'ಗಳು, ಆ ಮಠ, ಆ ಶ್ರೀಗಳವರು, ಆ ಸಂಸ್ಥೆಗಳು, ಆ ಅಯ್ಗಳು, ಆ ಶಾಲೆಗಳು, ಆ ಮಾಸ್ಟರರು, ಆ ಪರೀಕ್ಷಕರು, ಆ ಮೊದಲನೇ ಪುಸ್ತಕ,—ಎಲ್ಲವೂ ನಮ್ಮಲ್ಲಿ ಪೂಜ್ಯಬುದ್ಧಿಯನ್ನೇ ಅಲ್ಲದೆ ಇತರ ಭಾವನೆಗಳನ್ನು ಉಂಟುಮಾಡಿಲ್ಲ. ಬರೆವ ಅಡಚಣೆ, ಮಾತಿನ ಒಕ್ಕಣೆ, ಭಾವನೆಗಳ ಜೋಡಣೆ,—ಇವುಗಳು 'ಪೇನಿ'ನ ಮೂತಿಯ ತಿರುಪಿನಿಂದಲೂ, ಬರೆವಣಿಗೆಯ ಸ್ವಾಭಾವಿಕ ದುರಭ್ಯಾಸದಿಂದಲೂ, ಓದುಗರಲ್ಲಿ ಬೇರೆ ಅಭಿಪ್ರಾಯವನ್ನು ಹುಟ್ಟಿಸಲು ಅವಕಾಶಕೊಡಬಹುದೆಂಬ ಅಂಜಿಕೆ ನಮ್ಮಲ್ಲಿದೆ. ಆದರೆ,—

ಅಂದಿನ ಬಾಲ್ಯದಶೆಯ ಸ್ವರ್ಗಸುಖವನ್ನು ಸ್ವರ್ಗದಲ್ಲೂ ನಾವು ಕಾಣುವೆವೆಂಬ ಆಸೆಯನ್ನು ಕಟ್ಟಿಕೊಂಡಿಲ್ಲ. ಆವೂರಿನ ಆಗಣ ವಿದ್ಯಮಾನಗಳು ಎಷ್ಟು ಸರಳ, ಸ್ವಾಭಾವಿಕ, ಅಕೃತ್ರಿಮವಾದುವೆಂಬುದನ್ನು ಈಗ ಯಾವುದರೊಡನಾದರೂ ಹೋಲಿಸೋಣವೆಂದರೂ, ಅಂತಹ ವಿದ್ಯಮಾನಗಳು ನಮ್ಮ ಅರ್ಧ ಶತಮಾನದ ಜೀವನದಲ್ಲಿ ನಮ್ಮ ಅನುಭವಕ್ಕೆ

ಬಂದಿಲ್ಲ. ಆ ಕಾಲದ ಮೇಲೆ ಆಧುನಿಕತೆಯು ಮಬ್ಬು ಅಥವಾ ಮಿರುಗು ಹಬ್ಬಿಕೊಂಡಿದೆ. ಆವೂರಿಗೆ ಹೃದಯವಾಗಿದ್ದುದು ಆವೂರು ಮಠ; ಆವೂರು ಮಠದಲ್ಲಿ ಪ್ರತಿಷ್ಠೆಹೊಂದಿದ್ದುದು ಆ ಶ್ರೀಗಳವರ ಪಾದಧೂಳಿ; ಈ ಧೂಳಿಯೇ ಅಯ್ಯಗಳ ಸಾಲೆ, ಸಂಸ್ಕೃತ ಶಾಲೆ, ಬೋರ್ಡ್‌ಶಾಲೆಗಳ ರಚನೆಯಲ್ಲಿ ಸೇರಿಕೊಂಡಿದ್ದು ಆ ಕಟ್ಟಡಗಳಿಗೂ ಸಂಸ್ಥೆಗಳಿಗೂ ವಜ್ರ ಲೇಪವಂತಾಗಿದ್ದಿತು. ಸಂಸ್ಕೃತ ಶಾಲೆಯು ಶ್ರೀಗಳವರ ದಿವ್ಯ ನಾಮ ವನ್ನೇ ತಳೆದಿದೆ. ಬೋರ್ಡ್ ಶಾಲೆಯು ಹೊಸ ಕಟ್ಟಡದಲ್ಲಿ ಈಗಲೂ ಅಂದಿನ ಹಳೆಯ ಶಾಲಾಕಟ್ಟೋಣಕ್ಕೆ ಧನಸಂಪತ್ತು ಒದಗಿಸಿದ ಮಹ ನೀಯರುಗಳಾದ ಕ್ರೈಸ್ತರು, ಮಹಮ್ಮದೀಯರು, ಜೈನರು, ನಾಡವರು ಗಳಲ್ಲಿ ಒಬ್ಬೊಬ್ಬರ ಹೆಸರುಗಳನ್ನು ಶ್ವೇತಶಿಲೆಯ ಮೇಲೆ ಕೆತ್ತಿರುವು ದನ್ನು ನಾವು ಓದುವಾಗ, ಮೊದಲನೇ ಸಾಲಿನಲ್ಲಿಯೇ ಶ್ರೀಗಳವರು ಅಂದು ಸಂಸ್ಥಾಪಿಸಿದ ವಿದ್ಯಾಶಾಲಾನಿಧಿಯ ವಂತಿಗೆಯ ಹೆಸರನ್ನೂ ಓದುತ್ತೇವೆ.

ಕಾಶಿ, ಗೋಕರ್ಣ, ರಾಮೇಶ್ವರ, ವೃಂದಾವನ, ಬದರೀನಾಥ ಮುಂತಾದ ಮಹಾಕ್ಷೇತ್ರಗಳಲ್ಲೆಲ್ಲ ಶ್ರೀಗಳವರ ಮಠಗಳಿದ್ದರೂ, ಶ್ರೀಗಳ ವರು ಆವೂರ ಮಠದಲ್ಲಿಯೇ ಮಹಾಸಮಾಧಿಯನ್ನೈದಿದರು. ಸುತ್ತಲೂ ತುಲಸಿ ಗಿಡಗಳು ಕೋಮಲವಾದ ಹಸುರೆಲೆಗಳಿಂದ ಕಂಗೊಳಿಸಿ ವಾತಾ ವರಣದಲ್ಲೆಲ್ಲ ಶೀತಲವಾದ ಪವಿತ್ರ ಸುವಾಸನೆಯನ್ನು ಹರಡಿಸಿರುವ ಮಠಾಂಗಣದಲ್ಲಿ, ಮಠದ ಗೋವುಗಳು ಅಡ್ಡಾಡುತ್ತಿರುವ ಸ್ಥಳದಲ್ಲೇ, ಶ್ರೀಗಳವರ ಸಮಾಧಿಯು ಸುಂದರವಾಗಿಯೂ ಗಂಭೀರವಾಗಿಯೂ ನಿಂತಿದೆ. ಸಮಾಧಿಯ ಮೇಲೆ ದೇವನಾಗರೀಲಿಪಿಯಲ್ಲಿ ಶ್ರೀಗಳವರ ಹೆಸರು, ಸಮಾಧಿ ಹೊಂದಿದ ಸಂವತ್ಸರ ಇಷ್ಟೇ ಕೆತ್ತಿವೆ. ವರ್ಷಕ್ಕೊಮ್ಮೆ ಶ್ರೀಗಳವರ ಪುಣ್ಯತಿಥಿಯಾಚರಣೆ ನಡೆವುದು. ಆಗ ದೇವಳದಲ್ಲಿ ಸಂತರ್ಪಣೆ ಉತ್ಸವಾದಿಗಳಿವೆ. ಇತ್ತೀಚೆಗೆ ಶ್ರೀಗಳವರ ಜೀವನಚರಿತ್ರೆ ಯ ಮಹತ್ವವು ತಿಳಿದುಬರುವ ಹಾಗೆ ಅವರ ನಂತರದವರ ಜೀವನ ಕ್ರಮವೇ ಬೋಧಿಸಿರುವ ಕಾರಣ, ಯುವಕರೆಲ್ಲರೂ "ಬಾಲಕರ ಸೇವೆ" ಎಂಬೊಂದು ಹೊಸ ಉತ್ಸವವನ್ನು ರಾತ್ರಿಕಾಲದಲ್ಲಿ ಏರ್ಪಡಿಸಿಕೊಂಡು,

ಮಠದಿಂದ ದೇವವಿಗ್ರಹವನ್ನು ಬಹು ಸಂಭ್ರಮದಿಂದ ಸಮಾಧಿಯ ತನಕ ಒಯ್ದು, ಅಲ್ಲೇ ಇಟ್ಟು ಪೂಜಿಸಿ, ಮುಕ್ತರ ಆತ್ಮಕ್ಕೆ ಶಿರಸಾ ವಂದಿಸುತ್ತ ಪ್ರಾರ್ಥನೆ ಮಾಡುವುದುಂಟು. ಶಾಲಾವಿದ್ಯಾರ್ಥಿಗಳು (ಹಿಂದಿನವರೂ ಇಂದಿನವರೂ) ಅಂದಿನ ಪಾರುಪತ್ಯಗಾರರಾಗಿರುವ ಕಾರಣ, ನಡುರಾತ್ರಿಯತನಕವೂ ದೀಪಾವಳಿ ಬೆಳಗಿಸುವರು; ಅನಂತರ ಆರತಿಯನ್ನೂ ಪ್ರಸಾದವನ್ನೂ ಪಡೆದು ಮನೆಗೆ ಹಿಂತೆರಳುವಾಗ, ಊರಿನಲ್ಲೆಲ್ಲರಿಗೂ ಬಲುದೂರಕ್ಕೂ ಕೇಳಬರುವಂತೆ ಶ್ರೀಗಳವರ ಹೆಸರಲ್ಲಿ ಜಯಘೋಷವನ್ನು ಮಾಡುವರು. ವಿದ್ಯಾಪ್ರಚಾರಕ್ಕಾಗಿ ಬದುಕಿದವರಿಗೆ ಮರಣವಿಲ್ಲ.

# ವೈದ್ಯರಾಜ ಧನ್ವಂತರಿ

ಈ ಮಹಾತ್ಮನ ಹೆಸರು ಬಳೆದುದೇ, ತಿಂಗಳು ತಿಂಗಳಿಗೆ ಸರಿಯಾಗಿ ಹೊರಡುತ್ತಿದ್ದ ನಮ್ಮ ಕತೆಗೆ ಜಾಡ್ಯ ಹಿಡಿಯಿತು. ಮಾಂತ್ರಿಕರ, ಜೋಯಿಸರ, ಡಾಕ್ಟರರ ಮತ್ತು ಉಪಾಧ್ಯಾಯರ ಹೆಸರುಗಳನ್ನು ಜಪಿಸುತ್ತಲೇ ಎಂತೆಂತಹ ಪಿಶಾಚಿಗಳೂ ಗ್ರಹಗಳೂ ರೋಗಗಳೂ ತುಂಟತನವೂ (ಕ್ರಮವಾಗಿ) ಮಾಯವಾಗುವುವೆಂದು ಕೇಳುತ್ತೇವೆ. ನಮ್ಮ ಕತೆಗೆ ಮಾತ್ರ ಹೀಗೇಕಾಯಿತೋ ತಿಳಿಯದು. ಧನ್ವಂತರಿಯ ಹೆಸರು ಎಲ್ಲೆಲ್ಲಿಯೂ ಪ್ರಚಾರಕ್ಕೆ ಬಂದು, ಓಣಿ ಓಣಿಗಳಲ್ಲೂ ಧನ್ವಂತರಿಗಳು ಆವೂರಲ್ಲಿರುವ ಕಾರಣ, ರೋಗನಿವಾರಕನಾದ ಆ ಮಹಾ ವೈದ್ಯರಾಜನೇ ತನಗೇ ತಾನಾರೆಂದು ತಿಳಿಯದಷ್ಟು ರಗಳೆಯೊದ್ದಿರಬಹುದು. ಕೋಟ್ಯವಧಿ ಧನ್ವಂತರಿಗಳು ಈಗ ಮೆರೆಯುತ್ತಿರಬಹುದಾದರೂ, ವೈದ್ಯರಾಜ ಧನ್ವಂತರಿ ಅವನೊಬ್ಬನೇ ಅಲ್ಲವೇ? ಧನ್ವಂತರಿಯು ನಮ್ಮ ವೈದ್ಯರಾಜನು ಹೊರತು, ನಮ್ಮ ವೈದ್ಯರಾಜನು ಧನ್ವಂತರಿಯಲ್ಲವೆಂದು ಬಲ್ಲೆವು. ಆವೂರಲ್ಲಿ ಮಾತ್ರ ಇಷ್ಟು ತಿಳಿದವರಿಲ್ಲ. ನೋಡುವತ್ತ ಧನ್ವಂತರಿಗಳೇ ಕಂಡುಬರುವಾಗ, ಯಾವನಲ್ಲಿ ಅವರು ಬೇರೆ ಭಗವತ್-ಸ್ವರೂಪ ಕಾಣಬಹುದು? ಅಂತೂ ಧನ್ವಂತರಿಗಳು ಹೆಚ್ಚಾಗಿ ರೋಗಗಳೂ ಹೆಚ್ಚಾಗಿವೆ ಎಂದೂ, ಒಂದೊಂದು ಹೊಸ ರೋಗವನ್ನು ಶಮನ ಮಾಡಲು ಒಬ್ಬೊಬ್ಬ ಹೊಸ ಧನ್ವಂತರಿಯು ಅವತಾರವೆತ್ತುತ್ತಿರುವನೆಂದೂ ಆವೂರಲ್ಲೇ ಎಂದೇನು?—ವಿಲಾಯತಿಯಲ್ಲಿಯೂ ಪ್ರಕಟವಾಗಿದೆ! ಪತ್ರಿಕೆಗಳಲ್ಲಿ ಬರುವ ಜಾಹೀರಾತುಗಳಲ್ಲಿ ಹೆಚ್ಚಿನವು ಧನ್ವಂತರಿಗಳವು. ಒಂದು ಕಾಲದಲ್ಲಿ ಭಗವಾನ್ ಧನ್ವಂತರಿಯು

ಹೆಸರಿಂದಲೇ ಗುಣಹೊಂದುತ್ತಿದ್ದ ರೋಗಿಗಳು ಈಗ ಜಾಹೀರಾತು ಮೂಲಕವಾಗಿಯೇ ಧನ್ವಂತರಿಯು ಪರಿಚಯ ತಿಳಿದು, ಆಯಾ ರೋಗದ (ಇಷ್ಟ- ಯಾ ಕುಲ-)ದೇವತೆಯಾಗಿರುವ ಧನ್ವಂತರಿಯು ಕೃಪೆಯನ್ನು ವಿ. ಪಿ. ಮೂಲಕ ಸ್ವೀಕರಿಸಿ, ('ಗುಣವಾಗದಿರುವಲ್ಲಿ ಹಣ ಪರತ್' ಎಂಬ ಶರ್ತ ತಿಳಿದು) ಮುಂದೆ ಅವನ ಚಿಕಿತ್ಸಾಫಲವನ್ನು ಶಿಫಾರಸಿನ ಉಪ ಚಾರರೂಪವಾಗಿ ಜಾಹೀರಾತು ಕೊಟ್ಟು ಹರಕೆ ಸಲ್ಲಿಸುವಂತಾಗಿದೆ. ಆವೂರಿನ ಟಪ್ಪಾಲುಕಟ್ಟೆಯಲ್ಲಿ ಹೆಚ್ಚಿನ ವಹಿವಾಟು ಧನ್ವಂತರಿಯು ಸಂಬಂಧವುಳ್ಳುದೇ; ಈ ವ್ಯವಹಾರ ಕುಂದಿದರೆ, ಆವೂರಿನ ಟಪ್ಪಾಲು ಕಟ್ಟೆಯೂ ಮರಣಹೊಂದುತ್ತಿದ್ದಿತು.

ಆವೂರಿನಲ್ಲಿ ಸಮಸ್ತ ಧನ್ವಂತರಿಗಳಿಗೂ ಮೊದಲಾಗಿ ಮೂಲ ಮಾಯಿಯಾಗಿದ್ದವಳು ಸೋಮು ಹೆಂಗಸು. ಹೆಂಗಸರು ಗರ್ಭಿಣಿಯಾ ಗುವ ಕಾಲದ ಮೊದಲಿಂದ ಹೆರಿಗೆ ಮುಗಿದು ಎರಡು ತಿಂಗಳುಗಳಾ ಗುವತನಕವೂ ಸೋಮುವೇ ಆವೂರಿನಲ್ಲಿ 'ಹೆಲ್ತ್ ವಿಸ್ಟಿಟರ್, ನರ್ಸ್, ಮಿಡ್-ವಾಯಿಫ್' ಇತ್ಯಾದಿ; ಹೆಂಗಸರ ಆಸ್ಪತ್ರೆಯ ಲೇಡಿ ಡಾಕ್ಟರರ ಕೈಪಿಡಿಯೇ ಸೋಮು. 'ಸೋಮು ಇಲ್ಲದೆ ಕ್ಷೇಮವಿಲ್ಲ,' ಎಂಬ ಗಾದೆ ಆವೂರಲ್ಲಿದ್ದಿತು. ಈ ಚಿಗುರು, ಆ ಬೇರು, ಒಂದು ಲೇಪ, ಒಂದು ಕಷಾಯ, ಇಷ್ಟರಲ್ಲೇ ಸಾವಿರ ರೋಗಗಳೂ ಗುಣ: ಬೇರೆ ಚಿಕಿತ್ಸೆಯೂ ಇಲ್ಲ, ಬೇರೆ ವೈದ್ಯರೂ ಇಲ್ಲ. ಬಾಲಗ್ರಹಪೀಡೆಯನ್ನು ಬಡೆದೋಡಿಸು ವುದಕ್ಕೆ ಇವಳೇ ಹೆಸರಾದವಳು. ಯಾವುವೋ ಕೆಲವು ಗಿಡಗಳ ಸೊಪ್ಪು ಕಡ್ಡಿಗಳನ್ನು ಕಟ್ಟಿತಂದ ಸೂಡಿಯಿಂದ ರವಿವಾರ ಬುಧವಾರಗಳಲ್ಲಿ 'ಲಟಿಪಿಟಿ' ಕೂಸನ್ನು ಕಾಲುತಾಸು ತಲೆಯಿಂದ ಕಾಲಿನವರೆಗೆ ಚೆನ್ನಾಗಿ ಬಡಿದುಬಿಟ್ಟಳೆಂದರೆ, ಸೂರ್ಯನ ಸುತ್ತಲೂ ಓಡುವಾಗ ದಾರಿತಪ್ಪಿ ಈ ಮಗುವಿನ ಕಡೆಗೆ ಬಂದ ಆ ಗ್ರಹಗಳು, ಬದುಕಿದರೆ ಸಾಕೆಂದೋಡಿ ಪುನಃ ಅದೇ ಸುತ್ತುದಾರಿಯಲ್ಲಿ ಸುತ್ತಾಡುತ್ತಿದ್ದುವು. ಇವಳ ಕೈಯ ಸೂಡಿಯು ಇವಲ್ಲದೇ ಇತರ ಎಂತಹ ದುಷ್ಟ ಗ್ರಹಗಳಿಗೂ ಸರಿದಾರಿ ತೋರಿಸುತ್ತಿದ್ದಿತು. ಆದರೆ ಸೋಮುವಿಗೂ ಮರಣವುಂಟಾಯಿತು. ಅವಳ

ಕೈಯ ಸೂಡಿಯ ಬಡೆತದಿಂದ, ಸ್ವೇಚ್ಛೆಯಾಗಿ ತಿರುಗಲಾರದ ಗ್ರಹಗಳೆಲ್ಲ ಒಳಸಂಚು ಹೂಡಿ ಅವಳನ್ನೇ ಮುತ್ತಿದುವು. ಅವಳು ಈ ಗ್ರಹಗಳ ಗ್ರಹಣದಿಂದ ಮುಕ್ತಳಾದುದೇ ಅವಳಿಗೆ ಮುಕ್ತಿಯಾಯಿತು. ಸೋಮು ವಿನ ಸ್ಥಾನದಲ್ಲಿ ಆವೂರಲ್ಲಾರೂ ಈಗ ಇಲ್ಲ. ಬಾಲಕರ ಇಂಗ್ಲಿಷ್ ಪುಸ್ತಕಗಳಲ್ಲಿ ಕಸಪೊರಕೆಯ ಮೇಲೆ ಸವಾರಿ ಮಾಡುವ ಒಬ್ಬ ಮುದು ಕಿಯ ಚಿತ್ರವನ್ನು ಕಂಡಾಗಲೆಲ್ಲ, ಆವೂರ ಸೋಮುವಿನ ನೆನಪಾಗುತ್ತಿದೆ. ಅವಳ ಸ್ಮಾರಕವನ್ನು ಆ ರೀತಿ ಮಾಡಿರುವವರಿಗೆ, ಆವೂರ ಶಾಲಾ ಮಕ್ಕಳು ಎಷ್ಟು ಕೃತಜ್ಞರು!

ಸೋಮು ದಿವಂಗತಳಾದ ಬಳಿಕ, ಆವೂರಲ್ಲಿ ಚಿಕಿತ್ಸೆಗೆ ಹಳಬರೊ ಬ್ಬರು ಮುಂದೆ ಬಂದರು. ಇವರು ಸಕುಟುಂಬವಾಗಿ ನಾಲ್ಕು ಸಲ ಕಾಶೀರಾಮೇಶ್ವರಯಾತ್ರೆ ಮಾಡಿದ್ದರು. ಆ ಕಾಲದಲ್ಲಿ 'ಯಾತ್ರೆ' ಎಂದರೇ ತೀರಿತು; ಅದಕ್ಕೆ ವಿಪರೀತಾರ್ಥವಿದ್ದಿತು, ಹೊರಟವರು ಮರಳು ವಂತಿರಲಿಲ್ಲ. ಯಾತ್ರೆಗೆ ಹೊರಡುವಂದು ನೆಂಟರಿಷ್ಟರ ಗೋಳಾಟವು ಶ್ಮಶಾನಯಾತ್ರೆಯ ಗೋಳಾಟದ ನೆನಪನ್ನೂ ವಿಸ್ತರಿಸುತಿದ್ದಿತು. ಹೀಗಿ ರುವಾಗ, ನಾಲ್ಕು ಸಲ ಕಾಶೀರಾಮೇಶ್ವರಯಾತ್ರೆ ಮಾಡಿಯೂ, ಇವರು ಇನ್ನೂ ಬದುಕಿದ್ದುದರಿಂದ ಯಮನ ಹೆದರಿಕೆ ಇವರಿಗಿಲ್ಲವೆಂದೇ ಆವೂರು ನಿರ್ಧರಿಸಿದ್ದಿತು. ಇವರಿಗೆ ಹೀಗಾಗಿ ಸೋಮುವಿನ ಪಟ್ಟವು ದೊರೆಯಿತು. ಮಾತ್ರೆ ಲೇಹ್ಯಗಳೇ ಇವರ ಔಷಧ. ಯಾತ್ರಾಕಾಲದಲ್ಲಿ ಅಲ್ಲಲ್ಲಿ ಸಿಕ್ಕಿದ ಸನ್ಯಾಸಿಗಳಿಂದ ಇವುಗಳ ಪ್ರಯೋಗ ಕಲಿತುಕೊಂಡಿದ್ದ ರೆಂದು ಇವರ ಖ್ಯಾತಿ ಹರಡಿದ್ದಿತು. ಇವರ ಸಾಕುತಾಯಿಯೊಬ್ಬ ಮುದು ಕಿಯು ತನ್ನ ಹಿರಿಯರ ಮನೆಯಿಂದ ಕಲಿತುಕೊಂಡ ಪ್ರಯೋಗಗಳಿವು ಎಂದು ಕೆಲವರ ಅಭಿಪ್ರಾಯವಿದ್ದಿತು. ಹೇಗೂ ಇರಲಿ, ಎಲ್ಲ ಮಾತ್ರೆ ಗಳೂ ಎಲ್ಲ ಲೇಹ್ಯಗಳೂ ಒಂದೇಯಾಗಿ ರುಚಿಕೊಡುತಿದ್ದುವಾದರೂ (ಬಹುಶಃ ಇವರಿಗೆ ಒಂದೇ ಮಾತ್ರೆ, ಒಂದೇ ಲೇಹ್ಯ ಮಾತ್ರ ತಯಾರಿ ಸಲು ತಿಳಿದಿದ್ದಿರಬಹುದು) ಅವನ್ನು ಬೇರೆಬೇರೆ ರಸಗಳಲ್ಲಿ ಬೆರಸಿ ಬೇರೆಬೇರೆ ರೋಗಗಳಿಗೆಂದು ಕೊಡುತಿದ್ದರು. ಇವರೂ ಕಾಲವಶರಾ ಗಲು ಯೋಗ್ಯ ವೈದ್ಯರೇ ಆವೂರಲ್ಲಿ ಇಲ್ಲವಾದರು.

ಇಷ್ಟರಲ್ಲಿ ಜರ್ಮನ್ ಮಿಶನರಿಗಳು ಆವೂರಲ್ಲಿಯೂ ಪ್ರಸಂಗ ಮಾಡತೊಡಗಿದರು. ಇವರಿಂದಾಗಿ 'ಉಮಾಪತಿ'ಯು (ಹೋಮಿಯೋಪತಿ) ಚಿಕಿತ್ಸಾಕ್ರಮವು ಊರಲ್ಲಿ ಬಳಕೆಗೆ ಬಂದಿತು. ಮೊದಮೊದಲು ಈ ದ್ರವಗಳು ಮ್ಲೇಚ್ಛ ದ್ರವಗಳೆಂದು, ಅವುಗಳ ಜಾತಿಗೆ ತಕ್ಕಂತೆ ಮೇಲ್ಜಾತಿಯವರು ಅವನ್ನು ಬಹಿಷ್ಕರಿಸಿದರು. ಆದರೂ ಎಳೆಮಕ್ಕಳಿಗೆ ಅತಿ ತ್ವರೆಯಾಗಿ ಇವು ಗುಣ ಕೊಡಬಲ್ಲುವಾದಕಾರಣ ಮಕ್ಕಳೆಲ್ಲ ಶೂದ್ರರು ಎಂಬ ತಥ್ಯವು ಗೋಚರಕ್ಕೆ ಬಂದು, ಶೂದ್ರರಿಗೆ ಮ್ಲೇಚ್ಛಚಿಕಿತ್ಸೆ ಅತ್ಯುಪಯುಕ್ತವಾಗಿ ತೋರಿ, ಕ್ರಮೇಣ 'ಶೂದ್ರ'ರ ತಾಯಿತಂದೆ ಮೊದಲಾದವರಿಗೂ ಸ್ವೀಕಾರಯೋಗ್ಯವೆಂದೇ ತೋರಿತು; ಮಿಶನರಿಗಳು ಈ ಔಷಧವನ್ನು ಧರ್ಮಾರ್ಥವಾಗಿ ಕೊಡುತ್ತಿದ್ದಕಾರಣ, ಖರ್ಚಿಲ್ಲದೆ ಗುಣ ಕೊಡತಕ್ಕ ಈ ದ್ರವಗಳು ತುಂಬ ಖರ್ಚಾದುವು. ಕೆಲವರು ಮೇಲ್ಜಾತಿಯವರೂ ಇವನ್ನು ತಮ್ಮ ಮನೆಯಲ್ಲಿ ತಂದಿಟ್ಟುಕೊಂಡು, ತಾವೂ ರೋಗಚಿಕಿತ್ಸೆಗೆ ಕೈಹಚ್ಚಿದರು. ಹೀಗೆ, ಉಮಾಪತಿಯ ಯುಗವು ಮೂಡಿತು.

ಹಾಗೆಂದು ಆಯುರ್ವೈದ್ಯವೇನೂ ನಾಶವಾಗಲಿಲ್ಲ. ಮಲೆಯಾಳದಿಂದ ಆಗಾಗ ಮಳೆಗಾಲದಲ್ಲಿ ಆವೂರಿಗೆ ಬಂದುಳಿಯುತ್ತಿದ್ದು, ನಾನಾ ತೈಲಚೂರ್ಣಭಸ್ಮಗಳ ಮೂಲಕ ತಾವೂ ಆವೂರವರೂ ಸುಖವಾಗಿರುವಂತೆ ಕೆಲಮಂದಿ ಪ್ರಯತ್ನ ಮಾಡಿದ್ದರು. ಸಾಮಾನ್ಯ ರೋಗಗಳಿಗಿಂತ ಮಹಾರೋಗಗಳನ್ನು ಗುಣಪಡಿಸುವ ಚಿಕಿತ್ಸೆಗೆ ಇವರು ಹೆಸರು ಪಡೆದಿದ್ದರು. ಆಗ ಮಲೆಯಾಳದಲ್ಲಿ ಮಹಾರೋಗಗಳೇ ಸಾಮಾನ್ಯವಾಗಿದ್ದುವೆಂಬ ಭಾವನೆ ಆವೂರಲ್ಲಿ ಉಂಟಾಗಿದ್ದಿತು. ನೆಗಡಿ, ಅಜೀರ್ಣ, ಚಳಿಜ್ವರಗಳಿಗೆ ಇವರಲ್ಲಿ ಔಷಧವೇ ಇರಲಿಲ್ಲ; ಕ್ಷಯ, ಪಾಂಡುರೋಗ, ಅಪಸ್ಮಾರ, ಸನ್ನಿಪಾತ, ಜಲೋದರ, ಗಂಡಮಾಲೆ, ಮಹಾಮೇಹ, ಇತ್ಯಾದಿ 'ಮಹಾ ಮಹಾ'ಗಳಿಗೆ ಮಾತ್ರ ಇವರು ಭಸ್ಮಗಳನ್ನು ಕೊಡುತ್ತ, ಚಿಲ್ಲರೆ ಜಾಡ್ಯಗಳನ್ನು ಕಡೆಗಣ್ಣಿಂದಲೂ ನೋಡುತ್ತಿರಲಿಲ್ಲ. ಆದರೆ ಜೀವನೋಪಾಯ ಕಡಿಮೆಯಾಗುತ್ತಲೇ (ರೋಗಿಗಳ ಸಂಖ್ಯೆ ಕಡಿಮೆಯಾದಾಗ) ಚಿಲ್ಲರೆ ಜಾಡ್ಯಗಳನ್ನು ಮಹಾರೋಗಗಳಾಗುವಂತೆ ಬೆಳೆಸಿ

ತಂದು, ಅನಂತರ ಅವನ್ನು ಗುಣಪಡಿಸುತ್ತಿದ್ದರು. ಇವರೇ ಆವೂರಲ್ಲಿ ಧನ್ವಂತರಿಯ ಹೆಸರನ್ನು ಮೊದಲಾಗಿ ಪ್ರಚಾರಕ್ಕೆ ತಂದು ಕೆಲಮಂದಿ ಶಿಷ್ಯರನ್ನೂ ಮಾಡಿಕೊಂಡಿದ್ದರು. ಆವೂರಿನ ಹವಾಗುಣವೇ ಸ್ವದೇಶ ವಾತ್ಸಲ್ಯವನ್ನು ಬಲಪಡಿಸುವಂತಿದ್ದುದರಿಂದ, ಇವರ ಶಿಷ್ಯರು ಪ್ರಬಲ ರಾಗಿ, ತೆಂಕಣ ಗುರುಗಳನ್ನು ಮುಂದೆ ತೆಂಕಣ ನಾಡಿಗೇ ಕಳುಹಿಕೊಡು ವಂತಾಯಿತು. ಶಿಷ್ಯರಲ್ಲಿ ಪ್ರತಿಯೊಬ್ಬರೂ ಅಮರಕೋಶ ಮೊದಲ್ಗೊಂಡು ಕೆಲವು ಚಿಕ್ಕ ವೈದ್ಯಗ್ರಂಥಗಳನ್ನೂ ಮೈಸೂರಿಂದ ಕೊಂಡುಕೊಂಡು, ಅವು ಗಳಲ್ಲಿದ್ದ ಶ್ಲೋಕಗಳನ್ನು ಬಾಯಿಪಾಠ ಮಾಡಿಯೂ, ಅವುಗಳಲ್ಲಿ ಹೇಳ ಲಾದ ಚಿಕಿತ್ಸೆಗಳನ್ನು (ಸಂಜೀವನ ಮಾತ್ರೆ, ಸರಳಭೇದೀ ಚೂರ್ಣ, ಶ್ವಾಸಕುಠಾರ, ಗೋರೋಚನ ಮಾತ್ರೆ, ಪಿಂಡತೈಲಗಳನ್ನು) ತಯಾರಿ ಸಿಯೂ ಧನ್ವಂತರಿಯ ಹೆಸರಿಗೆ ಧನ್ಯತೆಯನ್ನು ಗಳಿಸಿತಂದರು.

ಈ ಊರ ವೈದ್ಯರಲ್ಲಿ ಹೆಚ್ಚಿನ ಕೀರ್ತಿಪಡೆದವರೊಬ್ಬರು ಮಹಾ ಮೇಧಾವಿಗಳಾಗಿದ್ದರು. ಇವರು ಸ್ವತಃ ನಾನಾ ವೈದ್ಯಕೀಯ ಪ್ರಯೋಗ ಗಳನ್ನು ಮಾಡಿ ಹೊಸಹೊಸ ಸಿದ್ಧೌಷಧಗಳನ್ನು ಕಂಡುಕೊಂಡರು; ಇವನ್ನು ಇವರು ಕಂಡುಕೊಳ್ಳುತ್ತಿರುವಾಗ ಹಲವು ರೋಗಿಗಳು ಮಾಯ ವಾದರು ನಿಜ, ಆದರೆ ಅನುಭವವೇ ಎಂತಹ ಕ್ಲೇಶಕ್ಕಿಂತಲೂ ಹೆಚ್ಚಿನ ದಲ್ಲವೇ? ಆವೂರಲ್ಲಿ ಈ ವೈದ್ಯರು ಧನ್ವಂತರಿಯ ಹಾಗೂ ಆಯುರ್ವೇದದ ಹೆಸರುಗಳನ್ನು ಬಹಳ ಬೆಳಗಿದವರು. ಆವೂರಿನ ಹತ್ತು ಹರದಾರಿಗಳ ವರೆಗೂ ಇವರ ಕೀರ್ತಿ ಹರಡಿತು.

ಇವರು ಯಾವನೊಬ್ಬ ರೋಗಿಯನ್ನು ಕಾಣಹೋಗುವಾಗ, ಇವರ ಬಳಿಯಲ್ಲಿ ಹತ್ತೆಂಟು ಮಂದಿ ಯಾವಾಗಲೂ ಇರುತ್ತಿದ್ದರು. ಈ ಭಕ್ತರು ವೈದ್ಯರ ಕೀರ್ತಿ ಹರಡಲು ನಿರಂತರ ಕಾರಣರಾಗಿದ್ದರು. ರೋಗಿಯ ನಾಡೀಪರೀಕ್ಷೆ, ನೇತ್ರಪರೀಕ್ಷೆ, ಮೂತ್ರಪರೀಕ್ಷೆಗಳಿಂದಲೂ ಅಲ್ಲಿದ್ದವ ರೊಡನೆ ವಿಚಾರದಿಂದಲೂ ರೋಗವನ್ನು ನಿರ್ಧರಿಸಿ, ಕೂಡಲೇ ಔಷಧ ಗಾಗಿ ಮನೆಗೆ ಬರುವಂತೆ ತಿಳಿಸಿ ಹೊರಡುವರು. ಹೊರಡುವಾಗ, ಹತ್ತಿರದ ಭಕ್ತರಲ್ಲಿ ಒಬ್ಬೊಬ್ಬರೊಡನೆ ಸ್ವಕೀಯ ಅಭಿಪ್ರಾಯವನ್ನು

ಕಿವಿಯಲ್ಲೇ ಹೇಳುತಿದ್ದರು. "ಏನೂ ಇಲ್ಲ. ಬರೇ ಅಜೀರ್ಣವಾಗಿದೆ."– "ನಾಲ್ಕು ದಿನ ರೋಗಸ್ಥಿತಿ ನೋಡದೆ ಈತನಿಗೆ ಚಿಕಿತ್ಸೆ ಮಾಡುವುದು ಸಲ್ಲದು."—"ಯಾವ ಚಿಕಿತ್ಸೆಯೂ ಇಲ್ಲದೆ ಈತನು ನಾಲ್ಕು ದಿನಗಳಲ್ಲಿ ಚಟಕ್ಕನೆ ಎದ್ದು ಹೊರಡುವನು."—"ಧನ್ವಂತರಿಯೇ ಬಂದರೂ ಈತನು ಬದುಕುವ ಹಾಗಿಲ್ಲ, ಹೆಚ್ಚೆಂದರೆ ಇನ್ನು ನಾಲ್ಕು ದಿನ ಉಳಿದಾನು."— ಇತ್ಯಾದಿಯಾಗಿ ಒಬ್ಬೊಬ್ಬರಿಗೆ ಒಂದೊಂದು ಅಭಿಪ್ರಾಯವನ್ನು ಹೇಳುವರು. ಇವರು ಕಂಡ ರೋಗಿಯನ್ನು ಮತ್ತೊಬ್ಬ ವೈದ್ಯನಿಗೆ ತೋರಿಸಿದರಂತೂ, ಇವರ ಮೇಲಿನ ಜವಾಬುದಾರಿ ತಪ್ಪಿತು. ಇಲ್ಲದಿದ್ದಲ್ಲಿ, ರೋಗಿಯು ಹೇಗಾದರೂ, "ಇಂತಹವನನ್ನು ಕರೆದು ವಿಚಾರಿಸಿದರೆ ರೋಗಿಗೆ ಹೀಗೆಯೇ ಆಗುವುದಾಗಿ ನಾನು ಅಂದೇ ಹೇಳಿದ್ದೆನೋ ಇಲ್ಲವೋ ಎಂದು ತಿಳಿಯುವಿರಿ. ನನಗೆ ಅಂದೇ ತಿಳಿದಿದ್ದಿತು! ನಮ್ಮ ವೈದ್ಯಶಾಸ್ತ್ರ, ನನ್ನ ಅನುಭವ, ಇದರಿಂದೇನು ತಪ್ಪಾದೀತೇ?" ಎಂದು ರೋಗಿಯ ಬಂಧುಬಳಗದವರಿಗೆ ತಿಳಿಸುವರು. ಅವರು ವಿಚಾರವಾಡಿ ನೋಡಲು, ಒಬ್ಬನಲ್ಲ ಮತ್ತೊಬ್ಬನ ಹತ್ತಿರ ಅವರು ಹೀಗೆಯೇ ಆಗುವುದಾಗಿ ಅಂದು ಹೇಳಿದ್ದುದು ನಿಜವೆಂದು ತಿಳಿದುಬರುವುದು. ಹೀಗಾಗಿ ಇವರ ಕೀರ್ತಿ ಹರಡಲು ಕಾರಣವಾಗಿದ್ದಿತು.

ಇಷ್ಟರೊಳಗೆ ಆವೂರಲ್ಲಿ ಬೋರ್ಡಿನವರ ಆಸ್ಪತ್ರೆ ತೆರೆಯಿತು. ಆ ನೀರು, ಈ ನೀರು ಬೆರೆಸಿ, ಬಾಟಲಿಯಲ್ಲಿ ತುಂಬಿಸಿ, ಧರ್ಮಕ್ಕೆ ಔಷಧ ಕೊಡುವ ಆಸ್ಪತ್ರೆ, ಎಲ್ಲ ಜಾತಿಗಳಿಗೂ ಅಡ್ಡಿಯಿಲ್ಲದೆ ಮೈಮುಟ್ಟಿ ಪರೀಕ್ಷಿಸಿ ಚಿಕಿತ್ಸೆ ಹೇಳಿಕೊಡುವ ಡಾಕ್ಟರರು, ಆ ಬೇರು, ಈ ಕೆತ್ತೆ ತಂದು, ಜಜ್ಜಿ, ಕುಟ್ಟಿ, ಎಂಭತ್ತು ಕುಡುತೆ ನೀರಲ್ಲಿ ಕುದಿಸಿ ಒಂದು ಕುಡುತೆಗೆ ಇಳಿಸಿಯೇ ಕುಡಿಯಬೇಕಾಗಿಲ್ಲದ ವಿಧಾನ, ಇತ್ಯಾದಿ ಕಾರಣಗಳಿಂದಲೂ ಶಸ್ತ್ರೋಪಚಾರವೂ ಇದ್ದ ಕಾರಣವೂ ಬೋರ್ಡ್ ಆಸ್ಪತ್ರೆಯ ಮತ್ತು ಡಾಕ್ಟರರ ಕಡೆಗೆ ರೋಗಿಗಳ ಪರಿಶೆ ಹೊರಟಿತು. ಡಾಕ್ಟರರ ಖ್ಯಾತಿ ಹರಡಿತು. ಇದರಿಂದ ನಮ್ಮ ವೈದ್ಯರು ನೊಂದರು. ಪರೀಕ್ಷೆಯೂ ಔಷಧಿಯೂ ಧರ್ಮಾರ್ಥವಾಗಿರುವಾಗ ವೈದ್ಯರಲ್ಲಿಗೆ ಬರುವವರು ಕಡಿಮೆ

ಯಾದರು. ಭಕ್ತಮಂಡಳಿಯು ಆರುತ್ತ ಬಂದಿತು; ಕೆಲವರೇ ವೈದ್ಯರಲ್ಲಿಗೆ ಬರುವಂತಾಯಿತು. ವೈದ್ಯರು ರೋಗಿಗಳಿಗೆ ಕಷಾಯಗಳನ್ನು ಕುಡಿಸುವುದರ ಬದಲಾಗಿ ಗಂಜಿ ಬೇಯಿಸುವ ಕಷ್ಟಕ್ಕೆ ಈಡಾಗುವಂತಾಯಿತು; ಧನ್ವಂತರಿಯ ಹೆಸರನ್ನೇ ಜಪಿಸಿದರೆ ಹೊಟ್ಟೆತುಂಬುವುದೇ? ತನ್ನವರಾಗಿ ಕಟ್ಟಿಟ್ಟ ರೋಗಿಗಳೆಲ್ಲ ಆಸ್ಪತ್ರೆಪಾಲಾದರೆ ಏನು ಮಾಡೋಣ? ಹಾಗೆಂದು ಆಸ್ಪತ್ರೆಯಂತೆ ತನ್ನಲ್ಲೂ ಧರ್ಮಾರ್ಥ ಚಿಕಿತ್ಸೆ ನಡೆಯುವುದು ಸಾಧ್ಯವೇ? ಔಷಧಮಾರಿಯೂ ಉಪಚರಿಸಿಯೂ ದೊರೆವ ಹಣವು ಮನೆಯ ಖರ್ಚಿಗೆ ಸಾಕಾಗುತ್ತಿರಲಿಲ್ಲ. ಈಗ ಅದು ಮಾಯವಾದರೆ, ಮನೆಯನ್ನೇ ಮಾರಬೇಕಾದೀತಲ್ಲ?—ಎಂದು ಮೊದಲಾಗಿ ದುಷ್ಟ ಸಂಭವಗಳನ್ನೇ ಅವರು ಪುನಃಪುನಃ ಧ್ಯಾನಿಸಿ ಚಿಂತೆಹಿಡಿದರು. ಎಷ್ಟೆಂದರೂ ಮೇಧಾವಿಗಳು! ಧರ್ಮಾರ್ಥ ನಡೆಯುವ ಚಿಕಿತ್ಸೆಗೆ ಬೆಲೆ ಇಲ್ಲವೆಂದೂ, ಕೈಕಂಡ ಔಷಧಗಳಿಗೆ ಸಮಾನವಾದ ಔಷಧಗಳೇ ಇಲ್ಲವೆಂದೂ, ಅವರೇ ಕೆಲವರು ಭಕ್ತರಿಂದ ಡಂಗುರ ಸಾರಿಸಿದರು. ಈ ಡಂಗುರವು ಅವೂರಲ್ಲಿ ಕೇಳುತ್ತ ಬರುವಂತೆಯೇ, ಡಾಕ್ಟರರು, ದುರ್ದೈವವಶಾತ್, ಆವೂರ ಭಾಗವತರಲ್ಲಿ ಒಂದು ಹೆರಿಗೆಗಾಗಿ ಬಂದು ಮೋಸಹೋದರು. ಶಸ್ತ್ರಕ್ರಿಯೆ ನಡೆಯಿತು; ಕೂಸನ್ನು ಕತ್ತರಿಸಿ ತೆಗೆದು, ಬಾಣಂತಿ ಸುರಕ್ಷಿತೆಯಾದಳೆಂದರು. ಮೂರೇ ದಿನಗಳಲ್ಲಿ ಬಾಣಂತಿಯು, ಶಸ್ತ್ರಕ್ರಿಯೆಯ ಉಪಚಾರ ಪಡೆಯದೆಯೇ, ಸತ್ತಳು. ಈ ಮಧ್ಯೆ, ಊರ ವೈದ್ಯರ ಚಿಕಿತ್ಸೆ ಮಾಡಬಿಡದ ಡಾಕ್ಟರರು ತಮ್ಮ ಔಷಧೋಪಚಾರವನ್ನೇ ಕಡ್ಡಾಯವಾಗಿ ನಡೆಸಿದ್ದ ಅಪಕೀರ್ತಿಯು, ಅಷ್ಟರಲ್ಲೇ, ಎಲ್ಲೆಲ್ಲಿಯೂ ಕೇಳಿಸುತಿದ್ದ ಡಂಗುರದ ಧ್ವನಿಯನ್ನು ಹೆಚ್ಚಿಸಿತು. "ನಮ್ಮ ವೈದ್ಯರಾಗಿದ್ದರೆ ರೋಗಿಯ ಶ್ಮಶಾನಯಾತ್ರೆಯತನಕವೂ ಸಂಗಡವಿರುತಿದ್ದರು; ಈ ಡಾಕ್ಟರರು ತಮ್ಮಿಂದಾಗದ ಚಿಕಿತ್ಸೆಗೆ ಕೈಹಚ್ಚಿ, ಹೆಂಡತಿಯೂ ಕೂಸೂ ನನ್ನ ಕೈಬಿಡುವಂತೆ ಮಾಡಿದರು," ಎಂದು ಆ ದುಃಖಾಗ್ನಿಯಿಂದ ಬೆಂದ ಭಾಗವತಬಂಧು ಗೋಳಾಡಿದನು! ಅಲ್ಲಿಗೆ ಡಾಕ್ಟರರ ಸುಖ್ಯಾತಿ ಕಂದಿತು; ಆಸ್ಪತ್ರೆಯ ಕೀರ್ತಿಯೂ ನಂದಿತು.

ತಕ್ಕಡಿಯ ತಟ್ಟೆಯೊಂದು ಇಳಿದಂತೆ, ಮತ್ತೊಂದು ಏರುವುವಷ್ಟೆ! ಡಾಕ್ಟರರು ಜನತೆಯ ದೃಷ್ಟಿಯಲ್ಲಿ ಮಾಯವಾಗುತ್ತ ಬಂದಂತೆ, ವೈದ್ಯರು ಗ್ರಹಣಮುಕ್ತನಾದ ಸೂರ್ಯನಂತೆ ಗೋಚರಕ್ಕೆ ಬಂದರು. ಆಸ್ಪತ್ರೆಯಲ್ಲಿ ಹಿಂದೆ ಸಾಲಾಗಿ ನಿಂತು, ಕೂತು, ತೂಕಡಿಸಿ, ತಾಂಬೂಲ ಜಗಿದು, ಉಗುಳಿ, ಔಷಧಿಗಾಗಿ ಬಾಟಲಿ ಹಿಡಿದು ಕಾಯುತಿದ್ದ ಜನವೆಲ್ಲ ಯಾವ ಊರಿಗೆ ಹೊರಟಿದ್ದಿತೋ ಈಗ ತಿಳಿಯದಾಯಿತು. ಹಿಂದಣ ವರ್ಷದ ಒಂದು ತಿಂಗಳಲ್ಲಿ ಆಸ್ಪತ್ರೆಗೆ ಬಂದಿದ್ದ ರೋಗಿಗಳ ಸಂಖ್ಯೆಯು ಈ ವರ್ಷದ ಹನ್ನೊಂದು ತಿಂಗಳಲ್ಲೂ ಲೆಕ್ಕಕ್ಕೆ ಕೂಡದಾಯಿತು. ರಾಜಧಾನಿಯಿಂದ ಮೇಲಿಂದ ಮೇಲೆ ಎಚ್ಚರಕೊಟ್ಟು ಅನುಜ್ಞೆಗಳು ಹೊರಟವು. ಡಾಕ್ಟರರು ಆಸ್ಪತ್ರೆಯನ್ನು ಉಳಿಸುವುದಕ್ಕಿಂತ ತನ್ನ ಉದ್ಯೋಗವನ್ನು ಉಳಿಸಿಕೊಂಡರೆ ಸಾಕಾಗುವುದೆಂದು ಉಪಾಯ ಹುಡುಕಿದರು. ತನ್ನ ಕೋಣೆಯನ್ನು ತ್ಯಜಿಸಿ, ಆಫೀಸನ್ನು ಹೊರಜಗುಲಿಯಲ್ಲೇ ಮಾಡಿದರು. ಬಳಿಯಲ್ಲೇ ಕಂಪೌಂಡರ್ ಸಾಹೇಬನು. ರೋಗಿಗಳ ರಿಜಿಸ್ಟ್ರಿ ಪುಸ್ತಕವನ್ನು ಇದಿರಲ್ಲಿಟ್ಟುಕೊಂಡು, ಮೊದಲು ತನಗೂ ತನ್ನ ಮನೆಯವರಿಗೂ ಕಂಪೌಂಡರನಿಗೂ ಆತನ ಮನೆಯವರಿಗೂ ಹಲವು ರೋಗಗಳನ್ನು ಅಂಟಿಸಿ, ಅವುಗಳಿಗೆಲ್ಲ ಚಿಕಿತ್ಸೆ ನಡೆದಂತೆ ಬರೆದುಕೊಂಡರು. ಆಸ್ಪತ್ರೆಯಿಂದ ಪ್ರಾರಂಭಿಸಿ ಕಂಪೌಂಡರನ ದೃಷ್ಟಿಸಂಚಾರವಾಗುವಂತೆ, ಆವೂರಿನ ಪ್ರತಿಯೊಂದು ರಸ್ತೆ ಓಣಿಗಳಲ್ಲಿನ ಪ್ರತಿ ಬಿಡಾರದಲ್ಲಿರುವ ಪ್ರತಿಯೊಂದು ಜೀವಿಗೆ ಕೈಗೆ ಬಂದಂತಹ ರೋಗದ ಹೆಸರನ್ನು ಬರೆದು ಚಿಕಿತ್ಸೆ ಬರೆದರು. ದಿನಕ್ಕೆ ನೂರರಂತೆ ಹಾಜರಿದ್ದ ರೋಗಿಗಳ ಹಿಂದಣ ವರ್ಷದ ಸಂಖ್ಯೆಯನ್ನು ಮೀರಿ, ಇನ್ನೂರರ ವರೆಗೆ ಈರೀತಿ ಹೆಸರು ತುಂಬಿಸುತ್ತ, ಅಂದಿನಂದಿಗೆ ಲೆಕ್ಕ ಮುಗಿಸಿದರು. ಅವೊಂದು ತಿಂಗಳಲ್ಲಿಯೇ ಪ್ರಚಂಡವಾದ ರೋಗಗಳ ಹಾವಳಿಯಿಂದ ನೊಂದ ರೋಗಿಗಳ ಪ್ರಚಂಡ ಹಿಂಡು ಈ ಆಸ್ಪತ್ರೆಯನ್ನು ಸೇರಿ, ಅರ್ಧ ವರ್ಷಕ್ಕೆಂದು ಒದಗಿಸಿದ್ದ ಔಷಧಗಳನ್ನೆಲ್ಲ ಕುಡಿದ ಅತ್ಯದ್ಭುತ ವೃತ್ತಾಂತವನ್ನು ರಾಜಧಾನಿಯಲ್ಲಿ ಓದಿ ತಲೆ ತಿರುಗಿದ ಜಿಲ್ಲಾ ಆಫೀಸರರು, ಇಂತಹ ಅತಿ ವೇಗದಿಂದ ಸಾಗಿ ಮುತ್ತಿದ ರೋಗಗಳ ತನಿಖೆಯಾಗಬೇಕೆಂದು ಹೊರಟು ಆವೂರಿಗೆ ಬಂದರು.

ಅವರು ಬಂಗಲೆಯಲ್ಲಿದ್ದು, ಅಲ್ಪಾಹಾರ ಮುಗಿಸಿ, ಆಸ್ಪತ್ರೆಗೆ ಬರುವೆನೆಂದು ತಿಳಿಸಿದಾಗಲೇ, ಆಸ್ಪತ್ರೆಗೆ ಸಮೀಪವಾದೊಂದು ತೋಟ ದಲ್ಲಿ ದೊಡ್ಡದೊಂದು ವಿಸ್ತೀರ್ಣಕ್ಕೆ ನೆಲದಲ್ಲಿ ಗುಳಿಯೊಂದು ತೋಡ ಲ್ಪಟ್ಟು, ಅದರ ಗರ್ಭದಲ್ಲಿ ಆಸ್ಪತ್ರೆಯಲ್ಲಿದ್ದ ಔಷಧದ ಉಗ್ರಾಣದ ಮುಕ್ಕಾಲುಪಾಲೆಲ್ಲವೂ ಅಡಗಿ ಮಣ್ಣುಪಾಲಾಯಿತು; ಗುಳಿಯ ಬಾಯಿ ಮುಚ್ಚಿತು; ಡಾಕ್ಟರರ ಧೈರ್ಯ ಹೆಚ್ಚಿತು; ಆಫೀಸರರನ್ನು ಎದುರ್ಗಾ ಣಲು ಸಿದ್ಧರಾಗಿ ಕಂಪೌಂಡರ್, ವಾರ್ಡ್-ಕೂಲಿ ಸಮೇತ ಕಾದು ನಿಂತರು.

ಆಫೀಸರರು ಬಂದು, ತಮ್ಮ ತನಿಖೆಗೆ ತೊಡಗಿದರು. "ಹಿಂದಣ ಇಡೀ ವರ್ಷ ಚಿಕಿತ್ಸೆ ಮಾಡಿದುದರ ಫಲವಾಗಿ, ಈ ವರ್ಷದ ಹನ್ನೊಂದು ತಿಂಗಳತನಕವೇನೂ ರೋಗಬಾಧೆಯು ಹರಡದಂತೆ ತಡೆ ಹಾಕಿದಂತಾ ಗಿದ್ದಿತೆಂದೂ, ಕೊನೆಯ ತಿಂಗಳಲ್ಲಿ ಮಾತ್ರ ಒಮ್ಮೆಲೇ ಸರ್ವತೋಮುಖ ವಾಗಿ ರೋಗಗಳು ಹರಡಿದ್ದುವೆಂದೂ, ಈ ಮಧ್ಯೆ, ಹತ್ತಿರವೇ, ಮಂತ್ರೀ ಶ್ವರರ ಸಂದರ್ಶನಕ್ಕೆ ತಾತ್ಕಾಲಿಕವಾಗಿ ತಯಾರಾಗುತಿದ್ದ ಗಟ್ಟದ ರಾಜ ರಸ್ತೆಯನ್ನು ಬೇಗನೇ ಮುಗಿಸಲು ಎಲ್ಲೆಲ್ಲಿಂದಲೂ ಬಂದು ಸೇರಿದ್ದ, ಹಗಲೂ ರಾತ್ರಿಯೂ ಪರಿಶ್ರಮ ಮಾಡುತಿದ್ದ ಕೂಲಿಗಳ ದೆಸೆಯಿಂದ ಈ ರೋಗಿಗಳ ಸಂಖ್ಯೆ ಮತ್ತಷ್ಟು ಹೆಚ್ಚಿತೆಂದೂ ಡಾಕ್ಟರರು ಅಂಕೆಸಂಖ್ಯೆ ಗಳ ಸಮಾವೇಶದೊಡನೆ ವಿವರಿಸಿದರು. ಮಂತ್ರೀಶ್ವರರೇ ತೆರೆದ ಗಟ್ಟದ ಹೊಸ ರಾಜರಸ್ತೆಯು ಸಕಾಲದಲ್ಲಿ ಸಿದ್ಧವಾಗುವಂತೆ ಶ್ರದ್ಧಾಳುಗಳ ಸೇವೆ ಮಾಡಿದ ಆಸ್ಪತ್ರೆಯೂ ಡಾಕ್ಟರರೂ ಕೊಂಡಾಟಕ್ಕೆ ಪಾತ್ರರಾ ದರು. ಆಸ್ಪತ್ರೆ ಬಡಾವಣೆ ಹೊಂದಿತು; ಡಾಕ್ಟರರು ವರ್ಗವಾದರು.

ವರ್ಗವಾಗಿ ಹೋದ ಡಾಕ್ಟರರು ಆಸ್ಪತ್ರೆಯ ಬೀಗದ ಕೈಗಳನ್ನು ಮತ್ತೊಬ್ಬ ಡಾಕ್ಟರರಿಗೆ ಕೈವರ್ತಿಸಿ ಕೊಡುವ ಬದಲಾಗಿ, ತಾನು ಮೊದ ಲಾಗಿಯೇ ಹೊರಟು ಹಿತ್ತಿಲಲ್ಲಿದ್ದ ಆ ಔಷಧಸಮಾಧಿಯನ್ನು ಒಮ್ಮೆ ರಾತ್ರಿಯಲ್ಲಿ ಸಂದರ್ಶಿಸಿದರೆಂದೂ, ಯಾರುಯಾರ ಹೊಟ್ಟೆ ಸೇರಿ ಜೀರ್ಣಾಂಗಗಳಲ್ಲಿ ನರಳಿ ಧ್ವಂಸವಾಗುವ ಬದಲಾಗಿ, ಔಷಧಗಳಿಗೆಲ್ಲ

ಜೀವವಾಯಿಸಿಯಾದ ಭೂವಸಾತೆಯು ಉದರದಲ್ಲೇ ಸುರಕ್ಷಿತವಾಗಿರು ವಂತೆ ಈ ಡಾಕ್ಟರರ ದಯೆಯಿಂದಾಯಿತೆಂದೂ, ಬಾಟಲಿಗಳು ಒಂದ ನ್ನೊಂದು ತಿಣಿ-ತಿಣಿ ಬಡೆದು ಧನ್ಯವಾದವನ್ನು ಡಾಕ್ಟರರಿಗೆ ಅರ್ಪಿಸಿದು ವೆಂದೂ, ಅವರು ಅವುಗಳನ್ನೆಲ್ಲ ಮೇಲೆತ್ತಿಕೊಂಡು ಪುಡಿಗಳನ್ನೂ ದ್ರವ ಗಳನ್ನೂ ಪುನಃ ಭೂವಸಾತೆಗೊಪ್ಪಿಸಿ, ಬಾಟಲಿಗಳನ್ನು ಕಂಪೌಂಡರರಿಗೆ ಅವರ ಷಯಕಾರಸ್ಮಾರಕವಾಗಿ ಉಪಹಾರವಾಗಿ ಕೊಟ್ಟರೆಂದೂ ಆವೂರ ನಿವಾಸಿಗಳು ಹೇಳುವರು. ಇವೆಲ್ಲವೂ ನಮ್ಮ ವೈದ್ಯಭಕ್ತರ ಡಂಗುರದ ಒಕ್ಕಣೆಯಸಾಗಿದ್ದರೂ ಇರಬಹುದು; ಆದರೆ,—ಹಾಗೆಂದು ನಾರಾಯಣನು ನಂಬುವುದಿಲ್ಲ. ಏಕೆನ್ನುವಿರೋ?—ನಾರಾಯಣನೇ ಹೇಳುವನು:—

## ನಾರಾಯಣ ಉವಾಚ:

ಇವಾಸ ಮೂವತ್ತು ವರ್ಷಗಳ ತರುವಾಯದಲ್ಲಿ ನಾನು ಇವರೇ ಡಾಕ್ಟರರನ್ನು ಮದ್ರಾಸಿನಲ್ಲಿ ಕಂಡೆನು. ಆವೂರಲ್ಲಿದ್ದವರು ಇಷ್ಟು ದೂರ ಇದ್ದಾರೆ. ಬಂದ ಸಮಯದಲ್ಲೇ ಇವರನ್ನು ಕಂಡು ಬರುವ ಎಂದು ನಾನು ಹೋಗಿದ್ದೆ. ಅವರು, "ಕಾಫಿ ಕುಡಿದು ಹೀಗಾಗಿದ್ದಿಯಪ್ಪ!" ಎಂದರು. ಹಲವು ವರ್ಷಗಳ ತರುವಾಯ ಸಿಕ್ಕಿದ ನನಗೆ ಇಷ್ಟು ಕಾಫಿ ಕೊಡಬೇಕಾಗಿದೆಯೆಂಬ ಉಪಚಾರವನ್ನು ವಜಾಸಾಡಲು ಹೀಗೆನ್ನುತ್ತಾ ರೆಂದು ಭಾವಿಸಿ, "ಹೌದು!" ಎಂದೆನು. "ಕಾಫಿ ಕುಡಿದರೆ ಏನಾಗು ತ್ತದೆ ನೋಡು," ಎಂದು ಒಂದು ಲೋಟ ಕಾಫಿ ಕುಡಿಸಿ, ನನ್ನ ರಟ್ಟೆಗೆ ಏನನ್ನೋ ಬಿಗಿದು, ನನ್ನ ನಾಡಿಯನ್ನು ಒತ್ತಿ ಹಿಡಿದುಕೊಂಡು, ಎಂತ ಹದೋ: ಒಂದು ನಳಿಗೆಗೆ ಸಂಬಂಧವಿದ್ದ ಒಂದು ಚೆಂಡನ್ನು ಒತ್ತಿ, ಅದರ ಮೇಲಣ ಬಿಲ್ಲೆಯನ್ನು ನೋಡುತ್ತ ೧೬೫-೯೬ ಎಂದು ಎರಡು ಸಲ ಎಂದರು. ಅವರ ಮುಖ ಬಹಳ ವಿಕಾರವಾಗಿದ್ದಿತು.

"ಕಾಫಿ ಕುಡಿದರೆ ಏನಾಗುತ್ತೆ ನೋಡಿದೆಯಾ?" ಎಂದರು. ನನಗೆ ತಮಾಸೆ ಎನ್ನಿಸಿತು. ಒಂದೇ ರಟ್ಟೆ ನೋಡಿದಿರಲ್ಲ! ಇನ್ನೊಂದು ಲೋಟಾ ತರಿಸಿ ಕೊಡಿ; ಮತ್ತೊಂದು ರಟ್ಟೆಯನ್ನೂ ಪರೀಕ್ಷಿಸಿ ಕೆಲವು ಅಂಕೆಗಳನ್ನು ಹೇಳಿರಿ," ಎಂದೆನು.

ಹಾಗೆ ಅವರು ಮಾಡುವರೆನ್ನುವುದರೊಳಗೆ, ಒಂದು ಸೂಜಿಯನ್ನು ನನ್ನ ಬೆರಳ ತುದಿಗೆ ಚುಚ್ಚಿ, ಒಂದು ಹನಿ ರಕ್ತ ಎತ್ತಿಕೊಂಡು ಅದನ್ನು ಒಂದು ಗಾಜಿನ ತುಂಡಿನ ಮೇಲಿಟ್ಟು, "ರಕ್ತಕಣಗಳಲ್ಲಿ ಜೀವವಿಲ್ಲ!" ಎಂದರು. ನಾನು ಅವಾಕ್ಕಾದೆನು.

ಕೂಡಲೇ ನನ್ನ ಎದೆಯ ಮೇಲೆ ನಾನಾ ರೀತಿಯಾಗಿ ಗುದ್ದಿದರು. ಜಗಜಟ್ಟಿಗಳಂತೆ, ಮಲ್ಲಯುದ್ಧಕ್ಕಿಳಿದಂತೆ, ಎಷ್ಟೋ ಕಸರತ್ತು ಮಾಡಿದರು. ಇವರು ಆಗಾಗ ನಾನಾ ರೋಗಗಳ ಹೆಸರೆತ್ತಿಕೊಳ್ಳುತ್ತಬಂದುದನ್ನು ಕೇಳಿಯೋ, ನನ್ನಲ್ಲಿ ಎಷ್ಟೋ ಮಹಾರೋಗಗಳಾಗಿವೆ ಎಂದು ನಾನು ನಂಬುವಂತಾಯಿತು. ಇನ್ನು ಇವರ ಪರಿಚಯದ ಅರಿವನ್ನು ಹೇಳಕೂತರೆ, ಪ್ರಾಣಕ್ಕೆ ಬಂದೀತೆಂದು ಭಾವಿಸಿ, ಅಲ್ಲಿಂದ ಹೊರಡೋಣವೆಂದಿದ್ದೆ. ಆದರೆ ಒಂದು ಗಳಿಗೆ ನನಗೆ ನಾನಾ ಬೋಧನೆ ಕೊಡುತ್ತ ಸದ್ಯದಲ್ಲೇ ಸಾಯುವ ಬದಲು, ಐವತ್ತು ವರ್ಷವಾದರೂ ಬದುಕುವ ಹಾಗೆ ಚಿಕಿತ್ಸೆ ಮಾಡಿಕೊಳ್ಳಬೇಕೆಂದರು. ಅದನ್ನೆಲ್ಲ ಒಂದು ಕಾಗದದ ಮೇಲೆ ಬರೆದುಕೊಟ್ಟರು. ನನಗೊಂದೂ ಅರ್ಥವಾಗಲಿಲ್ಲ. ಅನಂತರ ಈ ಪರೀಕ್ಷೆ ಮಾಡಿಸುದಕ್ಕಾಗಿ ಫೀಸನ್ನು ತೆರುವೆನೆಂದೆನು. ಅವರು ಸಿಟ್ಟಾದರು. "ಇದೂ ಒಂದು ರೋಗಲಕ್ಷಣ," ಎಂದರು. ಹೀಗೆ ಮಾತಾಡುತ್ತ, ಕೊನೆಗೆ, "ಒಂದು ವಿಶ್ರಾಂತಿಗೃಹದಲ್ಲಿ ಕೆಲತಿಂಗಳು ನೀನಿದ್ದರೆ ಉತ್ತಮ. ನರಗಳೆಲ್ಲ ಕಾಫಿ ಕುಡಿದು ಸಡಿಲಾಗಿವೆ; ವಿಶ್ರಾಂತಿ ಬೇಕು!" ಎಂದರು. ನಾನೇನು ಹೇಳಬೇಕೋ ತಿಳಿಯದಾದೆನು. ಆಗ ಅವರೇ, "ನಾನು ಹೇಳಿದಂತೆ ಮಾಡಿದರೆ ಖಂಡಿತವಾಗಿಯೂ ಎಪ್ಪತ್ತೈದು-ಎಂಭತ್ತು ವರ್ಷ ಬದುಕಬಹುದು," ಎಂದರು. "ಎಪ್ಪತ್ತೈದೇ ವರ್ಷ ನನಗೆ ಸಾಕು," ಎಂದೆನು. ನಾನು ವಿಸ್ಮಿತನಾಗಿ ಅಲ್ಲಿಂದ ಹೊರಡುತಿದ್ದೆ; ಅಷ್ಟರಲ್ಲಿ, "ಈಗ ಹೇಗೆ ಇದೆ?" ಎಂದರು. "ಚೆನ್ನಾಗಿಯೇ ಇದೆ; ಹಾಗೆಯೇ ಇದ್ದೇನೆ," ಎಂದೆನು.

**ಡಾಕ್ಟರರು:**— "ನಿಮ್ಮ ತಲೆಯ ಹಿಂಭಾಗದಲ್ಲಿ ಸೂಕ್ಷ್ಮವಾದ ಬೇನೆಯಿದೆಯೇ?"

**ನಾನು:**—"ಇಲ್ಲವಲ್ಲ!"

**ಡಾಕ್ಟರರು:**—"ಕಣ್ಣು ಮುಚ್ಚಿ ಎರಡೂ ಕಾಲುಗಳನ್ನು ಒಟ್ಟು ಕೂಡಿಸಿಡಬೇಕು. ಈಗ, ಬಲ ಹೆಬ್ಬೆರಳನ್ನು ಮೂಗಿನ ಎಡ ಸೊಳ್ಳೆಯ ಮೇಲಿಡಬೇಕು. ಹಾಗೆಯೇ, ಕುದುರೆಯ ಹಾಗೆ ಈ ಕೋಣೆಯ ಸುತ್ತಲೂ ಓಡಾಡುವುದುತ್ತಮ; ಐದೇ ಮಿನಿಟು!....ಸರಿ........ಈ ಬೆರಳು ನೋಡಿ, ನಿಮ್ಮ ಹೆಬ್ಬೆಟ್ಟು ನೋಡಿ....ಹೂಂ....ಹಾಗೆ....! ಸರಿ....ಇಕ್ಕೊಳ್ಳಿ, ಇದರಲ್ಲಿ ಬರೆದ ತಿಂಡಿಯನ್ನಲ್ಲದೆ ಬೇರೇನನ್ನೂ ತಿನ್ನಬಾರದು........ ದಿನವೂ ನಾಲ್ಕು ತಾಸು ಬಯಲಿನಲ್ಲಿ ಹವಾ ತೆಗೆದುಕೊಳ್ಳಬೇಕು, ಜೋಕೆ!"

ಹೀಗೆನ್ನುತ್ತ ಇವರೆದ್ದು ಒಳಕೋಣೆಗೆ ಹೋದರು. ಕೂಡಲೇ ಆ ಬಾಗಿಲು ಮುಚ್ಚಿ ಭದ್ರ ಮಾಡಿದ ರಭಸ ಕೇಳಬಂತು. ನಾನು ಅಲ್ಲಿಂದ ಹೊರಡುವೆನೆನ್ನುವಾಗ, ಇಬ್ಬರು ಪೇದೆಗಳು ನನ್ನ ಬಳಿ ನಿಂತರು. ನಾನು ಬೆದರಿದೆ. ಡಾಕ್ಟರರು ಏನನ್ನೆಲ್ಲ ಮಾಡಿದರು, ಆಡಿದರು ಎಂದು ಅವರು ವಿಚಾರಿಸಿದರು. ನಾನು ಎಲ್ಲವನ್ನೂ ತಿಳಿಸಿದೆ. ಅವರು ನಗುತ್ತ,—"ನಿಮ್ಮೂರಲ್ಲಿ ದೇಶೀವೈದ್ಯ ಬಲ್ಲ ಯಾರೂ ಇಲ್ಲವೇ? ಇದು ವಿಶ್ರಾಂತಿ ಗೃಹ. ಮಿದುಳಿನ ಕೆಲಸ ಬಹಳವಾಗಿ, ರೀತಿಗೆಟ್ಟು ಜೀವನವಮಾಡುವವರಿಗಾಗಿ ಇದು ಒಂದುಬಗೆಯ ಆಸ್ಪತ್ರೆ. ಇಲ್ಲಿನ ರೋಗಿಗಳಿಗೆ ಅವರು ರೋಗಿಗಳೆಂದೇ ತಿಳಿಯದಂತೆ ಸ್ವೇಚ್ಛೆಯಾಗಿರಬಿಡುವರು. ಆದರೆ, ಅವರು ಮಾಡುತ್ತಿರುವ ಎಲ್ಲವನ್ನೂ ಗೋಪನವಾಗಿ ತಿಳಿದುಕೊಂಡು ಇಲ್ಲಿನ ಡಾಕ್ಟರ್ ಸಾಹೇಬರಿಗೆ ತಿಳಿಸುವ ಕೆಲಸ ನಮಗಿದೆ. ಒಳ್ಳೇ ಮೋಸ ಹೋದಿರಿ. ಆ ಕಾಗದ ಹರಿದು ಬಿಸಾಡಿ, ನಿಮ್ಮೂರಿಗೆ ತೆರಳಿ, ಅಲ್ಲಿ ಯಾರಾದರೂ ವೈದ್ಯರಿದ್ದರೆ ಅವರಿಗೆ ಹೇಳಿಕೊಳ್ಳಿರಿ," ಎಂದರು.

ವಿಶ್ರಾಂತಿಗೃಹ! ಹುಚ್ಚರ ಆಸ್ಪತ್ರೆಗೆ ಇಂತಹ ಹೆಸರಿಡುವರೆಂದು ನನಗೇನು ಕನಸು ಕಂಡಿದ್ದಿತೇ? ಡಾಕ್ಟರರಿಗೆ ಸ್ವಯಂ ಹುಚ್ಚು ಹಿಡಿದಿದ್ದು, ತನ್ನಂತೆಯೇ ಎಲ್ಲರೂ ಕಾಫಿ ಜೋರಾಗಿ ಕುಡಿದು, ನರ ಕೆಡಿಸಿಕೊಂಡು, ವಿಶ್ರಾಂತಿಗೃಹ ಸೇರಲು ಅರ್ಹರಾದರೆಂದು ಇವರ ಅಭಿಪ್ರಾಯವಾಗಿದ್ದಿ

ತೆಂದೂ, ಇಲ್ಲಿಯಾದರೂ ಅದೇ ಡಾಕ್ಟರೀ ಅಭಿನಯದಲ್ಲೇ ಮಗ್ನರಾಗಿದ್ದ ರೆಂದೂ ಮುಂದೆ ತಿಳಿದೆನು.

ಮದ್ರಾಸಿನಿಂದ ಆವೂರಿಗೆ ಬರುತ್ತಲೇ ಇದನ್ನು ನಮ್ಮ ವೈದ್ಯರಿಗೆ ತಿಳಿಸಿದೆನು. ಅವರು ನಗುತ್ತ, "ಇಲ್ಲಿನ ಆಸ್ಪತ್ರೆ ತೆರೆದಾಗ ಬಂದ ಡಾಕ್ಟರ ರವರು. ಇಲ್ಲಿನವರಲ್ಲಿ ಆಯುರ್ವೇದದ ಮೇಲಿದ್ದ ಭರವಸೆಯನ್ನು ಕಿತ್ತೊಗೆಯತೊಡಗಿ, ಆಸ್ಪತ್ರೆ ಔಷಧವನ್ನು ಹೂತಿಟ್ಟು, ದಾರಿಹೋಕರ ಹೆಸರು ರಿಜಿಸ್ಟ್ರಿಯಲ್ಲಿ ರೋಗಿಗಳೆಂದು ಬರಾಯಿಸಿ, ವರ್ಗಹೊಂದಿದ ಮಹಾತ್ಮರು. ನಮ್ಮ ಆಯುರ್ವೇದ ವೈದ್ಯರಲ್ಲಿ ಯಾರಾದರೂ ಅವರಂತೆ ವಿಶ್ರಾಂತಿ ಗೃಹಕ್ಕೆ ಹೋಗಲು, ವಿಶ್ರಾಂತಿ ದೊರೆತರಲ್ಲವೇ? ಹ! ಹ! ಹ! ನಿಮ್ಮ 'ಎಲ್ಲೊಪತಿ'ಯೆಲ್ಲಿ, ನಮ್ಮ ಆಯುರ್ವೇದವೆಲ್ಲಿ? ನಿಮ್ಮ ವಿಶ್ರಾಂತಿಗೃಹದ ಡಾಕ್ಟರರೆಲ್ಲಿ, ನಮ್ಮ ವೈದ್ಯರಾಜ ಧನ್ವಂತರಿಯೆಲ್ಲಿ?" ಎಂದರು!

ಸಂಪೂರ್ಣಂ

# ಮಿತ್ರಮಂಡಳಿ
## ಮಂಗಳೂರು

---

### 1940-41ರ ಅಧಿಕಾರಧಾರಕರು:

ಅಧ್ಯಕ್ಷ:

**ಪಂಡಿತ ಶ್ರೀ. ಮುಳಿಯ ತಿಮ್ಮಪ್ಪಯ್ಯ,** ವಿದ್ವಾನ್.

ಉಪಾಧ್ಯಕ್ಷ:

**ಶ್ರೀ. ಎಮ್. ವಾಸುದೇವ ಪ್ರಭು,** ಎಮ್. ಎ., ಎಲ್. ಟಿ.

ಕಾರ್ಯದರ್ಶಿ:

**ಶ್ರೀ. ಎಸ್. ಪಿ. ಭಟ್ಟ,** ಎಲ್. ಡಿ. ಎಸ್‌ಸಿ.

ಅಖಿಲಸೇವಾ ಗ್ರಂಥಮಾಲಾ ಸಂಪಾದಕ:

**ಶ್ರೀ. ಜೆ. ವಾಮನ ಭಟ್ಟ,** ಬಿ. ಎ., ಎಲ್. ಟಿ.

ಕಾರ್ಯಕಾರಿ ಮಂಡಲ:

ಈ ಮೇಲಿನ ನಾಲ್ವರು ಮತ್ತು

ಶ್ರೀ. ರಂಗರಾವ್ ತಲಚೇರಿಕರ್, ಬಿ. ಎ., ಎಲ್‌ಎಲ್. ಬಿ.

ಶ್ರೀ. ಕಡೆಂಗೋಡ್ಲು ಶಂಕರ ಭಟ್ಟ, ವಿದ್ವಾನ್.

ಶ್ರೀ. ಟಿ. ನಾರಾಯಣ ಭಟ್ಟ, ವಿದ್ವಾನ್.

ಶ್ರೀ. ಎಸ್. ಆರ್. ಪ್ರಭು, ಬಿ. ಕೊಮ್.

ಶ್ರೀ. ಎಸ್. ರಾಮಕೃಷ್ಣ ಆಚಾರ್, ಬಿ. ಎ., ಎಲ್. ಟಿ.

# ಅಖಿಲಸೇವಾ ಗ್ರಂಥಮಾಲೆ

| | | | |
|---|---|---|---|
| ೧. | ಅಖಿಲ ಸೇವೆ* | (ಕವಿತಾ ಸಂಕಲನ) | ೦—೨—೦ |
| ೨. | ,, (ದ್ವಿತೀಯ ಖಂಡ)* | ,, | ೦—೨—೦ |
| ೩. | ತಾಯ್ನಾಡು* . . . | ,, | ೦—೨—೦ |
| ೪. | ಅಲರು . . . . | ,, | ೦—೪—೦ |
| ೫. | ನಮ್ಮ ಕತೆಗಳು* . . . . . | | ೦—೬—೦ |
| ೬. | ವಿನೋದ ಚಿತ್ರಗಳು | (ಹಾಸ್ಯ ಪ್ರಬಂಧಗಳು) | ೦-೧೦—೦ |
| ೭. | ಸಂಸಾರ . . | (ಏಕಾಂಕ ನಾಟಕಗಳು) | ೦-೧೨—೦ |
| ೮. | ಶಕುಂತಳೆ . . . . . . | | ೦—೮—೦ |
| ೯. | ತರಂಗ . . | (ಹಾಸ್ಯ ಪ್ರಬಂಧಗಳು) | ೦—೬—೦ |
| ೧೦. | ನಮ್ಮ ಕವಿತೆಗಳು . . . . . | | ೧—೪—೦ |
| ೧೧. | ಅಂದಿನ ಆವೂರು . . | (ಹಳ್ಳಿಯ ಚಿತ್ರಗಳು) | ೧—೦—೦ |

*ಇವು ಪುನರ್ಮುದ್ರಿತವಾಗಲಿವೆ.

**ಮಿತ್ರಮಂಡಳಿ, ಮಂಗಳೂರು.**